ಕರ್ನಾಟಕ ಸಾಹಿತ್ಯ ಅಕಾಡೆಮಿ

# ಡಾ.ಬರಗೂರು ರಾಮಚಂದ್ರಪ್ಪ

ಡಾ.ಎಸ್.ಮಾರುತಿ



ಅಕಾಡೆಮಿ ಅಧ್ಯಕ್ಷರ ಪರಿಚಯ ಪುಸ್ತಕ ಮಾಲೆ

# ಡಾ. ಬರಗೂರು ರಾಮಚಂದ್ರಪ್ಪ

ಪ್ರಧಾನ ಸಂಪಾದಕರು
ಪ್ರೊ. ಮಾಲತಿ ಪಟ್ಟಣಶೆಟ್ಟಿ

ಸಂಪಾದಕರು
ಪ್ರೊ. ಕೆ.ಎಸ್. ಮಧುಸೂದನ

ಲೇಖಕರು
ಡಾ. ಎಸ್. ಮಾರುತಿ

ಕರ್ನಾಟಕ ಸಾಹಿತ್ಯ ಅಕಾಡೆಮಿ
ಕನ್ನಡ ಭವನ, ಜೆ.ಸಿ.ರಸ್ತೆ
ಬೆಂಗಳೂರು–560 002.
ದೂರವಾಣಿ: 080–22211730/22106460
www.karnatakasahithyaacademy.org
Email: sahithya.academy@gmail.com

**Dr. BARGURU RAMACHANDRAPPA**
**(Baragurara Sahithya Seve)**
**Written by: Dr. S. Maruthi**
**Editor: Prof. K.S. Madhusudana**

Published by
**C.H.Bhagya**
Registrar
Karnataka Sahithya Academy
Kannada Bhavana
J.C.Road, Bengaluru-560 002.

© ಕರ್ನಾಟಕ ಸಾಹಿತ್ಯ ಅಕಾಡೆಮಿ

| | |
|---|---|
| ಪುಟಗಳು | : xii+೧೨೪ |
| ಬೆಲೆ | : ₹ ೧೧೦/- |
| ಮೊದಲ ಮುದ್ರಣ | : ೨೦೧೬ |
| ಪ್ರತಿಗಳು | : ೫೦೦ |
| ಮುಖಪುಟ ವಿನ್ಯಾಸ | : ಅರುಣ್ ಕುಮಾರ್ ಜಿ |
| Pages | : xi+124 |
| Price | : ₹ 110/- |
| First impression | : 2016 |
| Copies | : 500 |

**ಪ್ರಕಾಶಕರು:**
**ಸಿ.ಎಚ್.ಭಾಗ್ಯ**
ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ
ಕನ್ನಡ ಭವನ, ಜೆ.ಸಿ.ರಸ್ತೆ
ಬೆಂಗಳೂರು-560 002.

**ಮುದ್ರಕರು:**
ಸರ್ಕಾರಿ ಕೇಂದ್ರ ಮುದ್ರಣಾಲಯ
ಆರ್.ವಿ.ಕಾಲೇಜ್ ಅಂಚೆ
8ನೇ ಮೈಲಿ, ಮುತ್ತುರಾಯನಗರ
ಜ್ಞಾನಭಾರತಿ, ಮೈಸೂರು ರಸ್ತೆ
ಬೆಂಗಳೂರು-560 059.
080- 28483133 / 28484518

## ಅಧ್ಯಕ್ಷೀಯ ನುಡಿ

ಕರ್ನಾಟಕ ಸಾಹಿತ್ಯ ಅಕಾಡೆಮಿಯು ಸ್ಥಾಪಿತವಾಗಿದ್ದು 1961ರಲ್ಲಿ. ಅದು ಭಾಷಾವಾರು ಪ್ರಾಂತ ರಚನೆಯಾಗಿ ನಾಡು ನುಡಿ, ಸಾಹಿತ್ಯ, ಸಂಸ್ಕೃತಿಗಳ ಬಗ್ಗೆ ಅಪಾರ ಕುತೂಹಲ, ಅಭಿಮಾನ, ಪ್ರೀತಿ ಸ್ಫೋಟಗೊಂಡ ಸಮಯ. ನಾಡು ನುಡಿ, ಸಂಸ್ಕೃತಿಗಳನ್ನು ಹೊಸದಾಗಿ ಕಟ್ಟಿ ಬೆಳೆಸುವ ಹುಮ್ಮಸ್ಸಿನ ದಿನಗಳಾಗಿದ್ದವು ಅವು. ಜನರ ಬೇಡಿಕೆಗೆ ಸ್ಪಂದಿಸಿ ಅಂದಿನ ಸರಕಾರವು ಕರ್ನಾಟಕ ಸಾಹಿತ್ಯ ಅಕಾಡೆಮಿಯನ್ನು ಅಂದು ಶಿಕ್ಷಣ ಮಂತ್ರಿಗಳಾಗಿದ್ದ ಸನ್ಮಾನ್ಯ ಶ್ರೀ ಎಸ್.ಅರ್. ಕಂಠಿಯವರ ಅಧ್ಯಕ್ಷತೆಯಲ್ಲಿ ಪ್ರಾರಂಭಿಸಿದ್ದನ್ನು ನಾವು ಇಂದು ಕೃತಜ್ಞತೆಗಳೊಂದಿಗೆ ನೆನೆಯಬೇಕು. ಆನಂತರದ ಅಧ್ಯಕ್ಷತೆಯನ್ನು ಶ್ರೀ ಕೆ.ವಿ. ಶಂಕರಗೌಡ, ಶ್ರೀ ಕೆ.ಎಚ್. ಶ್ರೀನಿವಾಸ್ ಹಾಗೂ ಶ್ರೀ ಆರ್. ಗುಂಡೂರಾವ್‌ರಂಥ ಹಿರಿಯ ರಾಜಕಾರಣಿಗಳು ಸಾಹಿತ್ಯ ಅಕಾಡೆಮಿಯ ಸೂತ್ರಧಾರಿತ್ವ ವಹಿಸಿ ಸಮರ್ಥವಾಗಿ ಮುನ್ನಡೆಸಿದರು.

ಕನ್ನಡದ ದಿಗ್ಗಜ ಸಾಹಿತಿಗಳಾದ ಶ್ರೀ ಅ.ನ. ಕೃಷ್ಣರಾಯರು, ಶ್ರೀರಂಗರು ಅಕಾಡೆಮಿಗೆ ಭದ್ರಬುನಾದಿ ಹಾಕಲು ಪ್ರಯತ್ನಿಸಿದರು. ನಂತರ ಅಧ್ಯಕ್ಷರಾದ ಡಾ. ಹಾ.ಮಾ. ನಾಯಕ, ಡಾ. ನಿಸಾರ್ ಅಹಮದ್ ಮತ್ತು ಡಾ. ಜಿ.ಎಸ್. ಶಿವರುದ್ರಪ್ಪ ಅವರುಗಳು ಅಕಾಡೆಮಿಗೆ ಖಚಿತವಾದ ರೂಪರೇಷೆಗಳ ಚೌಕಟ್ಟನ್ನು ನಿರ್ಮಿಸಿದರು. ಸಮಯದ ಬೇಡಿಕೆಗಳಿಗನುಸಾರವಾಗಿ ಹೊಸ ಯೋಜನೆಗಳನ್ನು ಕೈಗೊಂಡರು. ಅವರು ಪ್ರಕಟಿಸಿದ ಉತ್ತಮೋತ್ತಮ ಗ್ರಂಥಗಳು ಇಂದಿಗೂ ಬೇಡಿಕೆಯಲ್ಲಿವೆ. ನಂತರ ಅಧ್ಯಕ್ಷ ಸ್ಥಾನ ಸ್ವೀಕರಿಸಿದ ಡಾ. ಬರಗೂರು ರಾಮಚಂದ್ರಪ್ಪ, ಡಾ. ಗಿರಡ್ಡಿ ಗೋವಿಂದರಾಜ, ಶ್ರೀ ಶಾಂತರಸ ಮತ್ತು ಡಾ. ಗುರುಲಿಂಗ ಕಾಪಸೆಯವರಂಥ ಹಿರಿಯ ಸುಪ್ರಸಿದ್ಧ ಸಾಹಿತಿಗಳು ತಮ್ಮ ನಿಷ್ಠೆ, ಪರಿಶ್ರಮಗಳಿಂದಾಗಿ ಅಕಾಡೆಮಿಗೆ ಘನತೆ, ಗೌರವ ತಂದುಕೊಟ್ಟರು. ಡಾ. ಗೀತಾ ನಾಗಭೂಷಣ ಮತ್ತು ಪ್ರೊ. ಎಂ.ಎಚ್. ಕೃಷ್ಣಯ್ಯರಂಥ ಸಾಹಿತಿ, ವಿದ್ವಾಂಸರು ಸಾಹಿತ್ಯ ಅಕಾಡೆಮಿಯ ತೇರನ್ನು ಮುನ್ನಡೆಸಿದರು. ಇವರೆಲ್ಲರ ಸೇವೆಯನ್ನು ಕೃತಜ್ಞತೆಗಳೊಂದಿಗೆ ಸ್ಮರಿಸುತ್ತೇನೆ.

ನನ್ನ ಅವಧಿಯಲ್ಲಿ (2014–17) ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸುವರ್ಣ ಮಹೋತ್ಸವದ ಉದ್ಘಾಟನೆಯನ್ನು ಶಿವಮೊಗ್ಗೆಯಲ್ಲಿ ಆಗಸ್ಟ್ 3, 2014 ರಂದು ಸಕಲ ಸಡಗರಗಳೊಂದಿಗೆ ನೆರವೇರಿಸಲಾಯ್ತು.

ಡಾ. ಕೆ.ವಿ. ನಾರಾಯಣರಂಥ ಹಿರಿಯ ಸಾಹಿತಿ, ವಿದ್ವಾಂಸರು ಈ ಕಾರ್ಯಕ್ರಮದ ಉದ್ಘಾಟನೆ ಮಾಡಿದರು. ಇದೇ ವೇದಿಕೆಯಲ್ಲಿ ಡಾ. ಗುರುಲಿಂಗ ಕಾಪಸೆ, ಡಾ. ಗಿರಡ್ಡಿ ಗೋವಿಂದರಾಜ ಪ್ರೊ. ಎಂ.ಎಚ್. ಕೃಷ್ಣಯ್ಯ ಅವರನ್ನು ಸನ್ಮಾನಿಸಲಾಯ್ತು (ಡಾ. ನಿಸಾರ್ ಅಹಮದ್ ಮತ್ತು ಡಾ. ಗೀತಾ ನಾಗಭೂಷಣ ಅವರನ್ನು ಅವರ ನಿವಾಸದಲ್ಲಿ ಸನ್ಮಾನಿಸಲಾಯ್ತು). ಆ ನಂತರ ಮುಂದಿನ ಎರಡು ವರ್ಷದ ಅವಧಿಯಲ್ಲಿ ಸುವರ್ಣ ಸಂಭ್ರಮದ ಯೋಜನೆಯಡಿ ಕವಿಗೋಷ್ಠಿ, ಕಮ್ಮಟ ಹಾಗೂ ವಿಚಾರ ಸಂಕಿರಣಗಳನ್ನು ಏರ್ಪಡಿಸಲಾಗಿತ್ತು.

ಸುವರ್ಣ ಮಹೋತ್ಸವದ ಅಂಗವಾಗಿ ಸಮಾರೋಪ ಸಂದರ್ಭದಲ್ಲಿ ನಾಲ್ಕು ವಿಶೇಷ ಕಾರ್ಯಕ್ರಮಗಳನ್ನು ಅನುಷ್ಠಾನದಲ್ಲಿ ತಂದಿದ್ದೇವೆ.

1. ಸಾಹಿತ್ಯ ಅಕಾಡೆಮಿಯ ಹಿಂದಿನ ಹದಿನೆಂಟು ಜನ ಅಧ್ಯಕ್ಷರ ಪರಿಚಯ, ಸಾಹಿತ್ಯ ಸಾಧನೆ ಮತ್ತು ಸಾಹಿತ್ಯ ಅಕಾಡೆಮಿಗೆ ಅವರ ಸೇವೆ ಕುರಿತ ಪುಸ್ತಕ ಮಾಲೆಯನ್ನು ಪ್ರಕಟಿಸಿದ್ದೇನೆ.

2. ಕಳೆದ ಅರ್ಧ ಶತಮಾನದ ಕಾಲಾವಧಿಯಲ್ಲಿ ಸಾಹಿತ್ಯ ಅಕಾಡೆಮಿಯ ಕೆಲಸ ಕಾರ್ಯಗಳು ಜನಮನದ ಮೇಲೆ ಬೀರಿದ ಪರಿಣಾಮ ಕುರಿತ "ಪರಿಣಾಮ ಅಧ್ಯಯನ" ಗ್ರಂಥವನ್ನು ಪ್ರಕಟಿಸಿದ್ದೇನೆ.

3. ಸಾಹಿತ್ಯ ಅಕಾಡೆಮಿಯನ್ನು ಕುರಿತ ಸಾಕ್ಷ್ಯಚಿತ್ರ ನಿರ್ಮಾಣ.

4. ಕನ್ನಡ ಸಾಹಿತ್ಯ ಸಂವೇದನೆ ಕುರಿತ ರೂಪಕದ ರಂಗಪ್ರಯೋಗ.

ಸುವರ್ಣ ಮಹೋತ್ಸವದ ಉದ್ಘಾಟನೆ ಹಾಗೂ ಈ ಮಹೋತ್ಸವದ ನೆನಪಿಗಾಗಿ ಹಮ್ಮಿಕೊಂಡಿದ್ದ ಸರಣಿ ಕಾರ್ಯಕ್ರಮಗಳಲ್ಲದೆ, ಈಗ ಸಮಾರೋಪ ಸಮಾರಂಭಗಳಲ್ಲಿ ಪಾಲ್ಗೊಂಡ ಎಲ್ಲ ಸಾಹಿತಿಗಳಿಗೆ, ವಿದ್ವಾಂಸರಿಗೆ, ಕಲಾವಿದರಿಗೆ ಮತ್ತು ಸುವರ್ಣ ಮಹೋತ್ಸವದ ಎಲ್ಲ ಕಾರ್ಯಕ್ರಮಗಳಿಗೆ ಸಲಹೆ ನೀಡಿದ ತಜ್ಞ ಸಾಹಿತಿಗಳಾದ ಡಾ. ಹಂ.ಪ. ನಾಗರಾಜಯ್ಯ, ಡಾ. ಕೆ.ವೈ. ನಾರಾಯಣಸ್ವಾಮಿ ಮತ್ತು ಅಕಾಡೆಮಿಯ ಸದಸ್ಯರಾದ ಶ್ರೀಮತಿ ಬಿ.ಟಿ. ಜಾಹ್ನವಿ ಅವರುಗಳನ್ನು ಮನಃಪೂರ್ವಕ ನೆನೆಯುತ್ತೇನೆ. ನಮ್ಮ ಕಾರ್ಯಚಟುವಟಿಕೆಗಳಿಗೆ ಸಹಕಾರ ನೀಡುತ್ತಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ಕೆ.ಎ. ದಯಾನಂದ ಮತ್ತು ಜಂಟಿ

ನಿರ್ದೇಶಕರಾದ ಶ್ರೀ ವಿ.ಎನ್. ಮಲ್ಲಿಕಾರ್ಜುನ ಸ್ವಾಮಿ ಅವರುಗಳಿಗೆ ಈ ಸಂದರ್ಭದಲ್ಲಿ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಈ ಎಲ್ಲ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನದಲ್ಲಿ ತರಲು ಅಪಾರ ಪರಿಶ್ರಮ ವಹಿಸಿದ ರಿಜಿಸ್ಟ್ರಾರರಾದ ಶ್ರೀಮತಿ ಸಿ.ಎಚ್. ಭಾಗ್ಯ ಅವರಿಗೂ ಹೃದಯಪೂರ್ವಕ ವಂದನೆಗಳು. ಸಾಹಿತ್ಯ ಅಕಾಡೆಮಿಯ ಸಿಬ್ಬಂದಿಗಳಾದ ಶ್ರೀಮತಿ ಟಿ. ಸೌಭಾಗ್ಯ, ಶ್ರೀಮತಿ ವಿಜಯಲಕ್ಷ್ಮಿ, ಶ್ರೀ ವಿ. ಹರೀಶ್‌ಕುಮಾರ್, ಶ್ರೀ ಕೃಷ್ಣಪ್ಪ ಡಿ., ಶ್ರೀ ಹರೀಶ್ ಮತ್ತು ಶ್ರೀಮತಿ ಎಸ್.ಜಿ. ಸುಚಿತ್ರ ಇವರೆಲ್ಲರೂ ಕೈಜೋಡಿಸದಿದ್ದರೆ ಇಂಥ ಬೃಹತ್ ಕಾರ್ಯಕ್ರಮಗಳು ಅಸಾಧ್ಯ. ಇವರೆಲ್ಲರ ನಿಷ್ಠೆ, ಪರಿಶ್ರಮಗಳನ್ನು ಮನಃಪೂರ್ವಕ ನೆನೆಯುತ್ತೇನೆ. ಹಾಗೆಯೇ ಮುದ್ರಣ ಕಾರ್ಯ ನಿರ್ವಹಿಸಿದ ಸರ್ಕಾರಿ ಮುದ್ರಣಾಲಯದ ನಿರ್ದೇಶಕರು ಹಾಗೂ ಅಧಿಕಾರಿ/ ಸಿಬ್ಬಂದಿಗಳೆಲ್ಲರನ್ನೂ ನಾನಿಲ್ಲಿ ಕೃತಜ್ಞತೆಗಳೊಂದಿಗೆ ನೆನೆಯುತ್ತೇನೆ.

2016

**ಮಾಲತಿ ಪಟ್ಟಣಶೆಟ್ಟಿ**
ಅಧ್ಯಕ್ಷರು

## ಸಂಪಾದಕೀಯ

ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿಗೆ ಇದು ಅಪರಂಜಿ ವರುಷ. ಐವತ್ತು ವರುಷ ತುಂಬಿದ ಈ ಸಾರ್ಥಕ ಸಾಧನೆಯ ಸಂದರ್ಭದಲ್ಲಿ ಸಂಸ್ಥೆಯು ತನ್ನನ್ನು ಈ ಎತ್ತರಕ್ಕೆ ಬೆಳೆಸಿದ ಹಿಂದಿನ ಅಧ್ಯಕ್ಷರುಗಳ ಸಾಧನೆಗಳನ್ನು ಕುರಿತು ಹೊತ್ತಗೆಗಳನ್ನು ಹೊರತರುತ್ತಿರುವುದು ಸಂತಸದ ಸಂಗತಿ. ಆರಂಭಕ್ಕೆ ಮಂತ್ರಿ ಮಹೋದಯರುಗಳು ಅಧ್ಯಕ್ಷರಾಗಿದ್ದುಕೊಂಡು ಸಂಸ್ಥೆಯನ್ನು ಮುನ್ನೋಟದಿಂದ ನಡೆಸಿದರು. ನಂತರ ಅಧ್ಯಕ್ಷರ ಸ್ಥಾನಕ್ಕೆ ನಾಡಿನ ಹಿರಿಯ ಸಾಹಿತಿ ಮುತ್ಸದ್ದಿಗಳನ್ನು ಆಯ್ಕೆ ಮಾಡುವ ಕ್ರಮ ಜಾರಿಗೆ ಬಂತು. ಹೀಗಾಗಿ ಈ ಪ್ರತಿಷ್ಠಿತ ಅಕಾಡೆಮಿಗೆ ಇದುವರೆಗೆ 18 ಮಂದಿ ಅಧ್ಯಕ್ಷರಾಗಿ ಅಕಾಡೆಮಿಯನ್ನು ಭಾರತ ದೇಶದ ಗಮನಾರ್ಹ ಸಾಹಿತ್ಯ ಸಂಸ್ಥೆಯನ್ನಾಗಿ ಬೆಳೆಸಿದ್ದಾರೆ.

'ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರ ಪರಿಚಯ ಪುಸ್ತಕ ಮಾಲೆ' ಎನ್ನುವ ನಾಮನಿರ್ದೇಶನದಡಿ ಈ ಪುಸ್ತಕಗಳನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಯು ಪ್ರಕಟಿಸುತ್ತಿದೆ. ಒಂದು ಸಂಸ್ಥೆ ನಾಡಿನೊಳಗೆ ಸರ್ವಾಂಗೀಣವಾಗಿ, ಸಮೃದ್ಧವಾಗಿ ಬೆಳೆದು ನಾಡಿನ ಜನರ ಮೇಲೆ ದೀರ್ಘಕಾಲಿಕ ಪ್ರಭಾವವನ್ನು ಬೀರಬೇಕಾದರೆ ಅದರ ಮುಂಚೂಣಿಯಲ್ಲಿ ನಿಂತು ನಡೆಸುವ ಅಧ್ಯಕ್ಷೀಯ ಸ್ಥಾನದ ಪಾತ್ರ ಮಹತ್ವವಾದದ್ದು. ಹಾಗೆಯೇ ಒಂದು ಸಂಸ್ಥೆಯ ಇತಿಹಾಸದಲ್ಲಿ ಐವತ್ತು ವರ್ಷಗಳ ಕಾಲಮಾನ ಕೂಡ ಒಂದು ಮೈಲಿಗಲ್ಲು. ಹೀಗಾಗಿ ಇಂತಹ ಸಂದರ್ಭದಲ್ಲಿ ಅಕಾಡೆಮಿಯನ್ನು ಸಮರ್ಥವಾಗಿ ನಡೆಸಿದ ಹಿಂದಿನ ಅಧ್ಯಕ್ಷರುಗಳಾಗಿದ್ದ ನಾಡಿನ ಪ್ರಸಿದ್ಧ ಸಾಹಿತಿಗಳಾದ ಶ್ರೀ ಅ.ನ. ಕೃಷ್ಣರಾಯ, ಶ್ರೀ ಆದ್ಯ ರಂಗಾಚಾರ್ಯ, ಶ್ರೀ ಹಾ.ಮಾ. ನಾಯಕ, ಪ್ರೊ. ಕೆ.ಎಸ್. ನಿಸಾರ್ ಅಹಮದ್, ಡಾ. ಜಿ.ಎಸ್. ಶಿವರುದ್ರಪ್ಪ, ಡಾ. ಬರಗೂರು ರಾಮಚಂದ್ರಪ್ಪ, ಡಾ. ಗಿರಡ್ಡಿ ಗೋವಿಂದರಾಜ, ಶ್ರೀ ಗುರುಲಿಂಗ ಕಾಪಸೆ, ಡಾ. ರಾ.ಶಿ. (ಎಂ. ಶಿವರಾಂ), ಡಾ. ಶಾಂತರಸ, ನಾಡೋಜ ಗೀತಾ ನಾಗಭೂಷಣ, ಪ್ರೊ. ಎಂ.ಎಚ್. ಕೃಷ್ಣಯ್ಯ ಮುಂತಾದವರುಗಳ ಸಾಧನೆಗಳನ್ನು ಕುರಿತು ಪುಸ್ತಕಗಳನ್ನು ಪ್ರಕಟಿಸುತ್ತಿರುವುದು ಸೂಕ್ತವೂ, ಸಮಂಜಸವೂ ಆಗಿದೆ. ಈ ಕೃತಿಗಳನ್ನು ಶ್ರದ್ಧೆಯಿಂದ ರಚಿಸಿದ ನಾಡಿನ ವಿವಿಧ ಭಾಗದ ಬರಹಗಾರರಾದ ಶಾ.ಮಂ. ಕೃಷ್ಣರಾವ್, ಕೆ.ಎಂ. ವಿಜಯಲಕ್ಷ್ಮಿ, ಡಾ. ಪದ್ಮಾಶೇಖರ್, ಡಾ. ರಾಮಚಂದ್ರ ಗಣಾಪುರ, ಶೂದ್ರ ಶ್ರೀನಿವಾಸ್, ಎಸ್. ಮಾರುತಿ, ಪ್ರೊ. ಮಲ್ಲಿಕಾರ್ಜುನ ಹಿರೇಮಠ, ಡಾ. ಗುರುಪಾದ ಮರಿಗುದ್ದಿ, ಡಾ. ಪ್ರಭು

ಖಾನಾಪುರೆ, ಡಾ. ಪ್ರಮೀಳಾ ಮಾಧವ್, ಡಾ. ಎಲ್.ಜಿ. ಮೀರಾ ಈ ಎಲ್ಲರಿಗೂ ಕೃತಜ್ಞತೆಗಳು.

ಈ ಜವಾಬ್ದಾರಿಯನ್ನು ನನಗಿತ್ತು ಈ ಕಾರ್ಯದಲ್ಲಿ ಸಂಪೂರ್ಣ ನೆರವು ನೀಡಿದ ಅಕಾಡೆಮಿಯ ಅಧ್ಯಕ್ಷರಾದ ಪ್ರೊ. ಮಾಲತಿ ಪಟ್ಟಣಶೆಟ್ಟಿ, ರಿಜಿಸ್ಟ್ರಾರ್ ಸಿ.ಎಚ್. ಭಾಗ್ಯ ಹಾಗೂ ಅಕಾಡೆಮಿ ಸಿಬ್ಬಂದಿ ವರ್ಗಕ್ಕೆ ನನ್ನ ನಮ್ರ ಪ್ರಣಾಮಗಳು.

ಪ್ರೊ. ಕೆ.ಎಸ್. ಮಧುಸೂದನ
ಸಂಪಾದಕರು

## ಕೈಹಿಡಿದು ನಡೆಸಿದವರು

ನಾಡೋಜ ಬರಗೂರರ ಹೆಸರನ್ನು 1997 ರ ಹೊತ್ತಿಗೆ ನನಗೆ ಸೂಚಿಸಿ ಎಂ.ಫಿಲ್. ಸಂಶೋಧನೆಯನ್ನು ಕೈಗೊಳ್ಳುವಂತೆ ಪ್ರೋತ್ಸಾಹಿಸಿ ಮಾರ್ಗದರ್ಶನ ನೀಡಿದವರು ಗುರುಗಳಾದ ಪ್ರೊ.ಎಸ್.ಜೆ. ಲಕ್ಕಪ್ಪಗೌಡರು.

ಗುರುಗಳಾದ ಪ್ರೊ. ರಂಗರಾಜವನದುರ್ಗ ಅವರು ಪಿಎಚ್.ಡಿ. ಸಂಶೋಧನೆಗೆ ಮಾರ್ಗದರ್ಶನ ನೀಡಿ ಬದುಕು ಬರಹ ಕುರಿತಂತೆ ವಿಸ್ತೃತ ಅಧ್ಯಯನಕ್ಕೆ ಅವಕಾಶ ಒದಗಿಸಿದರು.

ವಿಶೇಷವಾಗಿ ಅಧ್ಯಯನದ ವಿಷಯಕ್ಕೆ ಒಪ್ಪಿಗೆ ಸೂಚಿಸಿ ಪ್ರೀತಿಯಿಂದ ಸಂದರ್ಶನ ನೀಡಿ ಸಹಕರಿಸಿದ ಹಿರಿಯರಾದ ನಡೋಜ ಬರಗೂರರಿಗೆ ನಾನು ಆಭಾರಿ.

ಈ ಸಂದರ್ಭದಲ್ಲಿನ ನನ್ನ ಅಧ್ಯಯನದ ಮಿತಿಗಳೆಂದರೆ, ಬರಗೂರರ ಬದುಕು ಮತ್ತು ಬರಹವನ್ನು ವಿಸ್ತೃತ ಅಧ್ಯಯನಕ್ಕೆ ಒಳಪಡಿಸಿ, ಅಕಾಡೆಮಿಯ ಅಧ್ಯಕ್ಷರಾಗಿ ಅವರು ಕೈಗೊಂಡ ಯೋಜನೆಗಳನ್ನು ತೆಗೆದುಕೊಂಡ ನಿರ್ಧಾರಗಳನ್ನು ರೂಪಿಸಿದ ನಿಯಮಗಳನ್ನು ಆಂಶಿಕವಾಗಿ ಗ್ರಹಿಸಲಾಗಿತ್ತು.

ಪ್ರಸ್ತುತ ಅಕಾಡೆಮಿಯ ಅಧ್ಯಕ್ಷರು ಹಿರಿಯರು ಆದ ಪ್ರೊ. ಮಾಲತಿ ಪಟ್ಟಣಶೆಟ್ಟಿಯವರು ಬರಗೂರರ ಸಾಹಿತ್ಯಕ ಸೇವೆ ಮತ್ತು ಅಕಾಡೆಮಿಯ ಅಧ್ಯಕ್ಷರಾಗಿ ಅವರು ನೀಡಿದ ಅನನ್ಯ ಕೊಡುಗೆಗಳನ್ನು ಕುರಿತು ಕೃತಿ ರಚಿಸಿ ಕೊಡಲು ಸೂಚಿಸಿ ಅಕಾಡೆಮಿಯ ಯೋಜನೆಗಳು ಹೇಗೆ ಬರಗೂರರ ಆಲೋಚನೆಯ ಕ್ರಿಯಾರೂಪಗಳೆನ್ನುವುದನ್ನು ಅರಿತುಕೊಳ್ಳಲು ನೆರವಾದರು. ಅದಕ್ಕಾಗಿ ನಾನು ಅವರಿಗೆ ಆಭಾರಿ.

ಅಕಾಡೆಮಿಯ ರಿಜಿಸ್ಟ್ರಾರ್ ಆದ ಸಿ.ಹೆಚ್. ಭಾಗ್ಯ ಅವರಿಗೂ ಮತ್ತು ಎಲ್ಲ ಸದಸ್ಯರಿಗೂ ನಾನು ಆಭಾರಿ.

ಅಕಾಡೆಮಿಯಿಂದ ಪ್ರಕಟಣೆಗೊಂಡ ಅನೇಕ ಮಾಲಿಕೆಯ ಕೃತಿಗಳನ್ನು ಈ ಕೃತಿ ರಚನೆಗಾಗಿ ಸಂಗ್ರಹಿಸಿ ಕೊಟ್ಟು ಸಹಕರಿಸಿದ ಬಾಳಸಂಗಾತಿ ಪುಷ್ಪಲತಾ ಆರ್. ಗೆಳೆಯರಾದ ಡಾ.ಎಸ್. ಎಂ ಮುತ್ತಯ್ಯ, ಡಾ.ಬಿ.ಎಂ. ಗುರುನಾಥ,

ಡಾ.ಎಂ. ಕುಮಾರ್, ಡಾ.ಹೆಚ್.ಆರ್. ತಿಪ್ಪೇಸ್ವಾಮಿ, ಪತ್ರಕರ್ತ ಗೆಳೆಯರಾದ ನಾಗರಾಜ ಕಲ್ಲುಕೊಪ್ಪರನ್ನು ಪ್ರೀತಿಯಿಂದ ನೆನೆಯುತ್ತೇನೆ.

ಈ ಪುಸ್ತಕದ ಕಾರ್ಯಗಳನ್ನು ಕುತೂಹಲದ ಕಣ್ಣಿಂದ ನೋಡುತ್ತಿರುವ ಪುಟಾಣಿಗಳಾದ ಅಭಿ, ಸಹನ, ಸೋನು, ಸಂಜನ, ಸ್ಪಂದು ಸಂಜಯ್, ಅಂಶು, ಅಮೃತ್, ರಾಕಿ, ರಕ್ಷಾ, ತೇಜು, ಯಶು ಇವರನ್ನು ಪ್ರೀತಿಯಿಂದ ನೆನೆಯುತ್ತೇನೆ.

(ಡಾ. ಎಸ್. ಮಾರುತಿ)

## ಪರಿವಿಡಿ


| | |
|---|---|
| ಅಧ್ಯಕ್ಷೀಯ ಮಾತು | iii |
| ಸಂಪಾದಕೀಯ | vii |
| ಕೈ ಹಿಡಿದು ನಡೆಸಿದವರು | ix |
| 1. ನಾಡೋಜ ಬರಗೂರು | 1–36 |
| 2. ಬರಗೂರರ ಸಾಹಿತ್ಯ ಚಿಂತನೆ | 37–109 |
| 3. ಸಾಹಿತ್ಯ ಅಕಾಡೆಮಿ ಮತ್ತು ಬರಗೂರು | 110–124 |

# ನಾಡೋಜ ಬರಗೂರು

ಬಹುತೇಕ ಸಂದರ್ಭಗಳಲ್ಲಿ ನಾವು ಜೀವನ ಮತ್ತು ಸಾಹಿತ್ಯವನ್ನು ವಿಭಜಿಸಿ ನೋಡುತ್ತೇವೆ. ಏಕೆಂದರೆ, ಸಮಾಜದೊಳಗಿನ ಜೀವನಕ್ಕೂ, ಸಾಹಿತ್ಯದೊಳಗಿನ ಸಂದರ್ಭಕ್ಕೂ ವ್ಯತ್ಯಾಸವಿರುತ್ತದೆ ಎನ್ನುವ ಕಾರಣಕ್ಕೆ. ಆದರೆ, ಇದು ಎಲ್ಲಾ ವ್ಯಕ್ತಿ, ಸಂದರ್ಭ, ಸಂಗತಿಗಳಿಗೆ ಅನ್ವಯಿಸುವುದಿಲ್ಲ. 'ನುಡಿದಂತೆ ನಡೆಯಬೇಕು; ಬರೆದಂತೆ ಬದುಕಬೇಕು' ಎನ್ನುವ ಮಾತುಗಳು ಇತ್ತೀಚೆಗೆ ತುಂಬಾ ಪ್ರಭಾವಪೂರ್ಣವಾಗಿ ಕೇಳಿಬರುತ್ತಿವೆ. ಏಕೆಂದರೆ, "ಲೇಖಕ ಸಮಾಜದಿಂದ ಸ್ವಾತಂತ್ರ್ಯವನ್ನು ಬಯಸಿದರೆ; ಸಮಾಜ ಆತನಿಂದ ಸಾಮಾಜಿಕ ಜವಾಬ್ದಾರಿಯನ್ನು ಬಯಸುತ್ತದೆ." ಹಾಗೆಯೇ 'ಸಾಹಿತ್ಯ' ಎನ್ನುವುದು ಬದ್ಧತೆಯಿಂದ ಕೂಡಿರಬೇಕಾಗುತ್ತದೆ. ಆಗ, ಜೀವನ ಮತ್ತು ಸಾಹಿತ್ಯದ ಮಧ್ಯೆ ಅಂತರವೇ ಇರುವುದಿಲ್ಲ. ಇಂತಹ ಮಾದರಿಗೆ ಪ್ರೊ. ಬರಗೂರು ರಾಮಚಂದ್ರಪ್ಪನವರ 'ಜೀವನ ಮತ್ತು ಸಾಹಿತ್ಯ' ಒಂದು ಸಾಚಾ ಉದಾಹರಣೆಯಾಗಿದೆ.

ನಾಡೋಜ ಬರಗೂರರದು "ಬದುಕೇ ಹೋರಾಟ; ಹೋರಾಟವೇ ಬದುಕು" ಎನ್ನುವ ಬದ್ಧತೆಯದು.

ಇವರ ಹುಟ್ಟೂರು 'ಬರಗೂರು' ಇದು ಇಂದಿನ ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನಲ್ಲಿದೆ. ಇಲ್ಲಿಯ ಶ್ರೀ ರಂಗದಾಸಯ್ಯ ಮತ್ತು ಶ್ರೀಮತಿ ಕೆಂಚಮ್ಮನವರ ಎಂಟನೆಯ ಮಗನಾಗಿ (18–10–1947) ರಾಮಚಂದ್ರಪ್ಪನವರು ಜನಿಸಿದರು. "ತುಮಕೂರು ಜಿಲ್ಲೆ ಬಹುಮಟ್ಟಿಗೆ ಬಯಲು ನಾಡೆಂದು ಹೇಳಬಹುದು. ಈ ಜಿಲ್ಲೆಯ ಅರಣ್ಯಗಳು ಹೆಚ್ಚಾಗಿ ಬೆಟ್ಟ ಪ್ರದೇಶದಿಂದ ಸುತ್ತಲೂ ಗುಂಪಾಗಿ ಹರಡಿವೆ. ದೇವರಾಯನದುರ್ಗ, ಮಧುಗಿರಿ, ಚಿಕ್ಕನಾಯಕನಹಳ್ಳಿ, ಶಿರಾ, ಕೊರಟಗೆರೆ, ಕಿಬ್ಬನಹಳ್ಳಿ, ಬುಕ್ಕಾಪಟ್ಟಣ, ಹುಲಿಯೂರುದುರ್ಗಾ, ಕುದುರೆಕಣಿವೆ–ಮುಂತಾದ ಕಡೆ ಅರಣ್ಯವಿದ್ದು ಜಿಲ್ಲೆಯ ಒಟ್ಟು ಅರಣ್ಯ ಪ್ರದೇಶ 883 ಚದುರ ಕಿಲೋಮೀಟರ್ ಇದೆ. ಈ ಅರಣ್ಯಗಳಲ್ಲಿ ಜಾಲರಿ, ದಿಂಡಿಗ, ಹೊನ್ನೆ, ಕರಿಮತ್ತಿ, ಅಳಲೆ, ತೋರಮತ್ತಿ, ಹುಣಸೆ, ತೇಗ, ಗಂಧ, ಬಾಗೇ, ಧೂಡಿ, ಕುರ್ಚಿ, ಕಕ್ಕೆ, ಕಗ್ಗಲಿ, ಚಿಜ್ಜಿಲು, ತಂಗಡಿ, ಸೀತಾಫಲ,

ಮುಂತಾದ ಗಿಡಮರಗಳನ್ನು ಕಾಣಬಹುದು. ಈ ಜಿಲ್ಲೆಯ ಅರಣ್ಯಗಳಲ್ಲಿ ಹಿಂದೆ ಹುಲಿ, ಚಿರತೆ, ಮುಂತಾದುವು ಆಗಾಗ್ಗೆ ಕಾಣಿಸಿಕೊಳ್ಳುತ್ತಿದ್ದವು. ಈಗ ಅಪರೂಪವಾಗಿವೆ. ಕರಡಿ, ಕಾಡುಹಂದಿ, ಚುಕ್ಕೆಜಿಂಕೆಗಳು ಇವೆ. ಕಾಡುಕೋಳಿ ಜೀವಂಜೀವ, ಗಿಣಿ, ಕಾಡುಪಾರಿವಾಳ, ಮೈನಾ ಮೊದಲಾದವು; ನೀರುಕೋಳಿ, ಕೊಕ್ಕರೆ ಮುಂತಾದ ಜಲಚರ ಪಕ್ಷಿಗಳು ಇವೆ."

ಜೊತೆಗೆ 'ಬರು' ಎನ್ನುವ ಹುಲ್ಲು ಇಲ್ಲಿ ಹೇರಳವಾಗಿ ಬೆಳೆಯುತ್ತದೆ. ಇದರಿಂದಲೇ ಈ ಊರಿಗೆ 'ಬರಗೂರು' ಎಂಬ ಹೆಸರು ಬಂದಿರಲಿಕ್ಕೂ ಸಾಧ್ಯವಿದೆ.

ಈ ಹಿನ್ನೆಲೆಯಿಂದ ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನ 'ಬರಗೂರು' ಹಿಂದೆ ಹುಲ್ಲು ಬೆಳೆಯುವ ಊರಾಗಿರಬಹುದು; ಆದರೆ, ಇಂದು ಇದು ಸಾಹಿತ್ಯಕವಾಗಿ, ಸಾಂಸ್ಕೃತಿಕವಾಗಿ ಹಾಗೂ ವ್ಯಕ್ತಿಗತವಾಗಿ ಇಡೀ ಕರ್ನಾಟಕದ ನಕ್ಷೆಯಲ್ಲಿ ಗುರುತಿಸಿಕೊಂಡಿದೆ. ಅದು 'ಹಳ್ಳದ ದಂಡ್ಯಾಗಿನ ಕರಕೀಯ ಕುಡಿಯಾಂಗೆ' ಚಾಚಿಕೊಳ್ಳುತ್ತಲೇ ಇದೆ. ಇಂತಹ ಬಯಲು ನಾಡಿನ ಬರಗೂರಿನಲ್ಲಿ ಹುಟ್ಟಿದ ರಾಮಚಂದ್ರಪ್ಪನವರು ತಮ್ಮ ಬಾಲ್ಯದುದ್ದಕ್ಕೂ ಬಡತನವನ್ನೇ ಉಂಡು ಬೆಳೆದವರು. ಸೀಮೆಣ್ಣೆಯ ಬುಡ್ಡಿ ಬೆಳಕಿನಲ್ಲಿ ಬಾಲ್ಯದ ಓದು ಓದಿದವರು. ಪಠ್ಯ ಪುಸ್ತಕದಲ್ಲಿನ ಕುವೆಂಪು, ಬೇಂದ್ರೆಯವರ ಪ್ರಕೃತಿಯನ್ನು ಮನಸಾರೆ ಕಂಡವರು; ಆದರೆ, ಅದೆಲ್ಲವನ್ನು ತಮ್ಮ ಸುತ್ತ ಕಾಣಲು ಪ್ರಯತ್ನಿಸಿದರು. ಆದ್ದರಿಂದಲೇ ಇವತ್ತು "ನನ್ನ ಪರಿಸರದ ಕಾಗೆ ನನಗೊಂದು ಬೇರೆ ಕಣ್ಣನ್ನೇ ಕೊಟ್ಟಿದೆ. ಇಂತಹ ಪರಿಸರವೇ ಹೊಸ ಯೋಚನೆಗೆ ಕಾರಣವಾಗಿದೆ; ನನ್ನ ಸುತ್ತಲಿನ ಸಮುದಾಯವನ್ನು ಪ್ರೀತಿಸುವುದಕ್ಕೂ ಭಾಗವಾಗಿದೆ" ಎನ್ನುತ್ತಾರೆ.

ಹೀಗೆ, ಬರಗೂರರು ತಮ್ಮ ಊರಿನ ಮಿತಿಗಳಲ್ಲಿ ವಿಶೇಷವಾದ ವಾತಾವರಣವನ್ನು ಸೃಷ್ಟಿಸಿಕೊಂಡವರು ಕುಟುಂಬದೊಳಗಡೆ ಕವಿಗಳಿರಲಿಲ್ಲ; ಕವಿ ಮನೋಭಾವದವರಿದ್ದರು. ಅವರೆಂದರೆ ತಂದೆ ರಂಗದಾಸಯ್ಯ, ತಾಯಿ ಕೆಂಚಮ್ಮ, ಶಿರಾ ತಾಲ್ಲೂಕಿನಲ್ಲಿ ಶಿಕ್ಷಕರಾಗಿದ್ದ ರಂಗದಾಸಯ್ಯನವರು ತಮ್ಮ ಅಧ್ಯಾಪನ ವೃತ್ತಿಯಿಂದ ಬರುವ ಇಪ್ಪತ್ತೆಂಟು ರೂಪಾಯಿ ಸಂಬಳದಲ್ಲಿಯೇ ಎಂಟು ಜನ ಮಕ್ಕಳ ಕ್ಷೇಮವನ್ನು ನೋಡಿಕೊಂಡವರು. ಇವರ ಮಕ್ಕಳಲ್ಲಿ

ಮೂರು ಜನ ಗಂಡುಮಕ್ಕಳು, ಐದು ಜನ ಹೆಣ್ಣುಮಕ್ಕಳು; ಇವರಲ್ಲಿ ರಾಮಚಂದ್ರಪ್ಪನವರೇ ಕೊನೆಯವರು. ಇವರ ಮನೆತನದವರು ರಂಗನಾಥ ಸ್ವಾಮಿಯ ಒಕ್ಕಲಾದುದರಿಂದ ಬಹುತೇಕ ರಂಗ ಮತ್ತು ರಾಮ ಎನ್ನುವ ನಾಮಪದದಿಂದಲೇ ತಮ್ಮ ಹೆಸರುಗಳನ್ನಿಟ್ಟುಕೊಂಡವರು. ಹೆಚ್ಚಾಗಿ ದೊಡ್ಡರಂಗಪ್ಪ, ಚಿಕ್ಕರಂಗಪ್ಪ, ರಂಗದಾಸಪ್ಪ, ರಂಗನಾಥಪ್ಪ, ಜಯರಾಮಪ್ಪ, ರಾಮಚಂದ್ರಪ್ಪ ಹೀಗೆ ತಮ್ಮ ಆರಾಧ್ಯ ದೇವರ ಅಭಿಧಾನ ಪಡೆದವರು.

ತಮ್ಮ ದೈಹಿಕ ಅನಾರೋಗ್ಯದಿಂದ ರಂಗದಾಸಯ್ಯನವರು ದಿನಾಂಕ:11–11–1985ರಂದು ಮತ್ತು ತಾಯಿ ಕೆಂಚಮ್ಮ ದಿನಾಂಕ:28–08–1996ರಂದು ಕೊನೆಯುಸಿರೆಳೆದರು. ಆಗ, ತಂದೆಯ ಮರಣದ ನಂತರ ಕುಟುಂಬದ ಜವಾಬ್ದಾರಿಯನ್ನು ಚಿಕ್ಕರಂಗಪ್ಪ ಮಾಸ್ತರೇ ನಿರ್ವಹಿಸಿಕೊಳ್ಳಬೇಕಾಯಿತು. ಕಾರಣ, ಕುಟುಂಬಕ್ಕೆ ಹಿರಿಯನಾದುದ್ದರಿಂದ ಇವರ ಇಡೀ ಕುಟುಂಬವೇ ಅಧ್ಯಾಪನ ವೃತ್ತಿಯದ. ರಂಗದಾಸಯ್ಯನವರು ಅಧ್ಯಾಪಕರಾಗಿದ್ದರಲ್ಲದೆ, ಮಕ್ಕಳಾದ ಚಿಕ್ಕರಂಗಪ್ಪ, ಜಯರಾಮಪ್ಪ, ಬರಗೂರು ರಾಮಚಂದ್ರಪ್ಪರನ್ನೊಳಗೊಂಡು ಎಲ್ಲರೂ ಅಧ್ಯಾಪಕರೆ, ತಂದೆಯದು ಅಧ್ಯಾಪನ ವೃತ್ತಿಯಾದುದರಿಂದ ಊರಿಂದ ಊರಿಗೆ ವರ್ಗವಾಗುತ್ತಲೇ ಇತ್ತು. ಆದರೂ ಸಹ ರಾಮಚಂದ್ರಪ್ಪನವರ ಪ್ರಾಥಮಿಕ ವಿದ್ಯಾಭ್ಯಾಸ ಮಾತ್ರ ಬರಗೂರಿನ ಈಗಿರುವ ಪ್ರಾಥಮಿಕ ಶಾಲೆಯಲ್ಲೇ ಆಯಿತು. ಮುಂದೆ ಪ್ರೌಢಶಾಲೆಯ ಶಿಕ್ಷಣ ಶಿರಾದಲ್ಲಿ ನಡೆಯಿತು. ನಂತರ ಅದನ್ನೆ ತುಮಕೂರಿನ ಸರ್ಕಾರಿ ಪ್ರೌಢಶಾಲೆಯಲ್ಲಿ ಮುಂದುವರೆಸಿದರು. ಜೊತೆಗೆ ಅದೇ ತುಮಕೂರಿನ ಸರ್ಕಾರಿ ಕಾಲೇಜಿನಲ್ಲಿ ತಮ್ಮ ಬಿ.ಎ. ಪದವಿಯನ್ನು ಮುಗಿಸಿದರು. ಮುಂದೆ ಉನ್ನತ ಶಿಕ್ಷಣವನ್ನು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಪಡೆದುಕೊಂಡರು.

## ಪ್ರಜಾಪ್ರಭುತ್ವದ ಮನಸ್ಸು

ಬರಗೂರೆಂದರೆ ಅದು ರಾಮಚಂದ್ರಪ್ಪ, ರಾಮಚಂದ್ರಪ್ಪನವರಿಗೆ ಹೊಂದಿಕೊಂಡೇ ಇರುವ ಬರಗೂರು ಇಂದು ರಾಜ್ಯದ ನಕಾಶೆಯಲ್ಲಿ ಕಂಬಳಿ ತಯಾರಿಕೆಯ ಹೆಸರಲ್ಲೂ ಜೀವಂತವಾಗಿದೆ. ಜೊತೆಗೆ, ಬತ್ತಿಹೋಗಿ ಬಾಯ್ದೆರೆದ ಕೆರೆಗಳೊಂದಿಗೆ ದಟ್ಟವಾಗಿರುವ ಜಾಲಿ, ಬೇವು, ಹುಣಸೆಗಳ ನೈಸರ್ಗಿಕ ಸಂಪತ್ತು ಊರನ್ನು ಮುತ್ತಿದೆ. ಇಂತಹ ಭೌಗೋಳಿಕ ಪರಿಸರ ಹೊಂದಿರುವ ಬರಗೂರು

ಇಂದು ರಾಮಚಂದ್ರಪ್ಪರಂತಹ ಹೋರಾಟದ ವ್ಯಕ್ತಿಯನ್ನು ಈ ಸಮಾಜಕ್ಕೆ ನೀಡಿ ಸಾರ್ಥಕತೆ ಪಡೆದುಕೊಂಡಿದೆ. "ಊರಿಗೆ ಮುಂಜಾನೆ ಒಂದು ಕೆಂಪು ಬಸ್ಸು ಬರ್ತಿತ್ತು. ಖಾಸಗಿಯ ಬಸ್ಸೊಂದು ಅದೇ ಸಮಯಕ್ಕೆ ಬರ್ತಿತ್ತು. ಇದರಲ್ಲಿ ನನಗೆ ಕೆಂಪು ಬಸ್ಸು ಇಷ್ಟವಾಗಿತ್ತು. ನನಗೇ ಈಗಲೂ ಕೆಂಪು ಕಂಡರೆ ಇಷ್ಟ. ಈ ಎರಡು ಬಸ್ಸಿನವರು ಸೀಟುಗಳಿಗಾಗಿ ಹೊಡೆದಾಡುತ್ತಿದ್ದರು. ಈ ಜಗಳದಲ್ಲಿ ನನಗೆ ಕೆಂಪು ಬಸ್ಸಿನವರೇ ಗೆಲ್ಲಬೇಕಿತ್ತು. ಸ್ಥಳೀಯವಾಗಿ ಬಡವರ ಮೇಲೆ ಅನಾಸಕ್ತಿ, ನಿರಾಸಕ್ತಿ ತೋರಿಸುತ್ತಿದ್ದ ಮತ್ತು ಅದರ ಪ್ರತಿನಿಧಿಗಳಾಗಿ ಖಾಸಗೀ ಬಸ್ಸಿನವರಿದ್ದುದರಿಂದ, ನಾನು ಬಾಲ್ಯದಿಂದಲೂ ಖಾಸಗೀಕರಣವನ್ನು ವಿರೋಧಿಸುತ್ತಾ ಬಂದವನು." ಎನ್ನುವಲ್ಲಿ ಬರಗೂರರ ಬಾಲ್ಯಕ್ಕೆ ಆಗಲೇ ಬಂಡಾಯದ ಸಂಬಂಧವಿರುವುದನ್ನು ಗಮನಿಸಬಹುದು. ಬಾಲ್ಯದಲ್ಲಿ ರಾಮಚಂದ್ರಪ್ಪನವರಿಗೆ ಬಸ್ಸಿನ ಚಾಲಕನಾಗಬೇಕೆಂಬ ಮಹತ್ ಆಸೆ ಇತ್ತಂತೆ. ಆದರೆ, ಅದು ಸರ್ಕಾರಿ ಬಸ್ ಮಾತ್ರ ಆಗಬೇಕು. ಇಂತಹ ಪ್ರಜಾಪ್ರಭುತ್ವದ ಮನಸ್ಸು ಬರಗೂರರಿಗೆ ಬಾಲ್ಯದಲ್ಲೇ ಇತ್ತು. ಇಂಥವರು ಮುಂದೆ ಸಾಹಿತ್ಯದ ಓದುಗರಿಗೆ ಹೋರಾಟಗಾರರಾಗಿ, ಸಾಹಿತಿಯಾಗಿ ಗೊತ್ತು. ಆದರೆ, ಬರಗೂರಿನ ಪುಟ್ಟ ಮಕ್ಕಳಿಗೆ ಅಣ್ಣನಾಗಿ, ತರುಣರಿಗೆ ಚಂದ್ರಣ್ಣನಾಗಿ, ಸಮುದಾಯಕ್ಕೆ ಸಹೋದರರಾದದ್ದು ಬದುಕಿದ್ದು ಉಲ್ಲೇಖಾರ್ಹ.

### ಕಟ್ಟುವ ಆಲೋಚನೆ

ವಿದ್ಯಾರ್ಥಿ ದೆಸೆಯಲ್ಲಿಯೇ ಬರಗೂರರು ಏಳೆಂಟು ಗೆಳೆಯರನ್ನು ಕೂಡಿಸಿಕೊಂಡು ಹುಟ್ಟಿದ ಊರಲ್ಲಿ ಪತ್ರಿಕಾವಾಚನಾಲಯವನ್ನು ಆರಂಭಿಸಿದ್ದರು. ಅದು ಕನ್ನಡ ಸಂಘದ ಹೆಸರಿನಲ್ಲಿ, ಈ ಸಾಹಸಕ್ಕೆ ಕನ್ನಡದ ದಿಗ್ಗಜರಾದ ಅ.ನ. ಕೃಷ್ಣರಾಯರು ಮತ್ತು ನಾಡಿಗೇರಿ ಕೃಷ್ಣರಾಯರು ಇವರಿಗೆ ಮೆಚ್ಚುಗೆ ಪತ್ರವನ್ನು ಬರೆದಿದ್ದರು. ಬಾಲ್ಯದ ಈ ಸಾಹಸವನ್ನು ಬರಗೂರರು ಇಂದು ರೋಮಾಂಚನಕಾರಿ ಸಾಧನೆಯಂದೇ ಭಾವಿಸುತ್ತಾರೆ; ಸಂತೋಷಪಡುತ್ತಾರೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಸಂದರ್ಭದಲ್ಲಿ ತುಮಕೂರು ಗೆಳೆಯರಿಂದ ಸನ್ಮಾನದ ಪ್ರಸ್ತಾಪ ಬಂತು. ಆಗ ಬರಗೂರರು "ನನಗೆ ಸನ್ಮಾನ ಮಾಡಬೇಡಿ ನನಗೆ ಪ್ರೋತ್ಸಾಹ ಕೊಟ್ಟವರನ್ನು ಸನ್ಮಾನ ಮಾಡಿ"[3] ಎಂದಾಗ ಅವರು ಹಾಗೇ ಮಾಡಿದರು. ಇವರ ವಿದ್ಯಾಗುರು ಜಿ.ವೈ. ನಾಗಭೂಷಣರಾವ್

ಅವರನ್ನು ಕರೆದು ಸನ್ಮಾನಿಸಿದರು. "ಜಿ.ವೈ. ನಾಗಭೂಷಣರಾವ್ ಅವರು ನನಗೆ ಒಂದು ಕಾರ್ಡ್ ಬರೆದರು. ಅದನ್ನು ನಾನು ಬಹಳ ದಿನಗಳವರೆಗೆ ಇಟ್ಟು ಕೊಂಡಿದ್ದೆ ಅದು ಹೀಗಿತ್ತು; ಪ್ರಿಯ ರಾಮಚಂದ್ರಪ್ಪ ನೀನು ಬಹಳ ಪ್ರತಿಭಾವಂತ, ನೀನು ಹಳ್ಳೀಲೆ ಇರಬಾರದು; ಮುಂದುವರೆಯಬೇಕು ಎಂದು ಬಲು ಸಣ್ಣ ಅಕ್ಷರಗಳಿಂದ ಬರೆದ ಪತ್ರ. ಪ್ರಶಂಸೆಯ ಆ ಪತ್ರ ನನ್ನನ್ನು ರೋಮಾಂಚನಗೊಳಿಸಿತು. ಮುಂದೆ ಏನಾದರೂ ಆಗಬೇಕೆನ್ನುವುದಕ್ಕೆ ಪ್ರೇರಣೆಯಾಯಿತು." ಎನ್ನುತ್ತಾರೆ; ತುಂಬಾ ಗೌರವದಿಂದ ಸ್ಮರಿಸುತ್ತಾರೆ.

ಮತ್ತೆ ಮುಂದುವರೆದು ತಮ್ಮ ಬಾಲ್ಯದ ದಿನಗಳನ್ನು ಸ್ಮರಿಸಿಕೊಳ್ಳುತ್ತಾ "ಶಾಲೆಯ ದಿನಗಳಲ್ಲಿ ಪ್ರತೀ ಶನಿವಾರ ಚರ್ಚಾಸ್ಪರ್ಧೆ ಇರುತ್ತಿತ್ತು. ಸಣ್ಣ ಆ ವಯಸ್ಸಿನಲ್ಲಿ ಸ್ಪರ್ಧೆಗಳಲ್ಲಿ ಭಾಗವಹಿಸುವುದೆಂದರೆ ಗಡಗಡ ನಡುಗುತ್ತಿದ್ದೆವು. ಆಗ ನನ್ನ ಊರಿನ ಸ್ನೇಹಿತರೆಲ್ಲ ನನಗೆ ಚಂದ್ರಣ್ಣ ಎಂದೇ ಕರೆಯುತ್ತಿದ್ದರು. ಅವರೆಲ್ಲಾ ಇಂತಹ ಸಂದರ್ಭಗಳಲ್ಲಿ ಈಗ ಚಂದ್ರಣ್ಣ ಅಳುತ್ತಾನೆ, ಈಗ ಅಳುತ್ತಾನೆ ಎಂದೆಲ್ಲ ಚುಡಾಯಿಸುತ್ತಿದ್ದರು, ಹೀಗೆಲ್ಲ ಹೇಳಿ ಹೇಳಿ ನನಗವರು ಅಳಿಸಿದ್ದೂ ಉಂಟು. ಆಗ ನನ್ನೊಳಗೆ, ಇವರೆಲ್ಲಾ ನನ್ನನ್ನು ಅಳುಮುಂಜಿ ಮಾಡಿದರಲ್ಲಾ ಎಂದು ಅಂದುಕೊಳ್ಳುತ್ತಿದ್ದೆ. ಇಂತಹ ಸಂದರ್ಭದಲ್ಲಿ ನನ್ನನ್ನು ಧೈರ್ಯವಾಗಿ ಮಾತನಾಡುವುದಕ್ಕೆ ಪ್ರೇರೇಪಿಸಿದವರೇ ನನ್ನಗುರು ನಾಗಭೂಷಣರಾವ್ ಅವರು ಇವರ ಜೊತೆಗೆ ನರಸಿಂಗರಾವ್ ಎಂದು ಇನ್ನೊಬ್ಬರಿದ್ದರು. ಒಂದು ದಿನ, ಚರ್ಚಾಸ್ಪರ್ಧೆಯಲ್ಲಿ ಬಾಯಿಪಾಠ ಮಾಡಿಕೊಂಡಿದ್ದನ್ನು ಗಟ್ಟಿಯಾಗಿ ಮಾತನಾಡಿದೆ, ನನ್ನಲ್ಲಿರುವ ಭಯ ಅರ್ಧ ಬಿಟ್ಟೀಹೋಯಿತು. ಹಾಗೆಯೇ ಮುಂದೆ ಅದು ಮತ್ತೆ ಮತ್ತೆ ಮಾತನಾಡಿದಾಗ ಭಯವೇ ಉಳಿಯಲಿಲ್ಲ. ಆರಂಭದಲ್ಲಿ ಗಾಂಧೀಜಿಯವರ 'ನನ್ನ ಬಾಲ್ಯ' ಪಠ್ಯವಾಗಿತ್ತು. ರವೀಂದ್ರನಾಥ ಟ್ಯಾಗೂರರನ್ನು ಓದುತ್ತಿದ್ದೆ. ಇಂತಲೆಲ್ಲ ಬಂದ ಪ್ರಶ್ನೆಗಳಿಗೆ ನಾನು ಯಾವುದೇ ತೊಂದರೆ ಇಲ್ಲದೆ ಉತ್ತರಿಸಿದ್ದೆ. ಇದೆಲ್ಲಾ ಈ ಸ್ಥಿತಿಗೆ ಬೆಳೆಯಲು, ಪ್ರಗತಿಪರವಾಗಿ ಯೋಚಿಸಲು ಕಾರಣವಾಯಿತು."

ಹೀಗೆ ರಾಮಚಂದ್ರಪ್ಪನವರು ತಮ್ಮ ಪ್ರಗತಿಪರ ಚಿಂತನೆ ಮತ್ತು ಕಾರ್ಯಗಳನ್ನು ಮೈಗೂಡಿಸಿಕೊಂಡದ್ದು ಬರಗೂರಿನ ಪರಿಸರದಲ್ಲೆ. ಇಂತಹ ಕಟ್ಟುವ ಆಲೋಚನೆಗಳು ಇವರಿಗೆ ಬಾಲ್ಯದಲ್ಲೇ ಒದಗಿಬಂದವು. "ಒಮ್ಮೆ ನನ್ನ

ತಂದೆ ಹತ್ತಿರದ ಪಾಟ್ನಾಯಕನ ಹಳ್ಳಿಗೆ 'ಸ್ಕೂಲ್ ಮೇಷ್ಟ್ರು' ಸಿನಿಮಾಕ್ಕೆ ಕರೆದುಕೊಂಡು ಹೋಗಿದ್ದರು. ಆ ಸಿನಿಮಾದ ಅಂತ್ಯದಲ್ಲಿ ವಿದ್ಯಾರ್ಥಿಗಳೆಲ್ಲ ತಮ್ಮ ಮೆಷ್ಟ್ರಿಗೆ ಮನೆಯೊಂದನ್ನು ಕಟ್ಟಿಕೊಡುತ್ತಾರೆ. ಆಗ ಅವರು ಸಂತೋಷದಿಂದ ಹಾಡಿ ಕುಣಿಯುತ್ತಾರೆ. ನಾವು ಕೂಡ ಅವರು ಹಾಡುವ ಹಾಡಿಗೆ ಅಲ್ಲಿಯ ಸಂತೋಷಕ್ಕೆ ಸಿಳ್ಳೆ, ಕೇಕೆ ಹೊಡೆಯುತ್ತಿದ್ದೆವು. ಆದರೆ ಈ ಸಂದರ್ಭದಲ್ಲಿ ಎಷ್ಟು ಕಾರುಗಳನ್ನು ದ್ವಂಸ ಮಾಡಿದ್ದಾರೆ, ಎಷ್ಟು ಜನರನ್ನು ಇರಿದಿದ್ದಾರೆ, ಎಷ್ಟು ಜನರನ್ನು ಕೊಂದಿದ್ದಾರೆ ಎನ್ನುವುದಕ್ಕೇ ಸಿಳ್ಳೆ ಕೇಕೆಗಳನ್ನು ಹಾಕುತ್ತೇವೆ. ಇದು ನಮ್ಮ ಮುಂದಿರುವ ದೊಡ್ಡ ದುರಂತ. ಇಂದಿನ ಯುವಶಕ್ತಿ ಕಟ್ಟುವ ಕೆಲಸವನ್ನು ನೋಡಿ ಆನಂದಪಡಬೇಕು. ಜೊತೆಗೆ ಓರ್ವ ಅಧ್ಯಾಪಕನೂ ಕೂಡ ಕಟ್ಟುವ ಕೆಲಸವನ್ನು ಮಾಡಬೇಕಿದೆ." ಎನ್ನುವ ಮೂಲಕ ಬರಗೂರರು ಜನತೆ ಇಂತಹ ಕೆಲಸಗಳಲ್ಲಿ ತೊಡಗಬೇಕೆಂದು ಉಪದೇಶಿಸುತ್ತಾರೆ.

ಇಂಥ ಆಲೋಚನೆಯ ಮೊಳಕೆಗಳು ಮರವಾದುದು ಅವರ ಓದಿನ ನೆಲೆಯಲ್ಲಿ. ಆಗ ಗ್ರಹಿಸಿಕೊಂಡ ಮಾರ್ಕ್ಸ್, ಲೋಹಿಯಾ, ಲೆನಿನ್, ಅಂಬೇಡ್ಕರ್, ಗಾಂಧಿಯಂತವರ ವಿಚಾರಗಳಲ್ಲಿ, ಅಬ್ರಹಾಂ ಲಿಂಕನ್ನರು ಪ್ರಜಾಪ್ರಭುತ್ವವನ್ನು ವ್ಯಾಖ್ಯಾನಿಸುತ್ತಾ ಕುರಿ ಮತ್ತು ತೋಳದ ಕಥೆಯೊಂದನ್ನು ಉದಾಹರಿಸುತ್ತಾರೆ. "ಕುರಿ ಹೇಳಿತಂತೆ, ನೀವು ನನ್ನ ಬದುಕುವ ಹಕ್ಕನ್ನು ರಕ್ಷಿಸಿದಿರಿ. ತೋಳ ಹೇಳಿತಂತೆ ನೀವು ನನ್ನ ತಿನ್ನುವ ಹಕ್ಕನ್ನು ಕಿತ್ತುಕೊಂಡಿರಿ ಎಂದು." ಇಲ್ಲಿ ನಾವು ಯೋಚಿಸಬೇಕು ತಿನ್ನುವ ಹಕ್ಕನ್ನು ರಕ್ಷಿಸಬೇಕೇ ? ಬದುಕುವ ಹಕ್ಕನ್ನು ರಕ್ಷಿಸಬೇಕೇ ? ಬರಗೂರರು ಹೇಳುತ್ತಾರೆ "ನಾವು ಇಲ್ಲಿ ಬದುಕುವ ಹಕ್ಕನ್ನು ರಕ್ಷಿಸಬೇಕು. ಇದೇ ನಿಜವಾದ ಪ್ರಜಾಪ್ತುಭುತ್ವ. ಅದೇ ನಿಜವಾದ ಸರ್ಕಾರ. ಸಮಾಜವೆಂದರೆ ಬದುಕುವ ಹಕ್ಕನ್ನು ರಕ್ಷಣೆ ಮಾಡುವುದೇ ಆಗಿದೆ. ಆಗ ಕೆಲವು ತೋಳಗಳ ಹಕ್ಕನ್ನು ಕೀಳಲೇಬೇಕಾಗುತ್ತದೆ. ಇಂತಹ ಕನಸ್ಸನ್ನು ಬಹಳ ದೊಡ್ಡ ದೊಡ್ಡ ಚಿಂತಕರೆನಿಸಿಕೊಂಡವರು, ಸುಧಾರಕರೆನಿಸಿಕೊಂಡವರು ರಕ್ಷಿಸಿಕೊಂಡು ಬಂದಿರುತ್ತಾರೆ. ಇಂತಹ ಕನಸನ್ನು ಹಾಳು ಮಾಡದೇ ಮುಂದಿನ ಪೀಳಿಗೆಗೆ ಜೀವಂತವಾಗಿರಿಸಿಕೊಂಡು ಬರಬೇಕಾಗುತ್ತದೆ. ಅಂತಹ ಕನಸನ್ನು ಜೀವಂತವಾಗಿಡುವ ಕಿಂಚಿತ್ ಕೆಲಸ ಮಾಡಲು ಶಕ್ತಿ ಒದಗಿಸಿಕೊಟ್ಟದ್ದೇ

ಬರಗೂರಿನ ಪರಿಸರ"ವೆಂದು ಸದಾ ತಮ್ಮ ಊರನ್ನು ರಾಮಚಂದ್ರಪ್ಪ ನೆನಪಿಸಿಕೊಳ್ಳುತ್ತಾರೆ.

**ನೆನಪಾಗುತ್ತಲೇ ಇರುವ ಬರಿಗಾಲ ನಡಿಗೆ**

ರಾಮಚಂದ್ರಪ್ಪನವರಿಗೆ ಬರಗೂರು ಗ್ರಾಮದೊಂದಿಗಿರುವ ಸಂವೇದನೆ ಇಂದು ಎಲ್ಲರನ್ನು ಕಾಡಬೇಕಿದೆ. ಕನ್ನಡ ಸಂದರ್ಭದಲ್ಲಿ ಅನೇಕರನ್ನು ಈ ರೀತಿ ಕಾಡಿರುವುದೂ ಉಂಟು. ಅಂತಹ ಲೇಖಕರು ಕತೆ, ಕಾವ್ಯ, ಕಾದಂಬರಿಗಳ ಮೂಲಕ ಅಭಿವ್ಯಕ್ತಿಸುತ್ತಲೇ ಬಂದಿದ್ದಾರೆ. ಈ ಮಾತು ಹಳಗನ್ನಡ ಸಾಹಿತ್ಯ ಸಂದರ್ಭಕ್ಕೂ ಹೊರತಲ್ಲ. ಪಂಪನು 'ಆರಂಕುಸವಿಟ್ಟಡಂ ನೆನೆವುದೆನ್ನ ಮನಂ ಬನವಾಸಿದೇಶಮಂ' ಎಂದರೆ, ಕುವೆಂಪು ಅವರು 'ಹೋಗುವೆನು ನಾ ಹೋಗುವೆನು ನಾ, ನನ್ನ ಒಲುಮೆಯ ಗೂಡಿಗೆ ಮಲೆಯನಾಡಿಗೆ ಮಳೆಯ ಬೀಡಿಗೆ' ಎಂದು ದೇಶೀಯತೆಯನ್ನು ಪ್ರಕಟಿಸುತ್ತಾರೆ. ಬೇಂದ್ರೆಯವರು ಕೂಡ 'ಬಾರೋ ಸಾಧನ ಕೇರಿಗೆ ಮಳೆಯ ನಾಡಿನ ಬೀಡಿಗೆ' ಎಂಬಲ್ಲಿ ಇದೇ ತನವನ್ನು ಪ್ರಮುಖವಾಗಿಸಿಕೊಳ್ಳುತ್ತಾರೆ. ಗೊರೂರು, ಬಯಲಳ್ಳಿ ಸರ್ವೆಯನ್ನು ಕುರಿತು ಬರೆದರೆ, ಪು.ತಿ.ನ. ಯದುಗಿರಿಯ ಮೌನವಿಕಾಸವನ್ನು ಸೆರೆಹಿಡಿಯುತ್ತಾರೆ. ಆಲನಳ್ಳಿ 'ಕಾಡು' ಕಾದಂಬರಿ ಬರೆದರೆ, ಅನಂತಮೂತಿ 'ಸೂರ್ಯನ ಕುದುರೆ', ಲಂಕೇಶರು 'ಉಮಾಪತಿಯಸ್ಕಾಲರ್‌ಶಿಫ್' ಮೂಲಕ ತಮ್ಮ ಊರಿನ ಸಂವೇದನೆಗಳನ್ನು ಅಭಿವ್ಯಕ್ತಿಸುತ್ತಾರೆ. ಇದು ಭಾಷೆ ಮತ್ತು ಸಾಹಿತ್ಯದ ಮೂಲಕ ತಮ್ಮ ಪ್ರಾದೇಶಿಕತೆಯನ್ನು ಉಳಿಸಿಕೊಳ್ಳುವ ಕ್ರಮ. ಇದರೊಂದಿಗೆ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಮುಳ್ಳೂರು ನಾಗರಾಜರ 'ಮರಣಮಂಡಲಮಧ್ಯದೊಳಗೆ', ದೇವನೂರರ 'ಕುಸುಮಬಾಲೆ', ಮಾಲಗತ್ತಿಯವರ 'ಕಾರ್ಯ', ಕಂಬಾರರ 'ಜೋಕುಮಾರ ಸ್ವಾಮಿ' ಮುಂತಾದ ಕೃತಿಗಳು ಉಲ್ಲೇಖಾರ್ಹ. ಹೀಗೆ, ಇನ್ನೂ ಅನೇಕ ಲೇಖಕರ ತಮ್ಮ ಕೃತಿಗಳ ಮೂಲಕ ಈ ನಿಟ್ಟಿನಲ್ಲಿ ಪ್ರಯತ್ನಿಸಿದ್ದಾರೆ. ಇಂತಹುದೇ ಸಂವೇದನೆ ಬರಗೂರು ರಾಮಚಂದ್ರಪ್ಪನವರದು.

ಒಮ್ಮೆ ರಾಮಚಂದ್ರಪ್ಪನವರು ತಮ್ಮ ಮಗ ಮೈತ್ರಿಯೊಡನೆ ಬರಗೂರಿಗೆ ಬಂದಾಗ; ಮುಗ್ಧವಾಗಿಯೆ ಮಗ ಮೈತ್ರಿ "ಅಪ್ಪಾ ಇದೇಕೆ, ಈ ಊರಿಗೆ ನಿನ್ನ ಹೆಸರನ್ನು ಇಟ್ಟಿದ್ದಾರೆ? ಎಂದು ಪ್ರಶ್ನಿಸಿದನಂತೆ." ಅದಕ್ಕೆ ಬರಗೂರರು "ಇಲ್ಲಪ್ಪಾ

ನಾನೇ ಊರಿನ ಹೆಸರನ್ನು ಇಟ್ಟುಕೊಂಡಿದ್ದೇನೆ" ಎಂದರಂತೆ. ಇಷ್ಟೆ ಏಕೆ ? ಕ್ಯಾಬಿನೆಟ್ ದರ್ಜೆಯ ಹುದ್ದೆಯಲ್ಲಿರುವಾಗಲೂ ಕಾಂಟೆಸಾದಲ್ಲಿ ಕೂತಾಗಲೂ ಬರಿಗಾಲ ನಡಿಗೆಯ ಜನರ ಬಗೆಗೆ ಚಿಂತಿಸಿದವರು.

ಗ್ರಾಮೀಣ ಪರಿಸರದ ಹಿನ್ನೆಲೆಯುಳ್ಳ ಬರಗೂರರು "ಯಾವಾಗಲೂ ಸೃಜನಶೀಲತೆ ಹುಟ್ಟುವುದು ಕಷ್ಟಗಳಿರುವ ಕಡೆ" ಎನ್ನುತ್ತಾರೆ. ಮತ್ತು ಈ ದೇಶದ ಕಟ್ಟಕಡೆಯ ಮನುಷ್ಯನಿಂದಲೇ ತಮ್ಮ ಚಿಂತನೆಯನ್ನು ಆರಂಭಿಸುತ್ತಾರೆ. ಈ ಚಿಂತನೆಗೆ ಅವರ ಮಾತುಗಳನ್ನೇ ಉಲ್ಲೇಖಿಸುವುದಾದರೆ, "ಹಳ್ಳಿಯೊಳಗೆ ನಾಟಕ ಮಾಡುತ್ತಾರೆ. ರೈತನಿಗೆ ಒಂದು ಸಾರಿ ಬೆಳೆ ಬಂದರೆ ಇನ್ನೊಮ್ಮೆ ಬರುವುದಿಲ್ಲ. ಇಂತಹ ಸಂದರ್ಭದಲ್ಲೂ ಅವನು ಸಂತೋಷಪಡುತ್ತಾನೆ. ಬಯಲಾಟದ ಸಂದರ್ಭದಲ್ಲಿ ಬಡಹೆಂಗಸಿನ ಪಾತ್ರ ಮಾಡುವವನು ಸಹ ಊರನ್ನೆಲ್ಲಾ ಸುತ್ತಿ ಆರೇಳು ಬಣ್ಣದ ಸೀರೆಗಳನ್ನು ಹುಡುಕಿಕೊಂಡು, ಅವುಗಳನ್ನು ಉಟ್ಟು ಅಭಿನಯಿಸುತ್ತಾನೆ. ನಾರದನ ಪಾತ್ರ ಮಾಡುವವನು ಗಡಿಯಾರ ಕಟ್ಟಿರುತ್ತಾನೆ. ದುರ್ಯೋಧನನ ಪಾತ್ರದವನು ಕೂಲಿಂಗ್‌ಗ್ಲಾಸ್ ಹಾಕುತ್ತಾನೆ. ಇದೆಲ್ಲಾ ಯಾಕಾಗುತ್ತದೆಂದರೆ, ನಿಜ ಜೀವನದಲ್ಲಿ ಯಾವುದನ್ನು ಮಾಡಲು ಸಾಧ್ಯವಿಲ್ಲವೋ ಇಂಥದ್ದನ್ನು ನಾಟಕದಲ್ಲಿ ಮಾಡಿ ತೃಪ್ತಿಪಟ್ಟಿಕೊಳ್ಳುತ್ತಾರೆ. ಇಂತಹ ಅಭಾಸಕ್ಕೂ ಸಾಮಾಜಿಕ ಕಾರಣಗಳಿರುತ್ತವೆ" ಎಂದು ಬರಗೂರರು ಈ ಸಮಾಜದ ಕಟ್ಟಕಡೆಯ ವ್ಯಕ್ತಿಯ ಬಗೆಗೆ ಚಿಂತಿಸುತ್ತಾರೆ.

ಆದ್ದರಿಂದಲೇ ಅವರು "ಇಲ್ಲಿನ ಪರಿಸರವೇ ನಮಗೆ ಸ್ಫೂರ್ತಿಯಾಗಬೇಕು. ನಮ್ಮನ್ನು ಕಾಡಬೇಕು" ಎನ್ನುತ್ತಾರೆ. "ನನ್ನೂರ ಕೆರೆಯಲ್ಲಿ ಬರುವ ನಿಟ್ಟುಸಿರು" ನನ್ನನ್ನು ಕಾಡಬೇಕು. ಶ್ರೀಗಂಧ ಇಲ್ಲವೆಂದು ಆತಂಕ ಪಡಬೇಕಿಲ್ಲ. ಜಾಲಿ, ಬೇವು, ಹೊಂಗೆಯಲ್ಲೇ ಆನಂದಪಡಬೇಕು. ಸೃಷ್ಟಿಯಲ್ಲಿ ಎಲ್ಲದಕ್ಕೂ ಅದರದ್ದೇ ಪಾತ್ರವಿದೆಯೆಂದು ಭಾವಿಸಬೇಕು. ಇಂತಹ ಪರಿಸರದಲ್ಲಿರುವ ನಮಗೆ ಕಾರಂತರ ಹಾಗೆ ಕಡಲನ್ನು ಚಿತ್ರಿಸುವುದಕ್ಕೆ ಬರುವುದಿಲ್ಲವೆಂದು ಆತಂಕಪಡಬಾರದು. ಇಲ್ಲಿರುವ ಗುಂಡಿಯೇ ಸಣ್ಣರೋಮಾಂಚನವನ್ನು ನೀಡಬೇಕು. ಬರೀ ಊಟಿಗೆ ಜೀವವಿಲ್ಲ. ಇಲ್ಲಿನ ಬಂಡೆ ಬಂಡೆಗೂ ಜೀವವಿದೆ ಎಂಬುದನ್ನು ತಿಳಿಯಬೇಕು;" ಎಂದು ತಮ್ಮ

ಪರಿಸರದ ಬಗ್ಗೆ ಕಾಳಜಿ, ಆತ್ಮೀಯತೆ ತಾದ್ಯಾತ್ಮ ಸಂವೇದನೆಗಳನ್ನು ಮುಖ್ಯವಾಗಿಸಿಕೊಳ್ಳುತ್ತಾರೆ.

ಹಾಗೆಯೇ, ಪ್ರಶ್ನಿಸಿಕೊಳ್ಳುತಾರೆ "ನನ್ನೂರು ಗುಡ್ಡವಾಗಿ, ಕೊರಕಲಲಿ ಹರಿಯುವ ನೀರಾಗಿ, ಜಾಲಿಯಮರವಾಗಿ, ಹೊಲದಲ್ಲಿ ಉಳಿದಿರುವ ಕೊಳೆಯಾಗಿ ಎಲ್ಲವೂ ಒಂದೇ ಪ್ರಶ್ನೆಯಾಗ ಕೇಳಿದಂತಾಗುತ್ತದೆ. 'ನೀನು ಕುವೆಂಪು, ಕಾರಂತ, ಕೆ.ಎಸ್.ನ ಇತರೆ ಏಕಾಗಬೇಕು?' ಹಾಗೆಂದು ಹಿರಿಯ ಲೇಖಕರನ್ನು ತಿರಸ್ಕರಿಸುವುದಿಲ್ಲ ನನ್ನೂರು ಬರಗೂರು; ಕುವೆಂಪು, ಬೇಂದ್ರೆ, ಕೆ.ಎಸ್.ನ. ಈ ಎಲ್ಲಾ ಹಿರಿಯ ಲೇಖಕರನ್ನು ಗೌರವಿಸುತ್ತದೆ. ಇವರನ್ನು ಓದುತ್ತಲೇ ಬಂದಿದ್ದರಿಂದ ನನ್ನೂರಿಗೆ ನನಗೊಂದಿಷ್ಟು ಗೌರವ ಬಂದದ್ದು" ಎಂದು ಸ್ಮರಿಸುತ್ತಾರೆ. "ಕತ್ತಾಳೆ ಗಿಡ, ಜಾಲಿಮರ, ಮರದ ಮೇಲಿನ ಕಾಗೆ, ಕೊರಕಲ ನೀರು, ಹೆಬ್ಬಾವಿನ ಬದುವು, ಕೋವಿಕಣ್ಣಿನಹುತ್ತ–ಇತ್ಯಾದಿಗಳೆಲ್ಲವೂ ತುಂಬಿಕೊಂಡ ಕೂಳೆ ಹೊಲ. ಆ ಹೊಲದಲ್ಲಿ ಒಂದಾಗಿ ಸುಗ್ಗಿ ಕಾಣದೆ ಮಗ್ಗಿ ಹೇಳುವ ಮನಸ್ಸನ್ನು ಬಿಟ್ಟು ಬೇಲಿಯಾಚೆಗಿನ ಭ್ರಮೆಗೆ ಹೋಗುವುದು ಹೇಗೆ?" "ಊರೊಳಗಿನ ಮಣ್ಣಿನ ಮನೆಯಲ್ಲಿದ್ದರೂ ಕಾಡೊಳಗಿನ ಸೊಪ್ಪು ಸೆದೆಗಳ, ಸಣ್ಣ ಗುಡಿಸಲ ಬದುಕಿನ ಸಾಮಾಜಿಕ ಸ್ಥರವನ್ನು ಅನುಭವಿಸುತ್ತ, ಕೀಳುಕಣ್ಣಿಗೆ ತುತಾಗುತ್ತಾ, ಕ್ಷಣಕ್ಷಣಕ್ಕೂ ಕಾಲದ ಜೊತೆ ಕಾಳಗ ಮಾಡುತ್ತಾ, ಹೊಸ ಕಾಲಕ್ಕೆ ಹಾತೊರೆಯುವ ಮನಸ್ಥಿತಿಯನ್ನು ನನ್ನದಲ್ಲವೆಂದು ಹೇಳಿಕೊಳ್ಳುವುದಕ್ಕಾಗಿ ಕವಿತೆಗೆ ಕಾಲುಹಿಡಿಯಲೆ? ಕತೆಗೆ ಕೈಮುಗಿಯಲೇ? ನನ್ನ ಮಣ್ಣಿನ ಮನೆ, ನೀರು ಕಾಣದ ಕೂಳೆ ಹೊಲಗಳ ನನ್ನೂರಿಗೆ ಅನ್ಯಾಯವನ್ನು ಮಾಡಲೆ? ಸಾಧ್ಯವಿಲ್ಲ. ನನ್ನೊಂದಿಗೆ ನನ್ನೂರು ಇರಬೇಕು. ಇದರ ಮೂಲಕ ನನ್ನ ತಾಲ್ಲೂಕು ಜಿಲ್ಲೆಯನ್ನ ರಾಜ್ಯ ಕೋಶಗಳನ್ನು ನೋಡಬೇಕು. ಈಗ ನನಗೊಂದು ಸಂತೋಷ ನನ್ನನ್ನು ರಾಮಚಂದ್ರಪ್ಪ ಎನ್ನುವುದಕ್ಕಿಂತ ಬರಗೂರು ಎಂದೇ ಗುರುತಿಸುತ್ತಾರೆ" ಎಂದು ಹರ್ಷಿಸುತ್ತಾರೆ.

ಹೀಗೆ, ಬರಗೂರರು ತಮ್ಮ ಊರಿನ ಬಗೆಗೆ ಚಿಂತಿಸುತ್ತಾರೆ; ಅಭಿವ್ಯಕ್ತಿಸುತ್ತಾರೆ. ಏಕಕಾಲಕ್ಕೆ ಇವರು, ತಮ್ಮ ಹುಟ್ಟೂರು ಅದರ ಮೂಲಕ ತಮ್ಮವರ ಭಾವನಾತ್ಮಕ ಬದುಕನ್ನು ನೋಡುತ್ತಾರೆ. ಅಷ್ಟೇ ಅಲ್ಲ ಅದೇ ಹುಟ್ಟೂರಿನ ಮೂಲಕ ತಾಲ್ಲೂಕು, ಜಿಲ್ಲೆ, ರಾಜ್ಯ, ರಾಷ್ಟ್ರವನ್ನು ಕಾಣುತ್ತಾರೆ,

ಮತ್ತು ಉಪರಾಷ್ಟ್ರೀಯತೆ, ರಾಷ್ಟ್ರೀಯತೆಗಳನ್ನು ಅರ್ಥೈಸಿಕೊಳ್ಳುತ್ತಾರೆ. ಈ ರೀತಿಯ ಸಂವೇದನೆಯ ಜೊತೆಗೆ, ಈ ಸಾಂಸ್ಕೃತಿ ಲೋಕದ ಕಟ್ಟಕಡೆಯ ಮನುಷ್ಯನನ್ನೇ ಬಹಳ ಆದರ್ಶ ಮತ್ತು ಆಪ್ತನನ್ನಾಗಿಸಿಕೊಳ್ಳುತ್ತಾರೆ. ಇದರಿಂದ ಸಿಗುವ ಸಂತೋಷ ವೈಯಕ್ತಿಕವಲ್ಲ ಅದು ಸಾಮಾಜಿಕ ಸಂತೋಷವೆನ್ನುತ್ತಾರೆ. ಉದಾಹರಣೆಗೆ, ಪ್ರಾಥಮಿಕ ಶಾಲೆಯನ್ನು ಸಂಪೂರ್ಣ ಪೂರೈಸದ ಡಾ. ರಾಜ್‌ಕುಮಾರ್‌ರಂತವರು ರಾಷ್ಟ್ರ ಮಟ್ಟದ ಪ್ರಶಸ್ತಿ ಪಡೆಯುವ ಮಟ್ಟಕ್ಕೆ ಬೆಳೆಯುತ್ತಾರಲ್ಲ ಅದು ಸಾಮಾಜಿಕ ಸಂತೋಷ. ಈ ರೀತಿಯ ಕಟ್ಟಕಡೆಯ ಮನುಷ್ಯನು ಆ ಎತ್ತರಕ್ಕೆ ಬೆಳೆಯುತ್ತಾನೆನ್ನುವುದು ನಮಗೆ ಆದರ್ಶವಾಗಬೇಕು. ಸೌದೆ ಒಡೆಯುವವನ ಮಗನಾದ ಕಪಿಲ್‌ದೇವನು ಸಹ ಅಂತರ್‌ರಾಷ್ಟ್ರೀಯ ಮಟ್ಟದ ಖ್ಯಾತಿಯನ್ನು ಗಳಿಸಿರುವುದು ನಮಗೆ ಆದರ್ಶವಾಗಬೇಕು ಎನ್ನುವ ವಿಶಿಷ್ಟ ಮನೋಧರ್ಮ ಬರಗೂರರದು.

**ಕಣ್ಣ ತುಂಬಾ ಕಂಬದ ಶಾಸನ**

'ಹುಟ್ಟೂರಿನ ಬಗೆಗೆ ಇರುವ ಭಾವನಾತ್ಮಕ ನೆಲೆ ಹೇಗಿರುತ್ತದೆಂಬುದನ್ನು ಅನುಭವಿಸಿಯೇ ತಿಳಿಯಬೇಕು. ವ್ಯವಹಾರಿಕತೆಯನ್ನು ಮನೋಧರ್ಮವನ್ನಾಗಿ ಮಾಡಿಕೊಂಡವರಿಗೆ ವಿಶೇಷ ಸೆಳೆತಗಳು ಸಾಧ್ಯವಿಲ್ಲ. ಇಂತವರು ಎಲ್ಲಿದ್ದಾರೋ ಅಲ್ಲೇ ಹುಟ್ಟಿದಂತೆ ಭಾವಿಸಿಬಿಡುತ್ತಾರೆ. ಬಂಧನದ ನೆಲೆಗಿಂತ ಬಿಡುಗಡೆಯ ನೆಲೆಯೇ ಇವರ ಕೇಂದ್ರವಾಗುತ್ತದೆ. ಎಲ್ಲಿಂದ, ಯಾವಾಗ ಬೇಕಾದರೂ ಅವರು ಬಿಡುಗಡೆಗೊಳ್ಳಬಲ್ಲರು. ಲಾಭ ನಷ್ಟಗಳಲ್ಲಿ ಬದುಕನ್ನು ಗ್ರಹಿಸುವ ಇಂಥವರು ವಿದೇಶದ ವೈಯಾರದಲ್ಲಿ ಹೂತು ಹೋಗಬಲ್ಲರು; ಸ್ವದೇಶದಲ್ಲೂ ಸ್ವಾರ್ಥ ಕೇಂದ್ರಿತ ಬದುಕಿಗೆ ಮಾರಿಕೊಳ್ಳಬಲ್ಲರು. ಕಲಿತ ವಿದ್ಯೆಯಲ್ಲಿ ಹುಟ್ಟೂರ ನೆನಪನ್ನು ಹುಟ್ಟಡಗಿಸಬಲ್ಲರು' ಎಂದು ತನ್ನೂರಿಗಿರುವ ಸಂವೇದನೆಯನ್ನು ಬರಗೂರರು ಗಟ್ಟಿಯಾಗಿಸಿಕೊಳ್ಳುತ್ತಾರೆ. ಇದು ಅವರಲ್ಲಿ ಇನ್ನೂ ಹಸಿರಾಗಿರುವುದಕ್ಕೆ ಸಾಕ್ಷಿಯಾಗಿ ಬೆಂಗಳೂರಿನ ಅವರ ನಿವಾಸದ ಹೆಸರೂ ಕೂಡ 'ಸಂವೇದನೆ'.

ಪ್ರಧಾನ ಸಂಸ್ಕೃತಿ ಸೃಷ್ಟಿಸಿದ ಕೀಳರಿಮೆಯಿಂದ ಹೊರಬರಲು ಮತ್ತು ಹೊರ ಬಂದ ಮೇಲೆ ಉಪಸಂಸ್ಕೃತಿ ಚಿಂತನೆಯನ್ನು ಹುಟ್ಟು ಹಾಕಲು ಬರಗೂರರಿಗೆ ಬಹುತೇಕ ಕಾರಣವಾದದ್ದೂ ಇದೇ ಸಂವೇದನೆ. ಹಾಗಾಗಿ ಇವರು ಕವಿ ದೊಡ್ಡರಂಗೇಗೌಡ ಅವರೊಂದಿಗೆ ಅದೆಷ್ಟೋ ಬಾರಿ

ಬೋಳುನೆತ್ತಿಯ ಕದಿರೆಹಳ್ಳಿ ಗುಡ್ಡ (ಸಣ್ಣ ಪ್ರಮಾಣದ ಕಡಿದಾದ ದಿಬ್ಬ)ವನ್ನು ಹಿಮಾಲಯವೆಂದು ಭ್ರಮಿಸಿ ಹತ್ತಿ ಸಂಭ್ರಮಿಸಿಲ್ಲ; ಬೈರಾಗಿ ಮಠದೊಳಗೆ ಕೂತು ಋಷಿಯಂತೆ ತಪಸ್ಸು ಮಾಡಿಲ್ಲ; ಇಷ್ಟೇ ಅಲ್ಲ, ಈಶ್ವರ ದೇವಾಲಯದ ಕಂಬದ ಶಾಸನವನ್ನು ಅದೆಷ್ಟು ಬಾರಿ ಮುಟ್ಟಿ ಆನಂದಿಸಿ ಎವೆಬಡಿಯದೆ ಓದಿಲ್ಲ; ಹಾಗೇನೆ ಅಲ್ಲಿಯ ಬಸವನನ್ನು (ಅತ್ಯಂತ ಪುಟ್ಟ ಕಪ್ಪು ಶಿಲೆಯ ನಂದಿವಿಗ್ರಹ) ಚಾಮುಂಡಿ ಬೆಟ್ಟದ ನಂದಿಯ ಜೊತೆ ಹೋಲಿಸಿಲ್ಲ? ಹೀಗೆ, ಬರಗೂರರು ತಮ್ಮ ಊರು, ಕೇರಿ, ವಾಸ್ತು ವಿಚಾರಗಳನ್ನು ಬಹು ಹೆಮ್ಮೆಯಿಂದಲೇ ಬಗೆಯುತಾರೆ; ಬರೆಯುತ್ತಾರೆ. ಮುಂದೆ ಎಂ.ಎ. ಓದುವಾಗಲೂ ಅಷ್ಟೆ. ಡಾ. ಡಿ.ಎಲ್. ನರಸಿಂಹಚಾರ್‌ರವರ ಗ್ರಂಥ ಸಂಪಾದನೆಯಲ್ಲಿ ಬರುವ ಬರಗೂರಿನ ಈಶ್ವರದೇವಾಲಯದ ಕಂಬ ಶಾಸನದ ಉಲ್ಲೇಖವನ್ನು ಇಡೀ ತರಗತಿಗೆ ಹೇಳಿಕೊಂಡು ಸಂಭ್ರಮಿಸಿದ್ದಾರೆ. ಅದೆಷ್ಟೋ ವೇಳೆ ಗೆಳೆಯರೊಂದಿಗೆ ಇವುಗಳನ್ನೆಲ್ಲಾ ಕಂಡು ಸಂತೋಷವೂ ಪಟ್ಟಿದ್ದಾರೆ. ಇಷ್ಟಕ್ಕೆ ಇವರಿಗೆ ಈ ಸಂವೇದನೆಯ ತೃಪ್ತಿ ಮುಗಿಯಲಿಲ್ಲ. ಇದು ಇವರ **'ಕೋಟೆ'** ಸಿನಿಮಾ ಚಿತ್ರೀಕರಣದವರೆಗೂ ಕೊಂಡೊಯ್ತು. ಇಲ್ಲಿ ತಮ್ಮ ಸುತ್ತಲಿನ ಪರಿಸರದ ಬದುಕನ್ನೆ ಕಲಾತ್ಮಕವಾಗಿ ತೋರಿಸಿರುವುದು ಅನುಕರಣೀಯ. ಅಲ್ಲದೆ ಸ್ಥಳೀಯ ಜನರಿಗೆ ಸಿನಿಮಾದಲ್ಲಿ ಅಭಿನಯಿಸಲು ಅವಕಾಶ ಕಲ್ಪಿಸಿ, ಅವರನ್ನು ಸಾಂಸ್ಕೃತಿಕ ಲೋಕದಲ್ಲಿ ಗುರುತಿಸುವಂತೆ ಮಾಡಿದ್ದು ಸಹ ಶ್ಲಾಘನೀಯ. ಇಂಥ ಅವಕಾಶ ಆಧಾರವಾಗಿರಿಸಿಕೊಂಡ ಶಾಂತಿ, ಹಗಲುವೇಷ, ಶಬರಿ, ಜನಪದ, ಭಾಗೀರತಿ ಈ ಎಲ್ಲಾ ಉಪಸಂಸ್ಕೃತಿಯನ್ನು ಆಧರಿಸಿದ ಚಿತ್ರಗಳಲ್ಲಿ ಮುಂದುವರಿದಿದೆ. ಹೀಗೆ, ಬರಗೂರರ ಈ ಭಾವ ಬತ್ತದ ಸೆಲೆ ಅದೊಂದೂ ಮರೆಯದ ಭಾವಗೀತೆ.

## ಸ್ಟೆತಾಸ್ಕೋಪ್‌ನಿಂದ ಲೆಖ್ಖಣಿಕೆಗೆ

ಎಸ್.ಎಸ್.ಎಲ್.ಸಿ.ಯನ್ನು ಪ್ರಥಮ ದರ್ಜೆಯಲ್ಲಿ ಪಾಸುಮಾಡಿಕೊಂಡ ರಾಮಚಂದ್ರಪ್ಪನವರು ತಮ್ಮ ಮುಂದಿನ ಓದು ಕಂಡುಕೊಂಡಿದ್ದು ಹೀಗೆ. ಆ ವೇಳೆಗಾಗಲೇ ಪಾಲಿಟೆಕ್ನಿಕ್, ಸಿವಿಲ್ ಇಂಜಿನಿಯರಿಂಗ್, ಎಲೆಕ್ಟ್ರಿಕಲ್ ಡಿಪ್ಲೊಮಾ ಈ ಮೂರು ವಿಷಯಗಳು ಅಂದು ವಿದ್ಯಾರ್ಥಿಗಳ ಆಸಕ್ತಿ ಕ್ಷೇತ್ರಗಳಾಗಿ ಮಾರ್ಪಟ್ಟಿದ್ದವು. ಇವುಗಳನ್ನು ಓದಿದರೆ ಉದ್ಯೋಗದ ಭರವಸೆಯು ಇತ್ತು.

ಹಾಗಾಗಿ, ಇವರು ಸಹ ಆ ನಿರೀಕ್ಷೆಯಿಂದ ತುಮಕೂರಿನ ಪಾಲಿಟೆಕ್ನಿಕ್‌ಗೆ ಅರ್ಜಿ ಸಲ್ಲಿಸಿದರು. ಆದರೆ ದುರದೃಷ್ಟವೋ ಅಥವಾ ಕನ್ನಡಿಗರ ಅದೃಷ್ಟವೋ ಗೊತ್ತಿಲ್ಲ. ಬರಗೂರರಿಗೆ ಅಲ್ಲಿ ಸೀಟು ಸಿಗಲೇ ಇಲ್ಲ. ಆಗ ಅಲ್ಲಿಯ ಪಿ.ಯು. ಕಾಲೇಜಿಗೆ ಸೈನ್ಸ್ ವಿದ್ಯಾರ್ಥಿಯಾಗಿ ಸೇರಿದರು. ಪಿ.ಯು.ಸಿ.ಯಲ್ಲಿ ಜಿಯಾಲಾಜಿಯ ಅಧ್ಯಾಪಕರೊಬ್ಬರು ಜಿಯಾಲಾಜಿಯನ್ನು ಆಯ್ಕೆಯ ವಿಷಯವಾಗಿ ತೆಗೆದುಕೊಳ್ಳಲು ಒತ್ತಾಯಿಸಿದರು. ಆದರೆ ಬರಗೂರರು ಅದನ್ನು ನಿರಾಕರಿಸಿದರು. ಏಕೆಂದರೆ, ಈ ನಡುವೆ ಕುಟುಂಬದೊಳಗೆ ನಡೆದ ಒಂದೆರಡು ಭೀಕರ ಘಟನೆಗಳು ಅವರನ್ನು ವೈದ್ಯನಾಗಬೇಕೆಂಬ ಆಸೆಯನ್ನು ಮೂಡಿಸಿದ್ದವು. ತಂಗಿಯೊಬ್ಬಳ ಅಕಾಲಮರಣ ಅವರನ್ನು ಈ ಒತ್ತಾಸೆಯ ಮೆಟ್ಟಿಲುಗಳವರೆಗೂ ಕರೆ ತಂದಿತ್ತು. ಅಲ್ಲದೆ, ಅಕ್ಕಳೊಬ್ಬಳ ಕಾಯಿಲೆಗೆ ಸರಿಯಾದ ಕಾರಣವನ್ನು ತಿಳಿದುಕೊಳ್ಳದೇ, ಅವಳಿಗೆ ದೆವ್ವಹಿಡಿದಿರಬೇಕೆಂದು ನಮ್ಮವರು ನಂಬಿದರು. ಕೊನೆಗೆ ಅಂದು ಮಧ್ಯಾಹ್ನದ ಹೊತ್ತಿಗೆ ಅಕ್ಕ ಸತ್ತುಹೋದಾಗ ಎಲ್ಲರೂ ಅಳುತ್ತಿದ್ದರು. ನಾನು ಅಳಲಿಲ್ಲ. ಅಳೋರೆಲ್ಲಾ ಸಾಯಿಸಿದ್ರ್ಯಾಕೆ ಎಂದು.

ಅನಂತರ ಎಲ್ಲೋ ಒಂದು ಕಡೆ ಕೂತುಕೊಂಡು ಸುಮಾರು ಅತ್ತಿದ್ದೆ. ಬಾಲ್ಯದಲ್ಲಿ ನಡೆದ ಇಂತಹ ಘಟನೆಗಳು ನನ್ನನ್ನು ವೈದ್ಯನಾಗಬೇಕೆಂಬ ಆಕಾಂಕ್ಷೆ ಮೂಡಿಸಿದ್ದವು. ಆದ್ದರಿಂದ ಪಿ.ಎಂ.ಜಿ. ತೆಗೆದುಕೊಂಡರೆ ವೈದ್ಯನಾಗಬಹುದಾ ಸಾರ್? ಎಂದು ಎಲ್ಲರನ್ನು ಕೇಳುತ್ತಿದ್ದೆ. ಅದು ಸಾಧ್ಯವಾಗಲಿಲ್ಲ. ಅನಂತರ ಆಯುರ್ವೇದಿಕ್ ಡಾಕ್ಟರ್ ಆಗಬೇಕೆಂದುಕೊಂಡೆ, ಹೀಗೆ ಹಂಬಲಿಸಿ ಕೊನೆಗೆ ಏನೂ ಆಗದೆ, ಕನ್ನಡವನ್ನು ಐಚ್ಛಿಕ ವಿಷಯವಾಗಿ ತೆಗೆದುಕೊಂಡೆ. ಈ ನಡುವೆ ಲಾಯರ್ ಆಗಬೇಕೆಂದು ಎಷ್ಟೋ ಬಾರಿ ಅಂದುಕೊಂಡೆ. ಒಳ್ಳೆಯ ರಾಜಕಾರಣಿಯಾದರೆ ನಮ್ಮ ಜಿಲ್ಲೆ, ತಾಲ್ಲೂಕು, ಗ್ರಾಮಗಳಲ್ಲಿ ಒಳ್ಳೆಯ ಜನಪರ ಕಾರ್ಯಗಳನ್ನು ಮಾಡಬಹುದೆಂದುಕೊಂಡೆ; ಅವಾವೂ ಆಗಲಿಲ್ಲ. ಕೊನೆಯಲ್ಲಿ ಲೆಖ್ಖಣಿ ಹಿಡಿದು ಸಾಹಿತ್ಯ ಸೃಷ್ಟಿಸುವ ಸಾಹಿತಿಯಾದೆ" ಎಂದು ತಮ್ಮ ಜೀವನದ ಮುಖ್ಯ ತಿರುವುಗಳನ್ನು ಬರಗೂರರು ಹೀಗೆ ಬಿಚ್ಚಿಕೊಳ್ಳುತ್ತಾರೆ.

**ಸಂಪಾದಕ ಬರಗೂರು**

"ಉನ್ನತ ವ್ಯಾಸಂಗವನ್ನು ಕೈಗೊಳ್ಳಬೇಕೆಂದುಕೊಂಡಿದ್ದೇನೋ ನಿಜ. ಆದರೆ ಅದೂ ಕೈಗೂಡಲಿಲ್ಲಾ. ಕಾರಣ ಆಗಲೇ ಬದುಕಿನ ಕಡೆಗೆ ಮುಖ

ಮಾಡಿದ್ದೆ. ಈ ಮಧ್ಯೆ ಹಿರಿಯೂರು ತಾಲ್ಲೂಕಿನ ಹಳ್ಳಿಯೊಂದರಲ್ಲಿ ಮಾಸ್ತರ ಹುದ್ದೆ ಖಾಲಿ ಇದೆ ಎಂದುಕೊಂಡು ಅಲ್ಲಿಗೆ ಹೋದೆ. ಅಲ್ಲಿ ಎದುರಾದದ್ದೇ ಬೇರೆ. ಅಲ್ಲಾಗಲೇ ಇನ್ನೊಬ್ಬರು ಅದೇ ಖಾಲಿ ಇರುವ ಹುದ್ದೆಯನ್ನು ನಂಬಿಕೊಂಡು ತಾತ್ಕಾಲಿಕವಾಗಿ ಕೆಲಸ ಆರಂಭಿಸಿದ್ದರು. ಅವರಿಗೆ ಅನ್ಯಾಯವಾಗಬಾರದೆಂದು ಅದನ್ನೂ ಬಿಟ್ಟೆ. ನಂತರ ಪಾವಗಡ ತಾಲ್ಲೂಕಿನ ಗೊಂಡೇತಿಮ್ಮನಹಳ್ಳಿಯಲ್ಲಿ ಕೆಲಸಕ್ಕೆ ಸೇರಿಕೊಂಡೆ. ಆ ಶಾಲೆಯಲ್ಲಿ ಇಂಗ್ಲೀಷ್, ಗಣಿತ, ಸಮಾಜಶಾಸ್ತ್ರ ಮುಂತಾದ ಎಲ್ಲಾ ವಿಷಯಗಳನ್ನು ಬೋಧಿಸತೊಡಗಿದೆ. ನಾನು ಬೋಧನೆಯನ್ನು ಆರಂಭಿಸಿದ ವರ್ಷದಲ್ಲೇ ಐದು ಜನ ವಿದ್ಯಾರ್ಥಿಗಳು ಎಸ್.ಎಸ್.ಎಲ್.ಸಿ. ತೇರ್ಗಡೆಯನ್ನು ಕಂಡರು. ಇಂತಹ ಪ್ರಯತ್ನದಿಂದ ಅಲ್ಲಿಯ ಜನರೆಲ್ಲ ಆತ್ಮೀಯರಾದರು. ಎಷ್ಟೆಂದರೆ ನನಗೆ ಹೆಣ್ಣು ಕೊಡ್ತೀವಿ ಅಂತಲೂ ಬಂದರು. ನಾನು ಇಲ್ಲಿ ಬಂದಿರುವುದು ಮದುವೆ ಆಗೋಕ್ಕಲ್ಲಾ ಪಾಠ ಮಾಡೋಕೆ ಎನ್ನುತ್ತಿದ್ದೆ. ಹೀಗೆ ಇಡೀ ಹಳ್ಳಿ ಆತ್ಮೀಯವಾಗಿತ್ತು.

ಈ ಮಧ್ಯೆ ಗೊಂಡೇತಿಮ್ಮನಹಳ್ಳಿಯಲ್ಲಿ ಒಂದು ಕಹಿ ಘಟನೆ ಸಂಭವಿಸಿತು. ಅದನ್ನು ರಂಗಾರೆಡ್ಡಿ ಕೋಡಿರಾಂಪುರ ಅವರು ಈಗಲೂ ಕರುಳ ಕಣ್ಣಿಂದಲೇ ಹೇಳುತ್ತಾರೆ. "ಬರಗೂರರು ಜನರ ಪ್ರೀತಿಗಳಿಸಿದ್ದು ಅಲ್ಲಿಯ ಒಬ್ಬ ಕ್ಲಾರ್ಕ್‌ಗೆ ಸಹಿಸಿಕೊಳ್ಳಲಾಗಲಿಲ್ಲ. ಬರಗೂರರ ಹೆಸರನ್ನು ಅಲ್ಲಿನ ಶಾಲಾ ಅಧ್ಯಾಪಕರ ಪಟ್ಟಿಯಲ್ಲಿ ಸೇರಿಸಿ. ಡಿ.ಡಿ.ಪಿ.ಐ ಅವರಿಗೆ ಅನುಮತಿ ಪಡೆಯಲು ಕಳುಹಿಸಬೇಕಿತ್ತು. ಆ ಸಮಯದಲ್ಲಿ ಕ್ಲಾರ್ಕ್ ಉದ್ದೇಶಪೂರ್ವಕವಾಗಿಯೇ ಇವರ ಹೆಸರನ್ನು ಬಿಟ್ಟು ಆಯ್ಕೆಯ ಪಟ್ಟಿಯನ್ನು ಅನುಮತಿಗೆ ಕಳುಹಿಸಿದರು. ಇದರಿಂದ ಬರಗೂರರಿಗೆ ಒಂದು ವರ್ಷ ಪೂರ್ತಿಯಾಗಿ ಸಂಬಳ ಬರಲಿಲ್ಲ. ಆ ಸಮಯದಲ್ಲಿ ಊರಿನ ಜನರೆಲ್ಲಾ ಆ ಕುತಂತ್ರವನ್ನು ಅರ್ಥಮಾಡಿಕೊಂಡರು. ಹಾಗೆಯೇ, ಬರಗೂರರ ಮೇಲೆ ಇನ್ನೂ ಹೆಚ್ಚು ಪ್ರೀತಿ ವಿಶ್ವಾಸವನ್ನು ತೋರಿಸತೊಡಗಿದರು. ಎಷ್ಟೋ ದಿನಸಿ ಅಂಗಡಿಗಳಲ್ಲಿ ದಿನಸಿ ವಸ್ತುಗಳನ್ನು ಕೊಟ್ಟರು. ಬಟ್ಟೆ ಅಂಗಡಿಯವರು ಬಟ್ಟೆಯನ್ನೇ ಕೊಟ್ಟರು. ಇಂತಹವುಗಳನ್ನೆಲ್ಲಾ ಅನುಭವಿಸುತ್ತಾ, ತಮ್ಮ ಬಟ್ಟೆಗಳನ್ನೆಲ್ಲಾ ತಾವೆ ಒಗೆದುಕೊಳ್ಳುತ್ತಾ; ಹೊಲಿದುಕೊಳ್ಳುತ್ತಾ, ಒಂದು ಕೊಠಡಿಯಲ್ಲಿ ತುಂಬಾ ಸರಳವಾಗಿ

ಬದುಕುತ್ತಿದ್ದರು. ಇದರಿಂದಲೇ ಬರಗೂರರ ಬಗ್ಗೆ ವಿದ್ಯಾರ್ಥಿಗಳಲ್ಲಿ ಮತ್ತು ಊರ ಜನರಲ್ಲಿ ಗೌರವ ಜಾಸ್ತಿಯಾಯಿತು."

"ಬರಗೂರರೇನೂ ಬರೀ ಈ ಸಂಕಷ್ಟಗಳಲ್ಲಿ ನರಳಿಕೊಳ್ಳುತ್ತಾ ಕೂತಿರಲಿಲ್ಲ. ಇಂತಹ ಸಂದರ್ಭದಲ್ಲೂ ಹೆಚ್ಚು ಕ್ರಿಯಾಶೀಲರಾಗಿದ್ದರು. ಶ್ರೀರಾಮ ಗ್ರಾಮಾಂತರ ಪ್ರೌಢ ಶಾಲೆಯನ್ನು ಒಂದು ಆದರ್ಶ ಶಾಲೆಯನ್ನಾಗಿ ಮಾಡಬೇಕೆಂಬ ಮಹತ್ವದ ಆಸೆ ಇಟ್ಟುಕೊಂಡಿದ್ದರು. ವಿದ್ಯಾರ್ಥಿಗಳಲ್ಲಿ ಭಯವನ್ನು ಹೋಗಲಾಡಿಸಿ, ಅವರನ್ನು ಧೈರ್ಯವಾಗಿ ಮಾತನಾಡುವ ಹಾಗೆ ಸಿದ್ಧಮಾಡಿದ್ದರು. ಅಲ್ಲದೆ, ಅವರಲ್ಲಿ ವಿಶಿಷ್ಟವಾದ ಚಿಂತನೆ ಮೂಡಿಸುತ್ತಾ ಹೆಚ್ಚು ಕ್ರಿಯಾಶೀಲ ಕಾರ್ಯಗಳಲ್ಲಿ ತೊಡಗಿಸುತ್ತಿದ್ದರು. ದಿನನಿತ್ಯ ಪ್ರಾರ್ಥನೆಯೊಂದಿಗೆ ವಿದ್ಯಾರ್ಥಿಗಳಿಂದ 'ಪ್ರೇಯರ್ ಸ್ಪೀಚ್' ಮಾಡುವ ನಿಯಮವನ್ನು ಆರಂಭಿಸಿದರು. ಒಬ್ಬೊಬ್ಬರು ಒಂದೊಂದು ದಿನ ಯಾವುದಾದರೂ ಒಂದು ವಿಷಯವಾಗಿ 'ಪ್ರೇಯರ್ ಸ್ಪೀಚ್' ಮಾಡಬೇಕಿತ್ತು. ಅದರ ಪ್ರಕಾರವಾಗಿ ಮೊದಲ ಸರದಿ ನನ್ನದೇ ಆಗಿತ್ತು. ಆದರೆ ಅಂದು ನಾನು ಮಾತನಾಡಲಿಲ್ಲ. ಬರದುಕೊಂಡು ಬಂದಿದ್ದನ್ನು ಸಂಪೂರ್ಣವಾಗಿ ಓದಿದೆ. ಈ ಸಂದರ್ಭದಲ್ಲಿ ನಾನು ಅದುರುತ್ತಿದ್ದೆ. ನನ್ನ ಆ ಓದುವಿಕೆ ಸಂಪೂರ್ಣವಾಗಿ ಮುಗಿದಾಗ ಅಧ್ಯಾಪಕರ ಸಾಲಿನಲ್ಲಿದ್ದ ಬರಗೂರರು ನನ್ನನ್ನು ಕರೆದು ಏನಯ್ಯಾ? ನಂಬಿದ ಎಮ್ಮೆ ಕೋಣವನ್ನೀಯಿತು ಅನ್ನುವ ಹಾಗೆ ಮಾಡಿ ಬಿಟ್ಟಲ್ಲಯ್ಯ! ಎಂದರು ಆ ಮಾತು ನನಗೆ ಇನ್ನೂ ನೆನಪಿದೆ. ಅಂದಿನ ಭಾಷಣದ ಪ್ರತಿಯೂ ನನ್ನ ಹತ್ತಿರವಿದೆ. ಅಂದಿನಿಂದ ಆದ ನಮ್ಮ ಪರಿಚಯ ಒಂದು ಸಂಬಂಧವಾಗಿ ಬೆಳೆಯಿತು. ಅದು ಇಂದು ಅವರು ನಿರ್ದೇಶಿಸಿದ ಸಿನಿಮಾದೊಳಗೆ ಆರ್ಟ್ ಡೈರಕ್ಟರ್ ಆಗುವವರೆಗೂ ನಿರಂತರವಾಗಿ ಮುಂದುವರೆದಿದೆ. ಅದು ಬಿಡಲಾರದಂತಹ ಸಂಬಂಧದ ಬೆಸುಗೆಯಾಗಿದೆ." ಎಂದೆನ್ನುತ್ತಾರೆ ರಂಗಾರೆಡ್ಡಿ ಕೋಡಿರಾಂಪುರ ಅವರು.

"ಆ ಶಾಲೆಯನ್ನು ಪ್ರಗತಿಯತ್ತ ಕೊಂಡೊಯ್ಯುವಲ್ಲಿ ಅವರ ನಿರಂತರ ಪರಿಶ್ರಮವಿತ್ತು. ಹಾಸ್ಟೆಲ್‌ಗೆ ಸೌದೆ ತರಲಿಕ್ಕೆ ಹೋದಾಗ ಅವರೂ ಕೂಡ ಕೂಡಿಹಾಕಿದರು. ಗಾಡಿಯನ್ನು ಅವರೇ ಹೊಡೆದುಕೊಂಡು ಬಂದರು. ಆ ಸಂದರ್ಭದಲ್ಲಿಯೇ ವಿದ್ಯಾರ್ಥಿಗಳು ಬರೆದ ಕವನಗಳನ್ನೆಲ್ಲಾ ಸೇರಿಸಿ

'ಸುಧಾಸಿಂಧು' ಎಂಬ ಹೆಸರಿನಲ್ಲಿ ಒಂದು ಹೊತ್ತಿಗೆಯೊಂದನ್ನು ಹೊರತಂದರು. ಇದೇ ನಮ್ಮ ಮೊದಲ ಪ್ರಕಟಣೆ. ಆಗ ನಾನು 10ನೇ ತರಗತಿಯಲ್ಲಿದ್ದೆ. ಅದು ನನಗೆ ತುಂಬಾ ಖುಷಿ ತಂದ ಸಂದರ್ಭ. ಮುಂದೆ ನಾನು ಕನ್ನಡವನ್ನು ಐಚ್ಛಿಕವಾಗಿ ತೆಗೆದುಕೊಳ್ಳುವುದಕ್ಕೂ ಅವರೇ ಕಾರಣರಾದರು. ಅಷ್ಟೇ ಏಕೆ ಅವರೇ ಬರೆದ ಅನೇಕ ನಾಟಕಗಳನ್ನು ಆಡಿಸುತ್ತಿದ್ದರು. ಅದರಲ್ಲಿ ಅವರೇ ಪಾತ್ರವನ್ನು ನಿರ್ವಹಿಸುತ್ತಿದ್ದರು. 'ಮುಳ್ಳಿನಹಾದಿ', 'ಶಿವನ ಸ್ತ್ರೀ ಹುಚ್ಚು', 'ರಾಮರಾಜ್ಯ', "ಖೋಟಾನೋಟು', 'ಮೂರ್ನಾಮು' ಈ ನಾಟಕಗಳನ್ನು ನೋಡಿ ಒಂದು ರೀತಿ ಬೇಸರವಾಗಿದ್ದ ಆ ಸುತ್ತ ಮುತ್ತಲ ಊರಿನ ಪ್ರೇಕ್ಷಕರಿಗೆ ಬರಗೂರರ ಈ ರಂಗಭೂಮಿ ಚಟುವಟಿಕೆ ಹೊಸ ರೀತಿಯಾಗಿ ಕಾಣಲು ಪ್ರಾರಂಭವಾಯಿತು. ಎಷ್ಟೋ ವೇಳೆ ಕಂಪನಿಗಳ ನಾಟಕದ ರೀತಿಯಲ್ಲಿ ವಿದ್ಯಾರ್ಥಿಗಳೇ ಬರಗೂರು ರಾಮಚಂದ್ರಪ್ಪ ವಿರಚಿತ ಪ್ರದರ್ಶನವಿದೆಎಂದು ಪ್ರಚಾರಮಾಡುತ್ತಿದ್ದರು. ತಾವೇ ದೊಡ್ಡ ಹಾಳೆಯಲ್ಲಿ ಬರೆದು ಗೋಡೆಗೆ ಅಂಟಿಸುತ್ತಿದ್ದರು. ಇಂತಹ ವಾತಾವರಣವನ್ನು ಇಡೀ ಊರಲ್ಲಿ ನಿರ್ಮಿಸಿದರಲ್ಲದೇ ಅಲ್ಲಿಯೇ 'ಕನಸಿನ ಕನ್ನಿಕೆ' ಎನ್ನುವ ತಮ್ಮ ಮೊದಲ ಕವನ ಸಂಕಲನವನ್ನು ಬಿಡುಗಡೆ ಮಾಡಿದರು."

"ಬರಗೂರರ ಈ ಮಾನವೀಯತೆ ಬರೀ ಇಂತಹ ಸಂದರ್ಭಗಳಿಗೆ ಅಷ್ಟೇ ಮೀಸಲಾಗಿರಲಿಲ್ಲ. ಒಮ್ಮೆ ಕೆ.ಟಿ. ಹಳ್ಳಿಗೆ ಸುಮಾರು ಎರಡು ಮೈಲಿ ದೂರದ ರಾಮಯ್ಯನ ಪಾಳ್ಯದಲ್ಲಿ ಒಂದು ಘಟನೆ ನಡೆಯಿತು. ಅಲ್ಲಿಂದ ಬರುತ್ತಿದ್ದ ವಿದ್ಯಾರ್ಥಿಯೊಬ್ಬ ಅಕಾಲ ಮರಣಕ್ಕೆ ತುತ್ತಾದ ಸುದ್ದಿ ತಿಳಿದ ತಕ್ಷಣವೇ ಬರಗೂರರು ಅಲ್ಲಿಗೆ ಬಂದು ಕುಟುಂಬದವರ ಸಂತಾಪ ಸೂಚಕ ಸಭೆಯಲ್ಲಿ ಭಾಗಿಯಾಗಿದ್ದರು. ಅಧ್ಯಾಪಕರೊಬ್ಬರು ಹೀಗೆ ಸ್ಪಂದಿಸಿದ್ದು ಆಗ ನಮಗೆ ಹೊಸದಾಗಿತ್ತು. ಆಗ ಎಲ್ಲ ಹುಡುಗರೂ ಬರಗೂರರು ಬಂದಿದ್ದರು, ಬರಗೂರರು ಬಂದಿದ್ದರು ಅಂತ ಹೇಳತೊಡಗಿದ್ದರು. ಅವರೆಲ್ಲರ ಉದ್ವೇಗದ ಮಾತುಗಳ ಹಿಂದೆ ಬರಗೂರರ ವ್ಯಕ್ತಿತ್ವವೇ ಅಡಗಿತ್ತೆನ್ನಬಹುದು." ಎನ್ನುವ ಜಿ.ಆರ್. ತಿಪ್ಪೇಸ್ವಾಮಿ ಅವರ ನೆನಪುಗಳು ಬರಗೂರರ ತಾಜ ವ್ಯಕ್ತಿತ್ವವನ್ನು ದಾಖಲಿಸುತ್ತವೆ.

ಬರಗೂರರು ತಾವು ಎಂ.ಎ. ವಿದ್ಯಾಭ್ಯಾಸಕ್ಕೆ ಪ್ರವೇಶ ಪಡೆದ ಸಂದರ್ಭವನ್ನು ಜ್ಞಾಪಿಸಿಕೊಳ್ಳುತ್ತಾ "ನಾನು ಬೆಂಗಳೂರಿಗೆ ಎಂ.ಎ. ಮಾಡಲೆಂದು ಹೊರಟಾಗ ಶ್ರೀರಾಮ ಶಾಲೆಯ ವಿದ್ಯಾರ್ಥಿಗಳೆಲ್ಲಾ ಧರಣಿ ಕೂತರು. ಹೋಗಬೇಡವೆಂದು ಹಠಹಿಡಿದರು. ನೀವು ಇರ್ತೀವಿ ಅಂದರೆ ಮಾತ್ರ ನಾವು ಕ್ಲಾಸಿಗೆ ಬರ್ತೀವಿ ಇಲ್ಲ ಅಂದ್ರೆ ಇಲ್ಲ ಎಂದು ಎರಡು ದಿನ ತರಗತಿಯನ್ನು ಬಹಿಷ್ಕರಿಸಿದರು. ಕೊನೆಗೆ, ಇಲ್ಲ ನಾನು ನಿಮಗೆ ರಜೆಯಲ್ಲಿ ಬಂದು ಪಾಠಗಳನ್ನು ಮಾಡ್ತೀನಿ ಎಂದು ಒಪ್ಪಿಸಬೇಕಾಯಿತು. ಕೊನೆಗೆ, ವಿದ್ಯಾರ್ಥಿಗಳು ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು ಧರಣಿಯನ್ನು ಹಿಂತೆಗೆದುಕೊಂಡರು. ಅವರೆಲ್ಲಾ ನಂತರ ನನಗೆ ಮೆರವಣಿಗೆ ಮಾಡಿದರು. ಅಧ್ಯಾಪಕನೊಬ್ಬನಿಗೆ ಮೆರವಣಿಗೆ ಮಾಡಿದುದು ಇದೇ ಮೊದಲೇನೋ! ಅಲ್ಲಿಂದ ಬಂದ ಮೇಲೆ ಬೆಂಗಳೂರಿನಲ್ಲಿ ಎಂ.ಎ. ಕೈಗೊಂಡೆ. ನಂತರ ಬೆಂಗಳೂರಿನ ಕೆಂಗೇರಿಯಲ್ಲಿ ಪಾಠ ಮಾಡ್ತಾ ಇದ್ದೆ. ಎಪ್ಪತ್ತೈದು ರೂಪಾಯಿ ಸಂಬಳ ಬರುತ್ತಿತ್ತು. ಆ ಎಪ್ಪತ್ತೈದನ್ನೂ ಸರಿಯಾಗಿ ಕೊಡ್ತಾಇರಲಿಲ್ಲ. ನಂತರ ಸೆಂಟ್ರಲ್ ಕಾಲೇಜಿಗೆ ಬರ್ತಾ ಇದ್ದೆ. ನಡೆದುಕೊಂಡೇ ಬರ್ತಾ ಇದ್ದೆ. ಆದ್ದರಿಂದಲೇ ಈಗಲೂ ನನಗೆ ನಡಿಗೆ ಅಂದರೆತುಂಬಾ ಇಷ್ಟ. ಈಗಲೂ ನಾನು 'ಕಾಂಟೆಸ್ಸ ಮತ್ತು ಕಾವ್ಯ' ಎಂಬ ಪದ್ಯ ಬರೀತಾ ಇದ್ದೆ". ಎನ್ನುವ ಬರಗೂರರು ಇಂಥಹ ಸಹ ಮನುಷ್ಯ ಸಂಬಂಧಗಳ ಹುಡುಕಾಟವನ್ನು ತಮ್ಮ ವ್ಯಕ್ತಿತ್ವದ ಭಾಗವಾಗಿಸಿಕೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ ಇವರ ಬೆಂಗಳೂರಿನ ಮನೆಯ ವಾಸ್ತು ವಿಶೇಷವಾಗಿದೆ. ಮನೆಯ ಮಹಡಿಯಲ್ಲಿ ಕೂತರೆ ಸುತ್ತಲಿನ ಎಲ್ಲಾ ಸಂಬಂಧಗಳನ್ನು ಬೆಳಸಿಕೊಳ್ಳಬಹುದು; ಹೊರಗಿನ ದೃಶ್ಯಗಳೆಲ್ಲಾ ಕಣ್ಣ ಮುಂದೆ ಕಾಣಬಹುದೆನ್ನುತ್ತಾರೆ.

**ಉಪನ್ಯಾಸಕ ಬರಗೂರು**

ಬರಗೂರರು ಬಾಲ್ಯದಿಂದಲೂ ಓದುವ ಗೀಳಿಗೆ ಒಳಗಾದವರು. ಪಿ.ಯು.ಸಿ.ಯಲ್ಲಿರುವಾಗಲೇ ಗಾಂಧಿಯವರ 'ಸತ್ಯಾಗ್ರಹ', ಲೆನಿನ್ ಬರೆದ 'ಕರ್ತವ್ಯವೆಂದರೇನು' ಎನ್ನುವ ಕೃತಿಗಳನ್ನು ಓದಿದ್ದರು. ಖಾಯಂ ನೌಕರಿ ಇನ್ನೂ ಸಿಕ್ಕಿರಲಿಲ್ಲ. ಆಗ ಬರಗೂರರು ಹೇಳುವಂತೆ "ತುಮಕೂರಿನ ಎ.ಪಿ.ಎಸ್.ನಲ್ಲಿ ಸ್ಥಳೀಯ ಅಭ್ಯರ್ಥಿಯಾಗಿ ಸೇರಿಕೊಂಡಿದ್ದೆ. ನಂತರ ಆರು ತಿಂಗಳು ನೋಡಿ ಅವರು ನನ್ನನ್ನು ಬಿಡುಗಡೆ ಮಾಡಿದರು. ಆಗ ನನಗೆ

ತುಂಬಾ ಕಷ್ಟವಾಯಿತು. ಅದಕ್ಕಾಗಿ ನಾನು ನನಗೆ ಅನ್ಯಾಯವಾಗಿದೆ ಎಂದು ಸಾರ್ವಜನಿಕ ಶಿಕ್ಷಣ ಇಲಾಖೆಗೆ ಹೋದಾಗ ಹಾಗಂತ ಬರೆದುಕೊಡಿ ಎಂದರು. ಬರೆದುಕೊಡುತ್ತೇನೆಂದೆ. ಆದರೆ ವಾಸ್ತವವಾಗಿ ಬರೆದುಕೊಡಲಿಲ್ಲ. ಆ ಎರಡು ತಿಂಳಲ್ಲಿ ಬಹಳ ಬೇಸರಿಸಿಕೊಂಡೆ. ಯಾರ ಮನೆಗೆ ಏಕೆ ಹೋಗಬೇಕೆಂದು ಎಷ್ಟೋ ದಿನಗಳ ಕಾಲ ಒಂದು ಟವಲ್ ಹಾಸಿ ಬೆಂಗಳೂರಿನ ಬೀದಿಯ ಮೇಲೆ ಮಲಗಿಕೊಂಡೆ.

ಈ ನಡುವೆ ಬೆಂಗಳೂರು ವಿಶ್ವವಿದ್ಯಾಲಯದ ಉಪನ್ಯಾಸಕ ಹುದ್ದೆಗೆ ಅರ್ಜಿ ಹಾಕಿದೆ. ಸಂದರ್ಶನಕ್ಕೆ ಹೋಗುವುದಕ್ಕೆಂದು ಸೂಟ್ ಹೊಲಿಸಿಕೊಂಡು ಸಿದ್ಧತೆಯನ್ನು ಮಾಡಿಕೊಂಡೆ. ನನ್ನ ಮೇಷ್ಟ್ರು ಶಿವರುದ್ರಪ್ಪ ಅವರು ಸಂದರ್ಶನಕ್ಕೆ ಹೋಗಬೇಕಾದರೆ ಹೀಗೆಲ್ಲಾ ಜುಬ್ಬಾ ಪೈಜಾಮ್‌ನಲ್ಲಿ ಹೋಗಬ್ಯಾಡ್ರಿ ಎನ್ನುತ್ತಿದ್ದರು. ಚಿದಾನಂದ ಮೂರ್ತಿಯವರು ಸಹ ನೀವು ಸೂಟ್ ಗೀಟ್ ಹಾಕ್ಕೊಂಡು ಹೋಗ್ರಿ ಪಾಠ ಮಾಡೋದಿಕ್ಕೆ, ಅಂತಾ ಹೇಳ್ತಿದ್ದು. ಅವ್ರೆಲ್ಲಾ ಹಾಗೆ ಹೇಳುವಾಗ ಸರಿಯಾಗಿ ಹೋಗ್ರಿ ಎನ್ನುವ ಕಾಳಜಿಯಿತ್ತು. ನಾನು ಸಿದ್ಧತೆ ಮಾಡಿಕೊಂಡೆ ಆದ್ರೆ, ಹೋಗುವುದಕ್ಕೆ ನಿರಾಕರಿಸಿದಾಗ ನನ್ನ ಮಿಸೆಸ್ ಒತ್ತಾಯಿಸಿದ್ರು. ಅದೇನೋ ಸೂಟು ಬೂಟ್ ಹಾಕ್ಕೋಂಡು ಕೂತು ಎರಡು ದಿನ ಅಪ್ಲಿಕೇಷನ್ ತುಂಬಿದಿರಾ ಹೋಗಿ ಬನ್ನಿ. ಕೆಲಸ ಸಿಗಲಿ ಬಿಡಲಿ ಎಂದು ಒತ್ತಾಯಿಸಿದರು. ಅವಳ ಒತ್ತಾಯದಿಂದಲೇ ನಾನು ಹೋದೆ .

ಆ ದಿನದ ಸಂದರ್ಶನದಲ್ಲಿ ಪೂನಾ ವಿಶ್ವವಿದ್ಯಾನಿಲಯದ ಎಚ್.ಎಸ್. ಬಿಳಿಗಿರಿ ಮತ್ತು ಮುಂಬಾಯಿ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಕುಲಪತಿಗಳಾಗಿದ್ದರು. ಈ ವೇಳೆಗಾಗಲೇ ನಾನು ಪ್ರಜಾವಾಣಿಯಲ್ಲಿ ಪುಸ್ತಕ ವಿಮರ್ಶೆ ಬರೆಯೋಕೆ ಶುರುಮಾಡಿದ್ದೆ. 1974ರ ಸಂದರ್ಭ ಅದು. ಆಗಲೆ ನಾನು ಬೇಂದ್ರೆಯವರ ಬಗೆಗೆ ಬರೆದ ವಿಮರ್ಶೆ ತುಂಬಾ ಹೆಸರು ಮಾಡಿತ್ತು. ಸಂದರ್ಶನದಲ್ಲಿ ಬಿಳಿಗಿರಿಯವರು ಇದರ ಬಗ್ಗೆಯೇ ತುಂಬಾ ಪ್ರಶ್ನಿಸಿದರು. ವರ್ಗಾಸಕ್ತಿ, ವರ್ಣಾಸಕ್ತಿಗಳ ಬಗೆಗೂ ತುಂಬಾ ಚರ್ಚಿಸಿದರು. ನನ್ನಚರ್ಚೆ ಅವರಿಗೆ ತುಂಬಾ ಹಿಡಿಸಿತು. ಜಿ.ಎಸ್. ಶಿವರುದ್ರಪ್ಪನವರು ಆಗ ಕನ್ನಡ ವಿಭಾಗದ ಮುಖ್ಯಸ್ತರಾಗಿದ್ದರು. ಅವರು 'ನನಗೆ ಯುವಕರನ್ನು ಕೊಟ್ಟರೆ ಚನ್ನ'

ಎಂದು ಹೇಳಿದ್ದರಂತೆ, ನಾನು ಸಂದರ್ಶನದಲ್ಲಿ ಉತ್ತರಿಸಿದ, ಮಾತನಾಡಿದ ರೀತಿ ತುಂಬಾ ಚೆನ್ನಾಗಿತ್ತು. ಆ ಕಾರಣದಿಂದಲೇ ನಾನು ಆಯ್ಕೆಯಾಗಿದ್ದೆ

1975 ಜುಲೈ 25ರಂದು ನಾನು ಎಂ.ಎ. ವಿದ್ಯಾರ್ಥಿಗಳಿಗೆ ಪಾಠವನ್ನು ಆರಂಭಿಸಿದೆ. ನಾನು ಎಂ.ಎ. ನಲ್ಲಿ ವಿಶೇಷ ಪರಿಣಿತಿ ಪಡೆದಿದ್ದು ಎಫಿಗ್ರಫಿಯಲ್ಲಿ; ಆದರೆ, ಪಾಠ ಮಾಡಲಿಕ್ಕೆ ಪ್ರಾರಂಭಿಸಿದ್ದು ಜಾನಪದ ಮತ್ತು ಸಂಸ್ಕೃತಿಯಲ್ಲಿ "ನಾನು ತರಗತಿಯಲ್ಲಿ ಎರಡು ಕೆಲಸಗಳನ್ನು ಮಡ್ತಾ ಇದ್ದೆ ಒಂದು ಮೇಷ್ಟ್ರು ಕೆಲಸ. ಇನ್ನೊಂದು ಪೊಲೀಸ್ ಕೆಲಸ." ಎನ್ನುವ ಮಾತುಗಳು ವಿದ್ಯಾರ್ಥಿಗಳ ಜೊತೆಗೆ ಅಧ್ಯಾಪಕನಿರಿಸಿಕೊಳ್ಳಬೇಕಾದ ಶಿಸ್ತನ್ನು ತಿಳಿಯಪಡಿಸುತ್ತದೆ. ನಾನು ಕುಲಪತಿಯವರಿಗೂ ಹೇಳಿದ್ದೆ. ಒಬ್ಬನೇ ಒಬ್ಬ ವಿದ್ಯಾರ್ಥಿ ನಾನು ಸರಿಯಾಗಿ, ಪೂರ್ಣಪ್ರಮಾಣವಾಗಿ ಪಾಠ ಮಾಡುವುದಿಲ್ಲವೆಂದು ಹೇಳಿದರೆ ಸಾಕು; ನಾನು ಅಂದೇ ರಾಜಿನಾಮೆ ಕೊಡುತ್ತೇನೆ. ಎಂದಿದ್ದೆ." ಹೀಗೆ ಎಲ್ಲದರಲ್ಲಿಯೂ ತಮ್ಮನ್ನು ಶಿಸ್ತಿನಿಂದಲೇ ರೂಪಿಸಿಕೊಂಡವರು ಬರಗೂರು.

"ಆರಂಭದ ನನ್ನ ಬರವಣಿಗೆಯನ್ನು ನಾಡಗೇರಿ ಕೃಷ್ಣರಾಯರು ತಮ್ಮ ಜನಪ್ರಗತಿಯಲ್ಲಿ ಪ್ರಕಟಿಸಿದರು. ಈ ಪ್ರೋತ್ಸಾಹಕ್ಕಾಗಿ ಅವರಿಗೆ ನನ್ನ 'ಸ್ವಪ್ನ ಮಂಟಪ' ಕಾದಂಬರಿಯನ್ನು ಅರ್ಪಿಸಿದೆ. ಹಾಗೆಯೆ, ಅವರು ಮಲ್ಲಿಗೆಯಲ್ಲಿ 'ಬರಗೂರರು ಬರೆಯುವ ಕತೆಗಳಿಗೆ ಕನ್ನಡ ಪತ್ರಿಕೆಗಳೇ ಸಾಲದು ಬರ್ತಾವೆ'. ಅಂತ ಬರೆದಿದ್ದರು. ಅದರಲ್ಲಿ ಒಂದು ಸಣ್ಣ ವ್ಯಂಗ್ಯವಿತ್ತು. 'ಸುಮ್ನೆ ಹೀಗೆ ಬರಿತಾ ಇರಬಾರದು ಎಂಬುದು'. ಆಮೇಲೆ ಅವರು ನಾನು ಪ್ರೀತಿಯಿಂದಲೇ ಬರೆದಿದ್ದೆ ಎಂದರು."

## ಇಲ್ಲದೇ ಹೋದ ಕ್ಷಮೆ

"ಪಿಎಚ್.ಡಿ., ಮಾಡುವುದಿದ್ದರೆ ಬಹಳ ಮಹತ್ವದ ವಿಷಯ ತೆಗೆದುಕೊಂಡೇ ಮಾಡಬೇಕೆಂದುಕೊಂಡಿದ್ದೆ. 1975ರಲ್ಲಿ 'ಕನ್ನಡ ಸಾಹಿತ್ಯ ಮತ್ತು ಕೈಗಾರೀಕರಣ' ಎಂಬ ವಿಷಯವನ್ನು ಆರಿಸಿಕೊಂಡಿದ್ದೆ. ವಾಸ್ತವವಾಗಿ ನಾನಾಗಲೇ ಸಾಕಷ್ಟು ಮಾಹಿತಿ ಸಂಗ್ರಹಿಸಿದ್ದೆ. ಈ ವಿಷಯದ ಬಗೆಗೆ ಆ ಸಂದರ್ಭದಲ್ಲಿ ಅಷ್ಟೊಂದು ಆಸಕ್ತಿ ಇರಲಿಲ್ಲ. ಕೈಗಾರೀಕರಣ ಇಡೀ ಜಗತ್ತಿನಲ್ಲಿ ಮಹಾಕಾವ್ಯ ಪರಂಪರೆಯನ್ನು ಮುಗಿಸಿ ಗದ್ಯಬರವಣಿಗೆಯನ್ನು ಆರಂಭಿಸಿತ್ತು.

ಅದು ಕನ್ನಡ ಸಾಹಿತ್ಯದ ಮೇಲೆ ಯಾವ ಪರಿಣಾಮ ಬೀರಿತು ಎಂಬುದನ್ನು ನೋಡಬೇಕಿತ್ತು. ಆದರೆ, ನಾನು ನಿರೀಕ್ಷಿಸಿದ ಆಸಕ್ತಿ ಅನ್ಯರಿಂದ ಸಿಗಲಿಲ್ಲ. ಅಷ್ಟಕ್ಕೆ ಕೈಬಿಟ್ಟೆ ..

.ಇನ್ನೊಮ್ಮೆ "ಸಿನಿಮಾ ಮತ್ತು ಸಾಹಿತ್ಯ: ಒಂದು ತೌಲನಿಕ ಅಧ್ಯಯನ, ಕನ್ನಡ ಸಿನಿಮಾಗಳಿಗೆ ಸಂಬಂಧಿಸಿದಂತೆ" ಎಂಬುದನ್ನು ಇರಿಸಿಕೊಂಡು ಹೊರಟೆ. ಅಧ್ಯಯನ ಮಾಡಲಿಕ್ಕೆ ಶುರುಮಾಡಿದಾಗ ಕಾನೂನಿನ ಯಾವುದೋ ತೊಡಕು ಎದುರಾಯಿತು. ನಿಮ್ಮ ದಾಖಲಾತಿಯನ್ನು ರದ್ದು ಮಾಡುತ್ತೇವೆಂದು ವಿಶ್ವವಿದ್ಯಾಲಯದ ಆಡಳಿತಮಂಡಳಿ ತಿಳಿಸಿತು. ನನ್ನ ಮಾರ್ಗದರ್ಶಕರು ಸಹ ನನ್ನ ಕಾರಣಕ್ಕೆ ಹೀಗಾಗುತ್ತಿದೆ. ತಪ್ಪಾಯಿತು ಅಂತ ಬರೆದುಕಕೊಟ್ಟು ಬಿಡಿ ಎಂದರು. ಬೇರೆಯವರಿಗೆ ಇಲ್ಲದೆ ಹೋದ ಈ ಕ್ಷಮೆ ನನಗ್ಯಾಕೆ. ನಾನು ತಪ್ಪುಮಾಡಿಯೂ ಇಲ್ಲ. ನಾನು ಪಿಎಚ್.ಡಿ ಮಾಡುವುದಿಲ್ಲ ಎಂದು ಪಿಎಚ್.ಡಿಗೆ ವಿದಾಯ ಹೇಳಿದೆ. ನನಗೆ ಆಸಕ್ತಿಯೂ ಹೊರಟು ಹೋಯಿತು. ಅದು ನನಗೆ ಉತ್ಸಾಹ ಇರುವಾಗಲೇ ಮಾಡಬೇಕಿತ್ತು. ಈಗ ಪಿಎಚ್.ಡಿ ಮಾಡಲಿಲ್ಲ ಎಂಬ ವ್ಯಥೆಯೇನಿಲ್ಲ." ಹೀಗೆ, ಕೆಲ ಹೊರಗಿನ ಕಾರಣಗಳಿಂದಲೇ ಬರಗೂರರು ಪಿಎಚ್.ಡಿ ಸಂಶೋಧನೆ ಕೈಗೊಳ್ಳಲಿಲ್ಲವೆಂಬುದು ಸ್ಪಷ್ಟವಾಗಿದೆ. ಆದರೂ, ಅವರೇ ಹೇಳುವಂತೆ ಅವರಿಗೆ ವ್ಯಥೆಯೇನೂ ಆಗಿಲ್ಲ.

## ಆಯ್ಕೆಯ ಸ್ವಾತಂತ್ರ್ಯ

"ನನ್ನ ಆಯ್ಕೆಯ ಸ್ವಾತಂತ್ರ್ಯ ನನಗಿರಬೇಕು. ಎಲ್ಲರಂತೆಯೂ ನಾನು ಮದುವೆಯಾಗುತ್ತೇನೆಂದು ತಿಳಿಯಬೇಡಿ ಹಾಗೂ ನೆಂಟರಿಷ್ಟರಲ್ಲೇ ಆಗುತ್ತೇನೆಂದೂ ಅಂದ್ಕೊಬೇಡಿ ಅಂತಾ ಹೇಳ್ತಾಇದ್ದೆ. ನಾನು ಮೇಷ್ಟ್ರು ಆಗಿದ್ದಾಗ ನನ್ನ ಶ್ರೀಮತಿ ಪರಿಚಯವಾದದ್ದು. ಆಕೆಗೆ ತ್ರಿವೇಣಿ ಕಾದಂಬರಿಯೆಂದರೆ ಬಹಳ ಇಷ್ಟ. ಹೆಣ್ಣುಮಕ್ಕಳಲ್ಲಿ ತ್ರಿವೇಣಿ ಅಷ್ಟರ ಮಟ್ಟಿಗೆ ಅಚ್ಚೊತ್ತಿದ್ದರು. ನಾನು ಕೂಡ ತ್ರಿವೇಣಿ ಕಾದಂಬರಿಗಳನ್ನು ಆ ಕಾಲದಲ್ಲಿ ತುಂಬಾ ಓದ್ತಿದ್ದೆ. ನಾನು ವಿಶ್ವವಿದ್ಯಾನಿಲಯದಲ್ಲಿ ಸಾಹಿತ್ಯ ವಾರ್ಷಿಕ ಅಂತ ತರ್‍ತಾ ಇದ್ದೆ. ಆಯಾ ವರ್ಷದಲ್ಲಿ ಬಂದ ಎಲ್ಲಾ ಕೃತಿಗಳನ್ನು ವಿಮರ್ಶೆ ಮಾಡಿ ಆ ಪುಸ್ತಕದಲ್ಲಿ ಸಂಕಲಿಸುವುದು ಪ್ರಧಾನವಾಗಿತ್ತು. ಮೂರು ವರ್ಷ ಆ ಸಂಕಲನದಲ್ಲಿ ಬರಿತೀನಿ ಅಂತ ಆಯ್ಕೆಮಾಡಿಕೊಂಡಿದ್ದೆ. ತ್ರಿವೇಣಿ ಕಾದಂಬರಿಗಳು ಮಹಿಳೆಯರ ಮೇಲೆ

ತೀರಾ ಪ್ರಭಾವ ಬೀರಿದ್ದವು. ಇವುಗಳನ್ನು ಕುರಿತು ನಾನು ಆ ಸಂದರ್ಭದಲ್ಲಿ ವಿಮರ್ಶಾತ್ಮಕವಾಗಿ ಬರಿತಾ ಇದ್ದೆ; ಆ ಕಾರಣಕ್ಕೆ ಆಕೆಗೆ ಇಷ್ಟವಾಗಲಿಲ್ಲ. ಆಕೆಗೆ ಸಾಹಿತ್ಯದಲ್ಲಿ ಆಸಕ್ತಿ ಇತ್ತು. ಹೀಗೆ ಚರ್ಚೆ ಮಾಡ್ತಾ ಮಾಡ್ತಾ ಮದುವೆ ಆಗಬೇಕು ಅನಿಸಿತು. ಆದ್ರೆ ತಕ್ಷಣವೇ ಮದ್ವೆ ಆಗಬಾರದೆಂದುಕೊಂಡು ಮಾಗಿದ ಸ್ಥಿತಿಗಾಗಿ ಕಾಯ್ತಾ ಇದ್ವಿ. ಅನಂತರ ನಲವತ್ತೆಂಟು ರೂಪಾಯಿ ಖರ್ಚುಮಾಡಿಕೊಂಡು ಬೆಂಗಳೂರಿನಲ್ಲಿ ರಿಜಿಸ್ಟರ್ಡ್ ಮದುವೆ ಮಾಡಿಕೊಂಡೆವು. ಅಂದು ಎಂಟತ್ತು ಜನ ಊಟ ಮಾಡಿದೆವು. ನಂತರ ಬರಗೂರಿನಲ್ಲಿಯೇ ಒಂದು ಸಣ್ಣ ಊಟದ ಸಮಾರಂಭ ನಡೆಯಿತು." ಎಂದು ಹೇಳುವಾಗ ಬರಗೂರರಲ್ಲಿ ತಾವು ಸಾಧಿಸಿದ್ದರ ಬಗ್ಗೆ ಆತ್ಮವಿಶ್ವಾಸವಿತ್ತು.

"ಮದುವೆಯಾದ ಸುಮಾರು ಆರು ವರ್ಷಗಳ ಕಾಲ ರಾಜಲಕ್ಷ್ಮಿಯವರಿಗೆ ತಮ್ಮ ತವರ ಮನೆಯ ಸಂಬಂಧಗಳು ಕಡಿದುಹೋಗಿದ್ದವು. ಆದರೆ, ಅವರ ತಂಗಿಯಾದ ಪ್ರಮೀಳಾ ಅವರೇ ಇವರ ಮನೆಗೆ ಬಂದರು. ಆನಂತರ ಎಲ್ಲರೂ ಹೊಂದಿಕೊಂಡರು. ಇಲ್ಲಿಯೂ ಸಹ ಬರಗೂರರು ಅನೇಕ ಅಡೆತಡೆಗಳನ್ನು ಎದುರಿಸಿದ್ದಾರೆ. ತಮ್ಮ ಮನೆಯಿಂದ ಮತ್ತು ಮಡದಿಯ ಮನೆಯಿಂದ ಏಕಕಾಲಕ್ಕೆ ಎದುರಾದ ಇಂತಹ ಸವಾಲುಗಳನ್ನು ಸಂಯಮದಿಂದ ನಿಭಾಯಿಸಿದ್ದಾರೆ. ನಿಜಕ್ಕೂ ಇದೊಂದು ಅಚ್ಚರಿಯ ಸಂಗತಿಯೇ ಸರಿ.

"ನನ್ನ ಶ್ರೀಮತಿ ಊರು ಚಿಕ್ಕ ಹಳ್ಳಿ. ಏನಾದರೂ ಬರೆಯಬೇಕೆಂದಾಗ ಅಲ್ಲೇ ವಾರಗಟ್ಟಲೆ ಕೂತು ಬರೆಯುತ್ತಿದ್ದೆ. ಅನಂತರ ನಮ್ಮ ಊರಿನ ಹೊಲದ ಮನೆಯಲ್ಲಿ ಕೂತು ಬರೆಯುತ್ತಿದ್ದೆ." ಎಂದೆನ್ನುವ ಬರಗೂರರು ತಮ್ಮ ಬಾಳಸಂಗಾತಿಯ ಆಯ್ಕೆಯಲ್ಲಿ ಸಂಪೂರ್ಣ ಸ್ವಾತಂತ್ರ್ಯವಹಿಸಿದರು; ಹಾಗೆ, ಶ್ರೀಮತಿಯ ಸಲಹೆಯಿಂದ ಉದ್ಯೋಗವನ್ನೂ ಗಿಟ್ಟಿಸಿಕೊಂಡರು.

"ಈ ನಡುವೆ ಸುಂದರ್‌ನಾಥ್‌ಸುವರ್ಣ ಎನ್ನುವವರು ಇವರಿಗೆ ಸಿನಿಮಾ ಗೀಳನ್ನು ಹತ್ತಿಸಿದರು. 'ಒಂದು ಊರಿನ ಕತೆ'ಯನ್ನು ಇದೇ ಸಂದರ್ಭದಲ್ಲಿ ಚಿತ್ರೀಕರಿಸಲಾಯಿತು. ಚಿತ್ರಕತೆ ಬರೆದಿದ್ದನ್ನೆಲ್ಲಾ ನಾನೇ ನೀಟ್ ಕಾಪಿ ಮಾಡುತ್ತಿದ್ದೆ. ಅವರ ಎಲ್ಲಾ ಬರವಣಿಗೆಯಲ್ಲೂ ನನ್ನ ಪಾತ್ರ ಇದ್ದೇ ಇರುತ್ತಿತ್ತು." ಎನ್ನುತ್ತಾರೆ ಕೋಡಿರಾಂಪುರ ಅವರು.

"ಅನಂತರ 'ಬೆಂಕಿ' ಸಿನಿಮಾವನ್ನು ಮಾಗೋಡು ಗ್ರಾಮದಲ್ಲಿ ಚಿತ್ರೀಕರಿಸಲಾಯಿತು. ಆಗ ನಾನು ನಿರ್ಮಾಣ ಸಹಾಯಕನಾಗಿ ಕೆಲಸಮಾಡಿದೆ. 'ಕೋಟೆ', 'ಕರಡೀಪುರ', ಚಿತ್ರಗಳಲ್ಲೂ ಕಲಾ ನಿರ್ದೇಶಕನಾಗಿದ್ದೆ. ಬರಗೂರರು ನಿರ್ದೇಶಕರಾಗಿದ್ದರು ಅವರೆಂದೂ ನಮ್ಮ ಚಿತ್ರತಂಡವನ್ನು ಪ್ರತ್ಯೇಕವಾಗಿ ನೋಡಲಿಲ್ಲ. ಇಡೀ ತಂಡದಲ್ಲಿ ಕುಟುಂಬದ ವಾತಾವರಣವಿರುತ್ತಿತ್ತು. ಯಾವುದೇ ದೃಶ್ಯ ಚಿತ್ರೀಕರಿಸಬೇಕಾದರೆ ಸುಮಾರು ಹತ್ತು ಬಾರಿಯಾದರೂ ಯೋಚಿಸಿ, ಅದು ಖಚಿತತೆ ಬರುವವರೆಗೂ ರಿಹರ್‌ಸಲ್ ಮಾಡಿಸುತ್ತಿದ್ದರು. ನಂತರ ಅದರ ಟೇಕ್ ಆಗುತ್ತಿತ್ತು." ರಂಗಾರೆಡ್ಡಿಯವರ ಈ ಅನುಭವಗಳು ಬರಗೂರರ ಸಿನಿಮಾ ಪ್ರಪಂಚದ ಸ್ವಾರಸ್ಯವನ್ನು ತಿಳಿಸುತ್ತವೆ. ಜೊತೆಗೆ ಬರಗೂರರ ನಿರ್ದೇಶನದ ವಿಶೇಷತೆಯೆಂದರೆ ಉಳಿತಾಯ, ಪರಿಪೂರ್ಣತೆ ಮತ್ತು ಪರಿಗ್ರಹಿಸುವಿಕೆ. ಈ ಮೂರರಿಂದಲೇ ಇವರ ಸಿನಿಮಾರೂಪಿಸಲ್ಪಡುತ್ತಿತ್ತು. ಹೀಗೆ, ಸಿನಿಮಾ ಲೋಕದಲ್ಲಿ ವಿಶಿಷ್ಟತೆಯನ್ನು ಉಳಿಸಿಕೊಂಡ ಬರಗೂರರು ಕನ್ನಡ ಸಿನಿಮಾ ಲೋಕಕ್ಕೆ–ಲೋಹಿತಾಶ್ವ, ಪ್ರಮೀಳಾ ಜೊಷಾಯ್, ಮುಖ್ಯಮಂತ್ರಿ ಚಂದ್ರು ಮುಂತಾದ ಪ್ರತಿಭೆಗಳನ್ನು ಪರಿಚಯಿಸಿದ್ದಾರೆ ಎಂಬುದು ಗಣನೀಯವಾದುದು.

## ಬೆಳ್ಳಿ ತೆರೆಯ ಬೆನ್ನ ಹಿಂದೆ

ಬಯಲು ಸೀಮೆಯ ಬರಡು ನೆಲದಲ್ಲಿ ಕನಸನ್ನು ಮಾತ್ರ ಹುಲುಸಾಗಿ ಬೆಳೆಯಬಹುದು. ಆದರೆ, ಅವೆಲ್ಲಾ ನನಸಾಗುವುದಾದರೂ ಹೇಗೆ? ಬರಗೂರರು ತಾವೆಣೆದುಕೊಂಡ ಕನಸು ಲೀಡ್ಸ್ ತಲುಪಬಹುದೆಂದಾಗಲಿ ಗಿನ್ನಿಸ್ ಪಡೆಯಬಹುದುದೆಂದಾಗಲೀ ಅಂದುಕೊಂಡವರಲ್ಲ. ಆದರೂ ನನಸಾಯಿತು. ಇವರ ಈ ಕನಸುಗಳು ವಿದ್ಯಾರ್ಥಿ ದೆಸೆಯಿಂದಲೇ ಆರಂಭವಾಗಿದ್ದವು. ಅನೇಕ ನಾಟಕಗಳನ್ನು ಆಗಲೇ ಬರೆದು ಆಡಿಸಿದ್ದಾರೆ.

ಹೀಗೆ ಬರಗೂರರು ಸುತ್ತ–ಮುತ್ತ ಇಂತಹ ಸಾಂಸ್ಕೃತಿಕ ಪರಿಸರವನ್ನು ಸೃಷ್ಟಿಸಿಕೊಂಡವರು. ಇವರ ಈ ಗೀಳು 'ಬಯಲಾಟದ ಭೀಮಣ್ಣ'ನಂತಹ ಕತೆಯ ರಚನೆಗೂ ಪ್ರೇರೇಪಣೆಯಾಗಿದೆ. ಇದು 'ಮರಣದಂಡನೆ' ಸಿನಿಮಾದವರೆಗೂ ಬೆಳೆದಿದೆ. ಈ ರೀತಿಯಾದ ನಾಟಕದ ಮೇಲಿನ ಪ್ರೀತಿಯೇ ಮುಂದೆ ಸಿನಿಮಾ ನಿರ್ಮಿಸುವುದಕ್ಕೆ ಕಾರಣವಾಯಿತು.

ಬರಗೂರರು ಯಾವುದೇ ಸಿನಿಮಾ ನಿರ್ದೇಶಕ ತರಬೇತಿಯನ್ನು ಪಡೆದವರಲ್ಲ. ಬರೀ ಸಿನಿಮಾಗಳನ್ನು ವೀಕ್ಷಿಸಿಯೇ ಸಿನಿಮಾ ನಿರ್ದೇಶಕರಾದವರು. ಇಂದು ಆ ಸಿನಿಮಾದ ಎಲ್ಲ ತಂತ್ರಗಳನ್ನು ಬಳಸಿಕೊಂಡು ಕನ್ನಡ ಉಪಧಾರೆಗಳನ್ನು ಅಲ್ಲಿ ತರಲು ಪ್ರಯತ್ನಿಸಿದ್ದಾರೆ. ಈ ನಿಟ್ಟಿನಲ್ಲಿ ಹತ್ತು ಹಲವು ಪ್ರಶಸ್ತಿಗಳನ್ನು ಗಳಿಸಿಕೊಂಡಿದ್ದಾರೆ. ತಮ್ಮ 'ಒಂದು ಊರಿನ ಕಥೆ' ಚಿತ್ರಕ್ಕಾಗಿ 1978ರಲ್ಲಿ ಅತ್ಯುತ್ತಮ ಸಂಭಾಷಣಾಕಾರ ಪ್ರಶಸ್ತಿ, 'ಬೆಂಕಿ' ಚಿತ್ರಕ್ಕಾಗಿ 1983ರಲ್ಲಿ ಅತ್ಯುತ್ತಮ ನಿರ್ದೇಶನ ಪ್ರಶಸ್ತಿ, 'ಸೂರ್ಯ' ಚಿತ್ರಕ್ಕಾಗಿ 1981ರಲ್ಲಿ ಎರಡನೇ ಅತ್ಯುತ್ತಮ ಪ್ರಶಸ್ತಿ 'ಜನುಮದ ಜೋಡಿ' ಚಿತ್ರಕ್ಕಾಗಿ ವೀಡಿಯೋಕಾನ್ ಪ್ರಶಸ್ತಿ ಶಾಂತಿಗಾಗಿ ಗಿನ್ನಿಸ್ ಹೀಗೆ ಅನೇಕ ಪ್ರಶಸ್ತಿಗಳು ಬರಗೂರರನ್ನು ಬೆನ್ನಟ್ಟಿ ಬಂದಿವೆ. ಜೊತೆಗೆ ಈಗಲೂ ಇಂಥ ಹತ್ತು ಹಲವು ಪ್ರಶಸ್ತಿಗಳು ತುದಿಗಾಲ ಮೇಲೆ ನಿಂತಿವೆ.

"ಇಂತಹ ಕನಸುಗಳು ನನಸಾಗಲು ನನಗೆ ಪ್ರೋತ್ಸಾಹ ದೊರೆತದ್ದು ಬಹುತೇಕ ಪರೋಕ್ಷವಾಗಿಯೆ. ನಾರಾಯಣಸ್ವಾಮಿ ಇಂದು ಬದುಕಿಲ್ಲ. ಆದರೆ, 'ಜಿ.ವಿ. ಅಯ್ಯರ್ ಅವರು ಹೇಳಿದ ಮಾತುಗಳು ನನ್ನೊಳಗೆ ಬದುಕಿವೆ. ನಾರಾಯಣಸ್ವಾಮಿಯವರೇ ಈ ಹುಡುಗ ಏನೋ ಮಾಡ್ತಾನೆ.' ಹೀಗೆ ಆ ಹುಡುಗ ಏನುಮಾಡಿದ್ದಾನೆ ಎನ್ನುವುದನ್ನು ನೋಡಿ, ಸಂತೋಷಿಸಿ, ಇನ್ನೂ ಮಾಡುವುದು ದೂರ ಇದೆ ಎನ್ನುವುದು ಹೆಚ್ಚು ಸಂತೋಷಕರವಾದದು" ಎಂದಿದ್ದರು.

"ನನ್ನ 'ಬೆಂಕಿ' ಚಿತ್ರಕ್ಕೆ ಎರಡನೆಯ ಶ್ರೇಷ್ಠ ನಿರ್ದೇಶಕ ಪ್ರಶಸ್ತಿ ಬಂತು ಮೊದಲನೆಯ ಪ್ರಶಸ್ತಿಯನ್ನು ಯಾವ ಚಿತ್ರಕ್ಕೂ ಕೊಟ್ಟಿರಲಿಲ್ಲ. ಜಿ.ವಿ. ಅಯ್ಯರ್ ಸಮಿತಿಯ ಅಧ್ಯಕ್ಷರಾಗಿದ್ದರು. 'ಕರಡೀಪುರಕ್ಕೆ' ಶ್ರೇಷ್ಠ ಸಾಮಾಜಿಕ ಕಳಕಳಿಯ ಪ್ರಶಸ್ತಿ ಬಂದಾಗಲೂ ಆ ಸಮಿತಿಯ ಅಧ್ಯಕ್ಷರು ಜಿ.ವಿ. ಅಯ್ಯರ್ ಅವರೇ ಆಗಿದ್ದರು. ಇವರು ಗುಣಪಕ್ಷಪಾತಿಗಳಾದವರು ಇವರೇ ನನ್ನ ಸಿನಿಮಾ ಸೃಷ್ಟಿಗೆ ಪರೋಕ್ಷವಾಗಿ ಪ್ರೋತ್ಸಾಹ ನೀಡಿದವರು."

ಇಂತಹ ಶ್ರೇಷ್ಠ ಮಟ್ಟದ ಸಿನಿಮಾಗಳಿಗೆ ನಿರ್ದೇಶನ ಮಾಡಿದ ಬರಗೂರರು ಸಿನಿಮಾ ಕ್ಷೇತ್ರಕ್ಕೆ ಪ್ರವೇಶಿಸಿದ್ದು ತುಂಬಾ ಕುತೂಹಲಕಾರಿಯಾದದು. ಇನ್ನು ಅವರ ಅನುಭವದಿಂದಲೇ ಕೇಳಬೇಕು.

'ಕನ್ಯಾದಾನ' ಸಿನಿಮಾ ನೋಡಿದ್ದು ಶಿರಾದಲ್ಲಿ. ಆ ಸಿನಿಮಾ ಪ್ರದರ್ಶನ ಮುಗಿದ ಮೇಲೆ, ಪರದೆಯ ಹಿಂದೆ ಹುಡುಕ್ತಾ ಇದ್ದೆ; ಯಾರೋ ಕುಳಿತು ಮಾತನಾಡುತ್ತಾರೆ ಎಂದು. ಇದು ದಡ್ಡತನಕ್ಕಿಂತ ಮುಗ್ಧನಾಗಿ ಹುಡುಕ್ತಾ ಇದ್ದೆ. ಸಿನಿಮಾ ಬಂದರೆ ಜನ ಕೆಟ್ಟೋಗ್ತಾರೆ ಅಂತ ಹಿರಿಯರು ಭಾವಿಸಿದ್ದರು. ಹಾಗಾಗಿ, ಬಹಳ ದಿನಗಳವರೆಗೆ ಸಿನಿಮಾ ನಮ್ಮೂರಿಗೆ ಬಂದಿರಲಿಲ್ಲ. ಆದ್ದರಿಂದ ದೂರದ ಪಾಟ್ನಾಯಕನಹಳ್ಳಿ, ಹಾರೋಗೆರೆಗಳಲ್ಲಿ ಸಿನಿಮಾ ನೋಡಿಕೊಂಡು ಕತ್ತಲಲ್ಲಿ ನಡದೇ ಬರುತ್ತಿದ್ದೆ. ಇಂತಹ ವೇಳೆಯಲ್ಲಿ ಕಳ್ಳರ ಕೈಯಲ್ಲಿ ಸಿಕ್ಕು ಪೇಚಾಡಿದ್ದೂ ಉಂಟು. ಈ ರೀತಿಯ ಆಸಕ್ತಿಯೊಂದಿಗೆ ಕಾಲೇಜು ಮಟ್ಟಕ್ಕೆ ಬಂದಾಗ, ಚರ್ಚೆಮಾಡಲು ಪ್ರಾರಂಭಿಸಿದೆ. ಇಲ್ಲಿಂದಲೇ ಅದರ ಆಗಾಧತೆ ಗೊತ್ತಾಯಿತು. ಇಲ್ಲದಿದ್ದರೆ ನಾನು ಪರದೆಯ ಹಿಂದೆಯೇ ಹುಡುಕುವ ಹುಡುಗನಾಗಿರುತ್ತಿದ್ದೆ." ಎಂದು ತಮ್ಮ ಸಿನಿಮಾ ಪ್ರವೇಶದ ಗುಟ್ಟನ್ನು ಬಹಿರಂಗಪಡಿಸಿದರು. ಮತ್ತೆ ಅವರು ಮುಂದುವರೆದು ಮಾತನಾಡುತ್ತಾ "ಇಂದು ನನಗೆ ಲೀಡ್ಸ್‌ಗೆ ಹೋಗುತ್ತಿರುವುದು ದೊಡ್ಡ ವಿಷಯವಾಗಿ ಕಾಣುತ್ತಿದೆ. ಏಕೆಂದರೆ ನನ್ನ ಸಿನಿಮಾದ ಭವಿಷ್ಯ ಇದರ ಹಿಂದೆ ಅಡಗಿದೆ. ಹೀಗೆ, ಆಯ್ಕೆಯಾದ ಸಿನಿಮಾಗಳನ್ನು ಭಾರತ ಸರ್ಕಾರದ ದೂರದರ್ಶನದವರು ಹತ್ತು-ಹದಿನಾಲ್ಕು ಲಕ್ಷ ಕೊಟ್ಟು ನ್ಯಾಷನಲ್ ನೆಟ್‌ವರ್ಕ್‌ನಲ್ಲಿ ತೋರಿಸಬೇಕಾಗುತ್ತದೆ. ಹಾಗೆ ಒಂದು ಕಡ್ಡಾಯವಾದ ಕಾನೂನು ಇದೆ. ಈ ಕಾರಣಕ್ಕೆ ನನಗೆ ಸಂತೋಷವಾಗುತ್ತಿದೆ. ಕಲಾತ್ಮಕ ಸಿನಿಮಾಕ್ಕೆ ಬೇರೆ ಲಾಭದ ದೃಷ್ಟಿಯೇ ಇಲ್ಲವಾದ್ದರಿಂದ ಈ ಮಾತುಗಳನ್ನು ಆಡಬೇಕಾಗಿದೆ

..ಭಾರತೀಯ ಮನೋರಮಕ್ಕೆ ನನ್ನ 'ಕರಡಿಪುರ' ಚಿತ್ರವನ್ನು ಇಲ್ಲಿನ ಆಯ್ಕೆ ಸಮಿತಿ ಆಯ್ಕೆ ಮಾಡದೇ ಇರುವುದು ಕೂಡ ಒಂದು ವಿಪರ್ಯಾಸ. ಆದರೆ, ರಷ್ಯಾದ ಲೀಡ್ಸ್‌ನ ತಂಡದವರು ಅಯ್ಕೆಮಾಡಿದ್ದಕ್ಕೆ ಕನ್ನಡಿಗರು ಹೆಮ್ಮೆ ಪಡಬೇಕು. ಇಂಗ್ಲೀಷ್ ಬರಹವಿಲ್ಲದೆ ಬರೀ ಕನ್ನಡಬರಹವೇ ಇದ್ದುದ್ದನ್ನು ಲೀಡ್ಸ್ ಸಮಿತಿ ಆಯ್ಕೆ ಮಾಡಿತು. ಇದರಿಂದ ಭಾಷೆ ಗೊತ್ತಿಲ್ಲದಿದ್ದರೂ ಆಯ್ಕೆಮಾಡಿರುವುದರಿಂದ ಈ ಸಿನಿಮಾಕ್ಕೆ ಸಿನಿಮಾ ಲಕ್ಷಣವಿದೆ ಎಂಬ ಸಂತೋಷವಾಗುತ್ತದೆ" ಎನ್ನುವ ಬರಗೂರರ ಮಾತಿನಲ್ಲಿ ವಿಷಾದವಿದೆ. ಇದನ್ನೆಲ್ಲಾ ಸಿನಿಮಾ ಆಯ್ಕೆಮಂಡಳಿ ಅರ್ಥೈಯಿಸಿಕೊಳ್ಳಬೇಕಾಗಿದೆ. ಕನ್ನಡದ

ಜನ ಕಳಕಳಿಯುಳ್ಳ ಚಿತ್ರಗಳನ್ನು ವೀಕ್ಷಿಸಿ ಪ್ರೋತ್ಸಾಹಿಸಬೇಕಾಗಿದೆ. ಸಾಮೂಹಿಕವಾಗಿ ಬದಲಾವಣೆಗೆ ಶ್ರಮಿಸಬೇಕಾಗಿದೆ."

"ಅಷ್ಟೇ ಅಲ್ಲ ಭಾರತಕ್ಕೆ ಸ್ವಾತಂತ್ರ್ಯ ಬಂದ ಐವತ್ತು ವರ್ಷಗಳ ಮೇಲೆ ಬ್ರಿಟೀಷ್ ವಸಾಹತುಶಾಹಿಯ ವಿರುದ್ಧ ಮಾತನಾಡುತ್ತೇವೆ. ಅದೇ ವಸಾಹತುಶಾಹಿ ನನ್ನ ಸಿನಿಮಾವನ್ನು ಆಯ್ಕೆಮಾಡಿಕೊಂಡಾಗ ನನಗೆ ಹೊಗಳಬೇಕೋ ತೆಗಳಬೇಕೋ ತಿಳಿಯುವುದಿಲ್ಲ. ನಾನು ಬಹಳ ಶ್ರೇಷ್ಠ ಚಿತ್ರ ನಿರ್ಮಿಸಿದ್ದೇನೆ ಎಂದುಕೊಂಡಿಲ್ಲ. ಆದರೆ, ಕೆಟ್ಟ ಚಿತ್ರವನ್ನಂತೂ ನಿರ್ಮಿಸಿಲ್ಲ. ನಾನು ಲೀಡ್ಸ್‌ನಲ್ಲಿ ಮಾತನಾಡಬೇಕಿದೆ. ಅಲ್ಲಿ ಹೀಗೆಯೇ ಮಾತನಾಡುತ್ತೇನೆ. ಸ್ವಾತಂತ್ರ್ಯ ಬಂದ ಮೇಲೂ ನಾನು ಬ್ರಿಟೀಷ್ 'ವಸಾಹತುಶಾಹಿ'ಯನ್ನು ವಿರೋಧಿಸುತ್ತಲೇ ಬಂದಿದ್ದೇನೆ. ಅದೇ ಬ್ರಿಟೀಷ್ 'ನವ ವಸಾಹತುಶಾಹಿ' ನನ್ನ ಸಿನಿಮಾವನ್ನು ಆಯ್ಕೆಮಾಡಿಕೊಂಡಿರುವ ವೈರುಧ್ಯದ ಪರಿಸ್ಥಿತಿಯೊಳಗೆ ನಾನು ನಿಂತಿದ್ದೇನೆ." ಎನ್ನುವ ವೈರುಧ್ಯದ ಸ್ಥಿತಿಯನ್ನು ಬರಗೂರರು ಅಂದು ಸಭಿಕರೆದುರು ಬಿಚ್ಚಿಟ್ಟರು.

"ನಮ್ಮ ಕನ್ನಡ ಚಿತ್ರರಂಗ ಸಮೃದ್ಧವಾಗಬೇಕಾದರೆ ಅದನ್ನು ಮರುಚಿಂತನೆಗೆ ಒಳಪಡಿಸಬೇಕು; ಮಾಡಬೇಕಾಗಿರುವ ಸಂದರ್ಭ. ಹಾಗೆ ನೋಡಿದರೆ ನಮ್ಮ ಕನ್ನಡ ಚಿತ್ರರಂಗ ಪ್ರಾರಂಭವಾದುದೇ ಉಪಧಾರೆಗಳಿಂದ 'ಸತಿ ಸುಲೋಚನ' ಚಿತ್ರಕ್ಕೆ ಬಂದ ವಸ್ತು ಸೀತಾಮಾತೆಯದೆಂದು ಕರೆಯಿಸಿಕೊಂಡ ವ್ಯಕ್ತಿಯದಲ್ಲ. ದೈವ ಶ್ರೀರಾಮನ ವಸ್ತುವಲ್ಲ. ಈ ನಾಡಿನ ಉಪಧಾರೆಯಿಂದ ಕನ್ನಡ ಚಿತ್ರರಂಗ ಪ್ರಾರಂಭವಾಗಿದೆ. ಇದನ್ನು ಬಳಸಿಕೊಂಡು ಭಗವದ್ಗೀತೆಯ ಒಳನೋಟ, ಹೊಸರಾಮಾಯಣ, ಮಹಾಭಾರತಗಳನ್ನು ಕೊಡಲು ಪ್ರಯತ್ನಿಸಬೇಕು" ಎಂಬ ಕಳಕಳಿ ಬರಗೂರರದ್ದಾಗಿದೆ. ಈ ನಿಟ್ಟಿನ ಆಲೋಚನೆಯ ಚಿತ್ರವು ಮುಂದೆ 'ಜನಪದ' ಹೆಸರನ್ನು ಹೊತ್ತು ತೆರೆಗೆ ಬರಲಿದೆ.

## ಸಿನಿಮಾದಿಂದ ಕೈ ಸುಟ್ಟಿತು

ಬರಗೂರರು ನಿರ್ಮಿಸಿದ ಚಿತ್ರಗಳಿಗೆ ಕನ್ನಡದ ಪ್ರಜ್ಞಾವಂತ ಪ್ರೇಕ್ಷಕ ತೋರಿಸಿದ ಪ್ರತಿಕ್ರಿಯೆ ಅತ್ಯಂತ ಉತ್ಸುಕವಾದುದು. ಅದರಂತೆ,

'ಜನುಮದಜೋಡಿ', 'ನಮ್ಮೂರಹುಡುಗ', 'ಜೋಡಿಹಕ್ಕಿ', 'ಕುರುಬನರಾಣಿಯಂಥ ಜನಪ್ರಿಯ ಸಿನಿಮಾಗಳ ಸಂಭಾಷಣೆ ಕೇಳಿದ ಪ್ರೇಕ್ಷಕನ ಸಂಭ್ರಮವ ಅಪಾರವಾದುದು.

'ಕರಡೀಪುರ' ಚಿತ್ರ ಲೀಡ್ಸ್‌ಗೆ ಆಯ್ಕೆಯಾದ ಸಂದರ್ಭದಲ್ಲಿ ಇಂದಿನ ಉನ್ನತ ಶಿಕ್ಷಣ ಸಚಿವರಾದ ಡಾ: ಜಿ. ಪರಮೇಶ್ವರ ಅವರು ಅಭಿನಂದಿಸಿ ಮಾತನಾಡುತ್ತಾ "ಬರಗೂರರು ಅತ್ಯಂತ ಸರಳ. ಇಂದು ತುಮಕೂರಿನ ಚರಿತ್ರೆಯಲ್ಲಿ ಹೊಸ ಪುಟವನ್ನು ನಾವು ನೀವುಗಳೆಲ್ಲ ಸೇರಿ ಬರೆಯುತ್ತಿದ್ದೇವೆ ಎಂದುಕೊಳ್ಳುತ್ತೇನೆ. ಒಬ್ಬ ಯುವಕ ಶಿರಾ ತಾಲ್ಲೂಕಿನಲ್ಲಿ ಹುಟ್ಟುತ್ತಾನೆ, ಮಧುಗಿರಿ ತಾಲ್ಲೂಕಿನಲ್ಲಿ ಮದುವೆಯಾಗುತ್ತಾನೆ, ಬೆಂಗಳೂರಿನಲ್ಲಿ ನೆಲೆಸುತ್ತಾನೆ; ಕರ್ನಾಟಕದಲ್ಲಿ ಅಷ್ಟೇ ಅಲ್ಲ ಇಡೀ ರಾಷ್ಟ್ರ ಮತ್ತು ಅಂತರ್ ರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡುತ್ತಾನೆ. ಅಂದ್ರೆ ಅದು ತುಮಕೂರಿನ ಎಲ್ಲಾ ಜನರಿಗೂ ಹೆಮ್ಮೆ ತರುವ ವಿಷಯ. ಇಂದು ಲೀಡ್ಸ್‌ಗೆ ಬಹಳ ಜನ ಹೋಗ್ತಾರೆ. ಅವರಿಗೆ ಯಾರು ಈ ರೀತಿ ಅಭಿನಂದನೆಗಳನ್ನು ಸಲ್ಲಿಸಲ್ಲ, ಆದರೆ, ಹೀಗೆ ನಮ್ಮ ಸಂಸ್ಕೃತಿ ತೆಗೆದುಕೊಂಡು ಲಂಡನ್‌ಗೆ ಹೋಗ್ತಾರಂದ್ರೆ ನಾವು ನೀವು ಎಲ್ಲರೂ ಸೇರಿ ಅಭಿನಂದನೆ ಸಲ್ಲಿಸಬೇಕು.

ನಾನು ಮೊದ್ಲೆ ಹೇಳಿದಂತೆ ಇವರು ಅತ್ಯಂತ ಸರಳ ಜೀವಿ; ಚಿಂತನಾಕಾರ, ಸಮಾಜದ ಆಗು ಹೋಗುಗಳನ್ನು ನ್ಯೂನ್ಯತೆಗಳನ್ನು ಎತ್ತಿಹಿಡಿದು ಸಾಹಿತ್ಯ ರೂಪದಲ್ಲಿ ಪರಿಚಯ ಮಾಡಿಕೊಡ್ತಾರೆಂದರೆ ಅದು ಹೆಮ್ಮೆಯ ವಿಷಯ. ಒಬ್ಬ ಕನ್ನಡ ಅಧ್ಯಾಪಕನಾಗಿ ಕೊಡುವ ತೀರ್ಪನ್ನು ಮುಂದೆ ಸಾಹಿತ್ಯ ರೂಪದಲ್ಲೂ, ಚಿತ್ರ ರೂಪದಲ್ಲೂ ಚಿತ್ರಿಸುತ್ತಾರೆಂದರೆ ಅದು ಇನ್ನೂ ಹೆಮ್ಮೆಪಡಬೇಕಾದ ವಿಷಯ." ಎಂದು ಅಭಿಮಾನದಿಂದ ನುಡಿದಿದ್ದಾರೆ.

"ಬರಗೂರರು ಹತ್ತು ವರ್ಷಗಳಲ್ಲಿ ನಾಲ್ಕು ಚಿತ್ರಗಳನ್ನು ಮಾಡಿದ್ದಾರೆ. ಮನರಂಜನೆಗಾಗಿ ಅಲ್ಲ. ಸಮಾಜದಲ್ಲಿನ ಕೊಳಕು ನ್ಯೂನ್ಯತೆಗಳನ್ನು ತೊಳೆದು ಸರಿಪಡಿಸಲು. ಆದರೆ ಇಂಥ ಒಂದೆರಡು ಸಿನಿಮಾ ಮಾಡಿ ಸಾಲದಿಂದ ಕೈಯನ್ನೂ ಸುಟ್ಟುಕೊಂಡಿದ್ದಾರೆ. ಇವರು ಮನಸ್ಸು ಮಾಡಿದ್ದರೆ ಹಣ ಸಂಪಾದಿಸಬಹುದಿತ್ತು. 'ಜನುಮದ ಜೋಡಿ'ಯಂತಹ ನಾಲ್ಕೆಂಟು ಚಿತ್ರಗಳಿಗೆ ಸಂಭಾಷಣೆ ಬರೆದಿದ್ದರೆ ಅಪಾರ ಹಣ ಗಳಿಸಬಹುದಿತು. ಆದರೆ,

ಇದಾವುದನ್ನೂ ಅವರು ಮಾಡದೆ ಸಮಾಜಿಕ ಕಳಕಳಿಯನ್ನು ತೋರಿದ್ದಾರೆ." ಎನ್ನುತ್ತಾರೆ 'ಫಿಲ್ಮ್ ಛೇಂಬರ್ಸ್'ನ ಮಾಜಿ ಅಧ್ಯಕ್ಷರಾದ ಆರ್. ಲಕ್ಷ್ಮಣ್ ಅವರು.

**ಕರುಳ ಕಣ್ಗಳಿಂದ**

ಬಂಡಾಯ ಸಾಹಿತ್ಯ ಸಂಘಟನೆ ಸಂದರ್ಭಗಳಲ್ಲಿ ಸಹಭಾಗಿತ್ವ ವಹಿಸಿದ ಚಂಪಾ ಅವರ ಬರಗೂರರನ್ನು ಕುರಿತು " ಈ ಹದಿನೈದು ಹದಿನಾರು ವರ್ಷದೊಳಗೆ ಸಂಘಟನೆಗೆ ಒಂದು ರೀತಿ ಬೆನ್ನೆಲುಬಾಗಿ ಉಳಿದರು. ಅವರ 'ಸಿದ್ಧತೆ' ಕವಿತೆ ಒಂದು ರೀತಿಯ. ಪರ್ಸನಲ್ ಮ್ಯಾನಿಸೆಸ್ಟೋ ಆ ರೀತಿಯೊಳಗೆ ಅವರು ಬದುಕುತ್ತಿರುವುದನ್ನು ನೋಡಿದ್ದೇವೆ. ಅವರ ಕಾಳಜಿಗಳು ಮತ್ತು ಸಾಹಿತ್ಯಶ್ರದ್ಧೆ, ಭಾಷೆಯ ಕನಸುಗಾರಿಕೆ ಇವೆಲ್ಲಾ ಬೇರೆ ಬೇರೆ ಆಯಾಮಗಳಲ್ಲಿ ಘನೀಭೂತವಾಗಿವೆ. ಅವರು ಕತೆಯನ್ನೋ, ಕವಿತೆಯನ್ನೋ, ಕಾದಂಬರಿಯನ್ನೋ ಬರೆಯಲಿ ಅದನ್ನು ಓದಿದರೆ ಓಹೊ ! ಇದು ಬರಗೂರರು ಬರೆದಿರುವಂತಹದ್ದು, ಅನ್ನಿಸುವ ರೀತಿಯೊಳಗೆ ಇರುತ್ತದೆ. ಒಂದು ವಿಶಿಷ್ಟವಾದ ಮಾಗುವಿಕೆಯನ್ನು ಅವರ ಬರಹದಲ್ಲಿ ನಾವು ಕಾಣುತ್ತೇವೆ. ಒಮ್ಮೊಮ್ಮೆ ನನಗನಿಸುತ್ತದೆ ಬಹುಶ: ತಮ್ಮ ಸಾಲುಗಳ ನಡುವೆ ಅವಶ್ಯಕತೆ, ಅವಶ್ಯಕತೆಗಿಂತ ಹೆಚ್ಚಾಗಿ 'ಬರಗೂರರತನ'ವನ್ನು ನಾವು ಕಾಣುತ್ತೇವೆ" ಎನ್ನುವ ಮಾತುಗಳು ಬರಗೂರರ ಬದುಕು ಮತ್ತು ಬರಹವನ್ನು ಕರುಳ ಕಣ್ಣಿಂದ ನೋಡಿದಂತಿದೆ ಎನಿಸುತ್ತದೆ.

ಐ.ಎಂ. ವಿಠಲಮೂರ್ತಿಯವರು "ಬರಗೂರರ ಇಂಟಿಗ್ರಿಟಿಯ ಬಗ್ಗೆ ಹೇಳುವುದಾದರೆ ಯಾವುದೇ ಸರ್ಕಾರಿ ಹಣ ಕೊಟ್ಟರೆ ಅದು ಕರಾರುವಕ್ಕಾಗಿ ಖರ್ಚುಮಾಡಿ ಲೆಕ್ಕ ಇಟ್ಟುಕೊಡುವ ಸಾಹಿತಿ, ಆಡಳಿತಗಾರ ಅಂದರೆ ತಪ್ಪಾಗಲಾರದು. ಯಾವುದೇ ಕಾರ್ಯಕ್ರಮ ಮಾಡಬೇಕಾದರೂ ಕೂಡ ಅವರದು ಆರ್ಥಿಕ ಶಿಸ್ತು" ಎನ್ನುವಲ್ಲಿ ಬರಗೂರರ ಪ್ರಾಮಾಣಿಕತೆ ಎದ್ದು ಕಾಣುತ್ತದೆ. ಇಂತಹದ್ದೇ ಅನುಭವ ಆರ್.ವಿ. ಭಂಡಾರಿ ಅವರದು. "ನಾನು ಅಕಾಡೆಮಿಯ ಕಛೇರಿಗೆ ಹೋದಾಗಲೆಲ್ಲಾ ಅವರ ಬಳಿ ಅನೇಕ ಯುವಜನ ವಿದ್ಯಾರ್ಥಿಗಳು ಸೇರುತ್ತಿದ್ದರು. ಅವರೆಲ್ಲಾ" ಏನೋ ನಿರ್ದೇಶನ, ಸಲಹೆ,

ಸಹಾಯ ಪಡೆಯಲೆಂದೇ ಬರುತ್ತಿದ್ದರು. ಅಂಥವರು ನಿರಾಶೆಗೊಂಡದ್ದು ಕಡಿಮೆ. ಒಂದಲ್ಲಾ ಒಂದು ದಾರಿ ತೋರುವುದು ಬರಗೂರರ ರೀತಿ. ಒಮ್ಮೊಮ್ಮೆ ಒಮ್ಮೊಮ್ಮೆ ಇದರಿಂದಾಗಿ ತಾವೇ ಸಂಕಟದಲ್ಲಿ ಸಿಕ್ಕಿಕೊಂಡದ್ದು ಉಂಟು. ಅದು ಅವಧಿ ಮುಗಿಯಲು ಕೆಲವು ತಿಂಗಳು ಇದ್ದಾಗಿನ ಸಂಗತಿ. ಹೀಗೆ ಬಂದ ಕಿರಿಯ ಸ್ನೇಹಿತರಿಗೆ ಸಹಾಯ ಮಾಡಿದ್ದಕ್ಕಾಗಿ ಬರಗೂರರ ಮೇಲೆ ಕೆಲವರು ಆರೋಪ ಮಾಡಿದರು. ಇಂತಹ ಆರೋಪ ಹೊತ್ತು ಅಕಾಡೆಮಿಯ ಆದ್ಯಕ್ಷಸ್ಥಾನದಲ್ಲಿ ಇರುವುದು ಸಲ್ಲದೆಂದು ಅವರು ತಮ್ಮ ಸ್ಥಾನಕ್ಕೆ ರಾಜಿನಾಮೆ ಕೊಟ್ಟರು. ಆಗ ಸರಕಾರ ಅಧ್ಯಕ್ಷಸ್ಥಾನಕ್ಕೆ ಬೇರೆಯವರನ್ನು ನೇಮಿಸಲು ಮುಂದಾಯಿತು. ಆದರೆ, ಆಗ ಇಡೀ ಅಕಾಡೆಮಿಯ ಸದಸ್ಯರೆಲ್ಲ ಬರಗೂರರು ಇಲ್ಲದ ಅಕಾಡೆಮಿಯಲ್ಲಿ ತಾವಿರುವುದಿಲ್ಲವೆಂದು ರಾಜಿನಾಮೆ ಕೊಟ್ಟರು. ಇದು ಬರಗೂರರು ಅವರ ವ್ಯಕ್ತಿತ್ವದ ಹಿರಿಮೆಗೆ ತೋರಿದ ಗೌರವವೇ ಆಗಿತ್ತೆಂದು ಬೇರೆ ಹೇಳಬೇಕಾದುದಿಲ್ಲ.

ಕಾಡೆಮಿಯ ಅಧ್ಯಕ್ಷರಾಗಿದ್ದಾಗಲೂ ವಿಶ್ವವಿದ್ಯಾನಿಲಯದ ಪಾಠ ತಪ್ಪಿಸುತ್ತಿರಲಿಲ್ಲ. ಬರಗೂರು ಅವರದು ಸೌಜನ್ಯಪೂರ್ಣ ನಡವಳಿಕೆ. ಸ್ಪಷ್ಟವಾದ ಸೈದ್ಧಾಂತಿಕ ತಿಳಿವು. ಖಾಸಗಿ ಮತ್ತು ಸಾರ್ವಜನಿಕ ಎಂಬ ಬದುಕಿನ ವ್ಯಕ್ತಿತ್ವ ಅವರದಲ್ಲ. ಸರಳ ಸಜ್ಜನಿಕೆಯ ಬದುಕು ಅವರದು. ಅವರು ಮಾಡುವ ಕಾರ್ಯದಲ್ಲಿ ತಜ್ಞ–ಚಿಂತನೆ–ಎಡಪಂಥೀಯ ಚಿಂತಕನ ಬದ್ಧತೆ ಇದೆ. ಇದು ಅವರ ಜೀವನ ವಿಧಾನ ನಮ್ಮ ಸಾಂಸ್ಕೃತಿಕ ಸಂದರ್ಭದಲ್ಲಿ ಕಾಣುವ ಅಪರೂಪದ ವ್ಯಕ್ತಿತ್ವ ಅವರದು ಎಂಬುದು ನನ್ನ ಅನುಭವದ ಮಾತಾಗಿದೆ" ಎನ್ನುತಾರೆ.

ತುಮಕೂರಿನ ಸಮಾರಂಭವೊಂದರಲ್ಲಿ ಜಿ.ಹೆಚ್. ನಾಯಕ ಅವರು ಸಹ ಬರಗೂರರ ಮೇಲಿನ ಅಕಾಡೆಮಿಕ್ ಆರೋಪವನ್ನು ಅಲ್ಲಗಳೆದರು. ಅವರೇ ಒಂದು ಘಟನೆಯನ್ನು ಉದಾಹರಿಸುತ್ತಾ "ಉಪಸಂಸ್ಕೃತಿಯ ವಿಷಯದಲ್ಲಿ ನಮ್ಮ ಕೆಲವು ಸಾಹಿತಿಗಳು ಅದನ್ನು ಟೀಕೆಮಾಡಲಾರಂಭಿಸಿದರು. ಆಗ ನಾನು ನೇರವಾಗಿ ಕೇಳಿದ್ದೇನೆ. ಯಾಕೆ ಟೀಕೆ ಮಾಡುತ್ತೀರಾ ಅಂತ? ಅಲ್ಲ ಅದು ಜನಪದ ಅಕಾಡೆಮಿಯವರು ಮಾಡಬಹುದಿತ್ತು ಅಲ್ವೆ? ಅದು ಮಾಡಬಹುದಾದ ಕೆಲಸವೇ ಮೊದಲು ಹೇಳಿ? ಹೌದು ಮಾಡಬಹುದು. ಮಾಡಬಹುದಾದ ಕೆಲಸ

ಜನಪದ ಅಕಾಡೆಮಿಯವರು ಮಾಡಿದರೂ ಒಂದೇ ಸಾಹಿತ್ಯ ಅಕಾಡೆಮಿಯವರು ಮಾಡಿದರು ಒಂದೇ. ಮಾಡಬಾರದ ನಿಲುವು ತಳೆದರೆ ಬೇರೆ ವಾದ ಮಾತನಾಡೋಣ. ಮಾಡಬಹುದಾದರೆ ಅವರು ಇವರು ಎನ್ನುವ ಭೇದ ಏಕೆ? ನಿಮಗೆ ಅಸೂಯೆ ಬಿಟ್ಟರೆ ಬೇರೆ ಏನಿಲ್ಲ. ನೇರವಾಗಿ ಮುಖದ ಮುಂದೇನೆ ಉಡ್‌ಲ್ಯಾಂಡ್ಸ್ ಹೋಟೆಲ್‌ನಲ್ಲಿ ಹೇಳಿದ್ದುಂಟು. ಆಮೇಲೆ ಬಾಯ್ಮುಚ್ಚಿದ್ದು ಬೇರೆ" ಎಂದು ಹೇಳಿದರು. ಇಂತಹ ಪ್ರಾಮಾಣಿಕತೆಯ ಬಗೆಗೆ ಅವರ ಸಮಕಾಲೀನ ಸಂದರ್ಭದ ಹಲವು ಕರುಳ ಕಣ್ಣುಳು ಇನ್ನೂ ಹತ್ತಾರು ಸಾಕ್ಷಿ ಹೇಳುತ್ತಿವೆ.

ಮೇಲೆ ಉದಾಹರಿಸಿದ ತೊಂದರೆಯಂತೆ ಅವರ ಕುಟುಂಬದೊಳಗೂ ಅನೇಕ ತೊಂದರೆಗಳಿದ್ದವು. ತುಮಕೂರಿನ ಸ್ನಾತಕೋತ್ತರ ಕೇಂದ್ರದ ವಿಚಾರ ಸಂಕಿರಣದಲ್ಲಿ ವೀಚಿಯವರು ಇದನ್ನು ಬಹಿರಂಗಪಡಿಸಿದರು. ರಾಮಚಂದ್ರಪ್ಪ ಮತ್ತು ಅವರ ಶ್ರೀಮತಿ ರಾಜಲಕ್ಷ್ಮಿಯವರು ಅನೇಕ ರೀತಿಯಲ್ಲಿ ಆರ್ಥಿಕ ಮುಗ್ಗಟ್ಟನ್ನು ಅನುಭವಿಸಿದ್ದಾರೆ. ಪಡಬಾರದ ತೊಂದರೆಗಳನ್ನೆಲ್ಲಾಪಟ್ಟಿದ್ದಾರೆ. ಇದನ್ನೆಲ್ಲಾ ಕಣ್ಣೆದುರು ತಂದುಕೊಂಡ ವೀಚಿ ಗದ್ಗದಿತ ಕಂಠದಲ್ಲಿ ವಿವರಿಸಿದರು. ಟೈಪಿಸ್ಟಾಗಿ ದುಡಿದು ಶ್ರೀಮತಿ ರಾಜಲಕ್ಷ್ಮಿಯವರು ಸಂಸಾರ ನಿರ್ವಹಿಸಿದ್ದನ್ನು, ಬರುವ, ಹೋಗುವ ಅತಿಥಿಗಳ ಸತ್ಕಾರ ಮಾಡಿದ್ದನ್ನು ಹೇಳಿದರು. "ಈಗ ಅಂತಹ ಆರ್ಥಿಕ ತೊಂದರೆಗಳಿಂದ ಪಾರಾಗಿರುವುದು ಅವರ ಹಿತೈಷಿಗಳಾದ ನಮಗೆಲ್ಲ ಹರ್ಷ ತಂದಿದೆ". ಎನ್ನುತ್ತಾರೆ ವೀಚಿಯವರು. ಆದರೆ ಇಂತಹ ಪರಿಸ್ಥಿತಿಯಿಂದ ಇನ್ನೂ ಹೆಚ್ಚು ಚೇತರಿಸಿಕೊಂಡಿಲ್ಲ ಎಂಬುದೇ ಕಣ್ಣೆದುರಿರುವ ಇಂದಿನ ಸತ್ಯ.

"ಇಂತಹ ಎಲ್ಲ ಸಂಕಷ್ಟಗಳ ನಡುವೆ ಎಂದೂ ಅಧಿಕಾರಕ್ಕಾಗಿ ಆಸೆಪಟ್ಟವರಲ್ಲ. ಅಧಿಕಾರದಲ್ಲಿ ಇರಲಿ, ಬಿಡಲಿ ಎಲ್ಲಿಯೇ ಅನ್ಯಾಯ ನಡೆದರೂ ಸಹಿಸಿಕೊಂಡವರು ಅಲ್ಲ. ಉದಾಹರಣೆಗೆ ಚರ್ಚುಗಳಲ್ಲಿ ಕನ್ನಡದ ಪ್ರಾರ್ಥನೆಗೆ ಒತ್ತಾಯಿಸುವರನ್ನು ತರಾಟೆಗೆ ತೆಗೆದುಕೊಳ್ಳುವ ಬರಗೂರರು, ಹಿಂದೂಗಳ ದೇವಾಲಯದಲ್ಲಿ ಸಂಸ್ಕೃತ ಶ್ಲೋಕಗಳು ಏಕೆ ಬೇಕು? ಏಸು ಕ್ರಿಸ್ತನಿಗೆ ಮಾತ್ರ ಕನ್ನಡ; ಶ್ರೀರಾಮ, ರಾಘವೇಂದ್ರರವರಿಗೆ ಏಕೆ ಸಂಸ್ಕೃತ? ಇದು ಯಾವ ಸೀಮೆಯ ನ್ಯಾಯ? ಎಂದು ಪ್ರಶ್ನಿಸುತ್ತಾರೆ" ಎನ್ನುವುದನ್ನು ಸನತ್‌ಕುಮಾರ

ಬೆಳಗಲಿ ಅವರು ಒಂದೆಡೆ ಹೇಳುತ್ತಾರೆ. "1994ರಲ್ಲಿ ಬಂಗಾರಪ್ಪನವರು ಮುಖ್ಯಮಂತ್ರಿಯಾದಾಗ ಬರಗೂರರು ಕನ್ನಡ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದರು. ಸಾಮಾನ್ಯವಾಗಿ, ಸರ್ಕಾರಿ ಸಂಸ್ಥೆಗಳ ಹುದ್ದೆಗಳಲ್ಲಿ ಅಲಂಕರಿಸಿದವರನ್ನು ಭೇಟಿ ಮಾಡದ ನಾನು ಆಕಸ್ಮಿಕವಾಗಿ ಬರಗೂರರನ್ನು ಒಮ್ಮೆ ಕಂಡೆ. ಅದೇ ಸಜ್ಜನಿಕೆಯಿಂದ ಮಾತನಾಡಿದರು. ಅವರ ಅಧಿಕಾರ ಅವಧಿಯಲ್ಲಿ ಚರಿತ್ರೆಯನ್ನೇ ನಿರ್ಮಿಸಿದರು. ಓಡಾಡಲು ನೀಡಿದ ಕಾರನ್ನು ವಾಪಾಸ್ಸು ಮಾಡಿ ಬಸ್ಸಿನಲ್ಲಿ ಬರುತ್ತಿದ್ದರು. ಅಕಾಡೆಮಿಗೆ ಸಿಗುವ ಹಣವೇ ಇಲ್ಲಿ ಯಾತಕ್ಕೂ ಸಾಲದು; ಹಾಗಿರುವಾಗ ಕಾರಿನ ಪೆಟ್ರೋಲ್ ಇತ್ಯಾದಿಗಳಿಗೆ ಇದ್ದ ಹಣ ಖರ್ಚುಮಾಡಿದರೆ ಉಳಿದ ಕೆಲಸ ಕಾರ್ಯಗಳು ಆಗವು. ಆದ್ದರಿಂದ ಖರ್ಚನ್ನು ಸರಕಾರವೇ ಕೊಡಬೇಕು. ಇಲ್ಲದಿದ್ದರೆ ಕಾರು ಬೇಡ ಎಂದು ಪಟ್ಟು ಹಿಡಿದು ಬಂಗಾರಪ್ಪನವರ ಮುಂದೆ ಕೂತರು; ಹೆಚ್ಚು ಅನುದಾನ ಬಿಡುಗಡೆ ಮಾಡಿಸಿಕೊಂಡರು. ಉಪಸಂಸ್ಕೃತಿ ಮಾಲಿಕೆ ಹಾಗೂ ಸಾಮಾಜಿಕ ಚಿಂತನ ಮಾಲೆ ಯೋಜನೆಯಲ್ಲಿ ನೂರಾರು ಪುಸ್ತಕಗಳನ್ನು ಪ್ರಕಟಿಸಿದರು." ಎನ್ನುವ ಬೆಳಗಲಿಯವರ ಮಾತುಗಳು ನಿಜಕ್ಕೂ ವಾಸ್ತವದ ಮಾತುಗಳಾಗಿವೆ.

ಇಂತಹುದೇ ಘಟನೆ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿರುವಲ್ಲಿಯೂ ಜರುಗಿದೆ. ಸದ್ಯ "ಕನ್ನಡದ ಕೆಲಸ ನನ್ನ ಕೆಲಸ" ಎಂದು ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸಿತ್ತಿದ್ದಾರೆ. ಸರ್ಕಾರ ಕೊಡುವ ಮನೆಯ ಬಾಡಿಗೆಯನ್ನು ತಿರಸ್ಕರಿಸಿದ್ದಾರೆ. ಸರ್ಕಾರ ಕೊಡುವ ಮನೆಯನ್ನು, ಸಂಬಳವನ್ನೂ ತಿರಸ್ಕರಿಸಿ ತಮ್ಮ ಹುದ್ದೆಯನ್ನು ನಿರ್ವಹಿಸಿತ್ತಿದ್ದಾರೆ. ಈ ಪ್ರಾಮಾಣಿಕತೆಗಳು ಪ್ರತಿಯೊಬ್ಬ ಕನ್ನಡಿಗನಿಗೂ ಬಂದರೆ ..!?

ಕನ್ನಡ ಸಾಹಿತ್ಯದಲ್ಲಿ ಮಠಗಳನ್ನು ಕಟ್ಟಿಕೊಂಡು ಪೀಠಾಧಿಪತಿಗಳಾಗಿ ಕುಳಿತವರ ದೃಷ್ಟಿಯಲ್ಲಿ ಬರಗೂರರು ಲೆಕ್ಕಕ್ಕಿಲ್ಲ. ಸಾಹಿತಿಯೆಂದು ತಮ್ಮಿಂದ ಸರ್ಟಿಫಿಕೇಟು ಪಡೆಯದ ಈತ ಎಂಥ ಸಾಹಿತಿ? ಎಂದು ಇವರು ಕದ್ದು ಮುಚ್ಚಿ ಲೇವಡಿ ಮಡುತ್ತಾರೆ. ಯಾರಿಗೂ ಕೇಳಿಸದಂತೆ ಮುಸಿ ಮುಸಿ ನಗುತ್ತಾರೆ. ಆದರೆ, ಈ ಸ್ವಯಂ ಸೃಷ್ಟಿತ ಪೀಠಗಳ ಜಗದ್ಗುರುಗಳು ನಡೆಸುವ ಅಕಾಡೆಮಿ ರಾಜಕಾರಣ, ಪ್ರಶಸ್ತಿ ಪಡೆಯಲು ನಡೆಸುವ ಕಸರತ್ತು ತಮ್ಮದೇ ಗುಂಪಿನವರಿಗೆ ಸೌಕರ್ಯಗಳು ದಕ್ಕಬೇಕು ಎಂದು ನಡೆಸುವ ಕುತಂತ್ರ ಹತ್ತಾರು. ಆದರೆ

ಬರಗೂರರು ಇವುಗಳನ್ನೆಲ್ಲ ಮೀರಿ ಯಾವ ಸಾಹಿತ್ಯದ ಪೀಠಾಧಿಪತಿಗೂ ಶರಣಾಗದೆ ಬೆಳೆದು ನಿಂತಿದ್ದಾರೆ.

ಹೀಗೆ, ಬರಗೂರರು ಯಾವುದೇ ಮುಲಾಜಿಗೂ ಒಳಗಾಗದವರು ಎನ್ನುವುದಕ್ಕೆ ಚೆನ್ನಣ್ಣ ವಾಲೀಕಾರರ ಅನುಭವದ ಮಾತುಗಳು ಇಲ್ಲಿ ಮುಖ್ಯವಾಗುತ್ತವೆ. "ವಚನಕಾರರಂತೆ ಬರಗೂರರು ನ್ಯಾಯ ನಿಷ್ಠುರಿ. ಕರ್ನಾಟಕ ಸಾಹಿಯ ಅಕಾಡೆಮಿ ಅಧ್ಯಕ್ಷರಾದಾಗಲೂ ಬಂಗಾರಪ್ಪನವರ ಜನ ವಿರೋಧಿ ಯೋಜನೆಗಳು ತಪ್ಪೆಂದು ತಿಳಿಸಿದವರು. ಈಗಲೂ ಸಹ ಅಷ್ಟೆ ಕನ್ನಡ ಭಾಷೆಯ ಜಾರಿಗೆ ಅಡ್ಡಿಯಾಗುವ ಅಧಿಕಾರಿಗಳ ವಿರುದ್ಧ ಕೆಂಡ ಕಾರಿದವರು.

ಇದರಂತೆ ಇದೇ 1999ರ ಮಾರ್ಚ್ ತಿಂಗಳು ಬಂಡಾಯ ಸಾಹಿತ್ಯ ಸಂಘಟನೆಯ ದಶಮಾನ ಸಮ್ಮೇಳನ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ನಡೆದಿತ್ತು. ಅದರ ಸಮಾರೋಪ ಸಮಾರಂಭದಲ್ಲಿ ನಾನು ಮಂಡಿಸಿದ ನಿರ್ಣಯ ಸಂಚಾಲಕರ ಸಭೆಯಲ್ಲಿ ನಿರ್ಣಯಕ್ಕೆ ಬಂತು. ಇನ್ನು ಮುಂದೆ ಬಂಡಾಯದ ಸಭೆ ಸಮ್ಮೇಳನಗಳಲ್ಲಿ ಹಳೆಯ ಮುಖಗಳು ಸಾಕು; ಹೊಸ ಮುಖಗಳಿಗೆ ಅವಕಾಶ ಕೊಡಬೇಕು. ಎನ್ನುವ ವಿಚಾರವನ್ನು ಚಂಪಾ ಒಪ್ಪಿಕೊಳ್ಳಲಿಲ್ಲ. ಅವರು 75% ಹಳಬರು, 25% ಹೊಸಬರೆಂದರು. ಆಗ 25% ಹಳಬರು, 75% ಹೊಸಬರೆಂದು ನಾನು ಮಂಡಿಸಿದೆ. ಚರ್ಚೆ ನಡೆದು ಬರಗೂರರು 50% ಹಳಬರು, 50% ಹೊಸಬರೆಂದರು. ಈ ನ್ಯಾಯಕ್ಕೆ ಸದಸ್ಯರು ಚಪ್ಪಾಳೆ ಹಾಕಿದರು. ಮಲಗಿದವರಿಗೆ ಎಬ್ಬಿಸಿದರು." ಎನ್ನುವ ಮಾತುಗಳು ಬರಗೂರರು ಯಾವುದೇ ಸ್ಥಾನದಲ್ಲಿರಲಿ, ಅಲ್ಲಿ ಹೊಸ ಪ್ರತಿಭೆಗಳಿಗೆ ಅವಕಾಶ ನೀಡಿ ಪ್ರೋತ್ಸಾಹಿಸುತ್ತಲೇ ಬಂದಿದ್ದಾರೆ ಎನ್ನುವುದಕ್ಕೆ ಸಾಕ್ಷಿಗಳಾಗಿವೆ.

ಇದಕ್ಕೆ ಪೂರಕವಾಗಿ ಮಲ್ಲಿಕಾಘಂಟಿಯವರ ಮಾತುಗಳು ಇನ್ನೂ ಹೆಚ್ಚು ಸಮರ್ಥನೆ ಒದಗಿಸುತ್ತವೆ. "ಸಾಹಿತಿಯೊಬ್ಬನಿಗೆ ರಾಜಕೀಯ ಪ್ರಜ್ಞೆ ಮತ್ತು ಬದ್ಧತೆ ಇರಬೇಕು ಎಂಬ ಸ್ಪಷ್ಟತೆಯೊಂದಿಗೆ ಅಧಿಕಾರಸ್ಥ ನೆಲೆಯಲ್ಲಿ ಭಾಗಿಯಾಗಿರುವ ಅವರ ಬದುಕು –ಬರಹ ಮೂಲ ಆಶಯದಿಂದ ವಿಮುಖಗೊಂಡಿಲ್ಲ. ಜನಪಂಥೆಯ ಅರಿವಿರುವ ವ್ಯಕ್ತಿಯೊಬ್ಬನ ಕೈಯಲ್ಲಿ ಸಾರ್ವಜನಿಕ ದುಡ್ಡಿನಿಂದ ನಡೆಯುವ ಸರ್ಕಾರ, ಸಂಸ್ಥೆಗಳು ಸಿಕ್ಕರೆ ಹೀಗೆ ಬೆಳೆಯಬಲ್ಲವು, ಕೆಲಸ ಮಾಡಬಲ್ಲವು" ಎಂಬುದನ್ನು ಬರಗೂರರು ಸಾಹಿತ್ಯ

ಅಕಾಡೆಮಿಯ ಅಧ್ಯಕ್ಷರಾಗಿದ್ದಾಗ ಮಾಡಿ ತೋರಿಸಿದರು. ಎಂದಿನ ತಮ್ಮ ಸರಳತನದಿಂದಲೇ ಅಕಾಡೆಮಿಗೆ ಹೊಸ ನೀರು ಹರಿದು ಬರುವಂತೆ ಮಾಡಿ, ನಾಡಿನ ತುಂಬಾ ಸಾಹಿತ್ಯ, ಸಾಂಸ್ಕೃತಿಕ ವಾತಾವರಣದ ಆರೋಗ್ಯಕರ ಸಮತೋಲನ ತಂದರು. ತಮ್ಮ ಜಡದೇಹದ ಸುತ್ತಳತೆ ಸಿಗದಂತೆ ನೋಡಿಕೊಂಡವರ ಮಧ್ಯೆಯಲ್ಲಿಯೇ ಬೆವರ ಕಂಪು ಉಳಿಯುವಂತೆ; ಬೆವರ ಹರಿಸಿ ಹರಿಸಿ ಹಗುರ ದೇಹಿಗಳಾದವರ ಬದುಕಿನ ಬಗ್ಗೆ ಮೊಟ್ಟ ಮೊದಲಿಗೆ ಗ್ರಂಥಸ್ಥ ದಾಖಲೆ ಮಾಡಿಸಿದರು. ಹಿರಿ ಕಿರಿಯರೆನ್ನದೆ, ಎಲ್ಲ ಜಾತಿ ಜನಾಂಗಗಳ, ವಿಚಾರವಂತರನ್ನೆಲ್ಲ ಅಕಾಡೆಮಿಯ ಒಳಗೆ ತಂದರು; ಜನಪದ ಕಾರ್ಯಕ್ಕೆ ತೊಡಗಿಸಿದರು.

ಕೆಲಸ ಮಾಡಲು ಅಧಿಕಾರ ಸ್ಥಾನಬಲವೇ ಬೇಕೆಂದಿಲ್ಲ ಎಂಬುದನ್ನು ಬರಗೂರರ ಬದುಕಿನ ಮೂಲಕ ಅರಿಯಬಹುದಾಗಿದೆ. "ಸಾಹಿತ್ಯ ಅಕಾಡೆಮಿಯ ಸಂದರ್ಭದಲ್ಲಿ ಕರ್ನಾಟಕದ ಉದ್ದಕ್ಕೂ ಒಂದು ಚೀಂತನಶೀಲ ಮನಸ್ಸುಗಳ ಮಹಾಪೂರವೇ ಹರಿದು ಬರುವಂತೆ ಯೋಜನೆಗಳನ್ನು ರೂಪಿಸಿ, ಸಾಹಿತಿ ಬಳಗಕ್ಕೆ ಕೆಲಸ ಹಚ್ಚಿದರು. ಅದರಿಂದ ಹೊರಬಂದ ತಕ್ಷಣ ಸಿನಿಮಾ ಮಾಧ್ಯಮದ ಮೂಲಕ ಅನಕ್ಷರಸ್ಥ ಜನರಿಗೆ ಅರಿವು ಮೂಡಿಸುವ ಗಂಭೀರ ಕೆಲಸ ಮಾಡಿದರು. ಕಲಾತ್ಮಕ, ವ್ಯಾಪಾರಿ ಎಂಬ ನೆಲೆಯಲ್ಲಿ ಕೆಲಸ ಮಾಡುವವರ ಮಧ್ಯೆದಲ್ಲೂ ತಮ್ಮ ಆರೋಗ್ಯಕರ ಆಯಾಮಗಳನ್ನು ಕಾಪಾಡಿಕೊಂಡರು." ಎನ್ನುವ ಮಾತುಗಳು ಬರಗೂರರ ಸಂಘಟನಾ ಶಕ್ತಿ ಮತ್ತು ಕ್ರಿಯಾಶೀಲತೆಯನ್ನು ಸೂಚಿಸುತ್ತವೆ.

ಬಂಡಾಯ ಸಂದರ್ಭದಲ್ಲಿ ಯಾವುದೇ ಬರಹಗಾರರನ್ನು ಸಂದರ್ಶಿಸಿದರು ಬರಗೂರರ ಬಗೆಗೆ ಇದೇ ಅಭಿಪ್ರಾಯ ನೀಡುತ್ತಾರೆ ಉದಾ: ಸತ್ಯಾನಂದ ಪಾತ್ರೋಟರವರು "ಬರಗೂರರು ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಹೊಸ ನೋಟಗಳಿಂದ, ಈ ಹಿಂದಿನ ಸಾಹಿತ್ಯಕ ನೆಲೆಗಳಿಗಿಂತ ಭಿನ್ನ ಆಲೋಚನೆಗಳಿಂದ ಶ್ರೀಮಂತಗೊಳಿಸಿದವರು. ಸಂಘಟನೆಯ ಜೊತೆ ಜೊತೆಗೆ ಸಮಾಜದ ಎಲ್ಲ ವರ್ಗದ ಸುಪ್ತ ಪ್ರತಿಭೆಯನ್ನು ಜಾಗೃತಗೊಳಿಸಿದವರು. ಸಂಘಟನೆಯ ಜೊತೆ ಜೊತೆಗೆ ಸಮಾಜದ ಎಲ್ಲ ವರ್ಗದ ಸುಪ್ತಪ್ರತಿಭೆಯನ್ನು ಜಾಗೃತಗೊಳಿಸಿದರು. ಹಾಗೆಂದು, ಬಂಡಾಯ

ಸಾಹಿತ್ಯದಲ್ಲಿ ಲೋಪದೋಷಗಳೇ ಇಲ್ಲವೆಂದು ನನ್ನ ತೀರ್ಮಾನವಲ್ಲ. ವಚನ ಚಳವಳಿಯ ತರುವಾಯ ಸಂಘಟಿತ ಸಾಹಿತ್ಯ ಚಳವಳಿಯೊಂದು ರೂಪುಗೊಂಡದ್ದು ಬಂಡಾಯ ಸಾಹಿತ್ಯ ಸಂಘಟನೆಯ ಈ ಕಾಲದಲ್ಲಿಯೇ ಎಂಬ ಸತ್ಯವನ್ನು ಮರೆಯಬಾರದು. ಈ ಹಿನ್ನೆಲೆಯಲ್ಲಿ ಶ್ರಮ ಸಂಸ್ಕೃತಿಯ ಮೂಲದಿಂದ ನೂರಾರು ಜನ ಹೊಸ ಬರಹಗಾರರು ಬರುವಂತಾಯಿತು. ಇದರಲ್ಲಿ ಬರಗೂರರ ಶ್ರಮ ಬಹುಪಾಲು ದೊಡ್ಡದು ಎನ್ನುವ ಮಾತಿಗೆ ಬರಗೂರರ ಚಳವಳಿ ಪ್ರಜ್ಞೆಯೇ ಸಾಕ್ಷಿಯಾಗಿದೆ. ಇಂತ ಜನಪರ ಕಾಳಜಿಗೆ ಒಳಗಾದವರಲ್ಲಿ ಸುಂದರ್‌ರಾಜ್ ಅರಸು ಒಬ್ಬರು. ಇವರು ಹೇಳುವಂತೆ ಪ್ರೀತಿ ವಿಶ್ವಾಸಗಳಿಗೆ ಮತ್ತೊಂದು ಹೆಸರೇ ಬರಗೂರು ಇವರಲ್ಲಿನ ಪ್ರೀತಿ ಎಂತವರನ್ನು ಮುಗ್ಧರನ್ನಾಗಿಸುತ್ತದೆ.

ಒಮ್ಮೆ ಸುಮಾರು 22 ಜನ ಸಂಶೋಧನ ಸಹಾಯಕರು ತೊಂದರೆಗೆ ಸಿಲುಕಿದಾಗ ಹಿರಿಯಣ್ಣರಾಗಿ ನೆರವಿಗೆ ಬಂದವರು ಇವರೇ, 'ಎಯ್ ಯಾರ್‍ರಿ ನೀವು? ಏನ್ ಮಾಡ್ತಾ ಇದ್ದೀರಾ? ಬರಗೂರರ ಹೆಸರು ಹೇಳಿ ನನ್ನ ಕಾಲಿಗೆ ಬಿದ್ರೆ ಅವರಿಗೆ ಅವಮಾನ ಮಾಡಿದಂಗೆ. ನಿಮ್ಮ ಕೆಲಸ ಮಾಡೋಲ್ಲ ಹೋಗ್ರಿ' ಎಂದು ಕರ್ನಾಟಕದ ಅಂದಿನ ಮುಖ್ಯಮಂತ್ರಿಗಳಾದ ಬಂಗಾರಪ್ಪನವರು ರೇಗಿ ಒಳನಡೆದಾಗ, ನನ್ನ ಸ್ನೇಹಿತರೆಲ್ಲಾ ಒಂದೇ ಕ್ಷಣ ಟಸ್ಸ್ ಎಂದು ಕುಳಿತರು. ನಂತರ ಬರಗೂರರೇ ಮಾನ್ಯ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಸಂದರ್ಭವನ್ನು ವಿವರಿಸಿದರು. ಹತ್ತಾರು ವರ್ಷದಿಂದ ಹತಾಶರಾದ ನಮ್ಮನ್ನು ಕ್ಷಮಿಸುವಂತೆ ಹೇಳಿ ನಮ್ಮ ಕೆಲಸ ಸುಗಮವಾಗಲು ನೆರವಾದರು; ತಮ್ಮ ಪ್ರಯತ್ನದಲ್ಲಿ ಸಫಲರಾದರು. ನನ್ನ ಬದುಕಿಗೆ ದಾರಿಯಾದರು.

ಹೀಗಾಗಿ "ಅವರ ಆಲೋಚನೆಗಳನ್ನು ಕಂಡ ನಾನು ಸುಮಾರು ಬಾರಿ ಹೇಳಿದ್ದೇನೆ 'ನೀವು ಸಮಸ್ಯೆಗಳಲ್ಲಿ ಇರುವಾಗಲೇ ಹೆಚ್ಚುಕ್ರಿಯಾಶೀಲವಾಗಿರುತ್ತೀರಿ ಎಂದು'. ಕ್ರಿಯಾಶೀಲತೆಗೆ ಇದು ಒಂದು ಸವಾಲು. ಅವರ ಬದುಕಿನ ಯಾವುದೇ ಘಟ್ಟದಲ್ಲಿ ಅವರು ಸಾಧಿಸಿರುವ ಸಾಧನೆಗಳು ಅವರ ಸಂಕಷ್ಟಗಳಲ್ಲಿ ಎದುರಾದಾಗ ಬಂದಂತಹವು. ಎಲ್ಲರನ್ನು ಪ್ರೀತಿಯಿಂದ ಕಾಣುವ ಅವರ ಮನಸ್ಸು ಚಿತ್ರರಂಗದ, ಅದರಲ್ಲೂ ಕಾರ್ಮಿಕರ ಮೆಚ್ಚುಗೆಗೆ ಪಾತ್ರವಾದವು. ಅವರೇ ಮಾತನಾಡಿಕೊಳ್ಳುತ್ತಿದ್ದಂತೆ  ಇವರು ದೇವರಿದ್ದಂಗೆ, ಯಾರೊಂದಿಗೆ

ಕೆಟ್ಟದಾಗಿ ವರ್ತಿಸುವುದಿಲ್ಲ. ಬೈಯ್ಯುವುದಿಲ್ಲ. ಮತ್ತೆ ಬೇರೆ ನಿರ್ದೇಶಕ ರೀತಿ ಇವರಲ್ಲ. ಅಂದರೆ ಹೊಸ ಅನುಭವಗಳನ್ನು ನೀಡುವ ಬರಗೂರರೆಂದರೆ ಅವರಿಗೆ ಅಪಾರ ಗೌರವ" ಎನ್ನುತ್ತಾರೆ.

ಹೀಗೆ ಪ್ರೀತಿಯಿಂದಲೇ ಕೆಲವೊಮ್ಮೆ ಇವರಿಗೆ ತಿಳಿಯದೆ 'ನಾಯಕ'ರಾಗಿದ್ದು ಉಂಟು ಹೀಗೆ ಅನಾಯಾಸವಾಗಿ ಸಿಕ್ಕ ನಾಯಕಪಟ್ಟ ಹೇಗೆಂಬುದನ್ನು ಪುರುಷೋತ್ತಮ ಬಿಳಿಮಲೆಯವರು ಸ್ವಾರಸ್ಯಕರವಾಗಿ ಹೇಳುತ್ತಾರೆ." ಬರಗೂರು ರಾಮಚಂದ್ರಪ್ಪ ಅವರ ವೈಯಕ್ತಿಕ ಬದುಕಿನ ಬಗೆಗೆ ನನಗೆ ತಿಳಿದಿರುವುದು ತುಂಬಾ ಕಡಿಮೆ. ನಾನು ಮಂಗಳೂರು ವಿಶ್ವವಿದ್ಯಾನಿಲಯದಲ್ಲಿದ್ದಾಗ ಏನೋ ತೊಂದರೆಯಲ್ಲಿ ಸಿಕ್ಕಿ ಹಾಕಿಕೊಂಡಿದ್ದೆ. ಆಗ ಗೆಳೆಯರ ಸಲಹೆ ಮೇರೆಗೆ ಬರಗೂರರನ್ನು ಅವರ ವಿಭಾಗದಲ್ಲಿ ಭೇಟಿಯಾಗಿದ್ದೆ. ಇವರ ಬದುಕು ಮತ್ತು ಬರಹಗಳ ನಡುವೆ ವಿಶೇಷ ವ್ಯತ್ಯಾಸ ಇದ್ದಂತೆ ಕಂಡಿಲ್ಲ. ನಾನು ಹೊಸಪೇಟೆಯ ಎಸ್.ಎಸ್. ಹಿರೇಮಠರು ಮತ್ತು ರಹಮತ್ ತರೀಕೆರೆ ಅವರು ಅನೇಕ ಬಾರಿ ಬರಗೂರರ ಬರಹಗಳ ಬಗ್ಗೆ ಚರ್ಚಿಸುತ್ತಿದ್ದೆವು. ವಿಚಾರ ಸಂಕಿರಣ, ಕಮ್ಮಟಗಳಲ್ಲಿ ಅವರು ಮಾಡಿದ ಭಾಷಣ, ನೀಡಿದ ಒಳನೋಟಗಳ ಬಗೆಗೆ ತಕರಾರುಗಳನ್ನೆತ್ತುತ್ತಿದ್ದೆವು. ಹಾಗೆ ನೋಡಿದರೆ ಬರಗೂರರ ಪ್ರಭಾವಶಾಲಿ ಭಾಷಣ ಮತ್ತು ಪರಿಣಾಮಕಾರಿ ಬರಹಗಳಿಂದ ಪ್ರಭಾವಿತರಾದ ನಾವೆಲ್ಲ ಅವರನ್ನು ನಮ್ಮ ನಾಯಕರೆಂದೇ ಭಾವಿಸಿಕೊಂಡಿದ್ದೆವು. ಅವರನ್ನು ನಾಯಕತ್ವದ ನಿರಾಕರಣೆಯಲ್ಲಿಯೇ ನಾಯಕರಾಗಿ ಬೆಳೆದ ಅಪೂರ್ವ ವ್ಯಕ್ತಿತ್ವ ಅವರದು." ಎಂಬಿತ್ಯಾದಿ ಅಂಶಗಳನ್ನು ಗಮನಿಸಿದರೆ ಬರಗೂರರ ಮುಖಂಡತ್ವ ಅರಿವಿಗೆ ಬರುತ್ತದೆ.

ಬರಗೂರರ ವ್ಯಕ್ತಿತ್ವವನ್ನು ರಾಜಪ್ಪ ದಳವಾಯಿಯವರು ತುಂಬಾ ವಿಶಿಷ್ಟವಾಗಿ ಗ್ರಹಿಸಿದ್ದಾರೆ. ಅವರು "ಬರಗೂರು ರಾಮಚಂದ್ರಪ್ಪನವರದು ಒಂದು ಕರ್ನಾಟಕದ ಅದ್ಭುತ ವ್ಯಕ್ತಿತ್ವ; ವ್ಯಕ್ತಿ ಎಂದರೆ ಶಬ್ದಕ್ಕೆ ನಿಲುಕದ ವ್ಯಕ್ತಿ ವಿಶೇಷ, ಸಾಹಿತ್ಯ, ಸಂಸ್ಕೃತಿ, ರಂಗಭೂಮಿ, ಸಿನಿಮಾ, ಸಂಘಟನೆ, ಹೋರಾಟ, ಸ್ನೇಹ ನಿಷ್ಠರತೆ ಹೀಗೆ ಯಾವುದೇ ವಿಷಯ ಕುರಿತರೂ ಬರಗೂರರದು ವೈಶಿಷ್ಟಪೂರ್ಣ ವ್ಯಕ್ತಿತ್ವವಿದೆ." ಈತ ಯಾವಾಗಲೂ ಮುಲಾಜುಗಳ ಆಚೆಗಿನ ಮನುಷ್ಯ ಪ್ರೀತಿಯ ಕನಸುಗಾರ, ಸಜ್ಜನಿಕೆಯ ಸರಳಬದುಕಿನ ವಾಸ್ತವವಾದಿ.

ಅಪಾರ ಸಾಮಾಜಿಕ ಕಳಕಳಿಯ ನಡುವೆಯೂ ಔಚಿತ್ಯ ಕಳೆದುಕೊಳ್ಳದ ವಿವೇಚನಾಶೀಲ ಮನುಷ್ಯ, ಹುಸಿ ಕ್ರಾಂತಿಗಿಂತ ವಾಸ್ತವ ಬದುಕಿನ ಸ್ನೇಹಜೀವಿ. ಮನುಷ್ಯನ ಪ್ರೀತಿಯೊಂದೇ ಜೀವನದ ಧ್ಯೇಯವೆಂದು ನಂಬಿರುವ, ಮತ್ತು ಅಂಥ ನಂಬಿಕೆಯನ್ನೇ ಬದುಕಿ ತೋರಿಸುತ್ತಿರುವ ಸಾಟಿಯಿಲ್ಲದ ವ್ಯಕ್ತಿತ್ವ, ತುಮಕೂರು ಜಿಲ್ಲೆಯ ಸಿರಾ ತಾಲ್ಲೂಕಿನ ಬರಗೂರಿನಿಂದ ಬೆಳೆದು ಬಂದದ್ದೆಂದರೆ ಬರಸಿಡಿಲಿನ ದಿಗ್ಭ್ರಮೆ; ಅದು ಕನ್ನಡಿಗರ ಹಿರಿಮೆ.

ಬರಗೂರರು ತುಂಬಾ ಬಡತನದಿಂದಲೇ ತಮ್ಮ ಹೈಸ್ಕೂಲು ವಿದ್ಯಾಭ್ಯಾಸವನ್ನು ಮಾಡಿದರು. ಅವರು ಎಷ್ಟೋ ದಿನ ಒಂದೊತ್ತಿನ ಊಟಕ್ಕೂ ಕಷ್ಟಪಟ್ಟದ್ದುಂಟು. ತುಮಕೂರಿನ ಜೂನಿಯರ್ ಕಾಲೇಜ್ ಆವರಣದಲ್ಲಿ ಬಿದ್ದ ಕಟ್ಟಿಗೆ ಚೂರುಗಳನ್ನು ಸಂಜೆ ಕತ್ತಲಾದ ಮೇಲೆ ಕೈಚೀಲದಲ್ಲಿ ತುಂಬಿಕೊಂಡು ಒಯ್ದು, ಅನ್ನ ಬೇಯಿಸಿದ್ದು, ಅದರಲ್ಲಿ ಮೆಣಸಿನಕಾಯಿ ಕಿವುಚಿ ಊಟಮಾಡಿದ ಈ ಎಲ್ಲಾ ನೆನಪುಗಳನ್ನು ಅವರು ಹೇಳುತ್ತಿದ್ದರೆ ಕೇಳುತ್ತಿದ್ದವರ ಕಣ್ಣುಗಳು ಒಸರುತ್ತವೆ.

**ಕನ್ನಡದ ಬದುಕು**

ಬರಗೂರರು ತುಮಕೂರು ಸ್ನಾತಕೋತ್ತರ ಕೇಂದ್ರದ ಮುಖ್ಯಸ್ಥರಾಗಿರುವಾಗಲೇ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರೂ ಆಗಿದ್ದರು. ಜೊತೆಗೆ ಕರ್ನಾಟಕ ರಾಜ್ಯ ಚಲನಚಿತ್ರ ಪ್ರಶಸ್ತಿ ಆಯ್ಕೆ ಸಮಿತಿಗೆ ನಾಲ್ಕುಬಾರಿ ಸದಸ್ಯರು ಆಗಿದ್ದಾರೆ. ದೂರದರ್ಶನ ಸಲಹಾ ಮಂಡಳಿಯ ಸದಸ್ಯರಾಗಿದ್ದಾರೆ. ರಾಜ್ಯ ಚಲನಚಿತ್ರ ಭಂಡಾರದ ಸ್ಥಾಪಕ ಸದಸ್ಯರಾಗಿರುವುದಲ್ಲದೆ; ಇತ್ತೀಚೆಗೆ, ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಸಿಂಡಿಕೇಟ್‌ಗೂ ಸದಸ್ಯರೆಂದು ನೇಮಕಗೊಂಡಿದ್ದರು. ದೂರದರ್ಶನ, ಆಕಾಶವಾಣಿಗಳ ಆಯ್ಕೆ ಸಮಿತಿಗೂ ಸದಸ್ಯರಾಗಿದ್ದರು. ಅನೇಕ ಪತ್ರಿಕಾ ಸಲಹಾ ಸಮಿತಿಗೆ ಸದಸ್ಯರೂ, ಗಡಿನಾಡ ಕನ್ನಡ ಆಯೋಗದ ಅಧ್ಯಕ್ಷರು ಆಗಿ ನೇಮಕಗೊಂಡಿದ್ದಾರೆ.

ಗಮನಾರ್ಹವೆಂದರೆ, ಇವರು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದ ಸಂದರ್ಭದಲ್ಲಿ ತಂದ ಯೋಜನೆಗಳು, ಮುಖ್ಯವಾಗಿ 'ಸಂಸ್ಕೃತಿ ಉಪಸಂಸ್ಕೃತಿ' ಎನ್ನುವ ದೀರ್ಘ ಪ್ರಸ್ತಾವನೆಯನ್ನು ಒಳಗೊಂಡ 'ಉಪಸಂಸ್ಕೃತಿ

ಮಾಲೆ', ಮರೆಯಲಾರದ ಮಹತ್ವದ ಬರಹಗಾರರು, ಅಲ್ಲದೆ ಸಾಮಾಜಿಕ ಚಿಂತನಮಾಲೆ, ಗ್ರಾಮೀಣ ಸಂಸ್ಕೃತಿ ಪದಕೋಶ, ಕನ್ನಡ ಸಾಹಿತ್ಯ ಸಂಗಾತಿ, ಹಳ್ಳಿಯ ಅಧ್ಯಯನ, ಕಮ್ಮಟದ ಕೃತಿಗಳು ನೋಬಲ್ ಪ್ರಶಸ್ತಿ ವಿಜೇತರು ಎನ್ನುವ ಯೋಜನೆಗಳು ಸಹ ಇಂದಿನ ಅಧ್ಯಯನಕ್ಕೆ ಹೊಸ ನೋಟಗಳನ್ನು ತಂದವು.

ಇವೆಲ್ಲವುಗಳ ಮಧ್ಯೆ ಬರಗೂರರು ಜನಪರ ಕಾಳಜಿಯುಳ್ಳ ಆಡಳಿತಾಧಿಕಾರಿಯೆಂದು ಗುರುತಿಸಲ್ಪಟ್ಟಿದ್ದಾರೆ. ಒಂದು ಇಲಾಖೆ ಜನಮುಖಿಯಾಗಿ ಹೇಗೆ ಕಾರ್ಯನಿರ್ವಹಿಸಬೇಕೆಂಬುದನ್ನು ರೂಪಿಸಿಕೊಟ್ಟಿದ್ದಾರೆ. ಇವುಗಳ ಹಿಂದೆ ಇವರ ಬಂಡಾಯ ಮನೋಧರ್ಮ ಕಾರ್ಯನಿರ್ವಹಿಸಿದ್ದನ್ನು ಮರೆಯುವ ಹಾಗೆಯೇ ಇಲ್ಲ. ಕಾರಣ "ಬಂಡಾಯ ಸಂಘಟನೆ ಯಾವಾಗ ನನ್ನನ್ನು ವಾಪಸು ಬಾ ಎಂದು ಹೇಳುತ್ತದೋ, ಅಂದೇ ನಾನು ಅಕಾಡೆಮಿಯ ಸ್ಥಾನಕ್ಕೆ ರಾಜೀನಾಮೆ ಕೊಡುತ್ತೇನೆಂಬ" ಬದ್ಧತೆಯಿಂದ ಕಾರ್ಯನಿರ್ವಹಿಸಿದವರು. ಸದ್ಯ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದದ್ದು ಬರಗೂರರ ಜೀವನದ ಬಹು ಮುಖ್ಯ ಘಟ್ಟ. ಏಕೆಂದರೆ, ಈ ಮೂಲಕ ಇವರು ಅನುಷ್ಠಾನಕ್ಕೆ ತಂದ 2001ರ ಭಾಷಿಕ ಮತ್ತು ಶೈಕ್ಷಣಿಕ ವರದಿ ಇಂದು 'ಬರಗೂರರ ವರದಿ' ಎಂದೇ ಹೆಸರಾಗಿದೆ. ಇಂದಿನ ಸಂದರ್ಭ ಸಾಂಸ್ಕೃತಿಕ ಭೂಕಂಪನ ಸಂದರ್ಭ, ಕನ್ನಡ ಭಾಷೆ, ಸಂಸ್ಕೃತಿಗಳ ಸಂಧಿಗ್ದಕಾಲ. ಹುಸಿ ಸ್ವದೇಶೀಕರಣ ಹಾಗೂ ಹುಸಿ ಆಧುನಿಕತೆ ತಿಕ್ಕಾಟದ ನಡುವೆ ದೇಶಿ ಸಂಸ್ಕೃತಿ, ಭಾಷೆಗಳು ಅಪಾಯದ ಅಂಚಿನಲ್ಲಿವೆ. ಈ ಸಂದರ್ಭದಲ್ಲಿ ಬರಗೂರರು ಪ್ರಾಧಿಕಾರದ ಅಧಿಕಾರ ವಹಿಸಿಕೊಂಡಿರುವುದು ಮತ್ತು ತಮ್ಮ ವರದಿಯನ್ನು ಜನಮುಖಿಯಾಗಿಸಿರುವುದು ಚರಿತ್ರಾರ್ಹದಾಖಲೆ. ಈ ವರದಿ ಸಮಕಾಲೀನ ಸಂದರ್ಭದ ಒತ್ತಾಸೆಯಿಂದ ಹುಟ್ಟಿದ್ದಾಗಿದೆ. ಮುಖ್ಯವಾಗಿ ಈ ವರದಿ ನಮ್ಮ ಸಂದರ್ಭದ ಒಟ್ಟು ಶಿಕ್ಷಣ ಕ್ರಮದಲ್ಲಿ ಕನ್ನಡವನ್ನು ಭಾಷಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಹೇಗೆ ಅಳವಡಿಸಿಕೊಳ್ಳಬಹುದು ಎಂಬೆಲ್ಲ ಅಂಶಗಳನ್ನು ಒಳಗೊಂಡಿದೆ.

ಒಟ್ಟಾರೆ ಕನ್ನಡ ಸಂಸ್ಕೃತಿಯ ಮಹತ್ವ ಮತ್ತು ಭಾಷೆಯ ಕೆಲಸ ಕೇವಲ ಅಕ್ಷರಗಳನ್ನು ಉಳಿಸುವಂತಹದಲ್ಲ. ಕನ್ನಡ ಬದುಕನ್ನು ಉಳಿಸುವ ಕೆಲಸ

ಕರ್ನಾಟಕದ ಸಂಸ್ಕೃತಿಯನ್ನು ಉಳಿಸುವುದಾಗಿದೆ. ಈ ಜನರ ಬದುಕು ಉಳಿಯುವುದರಲ್ಲಿಯೇ ಕರ್ನಾಟಕದ ಸಾಂಸ್ಕೃತಿಕ ನೆಲಗಳೂ ಉಳಿಯುತ್ತವೆ. ಹಾಗಾಗಿ ಭಾಷೆ ಮತ್ತು ಜನರನ್ನು ಪ್ರತ್ಯೇಕವಾಗಿ ನೋಡದೇ ಇರುವ ಕೆಲಸ ಇಂದು ಆಗಬೇಕಾಗಿದೆ ಎನ್ನುವುದಾಗಿದೆ. ಇಲ್ಲಿ ಭಾಷೆ ಬದುಕಿ ಉಳಿಯುವ ಬಗೆ ಹೇಗೆ? ಇಲ್ಲಿನ ಸಂಸ್ಕೃತಿ ತನ್ನ ಸ್ಥಳೀಯ ವಿನ್ಯಾಸಗಳನ್ನು ಉಳಿಸಿಕೊಳ್ಳುವುದು ಹೇಗೆ? ಎನ್ನುವ ಪ್ರಶ್ನೆಗಳನ್ನು ಹಾಕಿಕೊಂಡು ಹುಡುಕಾಟಕ್ಕೆ ತೊಡಗಬೇಕಾಗಿದೆ ಎಂಬುದು ಬರಗೂರರ ಕಾಳಜಿ.

ಇಂತಹ ಎಲ್ಲಾ ಕ್ರಿಯಾತ್ಮಕ ಯೋಜನೆಗಳ ಹಿಂದೆ ಬರಗೂರರ ಮಾನವೀಯತೆ, ಜನಪರ ಕಾಳಜಿಗಳು ಕಾರ್ಯನಿರ್ವಹಿಸುತ್ತಿವೆ. ಆ ಮೂಲಕ ಬರಗೂರರ ಕಾರ್ಯವಿಧಾನ, ಸಾಧನೆ, ಚಿಂತನೆಗಳು ಇಂದು ಕನ್ನಡಿಗರಾದ ನಮ್ಮೆಲ್ಲರಿಗೂ ಆದರ್ಶವಾಗಿವೆ.

# ಬರಗೂರರ ಸಾಹಿತ್ಯ ಚಿಂತನೆ

## ಕಾವ್ಯ (ಕಾಂಟೆಸಾದಲ್ಲಿದ್ದಾಗಲೂ ಬರಿಗಾಲ ನಡಿಗೆಯ ಚಿಂತನೆ)

ಸಮಾಜದ ಕಟ್ಟಕಡೆಯ ಮನುಷ್ಯನನ್ನು ಕಾವ್ಯದ ವಸ್ತುವಾಗಿ ಉಳ್ಳ ಸಂದರ್ಭ ಕನ್ನಡದಲ್ಲಿ ತುಂಬಾ ಕಡಿಮೆ. ಇಂತಹ ಸಂದರ್ಭದಲ್ಲಿ ಪ್ರಜಾಪ್ರಭುತ್ವದ ರಕ್ಷಣೆ ಹಾಗೂ ವಿಸ್ತರಣೆಗೆ ಒಂದು ಆಯಾಮ ಬೇಕಿತ್ತು. ಯಜಮಾನ ಸಂಸ್ಕೃತಿಯ ವಿರುದ್ಧದ ಹೋರಾಟ ಅನಿವಾರ್ಯವಾಗಿತ್ತು. ಅನೇಕ ನಿರ್ಲಕ್ಷಿತ ಸಮುದಾಯಗಳು ಅದರ ನಿರೀಕ್ಷೆಯಲ್ಲಿದ್ದವು. ಅಂಥದರ ಫಲವೇ ಬಂಡಾಯ ಕಾವ್ಯ. "ಪ್ರತಿಯೊಬ್ಬ ಪ್ರತಿಭಾವಂತ ಕಲೆಗಾರನೂ ನಮ್ಮ ಕಾಲದ ದುಡಿಮೆಗಾರರ, ಸ್ವಾತಂತ್ರ್ಯ ಚಳುವಳಿಯ ಮಹತ್ವವನ್ನು ಗ್ರಹಿಸಬಲ್ಲವನಾದರೆ ಅವನು ತನ್ನ ಕಲಾಶಕ್ತಿಯನ್ನು ಬಹಳಷ್ಟು ಹೆಚ್ಚಿಸಿಕೊಳ್ಳಬಲ್ಲವನೆಂದು ದೃಢವಾಗಿ ಹೇಳಬಹುದು. ಆದರೆ, ಈ ವಿಚಾರಗಳು ಅವನಲ್ಲಿ ರಕ್ತಗತವಾಗಿ, ಅವರು ಅವುಗಳಿಗೆ ನಿಖರವಾದ ಅಭಿವ್ಯಕ್ತಿ ಕೊಡಬೇಕು" ಎನ್ನುವ ಪ್ಲೆಬನೊವ್ ಮಾತು ಇಲ್ಲಿ ಹೆಚ್ಚು ಪ್ರಸ್ತುತವಾಗುತ್ತದೆ. ಅಂಥ ದುಡಿಮೆಗಾರರ ಸ್ವಾತಂತ್ರ್ಯ ಚಳುವಳಿಯನ್ನು ಮತ್ತು ಅವರ ನಿಲುವುಗಳನ್ನು ಸಾಂಸ್ಕೃತಿಕ ಲೋಕದಲ್ಲಿ ದಾಖಲಾಗಿಸುವುದೇ ಬರಗೂರರ ಕಾವ್ಯದ ಮುಖ್ಯ ಉದ್ದೇಶ. ಅಲ್ಲದೆ ಬಂಡಾಯ ಮತ್ತು ಬದ್ಧತೆ ಇಲ್ಲಿನ ಒಟ್ಟು ಕಾವ್ಯಗಳ ಕ್ರಿಯಾಶೀಲತೆಯಾಗಿದೆ. ಅಲ್ಲದೆ ಬರಗೂರರ ಕಾವ್ಯಗಳು ಮ್ಯಾನಿಪೆಸ್ಟೊಗಳಿಂತಿರದೆ, ಭಾಷಣದ ಮಾದರಿಗಳಾಗದೆ ಅರ್ಥವಾಗದ ಅಂತರ್ಮುಖತೆಗಳಿಂತಿರದೆ ಇವೆರಡರ ನಡುವೆ ಹದಬೆರತು ಚಳವಳಿ ಮತ್ತು ಸಾಹಿತ್ಯ ನಿರ್ಮಾಣಕ್ಕೆ ಬೇಕಾದ ಕೊಂಡಿಗಳಾಗಿ ರಚನೆಗೊಂಡಂತಿವೆ.

### ಮರಕುಟಿಗ (1973)

1973ರಲ್ಲಿ ಪ್ರಕಟವಾದ 'ಮರಕುಟಿಗ' ಹಕ್ಕಿಯ ಪ್ರತಿಮೆ ಹೊಂದಿದ ಸಮರ್ಪಕ ಹಾಗೂ ಔಚಿತ್ಯ ಪೂರ್ಣಕೃತಿ ಈ ಸಂಕಲನದಲ್ಲಿ ಇಪ್ಪತ್ತೆಂಟು ಕವನಗಳಿವೆ. ನವ್ಯ ಚಳುವಳಿಯ ಕೊನೆಯ ಹೊತ್ತಿಗೆ ಪ್ರಕಟವಾದ ಸಂಕಲನವಿದು. ಹಾಗಾಗಿ, ಅದರ ಪ್ರಭಾವದಿಂದ ಮುಕ್ತವಾಗಿಲ್ಲ; ಅಂದ ಮಾತ್ರಕ್ಕೆ

ಇದು ನವ್ಯದ ಸಂಪೂರ್ಣ ಪಡಿಯಚ್ಚಲ್ಲ. ಹಾಗೆಯೇ, ಈ ಎಲ್ಲಾ ಮಾದರಿಗಳ ಜೊತೆ ಜನಸಾಮಾನ್ಯರನ್ನು ತಲುಪುವ ಹಲವು ಕವಿತೆಗಳು ಇಲ್ಲಿವೆ.

ಬಹುಮುಖ್ಯವಾಗಿ, ಈ ಸಂಕಲನವು "ಬದುಕಿನ ತಿರುವು ಮುರುವುಗಳಲ್ಲಿ ಪ್ರಜ್ಞೆಯ ಕೊಕ್ಕು ಟಕ ಟಕ ಸದ್ದು ಮಾಡುತ್ತಲೇ ಇರುವುದು, ಮತ್ತೊಮ್ಮೆ ಭರವಸೆಗಳನ್ನು ತುಂಬಿ ನವ ನವೋನ್ಮೇಷ ನಂಬಿಕೆಗಳ ನೆಲೆಯಿಂದ ದೇಶ, ಬದುಕು, ಪರಿಸರ, – ಮುಂತಾದವರನ್ನು ಅರ್ಥಪೂರ್ಣವಾಗಿ ಅನುಭವಿಸುವ, ಅಭಿವ್ಯಕ್ತಿಸುವ ತುಡಿತಕ್ಕೆ ಅನಿವಾರ್ಯತೆಯನ್ನು ಒದಗಿಸಿಕೊಟ್ಟಿದೆ." ಎನ್ನುವ ಬರಗೂರರ ಮಾತುಗಳನ್ನು ಒಪ್ಪಿಕೊಂಡಿದೆ.

ಇಲ್ಲಿನ ಕವಿತೆಗಳ ಪ್ರಧಾನ ಚಿಂತನೆ ಸಾಮಾಜಿಕ ವೈರುಧ್ಯಗಳ ದಾಖಲೆಗೆ ಸಂಬಂಧಿಸಿದೆ. ಅಲ್ಲದೆ, ಗ್ರಾಮೀಣ ಸಂವೇದನೆಗಳನ್ನು ಅಭಿವ್ಯಕ್ತಿಸುವಲ್ಲಿ ಪ್ರಧಾನವಾಗಿದೆ. ಉದಾಹರಣೆಗೆ, 'ಅಮ್ಮ', 'ಹಳ್ಳಿ', 'ನಾನು ಮತ್ತು ಲಕ್ಷ್ಮಿ', 'ಸಿದ್ಧತೆ' ಇತ್ಯಾದಿ ಕವಿತೆಗಳು ಈ ಮಾತಿಗೆ ಸಾಕ್ಷಿ. ಇಲ್ಲೆಲ್ಲ ಬದುಕು ಬರೀ ಸಿದ್ಧತೆಯೆನ್ನುವ ಭಾವನೆಯೇನಿಲ್ಲ. ಕನಸು ಮತ್ತು ವಾಸ್ತವಗಳ ಅರ್ಥವನ್ನು ಸರಿಯಾದ ಕ್ರಮದಲ್ಲಿ ಗ್ರಹಿಸಲಾಗಿದೆ. ದಟ್ಟ ರಾಜಕೀಯ ಪ್ರಜ್ಞೆಯನ್ನು ಕುರಿತು ವಿಚಾರ ಮಾಡಲಾಗಿದೆ; 'ಭಸ್ಮಾಸುರ' 'ಜೈ ಮಿನಿ ಭಾರತ' 'ಬೆಂಗಳೂರು' ಎನ್ನುವ ಕವನಗಳ ಅಭಿವ್ಯಕ್ತಿಯಲ್ಲಿ ಇದು ಸಾಧ್ಯವಾಗಿದೆ. ಇಲ್ಲೆಲ್ಲ ಪುರಾಣ ಪ್ರಸಂಗಗಳನ್ನು ಸಮಕಾಲೀನ ಸಂದರ್ಭಕ್ಕೆ ಒಗ್ಗಿಸಿಕೊಳ್ಳುವ ಕಲೆಗಾರಿಕೆ ಮೆಚ್ಚುವಂತಹದ್ದು. ಇಂದು ವೈರುಧ್ಯಗಳನ್ನು ಮೀರಬೇಕಾದ ಅನಿವಾರ್ಯತೆಗಳು ನಮ್ಮೊಳಗೆ ಸೃಷ್ಟಿಯಾಗಿವೆ. "ಸಾಹಿತ್ಯ ಸೃಷ್ಟಿಯೊಂದೇ ಬಂಡಾಯ ಸಾಹಿತ್ಯ ಚಳುವಳಿಯ ಮುಖ್ಯಗುರಿಯಲ್ಲ. ಅಸಮಾನತೆ ಅನಕ್ಷರತೆಗಳಿಂದ ಮುಕ್ತವಾದ ಬದುಕೇ ಸ್ವತ: ಸೃಜನಶೀಲವಾದ ಗುಣಗಳನ್ನು ಹೊಂದಿರಬೇಕು. ಈ ಮೂಲಕ ನಾವು ಮೊದಲು ಮನುಷ್ಯರಾಗಬೇಕು ಈ ರೀತಿ ಮನುಷ್ಯರಾಗುವುದೆಂದರೆ ಕಲಾಕಾರನಾಗುವುದು. ಕಲಿಯಾಗುವುದು ಎಂದೆ. ಅರ್ಥ." ಎಂಬ ಬರಗೂರರ ಮಾತನ್ನು ಗಮನಿಸಿದರೆ, ಕಲೆಯ ಸಾರ್ಥಕತೆ ಇರುವುದೇ ಇಲ್ಲಿ ಎನ್ನಬಹುದು. ವ್ಯಕ್ತಿ ತನ್ನ ಎಲ್ಲ ದೋಷಗಳನ್ನು ತಿದ್ದಿಕೊಂಡು 'ಮನುಷ್ಯ'ನಾಗುವ ಕಡೆ ತೊಡಗುವುದೇ ಮುಖ್ಯವಾಗುತ್ತದೆ. ಹೀಗೆ ಮನುಷ್ಯನಾಗುವ ವ್ಯಕ್ತಿಯ ಬದುಕಿನ ತಿರುವು ಮುರುವಿನಲ್ಲಿ ಕಟುಕಿ ಎಚ್ಚರಿಸುವ

ವಾಸ್ತವ ಪ್ರಜ್ಞೆಯ ಕೊಕ್ಕು ಬೇಕಾಗುತ್ತದೆ. ಅದರ ಎಚ್ಚರದಿಂದಲೇ ಬದುಕಿನ ವೈರುಧ್ಯಗಳನ್ನು ಮೀರಬೇಕಾಗುತ್ತದೆ. ತನ್ನತನದಲ್ಲಿಯ ದೋಷಗಳನ್ನು ಹುಡುಕಿ ಹೊಸ ಸಿದ್ಧತೆಯ ಶೋಧಕ್ಕೆ ಅಥವಾ ನಿರ್ಮಾಣದ ಆಶಯಕ್ಕೆ ತೊಡಗಿಕೊಳ್ಳಬೇಕೆಂಬುದೇ ಬರಗೂರರ ಇಲ್ಲಿಯ ಮುಖ್ಯ ಪ್ರತಿಪಾದನೆ.

"ಮಹಾಶಯರೆ
ಹಿಡಿದ ಗುದ್ದಲಿ ಬಿಡುವುದಿಲ್ಲ
ನಾನು ಹುಟ್ಟಿದಕ್ಕೆ ನಿಮಗೆ ತೊಂದರೆಯ ತಂತಿ
ತಗುಲಿ ತಲ್ಲಣವಾಗದಿರಲೆಂದು
ನಾನೇ
ಆರು ಮೂರಡಿಯ ಗುಂಡಿ
ತೆಗೆಯುತ್ತೇನೆ.
ಇಟ್ಟಿಗೆ ಸುಟ್ಟು ಚಟ್ಟ ಕಟ್ಟಿ
ಇಟ್ಟಿರುತ್ತೇನೆ.
ನೆರಳಿಗೆಂದು ಗುಂಡಿಯಬಳಿ
ಸಸಿಯೊಂದ ನೆಟ್ಟಿರುತ್ತೇನೆ."

ಇರುವವರೆಗೆ ನೆಟ್ಟಗಿರುತ್ತೇನೆ.

ಎನ್ನುವಲ್ಲಿ ಹುಸಿಹೋಗುವ ಬದುಕಿನಲ್ಲಿ ಬಿಡದ ಸಿದ್ಧತೆಯಿದೆ. ಅಸಮಾನತೆಯ ವಿರುದ್ಧ ಹೋರಾಡುವ ಅಚಲ ನಿರ್ಧಾರವೂ ಆಗಿದೆ.

## ನೆತ್ತರಲ್ಲಿ ನೆಂದ ಹೂವು (1983)

ಈ ಸಂಕಲನ ಪ್ರಕಟವಾಗುವ ಹೊತ್ತಿಗೆ ಬಂಡಾಯ ಸಾಹಿತ್ಯದ ಸಂದರ್ಭ ಒಂದು ಹಂತ ತಲುಪುತ್ತಿತ್ತು. ಅಷ್ಟರಲ್ಲಾಗಲೇ ನವ್ಯದ ಪ್ರಖರತೆ ಉಳಿದಿರಲಿಲ್ಲ ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಬರಗೂರರೇ ಹೇಳುವಂತೆ "ಈ 'ಹೂವು' ನೆತ್ತರಲ್ಲಿ ನೆಂದ ಹೂವು. ಈ ಹೂವಿನ ಅರಳುವ ಕ್ರಿಯೆಯ ಹಿಂದೆ –ಹೊರಳಿ, ನರಳಿ ನೊಂದ ಬೆಂದ ಭಾವತೀವ್ರತೆ ತುಂಬಿದೆ. ನಾನು ನಿಂತನೆಲದ ನೋವು ನನ್ನಲ್ಲಿರುವ ಮನದ ನೋವೆ ಆದಾಗ, ಅಥವಾ ನನ್ನ ಮನದ ನೋವು ನಾನು ನಿಂತಿರುವ ನೆಲದ ನೋವೇ ಆದಾಗ

ಒಳಮೂಡಿ, ಹೊರಹೊಮ್ಮಿದ ಅನುಭವ ರೂಪವೇ ಈ ನೆತ್ತರಲ್ಲಿ ನೆಂದ ಹೂವು' ಹೂವು ಮತ್ತು ನೋವು ಒಂದೇ ಆಗಿ ಅಥವಾ ಒಂದರೊಳಗೊಂದಾಗಿ ಒಡಮೂಡುವ ಒತ್ತಡದ ಫಲ ನನ್ನ ಈ ಕವನ ಸಂಕಲನ" ಎಂದಿರುವ ಮಾತುಗಳು ಇಲ್ಲಿನ ಕಾವ್ಯದ ಸಮಗ್ರ ಆಶಯಗಳಾಗಿವೆ.

"ಬಂಡಾಯ ಸಾಹಿತ್ಯ ಸಂದರ್ಭ ಈ ನಿಸರ್ಗವನ್ನು ನೋಡುವುದೇ ಭಿನ್ನ ರೀತಿಯಿಂದ. ಇಲ್ಲಿ ಹಸಿರು ಹಸಿರಾಗಿ ಕಾಣುವುದಿಲ್ಲ. ಹಸಿರು ಆಶಯವಾಗಿ ಕಾಡುತ್ತದೆ. ಹಸುರಿನ ಸುಂದರತೆಯೊಂದೇ ಮುಖ್ಯವಾಗದೇ ಅದನ್ನು ಬೆಳಸಿದ ಶ್ರಮದ ಉಸಿರು ಮುಖ್ಯವಾಗುತ್ತದೆ. ಕೋಟೆ ಕೊತ್ತಲಗಳ ವೈಭವೀಕರಣದ ಬದಲಿಗೆ ಕಲ್ಲು ಹೊತ್ತ ಕಪ್ಪು ಮೈಗಳ ಬೆವರನ್ನು ಪ್ರೀತಿಸುತ್ತದೆ. ರಾಜ ಕಿರಿಟಕ್ಕೆ ದಿಗ್ಮೂಢರಾಗುವ ಬದಲು, ಎದುರಿಗೆ ನಡುಬಗ್ಗಿನಿಂತ ಪ್ರಜೆಯ ಮನಸ್ಥಿತಿಯ ಮೂಲಕ ಬದುಕನ್ನು ನೋಡುವ ಪ್ರಯತ್ನ ಸಾಗಿದೆ."[2]

ಪ್ಲಬೋ ನೆರೂಡನ ಮಾತುಗಳನ್ನು ಇಲ್ಲಿ ನೆನಪಿಸಿಕೊಳ್ಳಬೇಕಾಗುತ್ತದೆ. "ಸಾರಿನ ಕಲೆ ಅಂಟಿದ ಬಟ್ಟೆ ನಿರ್ಲಜ್ಜ ನಡವಳಿಕೆಳಿಂದ ಕೊಳಕಾದ ಶರೀರ, ಚರ್ಮದ ಸುಕ್ಕುಗಳು, ಪ್ರಜ್ಞೆ ಮತ್ತು ಕನಸುಗಳು, ನಮ್ಮ ಕಾಣ್ಕೆ ಮತ್ತು ಮುನ್ನೋಟಗಳು, ಜನಪದ ಕಥಾ ವಿಷಯ, ಪ್ರಾಣಿ ಪಕ್ಷಿ ಆಘಾತ, ರಾಜಕೀಯ ನಿಷ್ಠೆ, ನಿರಾಕರಣೆ, ಸಂದೇಹ, ಸಮಧಾನ ಮತ್ತು ಆರೋಪ ಇಂತಹ ಮಲೀನವಾದೊಂದು ಕಾವ್ಯ" ನಮ್ಮದಾಗಲೀ ಎನ್ನುತ್ತಾರೆ.

ಮೇಲಿನೆರಡೂ ಮಾತುಗಳು 'ನೆತ್ತರಲ್ಲಿನೆಂದ ಹೂ' ಕೃತಿಗೆ ನೇರವಾಗಿ ಅನ್ವಯಿಸುತ್ತವೆ. ಇಲ್ಲಿಯ ಬಹುತೇಕ ಕವಿತೆಗಳು ಶ್ರೇಣಿಕೃತ ಸಂಸ್ಕೃತಿಯೊಳಗೆ ಉಂಟಾದ ಮಾನಸಿಕ ಸಂದರ್ಭಗಳಾಗಿವೆ.

**ಗುಲಾಮ ಗೀತೆ (1990)**

ಸುಮಾರು ಇಪ್ಪತ್ತನಾಲ್ಕು ಕವನಗಳ ಸಂಕಲನ 'ಗುಲಾಮ ಗೀತೆ', ಸಂಕಲನದ ಹೆಸರೇ ಸೂಚಿಸುವಂತೆ ಸಮಾಜದ ಕಟ್ಟಕಡೆಯ ಮನುಷ್ಯನನ್ನು ಮೊಟ್ಟಮೊದಲು ಗ್ರಹಿಸುವ ಕ್ರಿಯೆ. ಪ್ಲಾಬೋ ನರೊಡ ಹೇಳುವ ಕೊಳಕಾದ ಶರೀರವನ್ನು ನಿರಾಕರಣೆಯನ್ನು ಪ್ರಧಾನವಾಗಿಸುವ ಸಾಂಸ್ಕೃತಿಕ ಎಚ್ಚರ ಇಲ್ಲಿದೆ.

'ಗುಲಾಮ' ಎನ್ನುವ ಶೀರ್ಷಿಕೆಯೇ ನಮ್ಮ ಕನ್ನಡ ಕಾವ್ಯ ಸಂದರ್ಭದಲ್ಲಿ ಹೊಸದು. ಅಂದರೆ, ಬರಗೂರರ ಚಿಂತನೆಯ ಹಿನ್ನೆಲೆಯಲ್ಲಿ ಈ ಮಾತು ಹೊಸದು. ಬಲಪಂಥೀಯ ರಾಜಕೀಯ ವಿಜೃಂಭಿಸುತ್ತಿರುವ ಸಂದರ್ಭದಲ್ಲಿ ಇಂತಹ ಚಿಂತನೆ ಮತ್ತು ಪುನರ್ ಮೌಲ್ಯೀಕರಣ ಅಗತ್ಯವಾದುದೇ ಆಗಿದೆ. ಏಕೆಂದರೆ, ಅತ್ಯಂತ ತಿರಸ್ಕೃತವೆಂದು, ಅಂಚಿಗೆ ತಳ್ಳಲ್ಪಟ್ಟ ಬಹುಸಂಖ್ಯಾತರನ್ನು ಕೇಂದ್ರಕ್ಕೆ ತರಬೇಕಾಗುತ್ತದೆ. ಈ ನಿಟ್ಟಿನ ಸಾಮಾಜಿಕ ಅಗತ್ಯದ ಕ್ರಿಯೆಯಲ್ಲಿ 'ಗುಲಾಮ ಗೀತೆ' ಸಂಕಲನದ ಜರೂರು ಅಡಗಿದೆ.

ಇಲ್ಲಿನ ಕಾವ್ಯ ಲೌಖಿಕತೆಯನ್ನು ಕಳೆದುಕೊಂಡು ಅಲೌಖಿಕ ನೆಲೆಯಲ್ಲಿ ನಿರ್ಮಾಣಗೊಳ್ಳುವ ಸೌಂದರ್ಯದ ನೆಲೆಯದಲ್ಲ. ಇಲ್ಲಿನ ಯಾವ ಸಮಸ್ಯೆಗಳೂ ಆಕಾಶಕ್ಕೆ ಮುಖಮಾಡಿದ ನಿರೀಕ್ಷೆಯನ್ನು ಇಟ್ಟುಕೊಂಡು ಕಾಯುವುದೂ ಇಲ್ಲ. ಬದಲಿಗೆ ಪ್ರಸ್ತುತ ಸಂದರ್ಭದೊಳಗಡೆಯೇ ಪರಿಹಾರವನ್ನು, ಪರ್ಯಾಯ ವ್ಯವಸ್ಥೆಯನ್ನು ನಿರ್ಮಿಸಿಕೊಳ್ಳಲು ಹಂಬಲಿಸುತ್ತವೆ. ಇಲ್ಲಿ ಸೌಂದರ್ಯ ಬರೀ ಆರಾಧನೆಯಲ್ಲಿ ಹೂತು ಹೋಗುವಂತಹದ್ದಲ್ಲ.

"ಅಲ್ಲೊಂದು ಮರ ಬೆಳೆದು
ಅಮರವಾಗುವ ಕನಸು ಕಾಣುತ್ತಿದ್ದಾಗ
ಅರಿವಿಲ್ಲದೆ ಅರಿದು ಹೋಯ್ತು" ಎನ್ನುವಲ್ಲಿರುವ ದುರಂತವನ್ನು ನಾವು ಗಮನಿಸಬೇಕಾಗುತ್ತದೆ.

ಇದು ಶೋಷಣೆಯ ತೀವ್ರತೆ ಮತ್ತು ಬಡತನದ ನಿರಂತರತೆಯನ್ನು ಧ್ವನಿಸುತ್ತದೆ. 'ಸ್ಮಶಾನ' ಎನ್ನುವ ಕವನವೂ ಸಹ

"ಇತಿಹಾಸ ಪ್ರಸಿದ್ಧ ಊರಿಗೆ ಹೋದೆ
ಆ ಊರಿನ ಕರಿಯ
ಹರಿದ ಬಾಳಿನ ಗೆಳೆಯ
ತೋರಿಸಿದ ಒಂದೊಂದೇ ಸ್ಥಳ
ಕನಸು ಕಲ್ಲೊಳಗೆ ಮಾಡಿದ ಮೂರ್ತಿ
ಭೂತ ಬೆಟ್ಟವಾದ ಕೋಟೆಯ ಕೀರ್ತಿ
ಸೀತೆ ಸ್ನಾನ ಮಾಡಿದ ಪುರಾಣ
ರಾಮ ತಂಗಿದ್ದ ಆವರಣ

ಎಲ್ಲ ನೋಡಿ ಕರಿಯನನ್ನು ಕೇಳಿದೆ;
ಈ ಊರಲ್ಲಿ ಸ್ಮಶಾನ ಎಲ್ಲಿದೆ

ನಿಟ್ಟುಸಿರು ಬಿಟ್ಟು ಕರಿಯ ಹೇಳಿದ

ನಮ್ಮ ಜೊತೆ ಓಡಾಗಿ ಈಗ ಎದುರ ನಿಂತಿದೆ" ಎಂದು ಹೇಳುವಲ್ಲಿ ನೋವು, ನಿರಾಸೆ, ಬಡತನಗಳ ದಟ್ಟ ಧ್ವನಿ ಎದ್ದುಕೇಳುತ್ತದೆ. ಮೊದಲೇ ಹೇಳುವಂತೆ ಇಲ್ಲಿರುವ ಕರಿಯ ಹರಿದ ಬಾಳಿನ ಗೆಳೆಯ. ಬದುಕೇ ಅವನಿಗೆ ಸ್ಮಶಾನವಾಗಿದೆ. ವಾಸ್ತವದ ಜೀವಂತ ಮುಷ್ಯನಿಗೂ ಸ್ಮಶಾನಕ್ಕೂ ವ್ಯತ್ಯಾಸಗಳಿರಬೇಕಿತ್ತು. ಆದರೆ ಹಾಗಾಗಿಲ್ಲ. ಮನುಷ್ಯನ ಬದುಕನ್ನೇ ಸ್ಮಶಾನವಾಗಿ ಮಾರ್ಪಡಿಸಿದೆ. ಇದು ಬದುಕಿನ ಕ್ರೂರ ದುರಂತ. ಇಂತಹ ಅಮಾನವೀಯ ನೆಲೆಯಿಂದ ಮಾನವೀಯನೆಲೆಗೆ ಸ್ಥಳಾಂತರಿಸುವುದೇ ಬಂಡಾಯ ಸಾಹಿತ್ಯ ಹಾಗೂ ಸಂಘಟನೆಯ ಪ್ರಮುಖ ಗುರಿ. ಇದು ಇಡೀ ಕವನ ಸಂಕಲನದಲ್ಲಿ ಮಡುಗಟ್ಟಿದೆ.

**ಮಗುವಿನ ಹಾಡು (1993)**

'ನೆತ್ತರಲ್ಲಿ ನೆಂದ ಹೂವು' ಸಂಕಲನದ ನಂತರ ಬರಗೂರರು 'ಮಗುವಿನ ಹಾಡು' ಸಂಕಲನ ಹೊರ ತರಲು ಒಂದು ದಶಕವನ್ನೇ ತೆಗೆದುಕೊಂಡಿದ್ದಾರೆ, ಇದೊಂದು ಮೌನ ಸಂಭವ. ಸುಟ್ಟು ಬೂದಿಯಾಗಿದ್ದ ಅಕ್ಷರಗಳು ಈ ಮೌನದಲ್ಲಿ ಮರು ಹುಟ್ಟುಪಡೆಯುತ್ತವೆ. ಈ ಮರು ಹುಟ್ಟೇ "ನನ್ನೊಳಗಿನ ಈ ಮಗು ಖಂಡಿತ ಕನ್ನಡದ ಮಗು. ಹೊಸಭಾಷೆಯೊಂದು ಹುಟ್ಟಬೇಕಾದರೆ ಮಗುವಾಗಬೇಕು; ಈ ಮಗು ಹೊಸತಾಗಿ ಆಡುವ ಭಾಷೆಗೆ ಇರುವ ಸಾಧ್ಯತೆಗಳು ಅಪಾರ. ಓಟಿನ ರಾಜಕೀಯಕ್ಕಾಗಿಯೇ ದೇವರು ಧರ್ಮಗಳ ಹೆಸರು ಎಚ್ಚರಿಸಿ ಹುಳುಬಿದ್ದ ಭಾಷೆಯನ್ನು ಹಾಗೇ ಮಾತಾಗಿಸುವವನು ಮನುಷ್ಯನಾಗುವುದಿಲ್ಲವಾದ್ದರಿಂದ ನಾವು ಮತ್ತೆ ಮಗುವಾಗಬೇಕು. ಮಾತುಬಿದ್ದು ಹೋದ ಅವಧಿಯಲ್ಲಿ, ಅನುಭವದಲ್ಲಿ ಹುಟ್ಟಿದ ಮೂಕ ಮಹಾಕಾವ್ಯದಿಂದ ಹೊಸ ಮಾತು ಹುಟ್ಟಿಸಬೇಕು; ಹೊಸಗೆರೆಗಳು ಮೂಡಬೇಕು ಇದು ಕಲಾವಿದರ ಕರ್ತವ್ಯ" ಬರಗೂರರ ಈ ಆರಂಭದ ಮಾತುಗಳು ಇಡೀ ಕವನಸಂಕಲನದ ಆಶಯಗಳಾಗಿವೆ.

ಈ ಮೌನ ಸಂದರ್ಭದಲ್ಲಿ ಹೊಸ ಮಾತುಗಳನ್ನು ಸಾಧ್ಯವಾಗಿಸುವ ಮಗುವಿನ ಮಾತುಗಳಲ್ಲಿ ಸಾಮರಸ್ಯದ ಧ್ವನಿಯಿದೆ. ಇದು ಬಂಡಾಯ ಕಾವ್ಯ ಪಡೆದುಕೊಂಡ ಹೊಸ ಆಯಾಮವೂ ಹೌದು. ಮಗು ಹುಟ್ಟಿ ಬರುವುದಕ್ಕೆ ಒಂದು ಸಮಸ್ಯೆ ಯಿದೆ. 'ಮಗುವಿನ ಹಾಡು' ಕವಿತೆ ಈ ಸಮಸ್ಯೆಯನ್ನು ಅಭಿವ್ಯಕ್ತಿಸುತ್ತದೆ.

"ಹೊಟ್ಟೆಯೊಳಗಿಲ್ಲ ಅಭಿಮನ್ಯು ಪಾಠ

ಚಕ್ರವ್ಯೂಹದ ಚಿತ್ರ ಅಚ್ಚೊತ್ತಿದೆ

ಒಳಹೊಕ್ಕು ಹೊರಬರದ ಒಳಸಂಚು ಸಾವಿಗೆ

ಯಾಕೆ ಹುಟ್ಟಲೆಂದೀಜೀವ ಬೆಚ್ಚುತ್ತದೆ" ಎಂದು ಪುರಾಣ ಪ್ರತಿಮೆಯ ಮೂಲಕ ವಾಸ್ತವತೆಯನ್ನು ಚಿತ್ರಿಸುವ ರೀತಿ ಮಹತ್ವವೆನಿಸುತ್ತದೆ. ' ಮನುಷ್ಯ ಬದುಕು, ಮತಧರ್ಮಗಳ ಸಂಕೋಲೆಗಳಲ್ಲಿ ಸಿಕ್ಕಿ ನರಳುತ್ತಿದೆ. ಇಂತಹ ಸಂಕೋಲೆಯಿಂದ ಬಿಡುಗಡೆ ಪಡೆಯುವುದಾದರೂ ಹೇಗೆ? ಎಂಬ ಸಂಕಟದ ಅಭಿಮನ್ಯುಗಳು ನಾವಾಗಿದ್ದೇವೆ.

ಇದರಂತೆ, ಇನ್ನೊಂದು ಮಗುವಿನ ಚಿತ್ರಣವಿದೆ. ಈ ಮಗುವು ಈಗಾಗಲೇ ಸಮಾಜದೊಳಗೆ ಬದುಕುತ್ತಿದೆ. ಆದರೆ ಇದರ ಬದುಕಿಗೆ ಸಂಕೋಲೆಗಳಿವೆ. ಅಭಿಮನ್ಯುವಿನಂತೆ ಇದೂ ಕೂಡಾ ಚಿಂತಾಕ್ರಾಂತವಾಗಿದೆ.

"ಯಾರ ಜೊತೆ ಮಾತನಾಡಲಿ

ಕಾಲಿಟ್ಟ ಕಡೆಯಲ್ಲಿ

ಹುಟ್ಟುತ್ತಿವೆ ಗೋಡೆಗಳು

ಕೋಮು ಕಲ್ಲುಗಳಲ್ಲಿ

ಸರ್ಪಸುತ್ತಿನ ಕೋಟೆ

ನಾಳೆ ಕಾಣುವುದೆಂತೂ

ಎಂದು ಪರಿತಪಿಸುವಲ್ಲಿಯೇ ನಿರಾತಂಕ ಬದುಕಿಗಾಗಿ ಸಾಮರಸ್ಯ ಬಯಸುತ್ತಿದೆ. ಈ ಸಾಮರಸ್ಯದ ಬದುಕನ್ನು ನಿರ್ಮಿಸಲು ಹುಟ್ಟುವ ಮಗು ಮತೀಯವಲ್ಲದ

ಹೊಸ ಮಾತನ್ನು ಹುಟ್ಟಿಸಬೇಕಾಗುತ್ತದೆ. ಈ ಮೂಲಕ ಎಲ್ಲಾ ಗೋಡೆಗಳನ್ನು ಕೆಡವಿ ಬಯಲನ್ನು ನಿರ್ಮಿಸಬೇಕಾಗುತ್ತದೆ. ಸ್ವಚ್ಛಂದತೆಯನ್ನು ಕಾಣಬೇಕಾಗುತ್ತದೆ ಎನ್ನುವ ಹಂಬಲದಲ್ಲಿ ಇಲ್ಲಿನ ಎಲ್ಲ ಕವನಗಳಿವೆ.

**ಚಿಂತಕ ಮತ್ತು ಸಂವೇದಕರ ನಡುವಿನ ಸಂಘರ್ಷ**

ಬಂಡಾಯ ಸಾಹಿತ್ಯಕ್ಕೆ ಕಾವ್ಯ ಮತ್ತು ಸಣ್ಣಕತೆ ಪ್ರಕಾರಗಳು ಬಹುಮುಖ್ಯ ಭಾಗಗಳು. ಈ ಎರಡು ಪ್ರಕಾರಗಳಿಂದಲೇ ಬಂಡಾಯ ತನ್ನ ವ್ಯಾಪ್ತಿಯನ್ನು ಅತಿಹೆಚ್ಚು ವಿಸ್ತರಿಸಿಕೊಂಡಿತು. ಇದರಿಂದ ನಾಟಕ, ಕಾದಂಬರಿ ಪ್ರಕಾರಗಳನ್ನು ಗೌಣವಾಗಿಸಬೇಕಿಲ್ಲ. ಆದರೂ ಸಹ ಈ ಸಂದರ್ಭದಲ್ಲಿ ದುಡಿವ ವರ್ಗವನ್ನು ನೇರವಾಗಿ ಅಭಿವ್ಯಕ್ತಿಸಲು ತುಂಬಾ ಅನುಕೂಲ ಕಲ್ಪಿಸಿದ್ದು ಕಾವ್ಯ ಮತ್ತು ಕತೆ ಎಂಬುದಲ್ಲಿ ಎರಡು ಮಾತಿಲ್ಲ. ಭಿನ್ನಭಿನ್ನಪ್ರದೇಶದ ಭಾಷಿಕ ವಲಯಗಳನ್ನು, ಅಲ್ಲಿಯ ಅನುಭವಗಳಿಗೆ ಅಳವಡಿಸುವ ಪ್ರಯೋಗ ಇಲ್ಲಿ ನಡೆಯಿತು. ಈ ಹಿನ್ನೆಲೆಯಲ್ಲಿ ಬರಗೂರರ ಕಥಾಲೋಕ ತುಂಬಾ ವಿಶಿಷ್ಟವಾದುದು.

**ಸುಂಟರ ಗಾಳಿ (1975**

ಹನ್ನೆರಡು ಕತೆಯುಳ್ಳ ಕಥಾ ಸಂಕಲನವಿದು. 1973ರಲ್ಲಿ; ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ಗಳಿಸಿಕೊಂಡಿತು. 'ಸುಂಟರಗಾಳಿ'ಯಲ್ಲಿ ಬರಗೂರರ ಸಾಮಾಜಿಕ ಕಳಕಳಿ ಅದ್ಬುತ ಅಭಿವ್ಯಕ್ತಿ ಪಡೆದಿದೆ. ವ್ಯಕ್ತಿಯ ಸ್ವಾತಂತ್ರ್ಯ ಮತ್ತು ಅಧಿಕಾರಗಳು ಬಂಡವಾಳಶಾಹಿ ನಿರ್ಮಿಸಿದ ವೃತ್ತದೊಳಗೆ ಬಂಧಿಯಾಗಿರುವುದರ ಬಗೆಗೆ ಬರಗೂರರ ದಿಟ್ಟ ಆಕ್ರೋಶವಿದೆ. ಏಕಕಾಲಕ್ಕೆ ಗ್ರಾಮ ಮತ್ತು ನಗರಗಳಲ್ಲಿ ವ್ಯಕ್ತಿ ವ್ಯವಸ್ಥಿತವಾಗಿಯೇ ತನ್ನ ಸ್ವಾತಂತ್ರ್ಯವನ್ನು ಕಳೆದುಕೊಳ್ಳುತ್ತಿದ್ದಾನೆ ಎಂಬುದೇ ಇಲ್ಲಿನ ಕತೆಗಳ ತಾತ್ವಿಕತೆಯಾಗಿದೆ.

'ನಗರ ಪ್ರದೇಶದಲ್ಲಿ ಬಂಡವಾಳಶಾಹಿಯ ಹಿಡಿತವಿದ್ದರೆ, ಗ್ರಾಮೀಣ ಪ್ರದೇಶದಲ್ಲಿ ಊಳಿಗಮಾನ್ಯರ ಹಿಡಿತವಿದೆ' ಎಂಬುದಕ್ಕೆ 'ಕ್ಷಾಮ' ಕತೆಯನ್ನು ಹೆಸರಿಸಬಹುದು. ಬಹುತೇಕವಾಗಿ ಇಲ್ಲಿನದು ಸಾಮಾಜಿಕ ಆಕ್ರೋಶವೇ ಆಗಿದೆ. ಜೊತೆಗೆ ಕೌಟುಂಭಿಕ ವಿಘಟನೆ ಸಾಮಾನ್ಯವಾಗಿದೆ. ಇಂಥ ವಿಘಟನೆಯಿಂದ ಭಾರತೀಯ ಕುಟುಂಬಗಳ ದುರಂತ ದಾಖಲೆಯಾಗಿ ಇಲ್ಲಿ 'ಮಳೆ' ಕತೆ ಬರುತ್ತದೆ. 'ಬೆಕ್ಕು' ಕತೆಯಲ್ಲಿ ಮಾತ್ರ ಧಾರ್ಮಿಕ ಮುಖವಾಡ ಧರಿಸಿದ ವ್ಯಕ್ತಿಯ

ತಲ್ಲಣಗಳನ್ನು ಕಾಣುತ್ತೇವೆ. ಒಟ್ಟು ಈ ಕಥಾ ಸಂಕಲನದ ಹಿಂದಿರುವ ತಾತ್ವಿಕ ನಿಲುವು 'ಸಾಮಾಜಿಕ ಅನ್ಯಾಯಗಳ ವಿರುದ್ಧ ಪ್ರತಿಭಟಿಸುವುದಾಗಿದೆ'. ಉಚ್ಚವರ್ಗದ ಕ್ರೌರ್ಯ, ಶೋಷಣೆ ಮೂಢನಂಬಿಕೆ, ಧಾರ್ಮಿಕ ಮುಖವಾಡಗಳ ಹಿಂದಿರಬಹುದಾದ ವಂಚನೆಗಳು ಈ ಕಥಾಸಂಕಲನದಲ್ಲಿ ಸೂಕ್ಷ್ಮವಾಗಿ ಅಭಿವ್ಯಕ್ತಿಸಲ್ಪಟ್ಟಿವೆ.

**ಬಯಲಾಟದ ಭೀಮಣ್ಣ (1997)**

ಹತ್ತು ಕತೆಗಳ ಸಂಕಲನವಿದು. ಇಲ್ಲಿಯ ಬಹುತೇಕ ಕತೆಗಳು 'ಕಪ್ಪುನೆಲದ ಕೆಂಪುಕಾಲು' (1991) ಕಥಾ ಸಂಕಲನದಲ್ಲಿವೆ. ಇದು ಮರುಮುದ್ರಣವಾಗಿ ಪಠ್ಯಪುಸ್ತಕವಾಗುವ ವೇಳೆಗೆ 'ಬಯಲಾಟದ ಬೀಮಣ್ಣ' ಎಂಬ ಹೆಸರನ್ನು ಪಡೆದುಕೊಂಡಿತು. ಇಲ್ಲಿನ 'ಒಂದೂರಲ್ಲೊಬ್ಬ ಯುವರಾಜ' ಎನ್ನುವ ಕತೆ ಮಾತ್ರ ಬಿಟ್ಟುಹೋಗಿದೆ. ಈ ಕತೆ ಅಧಿಕಾರಶಾಹಿಯ ವಿರುದ್ಧದ ಧ್ವನಿಯ ಕಥಾವಸ್ತುವನ್ನು ಒಳಗೊಂಡಿದೆ.

ಪ್ರಸ್ತುತ ಸಂದರ್ಭದ ಅಧಿಕಾರಸಾಹಿಯ ಮನೋಧರ್ಮವನ್ನು ನಮ್ಮ ಪರಂಪರೆಯಲ್ಲಿನ ಪರಿಕಲ್ಪನೆಯ ಮೂಲಕವೇ ಕಟ್ಟಿಕೊಟ್ಟಿದ್ದಾರೆ. ರಾಜ, ಯುವರಾಜರ ಕಲ್ಪನೆಗಳೇ ಜನಸಾಮಾನ್ಯರಿಗಿಂತ ಭಿನ್ನವಾದವು. ಪ್ರಜಾಪ್ರಭುತದ ಸಂದರ್ಭದೊಳಗೆ ಶಾಲೆಯೊಂದರಲ್ಲಿ ನಡೆಯಬಹುದಾದ ಆಕ್ರಮಣಕಾಗಿ ಪ್ರವೃತ್ತಿಯ ವಿರುದ್ಧ ಖಂಡನೆ ಇಲ್ಲಿದೆ. "ನಿಜವಾದ ಪ್ರಜಾಪ್ರಭುತ್ವವಾಗಿ ಮನಸ್ಸು ಇಂತಹ ಆಕ್ರಮಣಕಾರಿ ವ್ಯವಸ್ಥೆಯ ವಿರುದ್ಧ ಪ್ರತಿಭಟನೆ ನಡೆಸುತ್ತವೆ. ಆ ಮೂಲಕ ಜನಸಮುದಾಯವನ್ನು ಒಗ್ಗೂಡಿಸುತ್ತವೆ." ಎಂಬುದೇ ಪ್ರಸ್ತುತ ಕಥೆಯ ಆಶಯ.

ಇಲ್ಲಿನ ಇಂದಿರಾಬಾಯಿ ಹಾಗೂ ಆಕೆಯ ಮಗ ಸುಂದರನ ನಿಲುವುಗಳು ನಿಯಂತ್ರಣಕಾರಿಯಾದವು. ಚೆನ್ನಪ್ಪ ಮತ್ತು ರಾಮಪ್ಪ ಮಾಸ್ತರು ತಮ್ಮ ರಾಜೀನಾಮೆಯನ್ನು ಆಡಳಿತ ಮಂಡಳಿಯ ಮುಂದಿಟ್ಟು ಪ್ರತಿಭಟಿಸುತ್ತಾರೆ. ಹೀಗೆಯೇ, ತಮ್ಮ ಉದ್ಯೋಗವನ್ನು ಕಳೆದುಕೊಳ್ಳುತ್ತಾರೆ. ಇಲ್ಲಿಗೆ ಪ್ರತಿಭಟನೆ ಸೋತು ಹೋಗುವುದಿಲ್ಲ. ನಿಜವಾದ ಪ್ರತಿಭಟನೆ ರಾಮಪ್ಪ ಮಾಸ್ತರ ಭಾಷಣದಿಂದ ಆರಂಭವಾಗುತ್ತದೆ. "ಇಂದಿರಾಬಾಯಿಗಳಿಗೆ ಧಿಕ್ಕಾರ'

'ಯುವರಾಜರಿಗೆ ಧಿಕ್ಕಾರ' ಎಂಬ ಕೂಗು ಮತ್ತೆ ಮತ್ತೆ ಕೇಳಿಸಿತು. ಹತ್ತು, ಇಪ್ಪತ್ತು, ಐವತ್ತು, ನೂರು, ಇನ್ನೂರು ಸಾವಿರ ಕಂಠಗಳು ಸೇರುತ್ತಲೇ ಬಂದವು. ಧಿಕ್ಕಾರದ ಕೂಗು ವೇದಿಕೆ ಮತ್ತು ಬರಹತ್ತಿತು. ಸ್ವಲ್ಪಕಾಲದಲ್ಲಿಯೇ ವೇದಿಕೆಯನ್ನೂ ಹತ್ತಿತ್ತು. ಆಗ ಕುರ್ಚಿಗಳು ಖಾಲಿಯಾದವು." ಇದೆಲ್ಲವು ಸಾಧ್ಯವಾದವು ರಾಮಪ್ಪ ಅವರ ಮುಂದಾಳತ್ವದಿಂದ ಎಂಬುದು ಮುಖ್ಯ. ಇಂತ ಕ್ರಾಂತಿಯ ಭಾವನೆ ಅಳವಡಿಸಿಕೊಳ್ಳುವುದು 'ಕಪ್ಪುನೆಲದ ಕೆಂಪು ಕಾಲು' ಕಥಾಸಂಕಲನದ್ದಾಗಿದೆ.

'ಬಯಲಾಟದ ಭೀಮಣ್ಣ' ಕತೆಯಲ್ಲಿ ದಟ್ಟ ಗ್ರಾಮೀಣ ಸಂವೇದನೆ ವ್ಯಕ್ತಪಡಿಸುವ ಭಾವವಿದೆ. ಬಯಲಾಟಕ್ಕೂ ಮತ್ತು ಹಳ್ಳಿಗೂ ಇರುವ ಸಂಬಂಧದ ಆಪ್ತತೆ ಇಲ್ಲಿನ ಶೀರ್ಷಿಕೆ ನೋಡಿದ ತಕ್ಷಣ ಓದುಗನಲ್ಲಿ ಮೂಡುತ್ತದೆ. ಗ್ರಾಮೀಣ ಸಂವೇದನೆಯುಳ್ಳ ಇಲ್ಲಿ ಕತೆಗಳಲ್ಲಿ ಶಿಕ್ಷಣ ಪಡೆದ ಹೊಸ ತಲೆಮಾರಿನ ಜನ ಹಳ್ಳಿಯಲ್ಲಿನ ಶೋಷಣೆಯ ನಿರ್ಮೂಲನೆಗೆ ತೊಡಗುತ್ತಾರೆ. ವಿಶೇಷವೆಂದರೆ, ಶಿಕ್ಷಣ ಪಡೆದ ಕಾರಣಕ್ಕಾಗಿ ಬೇರೆಲ್ಲಿಯೂ ಈ ಪಾತ್ರಗಳು ಹೋಗುವುದಿಲ್ಲ. ತಮ್ಮ ತಮ್ಮ ಸ್ಥಳೀಯ ನೆಲೆಗಳಲ್ಲೇ ಶೋಷಣೆಯನ್ನು ತೊಡೆಯಲು ಪ್ರಯತ್ನಿಸುತ್ತವೆ. ಆದರೆ, ಈ ಕ್ರಿಯೆಯಲ್ಲಿ ಹೆಚ್ಚು ದುರಂತಕ್ಕೆ ಸಿಲುಕಿಕೊಂಡ ಪಾತ್ರಗಳೂ ಇವೆ. ಇದಕ್ಕೆ 'ಎದುರಾಳಿ' ಕತೆಯ ರಂಗಪ್ಪನ್ನು ಹೆಸರಿಸಬಹುದು.

ಅದರಂತೆ, ಇಲ್ಲಿ ಇನ್ನೊಂದು ಮಾದರಿಯೂ ಇದೆ. ಅಕ್ಷರ ಕಲಿಯದ ಜನ ಸಮುದಾಯದಲ್ಲಿ ನಿರಂತರ ಶೋಷಣೆ ನಡೆದಾಗ ಮನುಷ್ಯ ಸಹಜ ವಿರೋಧ ವ್ಯಕ್ತಪಡಿಸುವ ಪಾತ್ರಗಳೂ ಇವೆ. 'ಕ್ಷಾಮ' ಕಥೆಯ ಚೆನ್ನಿ, 'ಕಪ್ಪು ನೆಲದ ಕೆಂಪು ಕಾಲು' ಕತೆಯ ಕರಿಯ, 'ಸ್ಫೋಟ'ಕತೆಯ ಮುದುಕಿ ಮತ್ತು ಬಯಲಾಟದ ಭೀಮಣ್ಣ ಮುಂತಾದವರು ಈ ಸಾಲಿಗೆ ಸೇರುತ್ತಾರೆ.

ಮೂರನೆಯದು, ಪ್ರಜ್ಞಾ ಪ್ರವಾಹದಿಂದ ಕೂಡಿದ ರಚನೆಗಳು ಇಲ್ಲಿವೆ. 'ಟೆಲಿಗ್ರಾಂ' ಕತೆಯ ನಟೇಶ್‌ನ ಪಾತ್ರ ಆತ್ಮಾವಲೋಕನದಿಂದಲೇ ಸಾಗುತ್ತದೆ. ಇಡೀ ಕಥೆ ಹುಟ್ಟು ಸಾವು, ಇವುಗಳ ನಡುವಿನ ಮನುಷ್ಯನ ತೊಳಲಾಟ, ಹಂಬಲಗಳು ಹಾಗೂ ನಗರದ ಗೊಂದಲಗಳನ್ನೇ ಪ್ರಧಾನವಾಗಿ

ಅಭಿವ್ಯಕ್ತಿಸುತ್ತದೆ. ಬಹುತೇಕ ಇಲ್ಲಿನ ಪಾತ್ರಗಳು ನವ್ಯದ ಪ್ರಭಾವದಿಂದ ಹೊರಬಂದಿಲ್ಲ.

ಒಟ್ಟಾರೆ, 'ಬಯಲಾಟದ ಭೀಮಣ್ಣ' ಗ್ರಾಮೀಣ ಹಾಗೂ ನಗರ ಸಂವೇದನೆಗಳೆರಡರಲ್ಲಿಯೂ ಮಾನವೀಯತೆ ಹುಡುಕುವ ಮಾದರಿಗಳ ಸಂಕಲನವಾಗಿದೆ.

**ಒಂದು ಊರಿನ ಕತೆಗಳು (1999)**

ಬರಗೂರರ ಒಟ್ಟು ಕಥಾ ಸಾಹಿತ್ಯದ ವಿನ್ಯಾಸಗಳು ಹಲವು. ಅವುಗಳಲ್ಲಿ ಮುಖ್ಯವಾಗಿ ಚಿಂತಕ ಮತ್ತು ಸಂವೇದಕರ ನಡುವಿನ ಘರ್ಷಣೆ. ಈ ಇಬ್ಬರ ಘರ್ಷಣೆಯಲ್ಲಿ ಬರಗೂರರ ಒಳಗಿನ ಕಲಾವಿದ ಅನಿರೀಕ್ಷಿತವಾಗಿ ಜಾಗೃತನಾಗುತ್ತಾನೆ. ಆ ಸಂದರ್ಭದಲ್ಲಿ ಚಿಂತನೆಗಿಂತ ಸಂವೇದನೆಯೇ ಮುಖ್ಯವಾಗಿ ಕಥೆಗಳು ವಿವಿಧ ಆಯಾಮವನ್ನು ಪಡೆಯುತ್ತವೆ. ಹೀಗೆ ಹೇಳುವಾಗ ಚಿಂತನೆಯೇ ಶೂನ್ಯವಾಗಿ, ಭಾವುಕತೆಯೇ ವಿಜೃಂಭಿಸಿದೆ ಎನ್ನುವ ಅರ್ಥವಲ್ಲ. ಇವೆರಡೂ ಹದಗೊಂಡ ಮಿಶ್ರಣದ ರೂಪವೇ ಇಲ್ಲಿನ ಕಥೆಗಳ ಮುಖ್ಯ ಗುಣವಾಗುತ್ತದೆ. ಆದರೂ ಕಥೆಯನ್ನು ನಿರೂಪಿಸುವ ರೀತಿ ಕರುಳವಾಸಿಯಾದುದು ಮತ್ತು ಕಣ್ಣಿಂದ ಕೂಡಿರುವುದು ಆಗಿರುವುದರಿಂದ ಸಂವೇದನೆಯೇ ಹೆಚ್ಚಾಗಿ ಮೂಲವಾಗುತ್ತದೆ. ಹಾಗೆ ನೋಡಿದರೆ ಚಿಂತಕ ಮತ್ತು ಸಂವೇದಕರ ತಿಕ್ಕಾಟವೇ ಇವರ 'ಕಪ್ಪು ನೆಲದ ಕೆಂಪು ಕಾಲು' ಕಥೆಯದ್ದಾಗುತ್ತದೆ.

ಇಲ್ಲಿನ ಎಲ್ಲ ಕಥೆಗಳಿಗೂ ಗ್ರಾಮೀಣ ಸಂವೇದನೆಗಳಿವೆ. "ಒಟ್ಟಿನಲ್ಲಿ 'ಒಂದು ಊರಿನ ಕಥೆಗಳು' ನನ್ನ ಗ್ರಾಮೀಣ ಸಂವೇದನೆ ಮತ್ತು ಚಿಂತನೆಗಳು ಒಗ್ಗೂಡಿದ ಕೃತಿಯಾಗಿದ್ದು, ನನ್ನ ಕಥಾ ಸಾಹಿತ್ಯದ ಆಶಯ ಮತ್ತು ಅಭಿವ್ಯಕ್ತಿ ವಿನ್ಯಾಸಗಳ ಪ್ರಾತಿನಿಧಿಕತೆ ಇಲ್ಲಿದೆಯೆಂದು ಭಾವಿಸಿದ್ದೇನೆ" ಎನ್ನುತ್ತಾರೆ. ಬರಗೂರರು ಈ ಗ್ರಾಮೀಣ ಪ್ರಜ್ಞೆಯ ನೆಲೆಯನ್ನು 'ಕತೆಗಳಿಗೆ ಮುನ್ನ' ಎನ್ನುವಲ್ಲಿ ಸ್ಪಷ್ಟವಾಗಿಸುತ್ತಾರೆ. "ನಮ್ಮ ಹಳ್ಳಿಗಳು ಸಾಹಿತ್ಯದಲ್ಲಿ ಕಾಣಿಸಿಕೊಂಡ ಕ್ರಮ ಒಂದೇ ರೀತಿಯದಲ್ಲ. ಹಳ್ಳಿಗಳನ್ನು ಅಲ್ಲಿನ ರೀತಿಗಾಗಿ, ಸಂಸ್ಕೃತಿಯ ವಿನ್ಯಾಸಗಳಿಗಾಗಿ ವೈಭವೀಕರಿಸಿದ ಗ್ರಹಿಕೆಯ ಕ್ರಮ ಒಂದು ಕಡೆಯಾದರೆ,

ಹಳ್ಳಿಯನ್ನು ವಿಶಿಷ್ಟ ವಸ್ತುವಿನಂತೆ ಗ್ರಹಿಸುವ ಕ್ರಮ ಇನ್ನೊಂದು ಕಡೆಗಿದೆ. ನಾನು ಈ ಎರಡು ನೆಲೆಗಳಿಂದಲೂ ಹಳ್ಳಿಯನ್ನು ಗ್ರಹಿಸಿಲ್ಲ. ಊಳಿಗಮಾನ್ಯ ಸಂಸ್ಕೃತಿಯ ಬೇರುಗಳು ಬಲವಾಗಿರುವಾಗಲೇ ಬಂದಿರುವ ಪ್ರಜಾಸತ್ತಾತ್ಮಕ ಸಂಸ್ಕೃತಿಯ ಸಂಕಟಗಳು ನನ್ನ ಕಣ್ಣೆದುರಿಗಿವೆ. ಈ ಸನ್ನಿವೇಶದಲ್ಲಿ ಹುಟ್ಟಿರುವ ವೈರುಧ್ಯಗಳು ನನ್ನನ್ನು ಕಾಡಿಸುತ್ತಾ ಬಂದಿವೆ. ನಮ್ಮ ಹಳ್ಳಿಗಳು ನಿಂತ ನೀರಾಗಿಲ್ಲ; ಬದಲಾಗುತ್ತಿರುವ ನೆಲೆಗಳಾಗಿವೆ. ಇಂತಹ ಸನ್ನಿವೇಶದಲ್ಲಿ ಹಳ್ಳಿಯನ್ನು ಸಾಂಸ್ಕೃತಿಕ ಮ್ಯೂಜಿಯಂ ಆಗಿ ಸಾಹಿತ್ಯದಲ್ಲಿ ಅಭಿವ್ಯಕ್ತಿಗೊಳ್ಳುವುದು ನನ್ನ ಮಟ್ಟಿಗೆ ಅಪ್ಯಾಯಮಾನ ಸಂಗತಿಯಲ್ಲ; ಅಂತೆಯೇ ವೈಭವೀಕರಣವೂ ವಾಸ್ತವಕ್ಕೆ ಹತ್ತಿರವಾದುದಲ್ಲ. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಗಾಢವಾಗುತ್ತಿರುವ ಸಂಘರ್ಷ ಮತ್ತು ಸಾಮರಸ್ಯಗಳ ಒಳಸುಳಿ ವಿಶಿಷ್ಟವಾದುದು. ನನ್ನೊಳಗಿನ ಗ್ರಾಮೀಣ ಸಂವೇದನೆ ಮತ್ತು ಚಿಂತನೆಗಳ ಮಿಲನದಲ್ಲಿ ಸಾಂದ್ರಗೊಂಡ ಕತೆಗಳು ಈ ಸಂಕಲನದಲ್ಲಿವೆ. ಎನ್ನುವ ಬರಗೂರರ ಈ ಆಸೆಯ ಬಂಡಾಯ ಸಾಹಿತ್ಯದ ತಾತ್ವಿಕತೆಯನ್ನೇನು ಹೊರತುಪಡಿಸಿಲ್ಲ. ಬಂಡಾಯ ಸಾಹಿತ್ಯದ ನೋಟದ ನೆಲೆಯಾವುದು? ಎನ್ನುವುದಕ್ಕೆ ಗ್ರಾಮೀಣ ಪ್ರದೇಶದ ದ್ರವ್ಯವನ್ನು ಕಲೆಗೆ ಒಗ್ಗಿಸುವ ಕ್ರಿಯೆಯಲ್ಲಿ ಪ್ರಮುಖಪಾತ್ರವಹಿಸಿದೆ. ಗ್ರಹಿಕೆಯ ಕ್ರಮ ಮತ್ತು ಸ್ಫೋಟದ ನೆಲೆಗಳು 'ಊಟದ' ಮುಖಾಂತರ 'ವೇಳೆ'ಯನ್ನು ಗುರುತಿಸುವ ಸಂಸ್ಕೃತಿಗೆ ಸಂಬಂಧಿಸಿವೆ. ಆದ್ದರಿಂದ ಬಂಡಾಯ ಸಾಹಿತ್ಯವೂ ಹಸಿವಿನ ಸಮಸ್ಯೆಯ ಮೂಲಕ ಕಾಲಘಟ್ಟವೊಂದನ್ನು ಕಂಡುಕೊಳ್ಳಲು ಪ್ರಯತ್ನಿಸಿವೆ. ಈ ಪ್ರಯತ್ನವೇ ಮೇಲಿನ ಚಿಂತನೆಯ ಹೊಸ ಗ್ರಹಿಕೆಗೂ ಸಾಧ್ಯತೆಯನ್ನು ಮಾಡಿಕೊಟ್ಟಿದೆ.

ಹಿಂದೆ ಅಭಿವ್ಯಕ್ತಿಗೊಳ್ಳುತ್ತಿದ್ದ ಗ್ರಾಮೀಣ ಬದುಕು ವೈಭವೀಕರಣದಿಂದ ಕೂಡಿದ್ದಾಗಿತ್ತು. ಈ ವೈಭವೀಕರಣ ಮೂಲತ: ಮೇಲ್ ಜಾತಿ ವರ್ಗಗಳ ನೋಟದ ನೆಲೆಯಿಂದ ಪ್ರೇರೇರಿತವಾದದ್ದು. ಆದ್ದರಿಂದ ಈಗ ಗ್ರಾಮೀಣ ಬದುಕನ್ನು ಚರಿತ್ರೆಯ ಗತಿಯಲ್ಲಿಟ್ಟು ಪರಿಶೀಲಿಸುವ ಕ್ರಮ ಕಂಡುಬಂದಿದೆ. ಇದಕ್ಕೆ ವಿರುದ್ಧವಾಗಿ ಹಸಿವಿನ ಮೂಲಕ ಕಾಲವನ್ನು ಕಂಡುಕೊಳ್ಳುವ ಪ್ರಕ್ರಿಯೆಯಿಂದ, ಅನಿರೀಕ್ಷಿತವಾಗಿ ಕಟ್ಟಿಕೊಂಡ ಮಿಥ್‌ಗಳು ಒಡೆದು ಹೋಗುತ್ತವೆ. ಈ ಕ್ರಿಯೆಯಲ್ಲಿ ವೈಭವೀಕರಣಕ್ಕೆ ಬದಲಾಗಿ ಮಾನವೀಕರಣ

ಮುಖ್ಯವಾಗುತ್ತದೆ. ವೈಭವ ಒಡೆಯುತ್ತಿರುವ ವೇಧನೆಗೆ ಬದಲಾಗಿ ವಾಸ್ತವದ ಉಸಿರಲ್ಲಿ ಹುಟ್ಟುವ ವಿಷಾದ ಉಕ್ಕುತ್ತದೆ. ಎನ್ನುವ ಮಾತು ಬಂಡಾಯ ಸಾಹಿತ್ಯ ಚಳುವಳಿಯ ಪ್ರಧಾನ ಆಶಯವಾಗಿ ಕಾಣುತ್ತದೆ. ಇಲ್ಲಿ ಬಳಕೆಯಾಗುವ ಮಾನವೀಯತೆ ಅಥವಾ ಆದರ್ಶವಾದಗಳು ಭಾವನಾತ್ಮಕವಾದವುಗಳಲ್ಲ. ಅವು ಶೋಷಿತನನ್ನು ಸಾಂಸ್ಕೃತಿಕವಾಗಿ ಮೇಲೆತ್ತುವ ಒತ್ತಾಸೆಯಿಂದ ಹುಟ್ಟಿದವು. ಇಂತಹ ಪ್ರಾಮಾಣಿಕ ಅಭಿವ್ಯಕ್ತಿಗಳ ಸಂಗ್ರಹ ಈ ಕಥಾ ಸಂಕಲನವಾಗಿದೆ.

**ನಾಟಕ ಸಾಹಿತ್ಯ :**

**ಕಪ್ಪು ಹಲಗೆ (1990)**

ಬರಗೂರರ ಮೊದಲ ನಾಟಕವಿದು. ಈ ನಾಟಕದ ಬಹುತೇಕ ವಸ್ತು 'ಸಂಗಪ್ಪನ ಸಾಹಸಗಳು' ಕಾದಂಬರಿಯದ್ದು. ಆದರೆ, ನಾಟಕ ಮತ್ತು ಕಾದಂಬರಿಯಲ್ಲಿ ಭಿನ್ನತೆಯಿದೆ. ನಾಟಕದಲ್ಲಿ ತಿಮ್ಮನಂತಹ ಮೆಟ್ಟು ಹೊಲಿಯುವವ ರಾಜಕೀಯ ಪ್ರತಿನಿಧಿಯಾಗಿದ್ದಾನೆ. ಜೊತೆಗೆ ಜೀತದವನಾದ ಮಾರನೂಕೂಡ. ಆದರೆ, ಇವರ ರಾಜಕೀಯ ಶಕ್ತಿಸಂಗಪ್ಪನ ಶಕ್ತಿಯೆದುರು ಪ್ರಭಾವಕಾರಿಯಾಗಿಲ್ಲ.

ಇಂತಹ ಶೋಷಣೆಯ ವಿರುದ್ಧ ರಾಮು, ಭೀಮು, ಸೋಮು ಪ್ರತಿಭಟಿಸುತ್ತಾರೆ. ಶೋಷಣೆಯ ಸ್ವರೂಪದ ಅದನ್ನು ಸಮುದಾಯದ ಅರಿವಿಗೆ ತರುವಲ್ಲಿ ರಾತ್ರಿ ಶಾಲೆಯಲ್ಲಿ ಆರಂಭಿಸಿ ಯಶಸ್ವಿಯಾಗುತ್ತಾರೆ. ಒಟ್ಟಾರೆ 'ಕಪ್ಪು ಹಲಗೆ'ಯ ಮೇಲೆ ಕೆಂಪು ಅಕ್ಷರ ಮೂಡಿ

ಬೆಳಕು ಬಂದಿತು ಈ ಊರಿಗೆ

ಬೆಳಕು ಬಂದಿತು ಈ ನಾಡಿಗೆ– ಎನ್ನುವಲ್ಲಿ ಅಕ್ಷರ ಕಲಿತ ಸಮೂಹ ಮತ್ತು ಅನಕ್ಷರಸ್ಥ ಸಮೂಹಗಳು ಒಂದಾಗುತ್ತವೆ. ಮುಂದೆ ಬೆಸೆದು ಶೋಷಣೆಯನ್ನು ಹತ್ತಿಕ್ಕುವಲ್ಲಿ ಹೋರಾಡುತ್ತವೆ. 'ಕಪ್ಪು ಹಲಗೆ'ಯಿಂದ ಮುಂದೆ ಕ್ರಾಂತಿ ಹರಡಬೇಕಾಗಿದೆ. ಆರಂಭಕ್ಕೆ ಅದು ದಬ್ಬಾಳಿಕೆಗೆ ಸಿಕ್ಕು ನಶಿಸಿಲ್ಲ; ಕೆಂಪು ಅಕ್ಷರಗಳು ಮೂಡಿವೆಯೆನ್ನುವ ಧ್ವನಿ ಅರ್ಥಪೂರ್ಣವಾಗಿದೆ. ಈ ಮೂಲಕ ಊರಿಗೆ, ನಾಡಿಗೆ ಬರುವ ಬೆಳಕು ಶಾಶ್ವತ ಬೆಳಕಾಗಬೇಕಾಗಿದೆ.

'ಒಂದು ಊರಿನ ಕಥೆ' ಕಾದಂಬರಿಯಲ್ಲಿನ ಪಾತ್ರಗಳು ತಳೆಯುವ ನಿಲುವುಗಿಂತ ಈ ನಾಟಕದಲ್ಲಿನ ಪಾತ್ರಗಳು ಹೆಚ್ಚು ಪ್ರಗತಿಪರವೆನಿಸಿವೆ. ವರ್ಗ ನಿರ್ಮೂಲನೆ ಮತ್ತು ಊಳಿಗಮಾನ್ಯದ ವಿರುದ್ಧ ಹೋರಾಡುತ್ತದೆ.

**ಕಾದಂಬರಿ ಸಾಹಿತ್ಯ**

ಆಧುನಿಕ ಕನ್ನಡ ಸಾಹಿತ್ಯ ಸಂದರ್ಭದಲ್ಲಿ, ಅತ್ಯಂತ ಜನಪ್ರಿಯ ಪ್ರಕಾರವೆಂದರೆ ಕಾದಂಬರಿ. ಇಂಥ ಪ್ರಕಾರ ಯುಗಧರ್ಮಕ್ಕೆ ಅನುಗುಣವಾಗಿ ಹತ್ತಾರು ವಸ್ತು ವೈಶಿಷ್ಟ್ಯಗಳನ್ನು ಪಡೆದುಕೊಂಡಿತು. ನವೋದಯದವರ ವೈಭವೀಕರಣವನ್ನು, ಪ್ರಗತಿಶೀಲರ ವಾಚಾಳಿತನವನ್ನು ಮತ್ತು ನವ್ಯದವರ ವ್ಯಕ್ತಿಗತ ನೆಲೆಯನ್ನು ಮುಖ್ಯವಾಗಿಸಿಕೊಂಡಿತು. ಆದರೆ, ಇವೆಲ್ಲವುಗಳನ್ನು ಮೀರಿಸಿದ್ದು ಬಂಡಾಯದ ಕಾದಂಬರಿಗಳು. ಇವು ಹೊಸ ಒಳನೋಟಗಳನ್ನು ತೆರೆದಿಟ್ಟವು. ಯಾಕೆಂದರೆ ಬಂಡಾಯ ಸಾಹಿತಿಗಳು ಯಥಾಸ್ಥಿತಿವಾದದ ವಿರೋಧಿಗಳು. ಜೊತೆಗೆ ಬದಲಾವಣೆಯನ್ನು ಬದ್ಧತೆಯಾಗಿಸಿಕೊಂಡವರು. ಎಡಪಂಥೀಯ ವಿಚಾರಧಾರೆಗೆ ನಿಷ್ಠರಾದವರು. ಇಂಥವರಿಂದ ಸಹಜವಾಗಿಯೇ ಜನಮುಖಿ ಸಾಹಿತ್ಯ ಸೃಷ್ಟಿಯಾಯಿತು.

ಇದನ್ನು ಬಂಡಾಯ ಸಂಘಟನೆಗೆ ಪೂರಕವಾದ ಸಾಹಿತ್ಯದಿಂದಲೇ ನೋಡಬೇಕಾಗಿಲ್ಲ. ಬಂಡಾಯ ಸಾಹಿತ್ಯ ಸಂಘಟನೆ ರೂಪುಗೊಳ್ಳುವ ಮುನ್ನವೇ ಬರಗೂರರು ಇಂಥ ಪ್ರಯೋಗವನ್ನು ಮಾಡಿದ್ದರು. ಒಟ್ಟಾರೆ, ಬಂಡಾಯ ಸಂದರ್ಭದ ಬರಹಗಾರರ ಸ್ವಾತಂತ್ರ್ಯನಂತರದ ಸನ್ನಿವೇಶದೊಳಗೆ ಭದ್ರವಾಗಿ ಬೇರು ಬಿಟ್ಟಿರುವ ಅರೆಪಾಳೇಗಾರಿಕೆಯನ್ನು ಮತ್ತು ಅಲ್ಲಿ ಉಸಿರು ಕಟ್ಟಿರುವ ಗ್ರಾಮೀಣ ಜನರ ಸಂಕಷ್ಟಗಳನ್ನು ಅನಾವರಣಗೊಳಿಸುತ್ತಲೇ ಬಂದಿದ್ದಾರೆ. ಇದಕ್ಕೆ ಖಚಿತ ಪುರಾವೆಯೆಂದರೆ ಬರಗೂರರ ಕಾದಂಬರಿಗಳು.

**ಸೂತ್ರ (1974)**

ಇದು ಬರಗೂರರ ಮೊದಲ ಕಾದಂಬರಿ. ಇಲ್ಲಿರುವುದು ಗ್ರಾಮೀಣ ಬದುಕಿನ ದಟ್ಟ ಅನುಭವ ನಿಜ; ಆದರೆ, ಅದರೊಳಗಿರುವ ಅಷ್ಟೇ ದಟ್ಟವಾದ ಶೋಷಣೆಯಿಂದ ಬಿಡಿಸಿಕೊಳ್ಳಲು ಪಾರ್ವತಕ್ಕನಂತಹ ದೃಢ ನಿರ್ಧಾರಗಳು ಬೇಕಾಗುತ್ತದೆ. ಸೂತ್ರದಲ್ಲೂ ಸೂರ್ಯ ಕಾದಂಬರಿಯಲ್ಲಿಯ ಸೂರ್ಯನ ಹಾಗೆ

ಹೊಸ ಹುಟ್ಟನ್ನು ಬದಲಾವಣೆಗಾಗಿ ನಿರೀಕ್ಷಿಸುವುದಿಲ್ಲ. ಎಲ್ಲವನ್ನು ಶೋಷಿತ ಸಮುದಾಯವೇ ನಿರ್ಧರಿಸುತ್ತದೆ. ಆದರೆ 'ಸೂರ್ಯ' ಕಾದಂಬರಿಯ ಗಟ್ಟಿತನವಿರುವುದು ಮಗುವನ್ನು ಪಡೆಯುವಂತ ವೈಯಕ್ತಿಕ ವಿಷಯದಲ್ಲಿ. ಸಮಾಜದಲ್ಲಿ ಇದು ಅಪರಾದವಲ್ಲವೇ ಅಲ್ಲ ಎಂಬುದನ್ನು ಆಧಾರಸಹಿತವಾಗಿಸುತ್ತಾಳೆ. ಇಲ್ಲಿರುವ ಪಾರ್ವತಕ್ಕನಿಗೆ ಆ ಧೈರ್ಯಗಳಿಲ್ಲ. "ಗಂಡನಿರುವಾಗ, ಬದುಕಿರುವಾಗ ಮನೆಯಲ್ಲೇ ಇರುವಾಗ ಸಮಾಜಕ್ಕೇಕೆ ಎದುರಲಿ." ಎಂದು ಮತ್ತೆ ಸಂಪ್ರದಾಯವನ್ನು ಆಧಾರವಾಗಿಸಿಕೊಳ್ಳುತ್ತಾಳೆ. ಹೀಗೆ ದಿಟ್ಟೆಯಾದ ಸೀತಕ್ಕ ತಾನು ಬದುಕಿದ ಪರಿಸರವನ್ನು ಆಧಾರವನ್ನು ಬೇಸತ್ತು ಕಳೆದುಕೊಳ್ಳುತ್ತಾಳೆ. ಪಾರ್ವತಕ್ಕ ಈ ವಿಷಯದಲ್ಲಿ ತುಂಬಾ ಭಿನ್ನ. "ನಂಗೆ ಚೆನ್ನ ಬೇಕು ಈ ಗೌಡಿಕೆ, ಗಿವಿಡಿಕೆ ಏನು ಬೇಡ; ಆದ್ರೆ ಒಂದಂತೂ ನಿಜ, ಪಂಚಾಯ್ತಿ ಎಲೆಕ್ಷನ್ನಿಗೆ ನಾನು ನಿಂತೇ ನಿಂತ್ಕಂತೀನಿ. ಆದ್ರೆ ನಂಗೇನು ಈ ಹಳೇಗೌಡಿಕೆ ಗೌರವ ಬೇಕಿಲ್ಲ" ಎಂದು ತನ್ನ ಪರಿಸರದಲ್ಲಿಯ ಊಳಿಗಮಾನ್ಯ ವ್ಯವಸ್ಥೆಯ ವಿರುದ್ಧ ಪ್ರಜಾಪ್ರಭುತ್ವವನ್ನು ನೆಲೆಯೂರಿಸುತ್ತಾಳೆ. ಇಲ್ಲಿ ಚಂದ್ರಯ್ಯನಂತಹ ರಾಜಕೀಯ ಪುಢಾರಿತನವು ನಾಶವಾಗುತ್ತದೆ.

ಒಟ್ಟಾರೆ, ಬಂಡಾಯ ಸಾಹಿತ್ಯ ಸಂದರ್ಭದಲ್ಲಿ ಹೆಣ್ಣಿನ ಚಿತ್ರಗಳು ನಿರ್ಧಿಷ್ಟವಾದ ತಾತ್ವಿಕತೆಯಿಂದ ಚಿತ್ರಿಸಲ್ಪಟ್ಟಿವೆ. ಸಾಮಾಜಿಕ ಆರ್ಥಿಕ ಚಟುವಟಿಕೆಗಳ ಸಂದರ್ಭದಲ್ಲಿ ಪುರುಷನಷ್ಟು ಹೆಣ್ಣು ಕ್ರಿಯಾಶೀಲವಾಗುವ ಸಂದರ್ಭ ಸೃಷ್ಟಿಯಾಗಿಲ್ಲ. ಆದ ಕಾರಣ ಹೆಣ್ಣು ಎಲ್ಲಾ ರೀತಿಯಿಂದಲೂ ತನ್ನ ಆಯ್ಕೆಯ ಹಕ್ಕಿನಿಂದಲೇ ವಂಚಿತಳಾಗಿದ್ದಾಳೆ. ಈ ಎಲ್ಲ ರೀತಿಯ ವಂಚನೆಗಳಿಂದ ವಿಮೋಚನೆ ಬಯಸುವುದೇ ಸ್ತ್ರೀ ಸ್ವಾತಂತ್ರ್ಯವೂ ಆಗುತ್ತದೆ. ಇಂತಹ ಸಂದರ್ಭದ ಹಿನ್ನೆಲೆಯುಳ್ಳ ಪ್ರಸ್ತುತ ಕಾದಂಬರಿಯ ಸ್ತ್ರೀ ಪಾತ್ರಗಳು ಹೆಚ್ಚು ವಿಚಾರ ಮಾಡಲು ಹಚ್ಚುತ್ತವೆ.

**ಸೀಳು ನೆಲ (1980)**

ಪ್ರಸ್ತುತ ಕಾದಂಬರಿಗೆ ಎರಡು ನೆಲೆಗಳಿವೆ. ಒಂದು ನಗರ, ಇನ್ನೊಂದು ಗ್ರಾಮ. ಒಂದು ರೀತಿಯಲ್ಲಿ ಗ್ರಾಮ ಮತ್ತು ನಗರಗಳೆರಡನ್ನೂ ಒಳಗೊಂಡ ಮನುಷ್ಯ ಬದುಕಿನ ಸೀಳುಗಳನ್ನು ಪ್ರಾಮಾಣಿಕವಾಗಿ ಗ್ರಹಿಸುವ ಪ್ರಯತ್ನ ಇಲ್ಲಿದೆ. ಶೋಷಿತ ಜನರ ಪಾಡು ಗ್ರಾಮೀಣ ಪ್ರದೇಶದಲ್ಲಿ ಊಳಿಗಕ್ಕೆ ಸಿಕ್ಕು ನರಳುತ್ತಿದ್ದರೆ,

ನಗರದೊಳಗೆ ಬಂಡವಾಳಶಾಹಿ ಹಾಗೂ ಅಧಿಕಾರಸಾಹಿಯ ಹಿಡಿತಕ್ಕೆ ಸಿಕ್ಕು ನರಳುತ್ತಿದೆ. ಅನೇಕ ಕಾರಣಗಳಿಗಾಗಿ ಗ್ರಾಮೀಣ ಪ್ರದೇಶದಿಂದ ನಗರ ಸೇರಿದ ಜನರಿಗೂ ಬಿಡುಗಡೆಯಿಲ್ಲ. ಇಲ್ಲಿಯೂ ಅಂತಹುದೇ ಮುಕ್ತಿ ಹೊಂದಬೇಕಾದಲ್ಲಿ ಸಂಘಟನೆ ಆಗಲೇಬೇಕೆಂಬುದು ಇಲ್ಲಿಯ ಆಶಯ.

ಗುಡಿಸಲುಗಳಿಂದ ನಗರದ ನೈರ್ಮಲ್ಯ ಹಾಳಾಗುತ್ತದೆ ಎಂದು ಕೆಲವರು. ಇವರ ಸೌಂದರ್ಯಪ್ರಜ್ಞೆ ಒಮ್ಮುಖಿಯಾದು. ಗುಡಿಸಲುಗಳನ್ನು ಆರ್ಥಿಕ ಮತ್ತು ಮಾನವೀಯ ನೆಲೆಗಳಿಂದ ನೋಡಬೇಕಾದ ಅನಿವಾರ್ಯತೆ ಇದೆ. ಇಂತಹ ಪ್ರಯತ್ನಗಳು ಇಲ್ಲಿನ ಸುಜಾತ, ರಾಜು, ಕರಿಯರದು. ಇವರಂತೆಯೇ ನಗರದ ಅನೇಕ ಜೋಪಡಿಯಲ್ಲಿ ವಾಸಿಸುವ ಜನಗಳಾದ ಜಗ್ಗಣ್ಣ, ಕಣ್ಣನ್, ಮರಿಯಜ್ಜಿ ಮುಂತಾದವರು. ಒಟ್ಟಾರೆ ಇವರೆಲ್ಲ 'ಬದುಕನ್ನು' ಪ್ರಾಮಾಣಿಕ ಕಾಳಜಿಯಿಂದ ಶೋಧಿಸ ಹೊರಟವರು.

ಭರತ, ಶಾಂತಯ್ಯರಂತಹ ಬಂಡವಾಳಶಾಹಿಗಳು ಜನರ ಅಸಹಾಯಕತೆಯನ್ನು ತಮ್ಮ ಶೋಷಣೆಗೆ ಆಧಾರವಾಗಿಸಿಕೊಳ್ಳುತ್ತಾರೆ. ಅದರಂತೆ, ಕೃಷ್ಣಯ್ಯ ಮತ್ತು ಶಾಂತಯ್ಯನಂತವರು ಸಹ ರಾಜಕೀಯದಲ್ಲಿ ತಮ್ಮ ಸ್ಥಾನವನ್ನು ಭದ್ರಪಡಿಸಿಕೊಳ್ಳುವುದಕ್ಕಾಗಿ ಜೋಪಡಿ ಜನರ ಉದ್ಧಾರದ ಮಾತುಗಳನ್ನು ಆಡುತ್ತಾರೆ. ಜೊತೆಗೆ ಭರತನೂ "ಶಾಂತಯ್ಯನವರು ಮಾಡೋ ಯಜ್ಞದಲ್ಲಿ ನಮ್ಮ ಒಳ್ಳೆಯದಕ್ಕೂ ಪ್ರಾರ್ಥನೆಯಿರುತ್ತೆ. ಅದೇ ಮುಖ್ಯ ಎಂದು ಮನೆ ಮನೆಗೂ ಸಾರಿದ್ದೆ" ಎನ್ನುವಲ್ಲಿ ಅಪ್ರಾಮಾಣಿಕತೆಯೇ ಪ್ರಾಮಾಣಿಕತೆಯ ಸೋಗು ಹಾಕಿ ಜನರನ್ನು ಬಲಿಗೆತೆದುಕೊಳ್ಳುತ್ತದೆ. ಹೀಗೆ ಕಾದಂಬರಿಯುದ್ದಕ್ಕೂ ಪ್ರಾಮಾಣಿಕತೆ ಮತ್ತು ಅಪ್ರಾಮಾಣಿಕತೆಗಳ ನಡುವಿನ ಸಂಘರ್ಷದಲ್ಲಿ ಸುಜಾತ, ಕರಿಯ, ರಾಜುನಂತಹ ವ್ಯಕ್ತಿಗಳ ಬದುಕು ದುರಂತಗೊಳ್ಳುತ್ತದೆ. ಇದು ಅಸಮಾನತೆಯ ವಿರುದ್ಧ ನಡೆದ ವರ್ಗಹೋರಾಟದ ನೆಲೆಯೇ ಆಗಿದೆ.

**ಸಂಗಪ್ಪನ ಸಾಹಸಗಳು (1981)**

ಸಿದ್ಧ ರೂಪ ಮುರಿದು ಹೊಸ ರಚನೆಯನ್ನು ಒಳಗೊಂಡ ಕಾದಂಬರಿ. 'ಸಂಗಪ್ಪನ ಸಾಹಸಗಳು', ಕಾದಂಬರಿಯ ಪ್ರಾರಂಭ "ನಮ್ಮ ಸಾವ್ಕಾರ್ ಸಂಗಪ್ಪ ಅಂದ್ರೆ ಸಾಮಾನ್ಯವಲ್ಲ. ಆತ ಸಾಮಾನ್ಯ ಅಲ್ಲ ಅನ್ನೋದು 'ಸಾವ್ಕಾರ್' ಅನ್ನೋ

ಶಬ್ದದಲ್ಲೇ ಗೊತ್ತಾಗುತ್ತದೆ. ಅವನು ಸರ್ವಾಂತರ್ಯಾಮಿ "ಎಂದೇ ಪರಿಚಯಿಸುತ್ತದೆ. ಈ ಸರ್ವಾಂತರ್ಯಾಮಿ ಎನ್ನುವುದೇ ಇಲ್ಲಿ ವ್ಯಂಗ್ಯವನ್ನು ಒಳಗೊಂಡಿದೆ. ಗ್ರಾಮೀಣ ಹುಡುಗನೊಬ್ಬನ ಸೈಕಲ್ ಸವಾರಿಯನ್ನು ನಿಯಂತ್ರಿಸುವುದರಿಂದ ಹಿಡಿದು; ದೇಶದ ರಾಜಕೀಯದವರೆಗೂ ಇವನು ಸರ್ವಾಂತರ್ಯಾಮಿಯೇ ಆಗಿದ್ದಾನೆ.

ಪ್ರಧಾನವಾಗಿ ಸಾವ್ಕಾರ್ ಎನ್ನುವ ಮಾತೇ ಇಲ್ಲಿ ಗ್ರಾಮೀಣ ಊಳಿಗ ವರ್ಗದ ಸಂಕೇತ. ಈ ಊಳಿಗದ ವಿರೋಧವನ್ನು ಇಲ್ಲಿ ಪ್ರಗತಿಪರರೆನಿಸಿಕೊಂಡ ರಾಜೇಂದ್ರ, ರಾಮು, ಭೀಮು, ಸೋಮು ಎನ್ನುವರ ಬಳಗ ಮಾಡುತ್ತದೆ. ಪ್ರಜಾಪ್ರಭುತ್ವದಲ್ಲಿನ ಹೀನ ಸ್ಥಿತಿ, ಅನೈತಿಕತೆ, ಅಜ್ಞಾನ, ಹಾಗೂ ಅಲ್ಲಲ್ಲಿ ಉಳಿದುಕೊಂಡಿರುವ ಊಳಿಗದ ಅಧಿಕಾರವನ್ನು ಪೋಷಿಸುವ ಮತ್ತು ಉಪಯೋಗಿಸಿಕೊಂಡು ಬದುಕುವ ಜನರು ಸಾಕಷ್ಟು ಇದ್ದಾರೆ. ಅದನ್ನು ಶಾಶ್ವತವಾಗಿಸಬೇಕೆಂದು ಬಯಸುವ ಮೂಲಕ ಸಂಗಪ್ಪನಂತಹ ವ್ಯಕ್ತಿಗಳ ಶೋಷಣೆ ನಡೆದಿದೆ. ಇದನ್ನು ಖಂಡಿಸುವುದೇ ಕಾದಂಬರಿಯ ಪ್ರಧಾನ ಆಶಯ.

ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮತದಾನವೆನ್ನುವುದು ಅಧಿಕಾರವರ್ಗ ಅಥವಾ ಆಡಳಿತಶಾಹಿ ವರ್ಗದ ಕುತಂತ್ರ. ಕಾರಣ, ಅನಕ್ಷರತೆ ಮತ್ತು ಅಜ್ಞಾನ. ಇದು ಪ್ರಜಾಪ್ರಭುತ್ವಕ್ಕೆ ದಕ್ಕೆ ತರುವಂತಹ ಅಂಶವೂ ಹೌದು. ಇಂತಹ ಅನಕ್ಷರತೆಯಿಂದ ನಾವು ಭ್ರಷ್ಟವ್ಯಕ್ತಿಗಳನ್ನು ಚುನಾಯಿಸುತ್ತೇವೆಯೇ ಹೊರತು ದೇಶಕ್ಕೆ ಹಿತತರುವವರನ್ನಲ್ಲ ಎಂಬ ಒಳ ಧ್ವನಿಯ ಚಿತ್ರಣ ಕಾದಂಬರಿಯ ಗಾಂಭೀರ್ಯ ಹೆಚ್ಚಿಸಿದೆ.

ಸಮಾಜ ಬದಲಾವಣೆಯ ಪ್ರಮುಖ ಅಸ್ತ್ರ ಸಾಹಿತ್ಯ. ಇದನ್ನು ಭ್ರಷ್ಟ ರಾಜಕೀಯ ಶಕ್ತಿಯ ವಿರುದ್ಧ ಜನತೆಯನ್ನು ಎತ್ತಿಕಟ್ಟುವಲ್ಲಿ ಸಮರ್ಥವಾಗಿ ಬಳಸಿಕೊಳ್ಳಬಹುದಾಗಿದೆ. ಆದರೆ ಇಲ್ಲಿ ಯಾವ ಸಾಹಿತ್ಯ ಮಾನವೀಯ ಮೌಲ್ಯಗಳನ್ನು ಎತ್ತಿಹಿಡಿಯಬೇಕಿತ್ತೋ, ಅದೇ ಸಾಹಿತ್ಯ ಸಂಗಪ್ಪನಂತ ವ್ಯಕ್ತಿಗಳ ಪ್ರಭಾವದ ಹಿಡತಕ್ಕೆ ಸಿಕ್ಕಿದೆ. ಲಂಚಗುಳಿತನ, ಅಧಿಕಾರ, ಪ್ರಶಂಸೆಗಳಿಗೆ ತುತ್ತಾಗಿ ತನ್ನ ಸ್ಥಾನವನ್ನು ಕಡಿಮೆ ಮಾಡಿಕೊಳ್ಳುತ್ತಿರುವ ವಿಪರ್ಯಾಸಗಳನ್ನು ಕಾದಂಬರಿ

ವ್ಯಂಗ್ಯವಾಗಿಸುತ್ತದೆ. ಪ್ರಧಾನವಾಗಿ ಇಲ್ಲಿ ರಾಜಕೀಯ ಹಾಗೂ ಸಾಹಿತ್ಯ ಮಿಾಮಾಂಸೆಗಳು ಕಡುಟೀಕೆಗಳೊಗಾಗುತ್ತವೆ.

ಪ್ರತಿಯೊಬ್ಬ ರಾಜಕಾರಣಿಯು ಅಧಿಕಾರದ ಸ್ಥಾನಕ್ಕೇರಲು ಜಾತಿಯನ್ನು ಮೆಟ್ಟಿಲನ್ನಾಗಿಸಿಕೊಂಡಿರುತ್ತಾನೆ ಎನ್ನುವ ವಾಸ್ತವ ಕಾದಂಬರಿಯ ವಸ್ತುವಾಗಿದೆ. ಹೀಗೆ ಪ್ರತಿಯೊಬ್ಬನ ಅನಕ್ಷರತೆಯನ್ನು, ಜಾತಿಯನ್ನು ವರದಾನವಾಗಿಸಿಕೊಂಡ ಅಧಿಕಾರವರ್ಗ ಪ್ರಜಾಪ್ರಭುತ್ವದಲ್ಲಿ ಬರೀ ಪ್ರಭುತ್ವ ನೆಲೆಯೂರುವಂತೆ ಮಾಡಿದೆ. ಇಂತಹುದಕ್ಕೆ ಇಲ್ಲಿನ ಗಾಂಧಿಗುಡಿಯ ನಿರ್ಮಾಣ, ಭೂಮಸೂದೆಯ ದುರ್ಬಳಕೆ, ಸ್ವಾತಂತ್ರ್ಯ ಸಂದರ್ಭದ ಧ್ವಜಾರೋಹಣಗಳಾಗಿವೆ. ಇಂತಹ ಎಲ್ಲ ಅನ್ಯಾಯಗಳನ್ನು ರಾಜೇಂದ್ರ ಮತ್ತು ಅವನ ಬಳಗದವರು ವಿರೋಧಿಸುತ್ತಾರೆ. ಸಂಘಟನೆಯೊಂದಿಗೆ ಜಾಗೃತರಾಗುತ್ತಾರೆ. ಬಾಬಾನಂತಹ ಸ್ವಾಮಿಗಳ ವಿರುದ್ಧ ಧಿಕ್ಕಾರಗಳನ್ನು ಕೂಗುತ್ತಾರೆ. ಈ ಸಂದರ್ಭದಲ್ಲಿ ಮಂತ್ರಿಗಳೂ ಜಾಗೃತರಾಗುತ್ತಾರೆ. "ಶಾಂತಿಯುತ ಪ್ರದರ್ಶನಕ್ಕೆ ಏನೂ ಮಾಡದೇ ನಿಂತಿದ್ದ ಪೊಲೀಸರ ಕಿವಿಗೆ ಸುದ್ದಿ ಹೋಯಿತು. ಲಾಠಿಗಳು ಮೇಲೆದ್ದವು. ಪ್ರತಿಭಟನಕಾರರ ಮೇಲೆ ಎರಗಿದವು. ಲಾಠಿಗಳ ಏಟು ಬಿದ್ದಂತೆಲ್ಲಾ ಧಿಕ್ಕಾರದ ಧ್ವನಿ ಎತ್ತರಕ್ಕೆ ಏರಿತು. ಹಿಂದೆ ಮುಂದೆ ನೋಡದೆ ಹೊಡೆಯುತ್ತಾ ಎಲ್ಲರನ್ನೂ ವ್ಯಾನಿಗೆ ತುಂಬಿದರು. ಎಲ್ಲರನ್ನು ತುಂಬಿದ ಮೇಲೆ ವ್ಯಾನು ಹೊರಟಿತು." ಎನ್ನುವಲ್ಲಿ ನಿರೂಪಕನೇ ಕಾದಂಬರಿಯುದ್ದಕ್ಕೂ ನೇರವಾಗಿ ಭಾಗವಹಿಸುತ್ತಾನೆ. ಆದರೆ, ಇಲ್ಲಿ ನಿಜವಾದ ಪ್ರಗತಿಪರನೊಬ್ಬನು ಕೈಗೊಳ್ಳಬೇಕಾದ ಹೋರಾಟ ಆರಂಭವಾಗುತ್ತದೆ. ಇದು ಕಾದಂಬರಿ ಸೂಚಿಸುವ ನೆಲೆಯಾಗಿದೆ.

### ಬೆಂಕಿ (1982)

'ಸೂರ್ಯ', 'ಒಂದು ಊರಿನ ಕಥೆ', 'ಸೀಳು ನೆಲ' ಕಾದಂಬರಿಗಳಂತೆ ಇಲ್ಲಿಯೂ ಕೂಡ ಮಹಿಳೆ ಪ್ರಧಾನವಾಗಿದ್ದಾಳೆ. ಹೀಗಾಗಲೇ ಹಿಂದೆ ಪ್ರಸ್ತಾಪಿಸಿದಂತೆ ಆಚಾರಮೂಲದ ಧರ್ಮವೇ ಲಕ್ಷ್ಮಿಯ ಬದುಕಲ್ಲಿ ವಿಜೃಂಭಿಸಿದೆ; ಜೊತೆಗೆ ರಂಗಸ್ವಾಮಿಯ ವಿಚಾರ ಮೂಲದ ಧರ್ಮ ಸೋತು ದುರಂತ ಕಂಡಿದೆ. ಕಾದಂಬರಿ ತನ್ನ ತೀವ್ರತೆ ಕಾಣುವುದೇ ಅಮಾನವೀಯ ನೆಲೆಗಳ ಪ್ರತಿಭಟನೆಯಲ್ಲಿ. ಈ ಪ್ರಯತ್ನ ಲಕ್ಷ್ಮಿಯದು. ಗಂಗಣ್ಣಸ್ವಾಮಿಯಂತಹ ಪಲಯನವಾದದ ವಿರುದ್ಧ ನರಸಿಂಹನ ಷಂಡತನವನ್ನು ಪ್ರತಿಭಟಿಸುತ್ತಾಳೆ.

ಪ್ರಧಾನವಾಗಿ ಇಲ್ಲಿ ಪುಟ್ಟಿಯಂತೆ ಬಲಿಯಾಗುವ ಅಪಾಯಗಳಿಂದ ತಪ್ಪಿಸಿಕೊಳ್ಳುತ್ತಾಳೆ. ಇಲ್ಲಿಯ ರಂಗಸಾಮಿಯು ಸಹ 'ಒಂದು ಊರಿನ ಕಥೆ'ಯ ರಾಮುವಿನ ಹಾಗೆ ಅಪ್ರಧಾನವಾಗುತ್ತಾನೆ. ಲಕ್ಷ್ಮಿಗೆ ಇಲ್ಲಿ ಸೀತಕ್ಕನಂತೆ, 'ಸೂತ್ರ' ಕಾದಂಬರಿಯ ಪಾರ್ವತಕ್ಕನಂತೆ ದಲಿತ ಅಥವಾ ಶೋಷಿತ ಶಕ್ತಿಗಳು ಕೈಗೂಡಿಸುವುದಿಲ್ಲ. ವ್ಯವಸ್ಥೆಯನ್ನು ಒಂಟಿಯಾಗಿಯೇ ಎದುರಿಸಿ ಶೋಷಕರಿಗೆ ಸಮರ್ಥವಾಗಿ ಉತ್ತರಿಸುತ್ತಾಳೆ.

"ನಾನು ಹುಟ್ಟಿರಾದು ಸಾಯಕಲ್ಲ ಮತ್ತು ನಂಗೆ ಮಾತುಬೇಕಾಗಿಲ್ಲ ಎಂದವಳೆ ಬಾಗಿಲು ಮುಚ್ಚಿದಳು" ಎನ್ನುವ ಮೂಲಕ ಲಕ್ಷ್ಮಿ ಮತ್ತೆ ವಿಚಾರ ಮೂಲದ ಕಡೆಗೆ ಹೆಜ್ಜೆ ಇಡುತ್ತಾಳೆ.

"ಆಕೆ ಮಾತಾಡಲಿಲ್ಲ ಎದ್ದಳು ಕೊರಳಲ್ಲಿರುವ ತಾಳಿಯನ್ನು ಹಿಡಿದುಕೊಂಡಳು

ಕ್ಷಣಕಾಲ ದಿಟ್ಟಿಸಿದಳು; ಪಟ್ಟೆಂದು ಕಿತ್ತಳು: ಝಾಡಿಸಿ ಎಸೆದಳು.

ಅದು ದೇವರ ಕಿರೀಟಕ್ಕೆ ತಗುಲಿದಾಗ ಊರಿಗೇ ಉರಿ ಬಿದ್ದಂತೆ ಭಾವದಲ್ಲಿ ಬೆಚ್ಚು ಬಿದ್ದರು ಅಲ್ಲಿದ್ದ ಜನ"

ಇಲ್ಲಿಯ ಪ್ರಕ್ರಿಯೆ ಸಂಪ್ರದಾಯ, ಶೋಷಕ ಮತ್ತು ಬಲಂಪಂಥೀಯ ಚಿಂತನೆಗಳಿಗೆ ಬಲವಾದ ಪೆಟ್ಟುಕೊಟ್ಟಿದೆ. ಬಹುತೇಕ ಇಂತಹ ಚಿಂತನೆಗಳಲ್ಲಿ ಹೂತು ಹೋದ ಜನರು ಬೆಚ್ಚಬೇಕಾಗುತ್ತದೆ. ವಿಶೇಷವೆಂದರೆ ವ್ಯಷ್ಟಿ ಮೂಲದಲ್ಲಿ ಹುಟ್ಟಿದ ಈ ಚಿಂತನೆಯ ಪ್ರಖರತೆ ಸಮಷ್ಟಿಯೊಳಗಿನ ಆಚಾರದ ಪೊರೆ ಕಳಚುವ ದಿಟ್ಟತೆ ತೊರುತ್ತದೆ.

**ಸೂರ್ಯ (1982)**

ಅಂಬೇಡ್ಕರ್‌ರವರು ಯಾರು ಅಸ್ಪೃಶ್ಯರು! ಎನ್ನುವ ತಮ್ಮ ಲೇಖಲದಲ್ಲಿ 'ಅನ್ ಟಚ್‌ಬಲ್' ಎನ್ನುವ ಪದಕ್ಕೆ, ಹೌದು ನಾವು ಅನ್‌ಟಚ್‌ಬಲ್. ಕಾರಣ ಸೂರ್ಯನೂ ಅನ್‌ಟಚ್‌ಬಲ್ ಅವನನ್ನು ಮುಟ್ಟಿದರೆ ಸುಟ್ಟುಹೋಗುತ್ತಾರೆ. ಆದ್ದರಿಂದ ಯಾರಿಗೂ ಮುಟ್ಟಲಿಕ್ಕೆ ಸಾಧ್ಯವಾಗಿಲ್ಲ. ಸೂರ್ಯನಂತೆಯೇ ನಾವೂ ಅನ್‌ಟಚ್‌ಬಲ್ಸ್ ಎಂದು ವ್ಯಾಖ್ಯಾನಮಾಡುತ್ತಾರೆ. ಸೂರ್ಯ ಕಾದಂಬರಿಯೂ

ಸಹ ಇದೇ ಧ್ವನಿಯನ್ನು ಪ್ರತಿಪಾದಿಸುತ್ತದೆ. ಇಲ್ಲಿ 'ಸೂರ್ಯ' ಹೊಸ ಹುಟ್ಟಿನ ಸಂಕೇತ; ಊಳಿಗಮಾನ್ಯ ವ್ಯವಸ್ಥೆಯ ನಾಶಕ್ಕಾಗಿ ಹುಟ್ಟಿದವರು. "ನನ್ನೊಟ್ಟೆನಿಂದ ಸೂರ್ಯತರಾ ಮಗು ಹುಟ್ ಬಂದಾಗ ಎಲ್ಲಾ ಕಡೀಕ್ ಬೆಳಕು ಬೀಳ್ತೈತೆ. ದಿಕ್ಕು ದೆಸೆ ಎಲ್ಲಾ ಕಾಣುಸ್ತೈತೆ ನನ್ನೊಟ್ಟೆನಾಗೆ ಸೂರ್ಯಪ್ಪ ಆವ್ನೆ ಕಾಳವ್ವ ಸೂರ್ಯಪ್ಪ ಆವ್ನೆ. ಆ ಸೂರ್ಯಪ್ಪ ಹುಟ್ಟ ಬಂದು ಹಟ್ಟೀನಾಗೆಲ್ಲೇ ಹೆಜ್ಜೆ ಹಾಕ್ತಾನೆ ಆಗ ಆಗ . ಈ ಮಾತುಗಳು ಶೋಷಣೆಗೆ ಒಳಪಟ್ಟ ಸ್ತ್ರೀ ಸಮೂಹ ಹಾಗೂ ದಲಿತ ಸಮೂಹಗಳ ಸಂಕೇತ. ಹೀಗೆ, ಶೋಷಿತ ಶಕ್ತಿಗಳು ಒಟ್ಟುಗೂಡಿದರೆ ಯಾವ ಊಳಿಗ ವ್ಯವಸ್ಥೆಯೂ ಉಳಿಯುವುದಿಲ್ಲ ಎಂಬ ಆಶಯ ಇಲ್ಲಿನದು.

ಹಾಗಾಗಿ, ಕಾದಂಬರಿಯಲ್ಲಿ ಎರಡು ಶಕ್ತಿಗಳು ಒಂದಾಗುವ ಮತ್ತು ಹೊಸ ವ್ಯವಸ್ಥೆ ನಿರ್ಮಾಣವಾಗುವುದರ ಸೂಚನೆಯಿದೆ. ಇದನ್ನು ವರ್ಗಹೋರಾಟದ ಹಿನ್ನೆಲೆಯಲ್ಲಿ ಮನೋವಿಶ್ಲೇಷಣಾತ್ಮವಾಗಿ ಪರಿಭಾವಿಸಬಹುದಾಗಿದೆ. ಜೊತೆಗೆ ರಾಮಯ್ಯನಂತವನ ರಾಜಕೀಯ ಪುಡಾರಿತನವೂ ಇಲ್ಲಿದೆ. ಇಡೀ ಕಾದಂಬರಿ ಒಂದು ಸಂದರ್ಭದ ಬಿಕ್ಕಟ್ಟನ್ನು ಗುರುತಿಸಿಕೊಳ್ಳುತ್ತದೆ. ಇದು ಸ್ವತಂತ್ರಭಾರತದಲ್ಲಿ ಪ್ರಜಾಪ್ರಭುತ್ವ ನೆಲೆಯೂರುವುದರ ಜೊತೆ ಜೊತೆಗೆ, ಊಳಿಗದ ಬೇರುಗಳು ಸಡಿಲವಾಗುತ್ತಿರುವ ಸಂಕ್ರಮಣ ಸ್ಥಿತಿಯದು. ಇಂತಹ ಸಂಕ್ರಮಣ ಸ್ಥಿತಿಯ ದಿಕ್ಕಿನ ಪಥವನ್ನು ಈ 'ಸೂರ್ಯ' ಬದಲಾಯಿಸಬೇಕಾಗುತ್ತದೆ.

**ಭರತ ನಗರಿ (1983)**

'ಭರತ ನಗರಿ' ಪ್ರಸ್ತುತ ರಾಜಕೀಯವನ್ನು ವಿಡಂಬಿಸುವ ಕಾದಂಬರಿ. ಇದು ಇದುವರೆಗಿನ ಕಾದಂಬರಿಗಳ ಸಿದ್ಧರೂಪವನ್ನು ಸೀಳಿ ಹೊಸ ಮಾದರಿಯಲ್ಲಿ ಅಭಿವ್ಯಕ್ತಿಸಲ್ಪಟ್ಟಿದೆ. 'ಭರತನಗರಿಯ' ವ್ಯವಸ್ಥೆಯನ್ನು ಸೂಚಿಸುವ ಪರಿಕಲ್ಪನೆಗಳೇ ಇಲ್ಲಿ ವ್ಯಂಗ್ಯ. ವಿಡಂಬನೆಗೊಳಗಾಗುತ್ತವೆ. ಪ್ರಸ್ತುತ ರಾಜಕೀಯವ್ಯವಸ್ಥೆ ರಾಜಶಾಹಿ ವ್ಯವಸ್ಥೆಗಿಂತ ಭಿನ್ನವೇನಲ್ಲ. ರಾಜಶಾಹಿಯ ಮಾದರಿಯೊಳಗಡೆ ಇಲ್ಲಿನ ಎಲ್ಲವೂ ನಿರ್ಮಿಸಲ್ಪಟ್ಟಿದೆ. ಹೆಸರಿಗೆ ಮಾತ್ರ ಪ್ರಜಾಪ್ರಭುತವವಾಗಿದೆ. ಅದರಲ್ಲಿ 'ಭ್ರಮಾತ್ಮಕ ಸ್ವಾತಂತ್ರ್ಯ, ತಾಂತ್ರಿಕ ಪ್ರಜಾಪ್ರಭುತ್ವದಿಂದ ಕೂಡಿದ ವ್ಯವಸ್ಥೆಯಿದೆ' ಎನ್ನುವ ಬರಗೂರರ ಮಾತುಗಳು ಸತ್ಯವೆನಿಸುತ್ತವೆ. ಇಲ್ಲಿನ ಸ್ವಾತಂತ್ರ್ಯ ದೇವಿಯ ಸಿಂಹಾಸನಾರೋಹಣ,

ಸಂವಿಧಾನಶಾಹಿ, ಯುವರಾಜಪಟ್ಟಾಭಿಷೇಕಂ, ಚುನಾವಣೇಶ್ವರ, ಬೆತ್ತಲಸೇವೆ, ಗುಂಡುಸೇವೆ, ನಗರಿಗೀತೆ, ಈ ಎಲ್ಲ ಪರಿಕಲ್ಪನೆಗಳು ರಾಜಶಾಹಿ ವಯವಸ್ಥೆಯನ್ನು ನೆನಪಿಸುತ್ತದೆ. ಅದರಂತೆ ರಾಜಕೀಯ ವ್ಯಕ್ತಿಗಳ ಹೆಸರನ್ನು ಹೋಲುವ ಅದವಾನ ಕೇಸರಿ, ಮಜಪೇಯಿಬಿಹಾರಿ, ಶೇಖರಚಂದ್ರ, ಮರ್ಜಿಬಾಯಿ, ಜಗ್ಗುರಾಮ್, ಸಿಂಹಚರಣ ಮುಂತಾದವರ ಕಲ್ಪನೆಗಳು ಇವೆ.

ಇಡೀ ಕಾದಂಬರಿಯಲ್ಲಿ ವಿಡಂಬನೆಗೊಳಗಾಗುವುದು ರಾಜಶಾಹಿ. ಇಂತಹ ರಾಜ್ಯಶಾಹಿಯೊಳಗಡೆಯೆ ಪ್ರಾಮಾಣಿಕತೆಯ ಹುಡುಕಾಟ ನಡೆಯುತ್ತದೆ. ಪ್ರಾಮಾಣಿಕತೆಯೆಂದರೆ, ಅದು ಹೆಣ್ಣೋ ಗಂಡೋ ಎಂದು ಶೋಧಿಸಿ ಕೊನೆಯಲ್ಲ ಒಬ್ಬ ಯುವಕನನ್ನು ಹಿಡಿದು ತರುತ್ತಾರೆ. ಕಾರಣ ಅವನು ಪ್ರಾಮಾಣಿಕನೆಂದು ಜನ ಹೇಳಿದ್ದರಿಂದ, ಹೀಗೆ, ಇಂದಿನ ರಾಜಕೀ ವ್ಯವಸ್ಥೆಯಲ್ಲಿ ಇರಬೇಕಾದ ಪ್ರಾಮಾಣಿಕತೆಯನ್ನು ಶೋಧಿಸಬೇಕಾಗಿದೆ ಎನ್ನುವುದೇ ಇಲ್ಲಿನ ವಿಡಂಬನೆಯಾಗುತ್ತದೆ. ಹಾಗೆಯೇ ಇಲ್ಲಿನ ನಗರಗೀತೆಯು ಒಂದು ಹೊಸ ರೂಪ ಪಡೆದಿದೆ.

"ಜನಗಣ ಮನ ಜಡಭಾರತ ಜಯಹೇ
ಬಡವರ ಬಾಳಿನ ಭೂತ
ನಂಜುಳ್ಳ ಸಿಂಧು ಸವಿಮಾತ ಸಪೋಟ
ವೈಭವ ಉತ್ಕಟ ಮಂಗ
ಸತ್ಯ ಸಮಾನತೆ ಹಾದರ ಗಂಗಾ
ಕಚ್ಚೆಯ ಬಿಚ್ಚಿದರಂಗ

ಜಯಹೇ" ಹೀಗೆ ವಿಡಂಬನೆಯಿಂದ ಕೂಡಿದ ಗೀತೆಯನ್ನು ಹಾಡುವ ಯುವಕ ಅಧಿಕಾರಶಾಹಿಯ ದೌರ್ಜನ್ಯಕ್ಕೆ ಸಿಕ್ಕಿ ಸಾವನ್ನಪ್ಪುತ್ತಾನೆ. ಮಾರನೆಯ ದಿನ ಪತ್ರಿಕೆಗಳಲ್ಲಿ ಸುದ್ಧಿ ಪ್ರಕಟವಾಗುತ್ತದೆ. "ರಾತ್ರೋರಾತ್ರಿ ಸ್ವಾತಂತ್ರ್ಯ ಸೌಧದಿಂದ ತಪ್ಪಿಸಿಕೊಳ್ಳಲು ಯತ್ನಿಸಿದ ಕ್ರಾಂತಿಕಾರಿ ಯುವಕ ನಾಯಕ ಮತ್ತು ಆತನ ಹತ್ತು ಜನ ಒಡನಾಡಿಗಳು ಗೋಡೆ ಹಾರುವಾಗ ನೆಲಕ್ಕಪ್ಪಳಿಸಿ ನಿಧನರಾದರು. ಇಷ್ಟರಲ್ಲೇ ಬಿಡುಗಡೆ ಮಾಡಲು ನಿರ್ಧರಿಸಿ, ಆ ವಿಷಯವನ್ನು ತಿಳಿಸಿದ್ದರೂ ಗೋಡೆ ಹಾರಲು ಹೋದ ಈ ಯುವಕ ಮತ್ತು ಒಡನಾಡಿಗಳ ನಿಧನದಿಂದ ಭರತನಗರಿಗೆ ತುಂಬಲಾರದ ನಷ್ಟವಾಗಿದೆಯೆಂದು

ನಾಯಕರು ಸಂತಾಪ ಸೂಚಿಸಿದ್ದಾರೆ. ಈ ದಿನ ಭರತನಗರಿಯಲ್ಲಿ ಧ್ವಜವನ್ನು ಅರ್ಧಕ್ಕಿಳಿಸಿ ಶೋಕದಿನವನ್ನು ಆಚರಿಸಲು ಆದೇಶಿಸಿದ್ದಾರೆ."

ಹೀಗೆ ದಿನನಿತ್ಯವೂ ನಡೆಯಬಹುದಾದ ಲೆಕ್ಕವಿಲ್ಲದಷ್ಟು ಎನ್‌ಕೌಂಟರ್ ಸಾವುಗಳು ನಮ್ಮ ನಡುವೆ ಘಟಿಸುತ್ತಿವೆ. ಆದರೆ ಅವುಗಳಿಗೆಲ್ಲಾ ವಿಶೇಷತೆಯನ್ನು ಆರೋಪಿಸುವ ರೀತಿ ಮಾತ್ರ ಖಂಡನೀಯ. ಇದು ಕಾದಂಬರಿಯುದ್ದಕ್ಕೂ ಅಧ್ಬುತವಾಗಿ ಚಿತ್ರಿತವಾಗಿದೆ.

**ಒಂದು ಊರಿನ ಕಥೆ (1987)**

"ಈ ಊರು ಸಾಮಾನ್ಯವಾದುದ್ದೇನೂ ಅಲ್ಲ; ಇದು ಯಾವ ಊರು, ಹೆಸರೇನು ಅನ್ನೋದು ಅಪ್ರಕೃತ. ಒಂದು ಊರು ಅಂತ ಇಟ್ಟುಕೊಂಡರೆ ಸಾಕು." ಎನ್ನುವ ಮಾತುಗಳು ಕಾದಂಬರಿಯಲ್ಲಿವೆ. ಆರಂಭದ ಈ ಮಾತುಗಳು ಶೋಷಣೆ ಒಳಗೊಂಡ ಯಾವುದೇ ಊರುಗಳ ಕಥೆಯೂ ಆಗಬಹುದೆಂಬ ಧ್ವನಿಯುಳ್ಳದ್ದಾಗಿವೆ.

'ಒಂದು ಊರಿನ ಕಥೆ' ಭಾರತದಲ್ಲಿ ಪ್ರಜಾಪ್ರಭುತ್ವ ಕಾಲಿರಿಸಿದ ಸಂದರ್ಭದ್ದು. ಆಗಿನ ಊಳಿಗಮಾನ್ಯದ ಬೇರುಗಳು ಸಡಿಲಗೊಳ್ಳುವುದನ್ನು ಇದು ಚಿತ್ರಿಸುತ್ತದೆ. 'ಸೂರ್ಯ' ಕಾದಂಬರಿ ವ್ಯಕ್ತಿ ನೆಲೆಯಲ್ಲಿ ರೂಪುಗೊಳ್ಳುವ ಮೂಲಕ, ಸಾಮೂಹಿಕ ನೆಲೆಯ ನಿರೀಕ್ಷೆಯಲ್ಲಿದ್ದರೆ; 'ಒಂದು ಊರಿನಕಥೆ' ಸಾಮೂಹಿಕವಾಗಿ ಆರಂಭಗೊಳ್ಳುವುದರೊಂದಿಗೆ ವಿಸ್ತೃತಗೊಳ್ಳುತ್ತದೆ.

ಇದೊಂದು ಜಟಿಲಗೊಂಡ ಸಂದರ್ಭ. ಈ ಸಂದರ್ಭದಲ್ಲಿ ಬದುಕು ಕಂಡ ಸಾಮಾಜಿಕ ಪ್ರಕ್ರಿಯೆಯೊಂದು ಆರಂಭವಾಗಿದೆ. ಎಲ್ಲ ಸಮುದಾಯಗಳು ಮತ್ತೆ ಜಾತಿಯ ಕವಚದೊಳಕ್ಕೆ ಪ್ರವೇಶಿಸಿ ರಕ್ಷಿಸಿಕೊಳ್ಳುತ್ತವೆ. ಹಾಗಾಗಿ ಇಲ್ಲಿ ತಮ್ಮ ಸಂಸ್ಕೃತಿಯ ಆಳದೊಳಗೆ ರೂಪುಗೊಳ್ಳಬೇಕಾದ 'ಸೂರ್ಯ' ನಂತರವನ್ನು ಶೋಶಿಸುತ್ತಿಲ್ಲ; ಬದಲಿಗೆ, ಪುಟ್ಟಿಯಂತವಳು ಬಲಿಯಾದದ್ದನ್ನುವಿರೋಧಿಸುತ್ತದೆ. ಈ ಕ್ರಿಯೆ ಒಂದು ಆತ್ಮಹತ್ಯಾಕವಾದ ಪಯಣವಾಗಿದೆ. ರಾಮುವಿನಂತವನು ಹೋರಾಟಗಾರನಾಗಿ ಕಂಡರೂ ಹುಸಿ ಹೋರಾಟಗಾರನಾಗಿ ಫೋಜುಕೊಡುತ್ತಾನೆ. ಹೀಗೆ ಹುಸಿ ಹೋರಾಟ ಮತ್ತು ದಟ್ಟ ವಾಸ್ತವತೆಯ ನಡುವೆ ಪುಟ್ಟಿ ಗೌರಿ, ಹಟ್ಟಿ ಹನುಮಂತನಂತವರು

ಶೋಷಣೆಗೆ ಒಳಪಡುತ್ತಾರೆ. ಇಂತಹ ಒಳ ಆವರಣಗಳನ್ನು ಅನಾವರಣ ಮಾಡುತ್ತಲೆ ಕಾದಂಬರಿ ಯಶಸ್ಸಿನ ಮೆಟ್ಟಿಲು ಹತ್ತುತ್ತದೆ.

**ಕೋಟೆ (1993)**

ಈ ಕಾದಂಬರಿಗೆ ಬೆನ್ನುಡಿ ಬರೆದ ಚಂದ್ರಶೇಖರ ಕಂಬಾರರು "ಬರೆಯುತ್ತಾ ಮೌಲ್ಯಗಳನ್ನು ಹುಡುಕುವ, ಬರೆಯುವ ಮುನ್ನವೇ ಬದುಕುತ್ತಾ, ಅಲ್ಲಿ ಕಂಡುಹಿಡಿದ ಮೌಲ್ಯಗಳನ್ನು ಅವು ಒಳ್ಳೆಯ ಜೀವನಕ್ಕೆ ಉಪಯುಕ್ತವೆಂಬ ತಿಳುವಳಿಕೆಯಿಂದ ಬರೆಯುವ ಕ್ರಿಯೆಯಲ್ಲಿ ಬದುಕು ಬರಹಗಳ ಬಿರುಕಿಲ್ಲದ ಸಂಬಂಧವನ್ನು, ವ್ಯಂಗ್ಯದಲ್ಲಿ ಮಾತ್ರವಲ್ಲ. ವಾಚ್ಯದಲ್ಲೂ ಒಪ್ಪುವ ಕಲೆಗಾರಿಕೆಯಿದು. ವಿಮರ್ಶಕರು ಬರಗೂರರ ಕೃತಿಗಳ ಬಗ್ಗೆ ವಿವೇಚನೆ ಮಾಡಹೊರಟಾಗ ಜೋಲಿ ಹೊಡೆಯುವುದೆ ಇಲ್ಲಿ. ಬದುಕಿಗೆ ದೂರವಾದ ಮತ್ತು ಕೇವಲ ಕಲಾಪೇಕ್ಷೆಯಾದ ಇಂತಹ ವಿಮರ್ಶಕ ಮೌಲ್ಯಗಳ ಪ್ರಮಾಣದಲ್ಲಿ ಈ ಕೃತಿಗಳು ಹುಮ್ಮಸ್ಸಿನ ಪ್ರತಿಕ್ರಿಯೆ ಹುಟ್ಟಿಸುವುದಿಲ್ಲ. ಇಂತಹ ವಿಮರ್ಶಕರು ಏನನ್ನು ನಿರೀಕ್ಷಿಸಿ ವಿಮರ್ಶಿಸುತ್ತಿದ್ದೇವೆ ಎಂಬ ಮಾತನ್ನ ಜಾಣತನದಿಂದ ಮರೆಯುತ್ತಾರೆ. ಉಕ್ಕಿನ ಕೋಟೆಯಲ್ಲಿ ಹರಿಯುವ ಜೀವರಸ, ಓದಿದೊಡನೆ ಉತ್ಸಾಹ ಚಿಮ್ಮಿಸುವ ಬಿಸಿನೆತ್ತರಲ್ಲಿ ಒಳಿತು ಕೆಡಕುಗಳ ತಿಳುಳಿಕೆಯಿಂದ ಯಾವುದರ ಬಗ್ಗೆಯೂ ಪಕ್ಷಪಾತ ವಹಿಸದೆ–ಹರಿಯುವ ಉಗುರುಬೆಚ್ಚಗಿನ ಜೀವವಾಹಿನಿ, ಚಿಂತಕ ಬರಗೂರು ಇಲ್ಲಿ ಹಿಂದೆ ನಿಂತು ಕಥೆಗಾರ ಬರಗೂರು ಮಾತ್ರ ಮುಂದೆ ಬಂದು ಹೇಳಿದ ಕಾದಂಬರಿಯಿದು." ಇದೇ ರೀತಿ ನರಹಳ್ಳಿ ಬಾಲಸುಬ್ರಹ್ಮಣ್ಯ ಅವರು "ಬರಗೂರರ ಕಥಾ ಸಾಹಿತ್ಯವನ್ನು ಓದಿದಾಗ ಚಿಂತನೆಗಿಂತ ಸಂವೇದನೆಯೇ ಪ್ರಧಾನವಾಗಿ ಕಾಣಿಸಿಕೊಳ್ಳುತ್ತದೆ. ಈ ಚಿಂತಕ –ಸಂವೇದಕರ ನಡುವಿನ ಘರ್ಷಣೆಯೇ ಬರಗೂರರ ಕಥಾ ಸಾಹಿತ್ಯದ ವಿನ್ಯಾಸವನ್ನು ರೂಪಿಸಿದೆ." ಎಂದಿರುವ ಮಾತುಗಳು ಕಾದಂಬರಿ ನೆಲೆಗಿಂತ ಭಿನ್ನವಾಗಿಲ್ಲದಿರುವ ಕಥಾ ನೆಲೆಯನ್ನು ಗುರುತಿಸುತ್ತವೆ. ಕಾದಂಬರಿಯಲ್ಲಿ ಊಳಿಗಮಾನ್ಯದ ಶೋಷಣೆಯ ಪರಿಣಾಮಗಳನ್ನು ಚಿತ್ರಿಸುತ್ತದೆ. ಇದರ ಬಿಗಿ ಹಿಡಿತದಲ್ಲಿ ಸಾಮಾನ್ಯ ಜನರಾದ ಮೇಸ್ತ್ರಿ ರಾಜಣ್ಣ, ಸಂಜೀವ, ಮಾರಯ್ಯನಂತವರು, ಗಟವಣಿ ಗಂಗವ್ವ ಹನುಮಕ್ಕನಂತವರು ನಾಶವಾಗುತ್ತಿದ್ದಾರೆ ಎನ್ನುವುದು ಇಲ್ಲಿ ಧ್ವನಿಯಾಗಿದೆ.

ಎರಡನೆಯದಾಗಿ, ಯಾವುದೇ ವ್ಯವಸ್ಥೆ ತನ್ನ ಅವಸಾನದ ಬೀಜಗಳನ್ನು ತನ್ನ ಒಡಲಲ್ಲಿಯೇ ಧರಿಸಿಕೊಂಡಿರುತ್ತದೆ. ಇದಕ್ಕೆ ಸಾಕ್ಷಿಯಾಗಿ ಮಾರಯ್ಯ, ಕರಿಯಣ್ಣನಂತಹ ಪಾತ್ರಗಳ ಸೃಷ್ಟಿಯಾಗಿವೆ. ಮಾರಯ್ಯ ಊಳಿಗದಿಂದಲೇ ಸಿಡಿದವನು. ತನ್ನೆಲ್ಲಾ ಕ್ರೌರ್ಯವನ್ನು ಕಳೆದುಕೊಂಡು ಜನಸಾಮಾನ್ಯರನ್ನು ಪ್ರೀತಿಸುವವನು. ಹಾಗಾಗಿ ಜಮೀನ್ದಾರ ಕೆಂಗಪ್ಪನಿಂದ ಕೊಲ್ಲಲ್ಪಡುತ್ತಾನೆ. ಹೀಗೆ, ಶೋಷಿತ ಮನಸ್ಸುಳ ಬೆಸುಗೆ ಇಲ್ಲಿ ಮುಖ್ಯವಾಗುತ್ತದೆ. ಆದರೆ, ತಾಂತ್ರಿಕ ಪ್ರಜಾಪ್ರಭುತ್ವದ ಈ ಸಂದರ್ಭದಲ್ಲಿ ಊಳಿಗದೊಳಗೇ ಬಿರುಕುಗಳು ಕಾಣಿಸಿಕೊಂಡಿವೆ. ಅವರೂ ಕೂಡ ಊಳಿಗ ತನ್ನ ಹಿಡಿತವನ್ನು ಸಡಿಸಿಲು ಸಾಧ್ಯವಾಗದೇ ಅಧಿಕಾರ ಶಾಹಿಯನ್ನು, ಆಡಳಿತ ಶಾಹಿಯನ್ನು ತನ್ನ ತೆಕ್ಕೆಗೆ ತೆಗೆದುಕೊಂಡು ಜನರ ಬದುಕನ್ನು ಹಿಂಸಾತ್ಮಕವಾಗಿಸುವ ವೈರುಧ್ಯದ ಸಂದರ್ಭವನ್ನು ಕಾದಂಬರಿ ಪರಿಣಾಮಕಾರಿಯಾಗಿ ಹಿಡಿದಿಟ್ಟಿದೆ.

**ಗಾಜಿನಮನೆ (1999)**

ಲೇಖಕರೇ ಹೇಳುವಂತೆ ಆ ಎರಡೂ ಕಡೆ ಪ್ರತಿಮಾ ವಿಧಾನದಲ್ಲಿ ಕೆಲಸ ಮಾಡುವ ಸಾಮಾನ್ಯ ಆಶಯವನ್ನು ಈ ಕೃತಿಯು ಒಳಗೊಂಡಿದೆ. 'ಗಾಜಿನ ಮನೆ'ಯ ಬದುಕಿನ ನಿರ್ದಿಷ್ಟ ನೆಲೆಗೆ ಎರಡು ವಿಭಿನ್ನ ಅನುಭವಗಳ ವಿನ್ಯಾಸ ಒಂದೇ ಆಕೃತಿಯೆಂದು ಭಾವಿಸಬಹುದಾಗಿದೆ. ಆದ್ದರಿಂದಲೇ ಎರಡು ಕಾದಂಬರಿಗಳಿಗೂ ಒಂದೇ ಹೆಸರನ್ನು ಕೊಟ್ಟಿದ್ದೇನೆ." ಎಂಬುದನ್ನು ಆಧಾರವಾಗಿಸಿಕೊಳ್ಳಬೇಕಾಗುತ್ತದೆ.

ಭಾಗ–1ರಲ್ಲಿ ಉದ್ಯೋಗಿಯಾದ 'ರವಿ'ಯು ಪ್ರಾಮಾಣಿಕವಾಗಿ ಬದುಕಲು ಪ್ರಯತ್ನಿಸಿ ಎಲ್ಲಾ ತೊಂದರೆಗಳನ್ನು ಆಹ್ವಾನಿಸಿಕೊಳ್ಳುತ್ತಾನೆ. ತನ್ನ ಜೀವನದ ಅರ್ಧಭಾಗವನ್ನು ಉದ್ಯೋಗದಲ್ಲಿಯೇ ಕಳೆಯಬಹುದಾದ ಇಂತಹ ಉದ್ಯೋಗಿ ಒಂದು ಮನೆಯನ್ನು ಕಟ್ಟಿಸಿಕೊಳ್ಳುವಲ್ಲಿ ಪಡುವ ಪಾಡು ಗಂಭೀರವಾಗಿದೆ. ಕಟ್ಟಿಸುವ ಮನೆ ತಾವು ಈಗಾಗಲೇ ವಾಸಿಸುವ ಮನೆಗಿಂತ ಭಿನ್ನವಿಲ್ಲ. ಕಾರಣ ಅಲ್ಲಿ ಎಲ್ಲಾ ಕೋಣೆಗಳೂ ಒಂದೇ ಆಗಿದ್ದು ಇವರ ಬಡತನದ ಪಾರದರ್ಶಕತೆಯನ್ನು ಒದಗಿಸುತ್ತವೆ. "ಬದುಕೇ ಒಂದು ಗಾಜಿನ ಮನೆ. ನಮ್ಮನ್ನು ಹೊರಗಿನವರು ನೋಡುತ್ತಾರೆ. ನಾವು ಹೊರಗಿನವರನ್ನು ನೋಡ್ತೀವಿ. ಒಬ್ಬರು ಹೊರಗಡೆಯಿಂದ ಒಳಗಡೆ ನೋಡೋರು, ಇನ್ನೊಬ್ಬರು

ಒಳಗಡೆಯಿಂದ ಹೊರಗೆ ನೋಡೋರು. ನಮ್ಮ ವ್ಯಕ್ತಿತ್ವನೂ ಅಷ್ಟೆ ಈ ಅಂತರಂಗ ಬಹಿರಂಗದ ಮಧ್ಯೆ ಇರೋದು ಗಾಜಿನ ಗೋಡೆ. ಅಂತರಂಗ ಬಹಿರಂಗ, ಬಹಿರಂಗ ಅಂತರಂಗನ ನೋಡ್ತಾ ಮಾತಾಡ್ತಾ ಇದ್ದರೇನೆ ವ್ಯಕ್ತಿತ್ವಕ್ಕೊಂದು ವಿನ್ಯಾಸ ಸಿಗೋದು; ಬೆಲೆ ಬರೋದು.

"ನಮ್ಮ ಮನೆ ನಮ್ಮ ವ್ಯಕ್ತಿತ್ವ, ನಮ್ಮ ಬದುಕು ಎಲ್ಲ ಒಂದು ಗಾಜಿನಮನೆ ಅನ್ನೋ ದರ್ಶನ ನನ್ನಲ್ಲಿ ಹುಟ್ಟಿದ್ದೇ ನಾನು ಕಟ್ಟಿಸ್ತಿರೋ ಸಾಲದ ಮನೆಯಿಂದ. ಸಾಲದ ಮನೆ ನನಗೆ ಗಾಜಿನ ಮನೆಯದರ್ಶನ ಕೊಟ್ಟದ್ದು ಒಂದು ದೊಡ್ಡ ಅನುಭವ" ಎನ್ನುವ ಮಾತು ಇಡೀ ಗಾಜಿನ ಮನೆ 2ರಲ್ಲಿ ನಿರುದ್ಯೋಗಿಯಾದವನು ಪಡುವ ಪಾಡು ಉದ್ಯೋಗಿಗಿಂತ ಭಿನ್ನವೆ? ಎಂದುಕೊಂಡರೆ, ಇಲ್ಲಿ ಚಿತ್ರಿತವಾಗುವ ವಿನ್ಯಾಸದಿಂದಲೇ ಉತ್ತರ ಒದಗುತ್ತದೆ. ಉದ್ಯೋಗಿಯಾದ 'ರವಿ' ತಾನು ಕಟ್ಟಿಸುವ ಮನೆಯಿಂದಲೇ ಏಳುಬೀಳುಗಳನ್ನು ಕಂಡು ಅನುಭವ ವಿನ್ಯಾಸವನ್ನು ಗಳಿಸಿಕೊಳ್ಳುತ್ತಾನೆ. ಇಲ್ಲಿ ನಿರುದ್ಯೋಗಿಯಾದ ರಾಜು ಜೀವನದುದ್ದಕ್ಕೂ ಉದ್ಯೋಗವನ್ನು ಹುಡುಕಿಕೊಳ್ಳುವಲ್ಲಿಯೇ ಕಾಲ ಕಳೆಯುತ್ತಾನೆ. ಆದರೆ, ರವಿಯ ಹಾಗೆ ಪಶ್ಚಾತಾಪ, ಆತ್ಮಾವಲೋಕನಗಳಲ್ಲಿ ಬದುಕು ಅನುಭವಿಸುವುದಿಲ್ಲ. ಇಲ್ಲಿ ರಾಜು ತನ್ನಂತಹ ಅನೇಕರ ಪಾಡನ್ನು ಹಸನುಗೊಳಿಸಲು ಪ್ರಯತ್ನಿಸುತ್ತಾನೆ. ಇಲ್ಲಿ ನಗರದ ಕೊಳಗೇರಿಯಲ್ಲಿ ಬದುಕುವಂತಹ ಜನರ ಉದ್ಧಾರಕ್ಕಾಗಿ ಶ್ರಮಿಸುತ್ತಾನೆ ಅವರಲ್ಲಿ ವರ್ಗ ಹೋರಾಟದ ಮನೋಭಾವ ಬೆಳೆಯುವಂತೆ ಮಾಡುತ್ತಾನೆ. ಶಿಕ್ಷಣವನ್ನು ಬೋಧಿಸಲು ಪ್ರಾರಂಭಿಸುತ್ತಾನೆ. ಒಟ್ಟಾರೆ ಕತ್ತಲ ಜೀವಗಳಿಗೆ ಬೆಳಕಾಗುತ್ತಾನೆ. ಈ ಮೂಲಕ ದೊರೆತ ಸಣ್ಣ ಬೆಳಕಿನಿಂದಲೇ ತಮ್ಮ ಬದುಕಿನ ಕತ್ತಲನ್ನು ತೊಡೊದುಕೊಳ್ಳಲು ಪ್ರಯತ್ನಿಸಿದಾಗ, ಅಧಿಕಾರಶಾಹಿಗಳ ವಿಕೃತ ರೂಪಗಳ ಸತ್ಯ ಗೋಚರಿಸುತ್ತದೆ. ಯಜ್ಞದ ಸಂದರ್ಭದಲ್ಲಿ ಭಾಗವಹಿಸಿದ ಜನರಿಗೆ ಗಾಜಿನಮನೆಯ ಹೊರರೂಪದ ದಿಗ್ದರ್ಶನ ತಿಳಿಯುತ್ತದೆ. ಒಳಗಿನ ಮೋಸತನಗಳ ಅರಿವೂ ಏಕಕಾಲಕ್ಕಾಗುತ್ತದೆ. "ಅಲ್ಲಿ ಗಾಜುಗೀಜಿನ ಗೋಜಿಲ್ಲದ ಗುಡಿಸಲುಗಳು. ಅಲ್ಲಿನ ಬದುಕು ಗಾಜಿನ ಮೂಲಕ ನೋಡುವಂತೆ ಸಾಫ್ ಸೀದಾ. ಒಳಗಿನದು ಒಳಗೆ ಕಾಣಿಸುವ ನೇರ ಬದುಕು. ಆದರೆ, ಇಲ್ಲಿ ಮನೆಗೆ ಮೋಹಕ ಗಾಜು ಇದೆ. ಹೊರಗಿನವರು ನಾವು ಈ ಗಾಜಿನ ಮೂಲಕ

ಹೊರಗಿನವರನ್ನು ನೋಡಬಹುದು ಎಂಥ ವಿಚಿತ್ರ ಗಾಜು! ಎಂಥ ಪಕ್ಷಪಾತ! ಒಳಗಿದ್ದವರು ಹೊರಗಿರುವ ನಮ್ಮ ಮೇಲೆ ಗುರಿ ಇಡಬಹುದು. ನಾವು ಒಳಗಿರುವವರ ಮೇಲೆ ಗುರಿ ಇಡಲಾಗದು. ಗಾಜಿನ ಮನೆಯೆಂದರೆ ಎಲ್ಲವೂ ಸ್ಪಷ್ಟವೆಂಬ ಭಾವನೆಯೇ ಇಲ್ಲಿ ಹುಸಿಯಾಗುತ್ತದೆ." ಇಂಥಲ್ಲಿ ದಲಿತನೊಬ್ಬನ ಮೂಲಕ ಯಜ್ಞವನ್ನು ಉದ್ಘಾಟಿಸುವುದು ಅಪಹಾಸ್ಯವಾಗುತ್ತದೆ. ಹೊರಗೆ ಹಸಿದು ನಿಂತ ಜನಗಳ ಮೇಲೆ ಪೋಲೀಸರಿಂದ ಲಾಠಿಚಾರ್ಜ್ ನಡೆಯುತ್ತದೆ. ರಾಜು ನೆಲದ ಕಡೆಗೆ ನೋಡಿದ, ಬಣ್ಣ ಬದಲಾಗಿತ್ತು. ಕೆಂಪಾಗಿತ್ತು ಎನ್ನುವ ಮಾತುಗಳಿಂದ ರವಿ ಹತಾಶಭಾವ ತಾಳಬೇಕಿಲ್ಲ; ಮತ್ತೆ ಕ್ರಾಂತಿಗೆ ಅಣಿಗೊಳಿಸುತ್ತವೆ. ವರ್ಗ ನಿರ್ಮೂಲನ ಬಯಸುತ್ತವೆ. ಅಂತರಂಗವನ್ನು ಅದಕ್ಕೆ ಸಿದ್ಧಗೊಳಿಸುತ್ತವೆ.

### ಸ್ವಪ್ನ ಮಂಟಪ (1999)

ಬುದ್ಧಿ ಮತ್ತು ಭಾವಗಳನ್ನು ಸಮಪ್ರಮಾಣದಲ್ಲಿ ಉಳ್ಳ ಈ ಕಾದಂಬರಿ ಓದುಗರ ಮನಸ್ಸನ್ನು ಗೆಲ್ಲುವ ಶಕ್ತಿ ಹೊಂದಿದೆ. ಇವೆರಡು ಮತ್ತು ಬುದ್ಧಿಗಳು ಒಟ್ಟೊಟ್ಟಿಗೆ ಬೆಸೆಯುವಿಕೆಯಿಂದ ಕಾದಂಬರಿ ಅನೇಕ ನಿಗೂಢ ಸತ್ಯಗಳನ್ನು ಹೊರಹಾಕುತ್ತದೆ, ಹಾಗೂ ಹೋರಾಟಗಾರನಾದವನು ತನಗೆ ತಾನೇ ಪ್ರತಿ ಹಂತದಲ್ಲೂ ತಿದ್ದಿಕೊಳ್ಳಬೇಕಾದ ಮತ್ತು ಆ ಮೂಲಕವೇ ಗಟ್ಟಿ ತಾತ್ವಿಕತೆಯನ್ನು ಒಳಗೊಳ್ಳಬೇಕಾದ ವಿಚಾರವನ್ನು ಕಾದಂಬರಿ ತಿಳಿಸುತ್ತದೆ. ಜೊತೆಗೆ ಇತಿಹಾಸದೊಂದಿಗೆ ಸಮಕಾಲೀನತೆಯನ್ನು ಒರೆಹಚ್ಚಿ ನೋಡುವ ಪ್ರಯತ್ನ ಕಾದಂಬರಿಯುದ್ದಕ್ಕೂ ನಡೆಯುತ್ತದೆ.

'ಇತಿಹಾಸ'ವನ್ನು ಬಂಡಾಯ ಸಾಹಿತಿ ವೀಕ್ಷಿಸುವುದೇ ಬೇರೆ ರೀತಿ. ಈತ ಅಲ್ಲಿನ ರಾಜಮನೆತನಗಳ ಉನ್ನತಿ–ಅವನತಿಗಳ ಕಾಲಾನುಕ್ರಮಣಿಕೆಯ ದಾಖಲೆಗಳನ್ನಷ್ಟೆ ಪರಿಗಣಿಸುವುದಿಲ್ಲ; ಬದಲಾಗಿ ಆ ಕಾಲಘಟ್ಟದ ಜನ ಎದುರಿಸಿದ ಬಿಕ್ಕಟ್ಟುಗಳನ್ನು ಗುರುತಿಸುತ್ತಾನೆ. ಜನ ಮತ್ತು ಸಂಸ್ಕೃತಿಯನ್ನು ರೂಢಿಸುವ ಇತರೆ ಲಕ್ಷಣಗಳ ಬೆಳಕಿನಲ್ಲಿ ಅನೇಕ ಸತ್ಯಗಳನ್ನು ಕಂಡುಕೊಳ್ಳುತ್ತಾನೆ. ಅದನ್ನು ವಾಸ್ತವದ ನೆಲೆಯಿಂದ ವಿಮರ್ಶಿಸುತ್ತಾನೆ. ಭವ್ಯವಾಗಿ ನಿರ್ಮಿಸಲ್ಪಟ್ಟ ಕೋಟೆ ಕೊತ್ತಲು ದೇವಸ್ಥಾನಗಳನ್ನು ಕಂಡು ಸ್ತುತಿಸುವ ನಮ್ಮ ನಾಲಗೆಗಳು ಅವಗಳ ನಿರ್ಮಾಣಕ್ಕೆ ಕಾರಣವಾದ ಬೆವರ

ಹನಿಗಳು. ಕಪ್ಪು ಮೈಗಳನ್ನು ಗಮನಿಸುವುದೇ ಇಲ್ಲ. ಕಟ್ಟಿಸಿದವರನ್ನು ಮೆರೆಸಿ, ಕಟ್ಟಿದವರನ್ನೇ ಮರೆತು ಬಿಟ್ಟಿರುತ್ತೇವೆ. ಹೀಗಾಗಿ ದುಡಿವ ವರ್ಗದ ನೋವು–ನಲಿವುಗಳನ್ನು ಅಭಿವ್ಯಕ್ತಿಸುವ ಸಾಹಿತ್ಯ ಬೇಕಾಗಿದೆ. ಅಂತಹ ಕೆಲಸ ಸಧ್ಯ 'ಸ್ವಪ್ನ ಮಂಟಪ' ಮಾಡುತ್ತಿದೆ. 'ಸ್ವಪ್ನ ಮಂಟಪ'ದ ಮದನಿಕೆ, ಮದಲಾಸೆ ಮತ್ತು ಚಂದ್ರಕುಮಾರ ರಾಜಶಾಹಿಯ ಚಂಡೇರಾಯನಂತವರ ಬೇಟೆಗೆ ಬಲಿಯಾದವರು. ಇಂತಹುದೇ ಇತಿಹಾಸ ಈ ಹೊತ್ತಿಗೂ ನಡೆಯಬಹುದಾದ ಸಾಧ್ಯತೆಗಳು ನಮ್ಮೊಳಗಿವೆ ಎಂಬುದನ್ನು ನಿರಾಕರಿಸುವಂತಿಲ್ಲ. ಇಲ್ಲಿನ ರಾಜಕುಮಾರಿ ಸ್ವಪ್ನ ಮಂಟಪದ ರಕ್ಷಣೆಗಾಗಿ ಧಾವಿಸಿ ಸಾವನ್ನಪ್ಪುತ್ತಾಳೆ. ಅಂದರೆ ಇಲ್ಲಿ ತನ್ನ ಹಾಗೆ ಬಲಿಯಾದ ಜನಗಳ ನೋವಿಗೆ ಸ್ಪಂದಿಸುವ ಸೂಚನೆಯಾಗಿ ಈ ಪಾತ್ರ ಕಂಡುಬರುತ್ತದೆ. ಆದರೆ, ಎಲ್ಲವೂ ಕಾಲಗರ್ಭದಲ್ಲಿ ಹೂತು ಹೋಗುತ್ತವೆ. ಆದರೂ ಇಲ್ಲಿರುವ ನೋವಿನ ನೆಲೆಗಳು ಕಾದಂಬರಿ ಧ್ವನಿಗೆ ಒಂದು ಹೊಸ ಆಯಾಮ ಕೊಡುತ್ತವೆ. ಇತಿಹಾಸದ ಭ್ರಮೆಯಲ್ಲಿ ಹೂತವನನ್ನು ಮತ್ತು ಪುನ: ಇತಿಹಾಸ ನಿರ್ಮಾಣ ಮಾಡುವವನನ್ನು ಮಂಜುಳಾಳ ವಿವೇಕ ಎಚ್ಚರಿಸುತ್ತದೆ. ಆ ಮೂಲಕ ಮದನಿಕೆ, ಮದಲಾಸೆ, ರಾಜಕುಮಾರಿಯರ ದುರಂತವನ್ನು ತಪ್ಪಿಸಿಕೊಳ್ಳುತ್ತದೆ. ಇತಿಹಾಸದಲ್ಲಿ ಹೆಣ್ಣಿಗೆ ಸಿಗದೇ ಹೋದ ನ್ಯಾಯ, ಇಂದಿನ ವಸಾಹತುಶಾಹಿಗಳ ಹುನ್ನಾರಿನ ಸಂದರ್ಭದೊಳಗೆ ಪುನರಾವರ್ತನೆಯಾಗದಂತೆ ಜಾಗ್ರತ ವಹಿಸುತ್ತಾಳೆ; ಸಾಮುದಾಯಿಕವಾದ ಪರಿವರ್ತನೆಗೂ ಕಾರಣವಾಗುತ್ತಾಳೆ. ಇಂತಹ ಎಚ್ಚರದ ಪಾತ್ರಗಳ ನಿರ್ಮಿತಿಗಳು ಓದುಗನನ್ನು ಜಾಗೃತಗೊಳಿಸುತ್ತವೆ. ಆಗ 'ಸ್ವಪ್ನ ಮಂಟಪ' ಬರೀ ವೀಕ್ಷಣೀಯ ಸ್ಥಳವಾಗದೇ ಎಚ್ಚರದ ಪ್ರತೀಕವೂ ಆಗುತ್ತದೆ.

ಒಟ್ಟಾರೆ, ಇಲ್ಲಿಯ ಎಲ್ಲ ಕಾದಂಬರಿಗಳಲ್ಲೂ ಶೋಷಿತ ಮನಸ್ಸುಗಳು ಒಂದಾಗುವ ಮತ್ತು ಕ್ರಾಂತಿಯನ್ನು ಸ್ಫೋಟಿಸುವ ಸಂದರ್ಭಗಳೇ ಹೆಚ್ಚಾಗಿವೆ. ಈ ಮೂಲಕ ಮಾರ್ಕ್ಸ್‌ನ ನೆಲೆಯಲ್ಲಿ ವ್ಯವಸ್ಥೆಯನ್ನು ಪುನರ್ ನಿರ್ಮಾಣ ಮಾಡುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಇವರ ಇತ್ತೀಚಿನ ಕಾದಂಬರಿ 'ಶಬರಿ' ಸಾಮಾಜಿಕ ಪ್ರಸ್ತುತತೆಯನ್ನು ಒಳಗೊಂಡ ಕಾದಂಬರಿ ಎಂಬುದು ಇಲ್ಲಿ ಉಲ್ಲೇಖಾರ್ಹ.

**ವಿಚಾರ ಸಾಹಿತ್ಯ**

ನವೋದಯದ ರಸನಿಷ್ಠ ವಿಮರ್ಶೆ, ನವ್ಯ ಸಂದರ್ಭದ ಕೃತಿನಿಷ್ಠ ವಿಮರ್ಶೆ, ದಲಿತ ಬಂಡಾಯ ಕಾಲದ ಮಾರ್ಕ್ಸ್‌ವಾದಿ, ನವ ಮಾರ್ಕ್ಸ್‌ವಾದಿ, ಸಂಸ್ಕೃತಿ ನಿಷ್ಠ ಹಾಗೂ ಅಂತರ್ ಶಿಸ್ತೀಯ ವಿಮರ್ಶೆಯ ವಿಧಾನಗಳು ಕನ್ನಡ ಸಾಹಿತ್ಯವನ್ನು ಪುನರ್‌ವ್ಯಾಖ್ಯಾನಕ್ಕೆ ಒಳಪಡಿಸಿದವು. ಈ ಹಿನ್ನೆಲೆಯಲ್ಲಿ ಬರಗೂರರು ವಿಮರ್ಶಾ ಕ್ಷೇತ್ರಕ್ಕೆ ಪ್ರವೇಶ ಮಾಡಿದ್ದು ನವ್ಯ ಸಂದರ್ಭದಲ್ಲಿ. ಅದು ಅಂಕಣ ಬರಹಗಳ ಮೂಲಕ. ನಂತರ ದಲಿತ ಬಂಡಾಯ ಕಾಲದ ಎಲ್ಲಾ ವಿಧಾನಗಳನ್ನು ಬಹು ಎಚ್ಚರದಿಂದ ಬಳಸಿಕೊಂಡರು. ವಿಶೇಷವಾಗಿ, ಜಾಗತಿಕ ಮಾದರಿಗಳ ಬೆನ್ನು ಹತ್ತದೆ, ಸ್ಥಳೀಯ ಆಯಾಮಗಳನ್ನೇ ನಂಬಿಕೊಂಡರು. ಆ ಮೂಲಕ ಕನ್ನಡ ಸಾಹಿತ್ಯವನ್ನು ಪುನರ್ ಮೌಲ್ಯೀಕರಣಕ್ಕೆ ಒಳಪಡಿಸಿದರು.

**ರಾಜಕೀಯ ಚಿಂತನೆ (1990)**

ಪ್ರಸ್ತುತ ಕೃತಿ ಏಕಕಾಲಕ್ಕೆ ಕರ್ನಾಟಕದ ಭಾರತದ ಹಾಗೂ ವಿಶ್ವ ರಾಜಕೀಯದ ವಿದ್ಯಾಮಾನಗಳನ್ನು ಕುರಿತು ಚಿಂತಿಸುತ್ತದೆ. 'ರಾಜಕೀಯ ಚಿಂತನೆ' ಎಂದಾಕ್ಷಣ ಸಂಪೂರ್ಣವಾಗಿ ಸಾಹಿತ್ಯದ ಸ್ಪರ್ಶವಿಲ್ಲವೆಂದಲ್ಲ. ಸಾಹಿತ್ಯದ ಸ್ಪರ್ಶವನ್ನಿರಿಸಿಕೊಂಡೇ ರಾಜಕೀಯ ಚರಿತ್ರೆಯೊಳಗಿನ ಏಳುಬೀಳುಗಳನ್ನು ವಿಚಾರ ಮಾಡುತ್ತದೆ.

"ರಾಜಕೀಯ, ಸಾಮಾಜಿಕ ಬದಲಾವಣೆಗಳನ್ನು ವ್ಯಕ್ತಿ ಸ್ಥಿತಿಗಳ ಹಿನ್ನೆಲೆಯಲ್ಲಿ ವಿಮರ್ಶಿಸುವ ಇಲ್ಲಿಯ ಬರಹಗಳು ನಮ್ಮ ವ್ಯವಸ್ಥೆಯ ಕಾಣದ ಮುಖಗಳನ್ನು ತೆರೆದು ತೋರಿಸುತ್ತವೆ. ಈ ಬರಹಗಳ ಅಂತರದಲ್ಲಿ ಮಾನವೀಯ ಮೌಲ್ಯಗಳ ಮತ್ತು ಜನಪರ ಕಾಳಜಿಯ ಮಿಡಿತವಿದೆ. ಎಲ್ಲಕ್ಕೂ ಮಿಗಿಲಾಗಿ ಈ ಲೇಖನಗಳನ್ನು ಬಿಡಿಯಾಗಿ ಓದಲಿ, ಒಟ್ಟಾರೆಯಾಗಿ ನೋಡಲಿ, ಎಲ್ಲೂ ದ್ವಂದ್ವ ಅಥವಾ ವಿರೋಧಾಭಾಸಗಳು ಕಂಡುಬರುವುದಿಲ್ಲ. ಕನ್ನಡಸಾಹಿತಿಯೊಬ್ಬ ನಾನು ಇರುವ ರಾಜಕೀಯ ಸಾಮಾಜಿಕ ವ್ಯವಸ್ಥೆಯ ಬಗ್ಗೆ ಹೀಗೆ ಬರೆದಿರುವುದು ಬಹುಶಃ ಇದೇ ಮೊದಲನೆಯದಿರಬೇಕು" ಎನ್ನುವ ವೈ.ಎಸ್.ವಿ.ದತ್ತ ಅವರ ಮಾತುಗಳು ಸತ್ಯಕ್ಕೆ ಸಮೀಪವಾಗಿವೆ.

ಇಲ್ಲಿ, ಒಟ್ಟು ಬರಹಗಳ ಹಿಂದೆ ಪ್ರಜಾಪ್ರಭುತ್ವ ವ್ಯವಸ್ಥೆ ಒಳಗೊಳ್ಳಬೇಕಾದ/ ಒಳಗೊಂಡ ಮಾನವೀ ಮೌಲ್ಯಗಳ ಶೋಧವಿದೆ. ಈ ವ್ಯವಸ್ಥೆಯೊಳಗಡೆ "ಜಾತಿ ಮಟ್ಟದ ಶೋಷಣೆಯ ಅವಕಾಶವನ್ನು ನಮ್ಮ ನಾಡಿನ ಪ್ರಮುಖ ಜಾತಿಗಳಾವುವೂ ಬಿಟ್ಟು ಕೊಟ್ಟಿಲ್ಲ ಎಂಬುದಕ್ಕೆ ನಿದರ್ಶನವನ್ನು ಕೊಡಬೇಕಾಗಿಲ್ಲ. ನಿಷ್ಪಕ್ಷವಾಗಿ, ಶೋಷಣೆ ಜಾತಿಗಿಂತ ವರ್ಗ ಸ್ವರೂಪದ್ದಾಗಿದೆ. ನೋಡುವ ಕಣ್ಣಿದ್ದರೆ ಆ ಚಿತ್ರ ನಿಚ್ಚಳವಾಗಿದೆ." ಎಂದ ಗುರುತಿಸುವ ಖಚಿತತೆ ಇಲ್ಲಿನ ಬರಹಗಳಿಗಿವೆ. ಉದಾಹರಣೆಗೆ 'ಗುಪ್ತಗುಲಾಮಗಿರಿ', 'ಬಂಡವಾಳಶಾಹಿಯಾಗಿ ಹೆಂಡದ ಬೆಳವಣಿಗೆ', 'ದೂರದರ್ಶನದ ರಾಜಕೀಯ', ಮುಂತಾದವು.

"ಪ್ರಜಾಪ್ರಭುತ್ವವೆಂದರೆ ಅಬ್ರಹಾಂಲಿಂಕನನ ಹೇಳಿಕೆಯಷ್ಟೇ ಸರ್ವಾಂಗ ಸ್ಪಷ್ಟ ಎಂದ ಗುರುತಿಸಿಕೊಳ್ಳದೇ ಅದು ನಾವು ತಲುಪಬೇಕಾದ ಮಾರ್ಗವನ್ನು ಮಾತ್ರ ಸ್ಪಷ್ಟವಾಗಿ ಹೇಳಿದೆ ಎನ್ನುತ್ತಾರೆ. ಈ ಗುರಿಮುಟ್ಟುವ ಮಾರ್ಗ ಮತ್ತು ಕಾರ್ಯಾಚರಣೆಯ ಸ್ವರೂಪಗಳು ಆಯಾದೇಶದ ಸಂದರ್ಭದಲ್ಲಿ ನಿರ್ಣಯವಾಗಬೇಕಿದೆ." ಹೀಗೆ ನಿರ್ಣಯಗೊಳ್ಳಬೇಕಾದ ಪ್ರಜಾಪ್ರಭುತ್ವ ವ್ಯವಸ್ಥೆ ಬಡವರ ಹೆಸರಿನಲ್ಲಿ ಬಲ್ಲಿದರ ಪರವಾಗಿ ರೂಪುಗೊಂಡಿದೆ. ಇಡೀ ವ್ಯವಸ್ಥೆಯೇ ದೋಷಪೂರಿತವಾದ್ದರಿಂದ ಅದರ ಆಶ್ರಯದಲ್ಲಿ ನಡೆಯುವ ಯಾವುದೇ ಸೇವೆ ಸುಧಾರಣೆಗಳಿಗೆ ಸ್ವಹಿತವೊಂದು ಇರುವ ಸಂಭವವೇ ಹೆಚ್ಚಾಗಿದೆ. ಇದನ್ನು 'ದೇವರಾಜ್ ಅರಸು ಒಂದು ನೆನಪು.' ದಲಿತರ ಧ್ವನಿ ಅಂಬೇಡ್ಕರ್', 'ಇಂದಿರಾಗಾಂಧಿ', 'ಗೆಲ್ಲುತ್ತಲೇ ಸೋಲಿನತ್ತ ಸಾಲಿನತ್ತ', 'ಹೆಗಡೆ ಅಧಿಕಾರಾವಧಿ ತಂತ್ರಪ್ರಧಾನ ಪರ್ವ', 'ಇಂದಿರಾ ನಂತರ ಲೋಕಸಭಾ ಚುನಾವಣೆ', 'ರಾಜ್ಯದ ರಾಜಕೀಯ', 1986 'ಕಾರ್ಮಿಕ ಸಂಘಟನೆ ನೂರುವರ್ಷ', 'ಜಿಲ್ಲಾಪರಿಷತ್ತಿನ ಫಲಿತಾಂಶ', ಈ ಲೇಖನಗಳ ಹಿಂದೆ ಗ್ರಹಿಸಬಹುದಾಗಿದೆ.

'ಒಟ್ಟು ರಾಜಕೀಯ ವ್ಯವಸ್ಥೆಯಲ್ಲಿ ಸಂಕಲ್ಪಶಕ್ತಿಯನ್ನು ಆತ್ಮಹತ್ಯೆ ಮಾಡಿಕೊಂಡು, ಅಧಿಕಾರವನ್ನು ತಂತ್ರ ಪ್ರಧಾನವಾಗಿಸಿಕೊಳ್ಳಲಾಗಿದೆ. ಗೆಲ್ಲುತ್ತಲೇ ಬಂದರೂ ಅಂತರಂಗದ ಅಭದ್ರತೆ ನಾಶವಾಗದೇ ಇರುವ ಸ್ಥಿತಿ ನಿರ್ಮಾಣವಾಗಿದೆ. ಆದ್ದರಿಂದ ನಮ್ಮ ರಾಜಕಾರಣವು ಇಲ್ಲಿರುವ ಸ್ಥಿತಿಯನ್ನು ಬದಲಾಯಿಸಿ, ಜಡತ್ವಕ್ಕೆ ಚುರುಕು ಮುಟ್ಟಿಸುವ ಪ್ರಕ್ರಿಯೆಯಾಗಬೇಕಿದೆ.

ಹೀಗಾದಾಗಲೇ ಹೊಸ ಆಲೋಚನೆಯ ಸಾಧ್ಯತೆಗಳು ರೂಪುಗೊಳ್ಳುವುದಕ್ಕೆ ಸಾಧ್ಯ. ಈ ಸ್ಥಿತ್ಯಂತರ ಸ್ಥಿತಿಯು ಜನರ ಮನಸ್ಸನ್ನು ತಲುಪುವುದಕ್ಕೆ ಸಾಧ್ಯ.' ಎನ್ನುವ ಮನೋಭಾವ ಇಲ್ಲಿಯ ಒಟ್ಟು ಲೇಖನಗಳ ಆಶಯವಾಗಿದೆ.

ವ್ಯಕ್ತಿಯನ್ನು ಆರ್ಥಿಕ ಪದ್ಧತಿಯ ಅಡಿಯಾಳಾಗದಂತೆ ನೋಡಿಕೊಳ್ಳುವುದು ಸಮಾಜವಾದದ ಇಂದಿನ ತುರ್ತಾಗಿದೆ. ಇಂತಹ ಸೂಕ್ಷ್ಮ ನೋಟಗಳ ಪ್ರತೀಕವಾಗಿ ಇಲ್ಲಿನ 'ಈ ನಟರು ಸೋತದ್ದೇಕೆ' ಎನ್ನುವ ಲೇಖನದಿಂದ ನಮಗೆ ಕಾಣಸಿಗುತ್ತದೆ. ಇಂದು ಚರ್ಚೆಗೊಳಗಾಗುತ್ತಿರುವ 'ಪ್ರಾದೇಶಿಕತೆ' ಎಂಬ ಪರಿಕಲ್ಪನೆ ಸಂಸ್ಕೃತದ ಪ್ರಭಾವದಿಂದ ಪಾರಾಗುವ ಪ್ರಕ್ರಿಯೆಯದಾಗಿದೆ. ಹಾಗೇನೆ, ರಾಷ್ಟ್ರೀಯತೆಯ ಪರಿಕಲ್ಪನೆ ಬ್ರಿಟೀಷರ ಕಾಲದಲ್ಲಿ ರೂಪುಗೊಂಡಿದೆ. ಇಲ್ಲಿ ರಾಷ್ಟ್ರೀಯತೆ ಮತ್ತು ಪ್ರಾದೇಶಿಕತೆಯ ಸಂಬಂಧವು ಸಾಂಸ್ಕೃತಿಕ ಸ್ವಾಯತ್ತೆಯೆಯ ಪ್ರಶ್ನೆಯಾಗಿರುವಂತೆ, ಆರ್ಥಿಕ ಪ್ರಶ್ನೆಯೂ ಆಗಿದೆ. ರಾಜ್ಯಗಳಿಗೆ ಆರ್ಥಿಕವಾಗಿ ಸಾಕಷ್ಟು ಸ್ವಾಯತ್ತತೆ ದೊರಕಿಸಿಕೊಳ್ಳುವ ವೈಚಾರಿಕ ಹೋರಾಟ ಇಂದಿನ ಅಗತ್ಯ ಎನ್ನುವುದು ಬರಗೂರರ ಚಿಂತನೆಯಾಗಿದೆ. ಒಟ್ಟಾರೆಯಾಗಿ ಹೆಳುವುದಾದರೆ, ಸಮೂಹಮಾಧ್ಯಮ, ಸಮೂಹ ಸನ್ನಿ, ಮಹಿಳೆ, ಕಾರ್ಮಿಕವರ್ಗ, ಸಂಪ್ರದಾಯ, ಆಡಳಿತವ್ಯವಸ್ಥೆ, ರಾಷ್ಟ್ರೀಯತೆ, ಪ್ರಾದೇಶಿಕತೆ ಇವೆಲ್ಲವುಗಳ ಹಿಂದೆ ರಾಜಕೀಯ ಪ್ರಭಾವವಿದೆ. ಇದನ್ನು ಗುರುತಿಸುವ ಕ್ರಿಯೆಯ ಜೊತೆಗೆ ಎಜುಕೇಟೀವ್ ಆದ ಲಕ್ಷಣವೂ ಇಲ್ಲಿದೆ.

**ಇಣುಕು ನೋಟ (1991)**

ಬೇರೆಯವರ ಕೃತಿಗಳಿಗೆ ಬರೆದ ಮುನ್ನುಡಿ, ಬೆನ್ನುಡಿ, ಹಾಗೂ ವಿಶ್ಲೇಷಣಾ ಬರಹಗಳ ಸಂಕಲನವೇ 'ಇಣುಕುನೋಟ' ಹದಿಮೂರು ಮುನ್ನುಡಿಗಳಲ್ಲಿ ಬಂಡಾಯ ಕಾವ್ಯ ಮತ್ತು ಕಥೆಯ ರಚನೆಗಳು ಒಳಗೊಳ್ಳಬೇಕಾದ ರೂಪುರೇಷೆಗಳಿವೆ. ಕಂಬಾರರು ನಾಯಿಕತೆ ನಾಟಕದ ಮೂಲಕ ವ್ಯಕ್ತಪಡಿಸಿದ ಭಾಷೆ ಹಾಗೂ ನಾಟಕ ಒಳಗೊಳ್ಳುವ ಸಾಮಾಜಿಕ ಆಯಾಮವನ್ನು ಇಲ್ಲಿ ವಿಶ್ಲೇಷಣಾತ್ಮಕವಾಗಿ ಗುರುತಿಸಲಾಗಿದೆ.

ಜಂಬಣ್ಣ ಅಮರಚಿಂತರ 'ಅದೋಜಗತ್ತಿನ ಅಕಾವ್ಯ' ಎನ್ನುವ ಕವನ ಸಂಕಲನಕ್ಕೆ ಬರೆದ ಮುನ್ನಡಿಯಲ್ಲಿ ಬಂಡಾಯದ ನೆಲೆಗಳನ್ನು ಮುಖ್ಯವಾಗಿಸಿ

ಗ್ರಹಿಸಲಾಗಿದೆ. ಜನಪದ ಆಚರಣೆ, ಲಯ ಮತ್ತು ನೀತಿಗಳನ್ನು ಬಳಸಿಕೊಳ್ಳುತ್ತ ಹೊಸ ನೆಲೆಗೆ ಕೊಂಡೊಯ್ಯುವ ಈ ರಚನೆಗಳು 'ಸಂಸ್ಕೃತಿ ಮಹತ್ವ' ಮತ್ತು 'ಪ್ರಯೋಗ ಶೀಲತೆ'ಯನ್ನು ಒಟ್ಟಿಗೆ ಸಾಧಿಸುತ್ತವೆ. ಈ ಕವನ ಸಂಕಲನದಲ್ಲಿ ದೃಢವಾಗಿ ಬೆಳೆಯುತ್ತಿರುವ ಕವಿಯನ್ನು ಸಾರ್ಥಕ ರಚನೆಗಳ ಮೂಲಕ ಪರಿಚಯಿಸಿದ್ದಾರೆ. ಅಲ್ಲದೆ, ಬಂಡಾಯ ಕವಿತೆ ಒಳಗೊಳ್ಳಬೇಕಾದ ವಸ್ತು ಧೋರಣೆಗಳ ಕಡೆಗೆ ಗಮನಹರಿಸಿದ್ದಾರೆ.

ಈ ಮುನ್ನುಡಿಗಳ ಅಧ್ಯಯನವೆಂದರೆ ಬಂಡಾಯ ಕಾವ್ಯದ ರೂಪುರೇಷೆಗಳ ಅಧ್ಯಯನವೇ ಆಗುತ್ತದೆ. ಜೊತೆಗೆ ಬಂಡಾಯ ಕವಿಗಳ ಪರಿಚಯವೂ ಸಿಗುತ್ತದೆ. ಚರಿತ್ರೆಯ ಒತ್ತಾಸೆಯಾಗಿ ಬಂಡಾಯ ಸಾಹಿತ್ಯ ಸಂದರ್ಭ ಮೂಡಿರುವಾಗ ಲೇಖಕನ ಅಭಿವ್ಯಕ್ತಿಯ ರೀತಿಗಳೇನು? ಎನ್ನುವುದನ್ನು ಸಹ ಪಾತ್ರೋಟರ 'ಜಾಜಿಮಲ್ಲಿಗೆ' ಕವನ ಸಂಕಲನದ ಮುನ್ನುಡಿಯಲ್ಲಿ ಕಾಣುತ್ತೇವೆ.

"ಬಂಡಾಯ ಕಾವ್ಯವನ್ನು ಸಾಂಸ್ಕೃತಿಕ ಸಂದರ್ಭಗಳ ಹಿನ್ನೆಲೆಯಲ್ಲಿ ನೋಡಿದಾಗ ಅದರ ಗುಣದೋಷಗಳ ವಿಶ್ಲೇಷಣೆ ಮಹತ್ವದ್ದಾಗುತ್ತದೆ. ಯಾಕೆಂದರೆ ಸುಂದರ ಕಾವ್ಯ ರಚನೆಯಲ್ಲಿ ಸಾರ್ಥಕತೆ ಕಾಣುವ ಬದಲು, ಸುಂದರ ಬದುಕಿಗೆ ಆಶಿಸುವ ಸಾರ್ಥಕ ಒತ್ತಾಸೆಹೊಂದಿದ ಚಳುವಳಿಯಲ್ಲಿ ಬಂಡಾಯ ಕಾವ್ಯ ಹುಟ್ಟುತ್ತದೆ. ಇದರ ಚಾರಿತ್ರಿಕ ಸಾಂಸ್ಕೃತಿಕ ವಿಶ್ಲೇಷಣೆಯ ಭಾಗವಾಗಿಯೇ ಸಾಹಿತ್ಯಕ ಮಹತ್ವವೂ ಅನಾವರಣಗೊಳ್ಳಬೇಕು" ಎನ್ನುತ್ತಾರೆ. ಹಾಗೆಯೇ ಆರ್.ಜಿ. ನಾಗರಾಜರ ಸಿಡಿದವರು.

**ಬಂಡಾಯ ಸಾಹಿತ್ಯ ಮೀಮಾಂಸೆ (1991)**

ಬಂಡಾಯ ಸಾಹಿತ್ಯ ಚಳವಳಿ: ಒಂದು ಚಿಂತನೆ ಎನ್ನುವ ಕಿರು ಹೊತ್ತಿಗೆ 1981ರಲ್ಲಿ ಪ್ರಕಟಗೊಂಡಿದೆ. ಈ ಕಿರು ಹೊತ್ತಿಗೆ ಬಂದ ಒಂದು ದಶಕದ ನಂತರ' ಬಂಡಾಯ ಸಾಹಿತ್ಯ ಮೀಮಾಂಸೆ' ಎನ್ನುವ ವಿಸ್ತೃತ ರೂಪದ ಕೃತಿಯಾಗಿ 1991ರಲ್ಲಿ ಪ್ರಕಟಗೊಂಡುದಾಗಿದೆ. ಈ ಎರಡು ಕೃತಿಗಳಲ್ಲಿಯೂ ಈ ಸಂದರ್ಭಕ್ಕೆ ಅತೀ ಅವಶ್ಯಕವಾದ ಬಂಡಾಯ ಸಾಹಿತ್ಯ ಮೀಮಾಂಸೆಯನ್ನು ಕಟ್ಟಿಕೊಡುವ ಪ್ರಯತ್ನ ಇಲ್ಲಿಯದು.

1979 ಮಾರ್ಚ್ 10–11ರಿಂದ ಆರಂಭವಾದ ಮೊದಲನೇ ಬಂಡಾಯ ಸಾಹಿತ್ಯ ಸಮ್ಮೇಳನದ ನಂತರದಲ್ಲಿ ಅಂದರೆ 1991ರಲ್ಲಿ ಬಂದ ಈ ಕೃತಿಯು ಬಂಡಾಯ ಸಾಹಿತ್ಯಕ್ಕೊಂದು ಮಾರ್ಗದರ್ಶಿಯಾಗಿದೆ. ಮುಖ್ಯವಾಗಿ ಬಂಡಾಯ ಚಳವಳಿ ಹಾಗೂ ಸಾಹಿತ್ಯವನ್ನು ನಿರ್ಮಿಸಿಕೊಳ್ಳಬೇಕಾದ ಅಗತ್ಯತೆ, ಸ್ವರೂಪ, ಲಕ್ಷಣಗಳನ್ನು ಕುರಿತ ತಾತ್ವಿಕ ಚಿಂತನೆಗಳ ಅಭಿವ್ಯಕ್ತಿಯಾಗಿದೆ.

ಈ ಕೃತಿ ಸಂಘಟನೆಗೊಂದು ದಿಕ್ಸೂಚಿಯೆಂದು ಭಾವಿಸಿದ್ದೇನೆ. ಬಂಡಾಯ ಸಾಹಿತ್ಯ ಸಂಘಟನೆ ಇವೊತ್ತು ಗಟ್ಟಿಯಾಗಿ ರೂಪುಗೊಂಡಿದ್ದರೆ ಅದಕ್ಕೆ ಬರಗೂರರ ತೊಡಗಿಸಿಕೊಳ್ಳುವಿಕೆಯೂ ಮುಖ್ಯ ಕಾರಣ ಎಂದು ಪ್ರಕಾಶಕರಾಗಿ ಇರುವ ಆರ್.ಜಿ.ಹಳ್ಳಿ, ನಾಗರಾಜ್ ಅವರ ಮಾತುಗಳು ಸರಿ ಎನಿಸುತ್ತವೆ.

ಪ್ರಧಾನವಾಗಿ ಈ ಕೃತಿಯಲ್ಲಿ ಬಂಡಾಯ ಸಾಹಿತ್ಯ ಚಳವಳಿಯ ಅಗತ್ಯತೆಯನ್ನು ಬರಗೂರರು ಹೀಗೆ ವಿವರಿಸುತ್ತಾರೆ: "ನಮ್ಮ ಸಂಸ್ಕೃತಿಕ ಕ್ಷೇತ್ರದಲ್ಲಿ ಅನೇಕ ವರ್ಷಗಳಿಂದ ಕಂಡುಬರುತ್ತಿರುವ ಪ್ರಗತಿಪರ ಧೋರಣೆಗಳು, ತೆಗೆದುಕೊಂಡ ತಿರುವುಗಳು, ಎದುರಿಸಿದ ಸಮಸ್ಯೆಗಳು ಮತ್ತು ತಲುಪಿದ ಕ್ಷೀಣ ನೆಲೆಗಳನ್ನು ಗಮನಿಸಿದಾಗ ಅವುಗಳಿಂದ ಪಾಠ ಕಲಿತ ವ್ಯಾಪಕ ಸ್ವರೂಪದ ಸಂಘಟನೆಯ ಅಗತ್ಯ ಗೊತ್ತಾಗುತ್ತದೆ." ಎನ್ನುತ್ತಾರೆ. ಹೀಗೆ ಚರಿತ್ರೆಯ ಅನಿವಾರ್ಯ ಒತ್ತಾಸೆಗಳಲ್ಲಿ ಸಂಘಟನೆ ಅದಕ್ಕೆ ಪೂರಕವಾದ ಸಾಹಿತ್ಯ ನಿರ್ಮಾಣವಾಗಬೇಕಾದುದು ಅನಿವಾರ್ಯದ ಅರಿವಾಗುತ್ತದೆ.

ಹೀಗೆ ಚರಿತ್ರೆಯ ಒತ್ತಾಸೆಗಳಲ್ಲಿ ನಿರ್ಮಾಣಗೊಂಡ ಸಾಹಿತ್ಯದ ನಿಲುವುಗಳಾದರೂ ಏನು? ಎಂಬ ಪ್ರಶ್ನೆಗೆ 'ಜನವಿರೋಧಿ ನಿಲುವುಗಳು ವಿವಿಧ ಮುಖವಾಡಗಳ ಮರೆಯಲ್ಲಿ ಒಂದಾಗಿ ವಿಜೃಂಭಿಸುತ್ತಿರುವ ಈ ಸಂದರ್ಭ ಪ್ರಗತಿಪರ ಧೋರಣೆ ಎಲ್ಲರಿಗೂ ಒಂದು ಸವಾಲು. ಈ ಸವಾಲಿಗೂ ನಮ್ಮ ಉತ್ತರ ಎಲ್ಲ ವಾಮಪಂಥೀಯರ ಸಂಘಟನೆ ಮತ್ತು ಸ್ಪಷ್ಟಪಡಿಸುವುದಾರೆ, ಸಮಕಾಲೀನ ಚರಿತ್ರೆಯ ಬೆಳವಣಿಗೆಯ" ಸ್ವರೂಪದಿಂದಾಗಿ ಎಲ್ಲ ವಾಮಪಂಥೀಯರ ಸಾಂಸ್ಕೃತಿ ಒಗ್ಗಟ್ಟು ಈಗ ಅತ್ಯಂತ ಮುಖ್ಯವಾದದ್ದು. ಈ ದಿಕ್ಕಿನಲ್ಲಿ ಬಂಡಾಯ ಸಾಹಿತ್ಯ ಚಳವಳಿಯು ಕನ್ನಡ ಸಾಂಸ್ಕೃತಿಕ ಕ್ಷೇತ್ರದಲ್ಲಿ ಅತ್ಯಂತ ವ್ಯಾಪಕವಾಗಿ ಹಬ್ಬುವ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು.

ಶೋಷಿತ ಜನತೆಯ ಪರವಾದ ನಿಲುವುಗಳನ್ನು ಸಾಂಸ್ಕೃತಿಕ ಕ್ಷೇತ್ರದಲ್ಲಿ ಭದ್ರವಾಗಿ ನೆಲೆಗೊಳಿಸುವುದ ನಮ್ಮ ಮುಖ್ಯಗುರಿಗಳಲ್ಲೊಂದಾಗಬೇಕು. ನಮ್ಮ ಹೋರಾಟ ಪ್ರಧಾನವಾಗಿ ಸಾಂಸ್ಕೃತಿ ಕ್ಷೇತ್ರಕ್ಕೆ ಸಂಬಂಧಿಸಿದ್ದು, ಎನ್ನುವ ಚಿಂತನೆಗಳನ್ನು ಪ್ರಧಾನವಾಗಿಡುತ್ತಾರೆ.

ಒಟ್ಟಾರೆ, ಈ ಸಂದರ್ಭದ ಅಗತ್ಯಗಳಾದ ಅಸ್ಪೃಶ್ಯತೆ, ಜಾತಿಪದ್ಧತಿ, ಲಿಂಗಭೇದ ಮತ್ತು ವರ್ಗಭೇದ ನೀತಿಯ ವಿರುದ್ಧ ಹೋರಾಟವನ್ನು ಕಟ್ಟುವುದು ಜನಪರವಾದ ಎಲ್ಲ ನಿಲುವುಗಳಿಗೆ ಬೆಂಬಲವನ್ನು ಕೊಡುವುದಾಗಿದೆ. ಈ ಸಂದರ್ಭದಲ್ಲಿ ಬಂಡಾಯ ಸಾಹಿತಿಯಾದವನು ನಿಲ್ಲುವ ಜನಪರತೆಗೆ ವಿರುದ್ಧವಾದದ್ದರಿಂದ ವಿರೋಧವನ್ನು ಎದುರಿಸಲೇಬೇಕಾದುದು ಅನಿವಾರ್ಯ.

ಮೊದಲಿಗೆ ಇಂತಹ ವಿಧದ ನೆಲೆಯಿಂದ ಹುಟ್ಟಿದ ಬಂಡಾಯ ಸಾಹಿತ್ಯ ಹಾಗೂ ಸಂಘಟನೆಗಳು ಗ್ರಾಮೀಣ ಬದುಕನ್ನು ತಮ್ಮ ಅನುಭವ ದ್ರವ್ಯವನ್ನಾಗಿಸಿಕೊಂಡಿವೆ. ಅಲ್ಲಿನ ಮಿಥ್‌ಗಳನ್ನು ಒಡೆಯಲು ಆರಂಭಿಸಿದುದು ಬಂಡಾಯ ಸಾಹಿತ್ಯ ಚಳುವಳಿಯ ಪ್ರಧಾನ ಆಶಯಗಳಲ್ಲೊಂದು ಎನ್ನುವ ಕೃತಿಯಲ್ಲಿ ಸೂಚನೆಗಳು ಗಮನಾರ್ಹವಾದುವು.

ಇಂತಹ ಅನುಭವ ದ್ರವ್ಯವನ್ನೊಳಗೊಂಡು ಹೆಜ್ಜೆ ಇಡುತ್ತಿರುವ ಬಂಡಾಯ ಸಾಹಿತಿಯ ಕನಸಿನ ಸಮಾಜ ಇನ್ನೂ ರೂಪುಗೊಳ್ಳಬೇಕಿದೆ. ಈ ಸಾಹಿತಿಯ ಕನಸಿನ ಅಥವಾ ಆಶಯದ ಸಮಾಜಕ್ಕೂ ಈಗಿರುವ ವಾಸ್ತವಕ್ಕೂ ಅಂತರವಿದೆ. ಆದ್ದರಿಂದ ಆಶಯ ಮತ್ತು ವಾಸ್ತವಗಳ ನಡುವಿನ ಅಂತರದಲ್ಲಿ ಹುಟ್ಟುವ ಇಂಥಹ ಬಿಕ್ಕಟ್ಟನ್ನು ಬಂಡಾಯ ಸಾಹಿತಿಗಳು ತಮ್ಮ ಸೃಜನಾತ್ಮಕ ನೆಲೆಯ ನಿಷ್ಠೆಯಿಂದ ಪರಿಹರಿಸಿಕೊಳ್ಳಬೇಕು ಎನ್ನುವ ಸೂಚನಾತ್ಮಕ ಮಾತುಗಳು ಗಮನೀಯ.

ಬಿಕ್ಕಟ್ಟನ್ನು ಪರಿಹರಿಸಿಕೊಳ್ಳಬೇಕಾದಲ್ಲಿ ಸಾಹಿತ್ಯ ಪರಂಪರೆಯೊಂದು ಏನನ್ನು ಕುರಿತು ಮಾತನಾಡುತ್ತದೆ. ಹೇಗೆ ಮಾತನಾಡುತ್ತದೆ ಎನ್ನುವುದರ ಜೊತೆಗೆ ಏನನ್ನ ಕುರಿತು ಮೌನವಹಿಸಿದೆ ಎನ್ನುವುದು ಮುಖ್ಯ. ಮಾತು ಮಾತ್ರ ನಮ್ಮ ಗಮನದಲ್ಲಿ ಇರಬೇಕಾಗಿಲ್ಲ. ಮಾತನ್ನು ಕುರಿತು ಮಾತನಾಡುವಾಗಲೇ ನಾವು ಏನನ್ನು ಕುರಿತು ಮೌನವಹಿಸಿವೆ ಎಂಬುದನ್ನು ಕಂಡುಕೊಳ್ಳಬೇಕಾಗುತ್ತದೆ.

ಈ ಕ್ರಿಯೆಯಿಂದ "ಕಾಲಘಟ್ಟದಲ್ಲಿ ಹೆಪ್ಪುಗಟ್ಟಿದ ಮೌನಕ್ಕೆ ಮಾತುಕೊಡುವ ಕ್ರಿಯಾಶೀಲತೆಯ ಫಲವೇ ಬಂಡಾಯ ಸಾಹಿತ್ಯ" ಎಂದು ಖಚಿತತೆಯನ್ನು ನೀಡುತ್ತಾರೆ. ಹಸಿವಿನ ಸಮಸ್ಯೆಯ ಮೂಲಕ ಕಾಲಘಟ್ಟವೊಂದನ್ನು ಕಂಡುಕೊಳ್ಳುವ ಪ್ರಯತ್ನ ಮಾಡುತ್ತಾರೆ.

ಒಟ್ಟಾರೆ ಕ್ರೂರ ವ್ಯವಸ್ಥೆಯ ಸರ್ವಸೂತ್ರಗಳ ವಿರುದ್ಧ ಬಂಡೆದ್ದ ಮನೋಧರ್ಮವೇ ಬಂಡಾಯ ಸಾಹಿತ್ಯ ಚಳವಳಿಯ ಮೂಲ ಪ್ರೇರಣೆ. ಮನುಷ್ಯ ಮನುಷ್ಯರ ನಡುವೆ ಕಲ್ಲಿನಕೋಟೆ ಕಟ್ಟುವ ಅಮಾನವೀಯ ಬದುಕನ್ನು ಹಸನುಗೊಳಿಸುವ ಆಕಾಂಕ್ಷೆ ಈ ಚಳವಳಿಯ ಬೆನ್ನೆಲುಬು ಎಂದು ಬಂಡಾಯ ಸಾಹಿತ್ಯದ ಹುಟ್ಟು ಹಾಗೂ ಅದರ ಆಶಯವನ್ನು ಇನ್ನಷ್ಟು ಸ್ಪಷ್ಟವಾಗಿ ಗುರುತಿಸುತ್ತಾರೆ.

ಒಟ್ಟು ಈ ಕೃತಿಯಲ್ಲಿ ಬಂಡಾಯ ಸಾಹಿತ್ಯ ಕಟ್ಟಿಕೊಳ್ಳುವ ಪರಂಪರೆ, ಲೇಖಕನಿಗಿರಬೇಕಾದ ರಾಜಕೀಯ ಪ್ರಜ್ಞೆ, ಸಾಮಾಜಿಕ ಪ್ರಜ್ಞೆ, ಬದ್ಧತೆ, ಸಾರ್ವಕಾಲಿಕತೆ, ಕಲಾತ್ಮಕತೆ, ಕಾವ್ಯದ ಕ್ರಿಯಾತ್ಮಕತೆ ಮತ್ತು ಕಲಾತ್ಮಕತೆಯ ಅಂತರ್‌ಸಂಬಂಧ, ದಲಿತಬಂಡಾಯಗಳ ಅಂತರ್ ಸಂಬಂಧ, ಸ್ತ್ರೀಪರ ಚಿಂತನೆಗಳು ಲೇಖಕ ಹಾಗೂ ಸಾಹಿತ್ಯವನ್ನು ಒಳಗೊಳ್ಳುವ ಬಗೆ ಹೇಗೆ? ಎಂಬುದನ್ನು ತಾತ್ವಿಕ ಚಿಂತನೆಗಳ ಮೂಲಕ ವಿವರಿಸಿರುವುದಲ್ಲದೆ; ಬಂಡಾಯ ಸಾಹಿತ್ಯವನ್ನು ಕುರಿತು ವಿಮರ್ಶೆಯ ಮಾನದಂಡಗಳಿರಬೇಕಾದ ಬಗೆಯನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ.

ಬಂಡಾಯ ಸಂದರ್ಭದಲ್ಲಿನ ಅಭಿವ್ಯಕ್ತಿಶೋಧ ಸಾಹಿತ್ಯಕ್ಕೆ ಅಷ್ಟೇ ಮಾತ್ರವಲ್ಲ ವಿಮರ್ಶೆಗೂ ಅನ್ವಯಿಸುತ್ತದೆ. ಹಾಗೆ ನೋಡಿದರೆ ಶೋಧದ ನಿರಂತರತೆ ಸಾಹಿತ್ಯಕ್ಕಿಂತ ಹೆಚ್ಚಾಗಿ ವಿಮರ್ಶೆಗೆ ಅಗತ್ಯ. ಇಲ್ಲದಿದ್ದರೆ ಸಾಹಿತ್ಯದ ಹೊಸ ಹುಟ್ಟುಗಳನ್ನು ಅರ್ಥಮಾಡಿಕೊಳ್ಳದೆ ಪೂರ್ವಾಗ್ರಹ ಪೀಡಿತ ಅನರ್ಥಗಳಿಗೆ ಕಾರಣವಾಗುವ ಸಂಭವವೇ ಹೆಚ್ಚು ಎನ್ನುವ ಅಂಶಗಳನ್ನು ಇಲ್ಲಿ ಪ್ರಧಾನವಾಗಿಸಿದ್ದಾರೆ. ಒಟ್ಟಾರೆ ಬಂಡಾಯ ಸಾಹಿತಿಗಳು ಮಾನವತಾವಾದಿಗಳು, ಅನುಕಂಪ ಸಹಾನುಭೂತಿಗಳ, ಭಾವನಾತ್ಮಕ ಸ್ಪಂದನಗಳನ್ನು ಮೀರಿ ಸೈದ್ಧಾಂತಿಕ ಸ್ವರೂಪ ಪಡೆಯುವ ನಿರ್ದುಷ್ಟತೆ, 'ಮಾನವತಾವಾದ' ಎಂಬ ಪರಿಕಲ್ಪನೆಯಿಂದ

ಕೂಡಿದ್ದಾಗಿದೆ ಎಂಬುದು 'ಬಂಡಾಯ ಸಾಹಿತ್ಯ ಮೀಮಾಂಸೆ' ಎನ್ನುವ ಕೃತಿಯ ಉದ್ದಕ್ಕೂ ಹರಿದಿರುವ ತಾತ್ವಿಕತೆಯಾಗಿದೆ.

### ಸಂಸ್ಕೃತಿ ಮತ್ತು ಸೃಜನಶೀಲತೆ (1991)

ಇಲ್ಲಿನ ಸುಮಾರು ಹದಿನೆಂಟು ಲೇಖನಗಳು 'ಸಾಂಸ್ಕೃತಿಕ' ಚಿಂತನೆಯಿಂದ ಕೂಡಿದವು. ಇವು ಹೆಚ್ಚಾಗಿ ಪ್ರಾದೇಶಿಕ ಚೌಕಟ್ಟಿನ ಆಯಾಮವನ್ನು ಹೊಂದಿವೆ. ಆದರೆ, 'ಮಂಡೇಲ: ಮಾನವ ಮಹಾಕಾವ್ಯ'ದಂತಹ ಲೇಖನದಲ್ಲಿ ಇಂತಹ ಪ್ರಾದೇಶಿಕತೆಗಳನ್ನು ಮೀರಿ ಅಂತರಾಷ್ಟ್ರೀಯತೆ ಕಡೆಗೆ ಹರಿದಿದೆ. ಏಕೆಂದರೆ ಆದರೂ ದಕ್ಷಿಣ ಆಫ್ರಿಕಾದ ಸಂಸ್ಕೃತಿಗಾಗಿ ಹೋರಾಡುವ ಮಂಡೇಲರು ಜಗತ್ತಿನ ಯಾವುದೇ ವ್ಯಕ್ತಿಗೆ ಆದರ್ಶವಾಗಬಲ್ಲರು. ಇಲ್ಲಿ ಮಂಡೇಲರ ಜೀವನವೇ ಒಂದು ಮಹಾಕಾವ್ಯ. ಇವರ ಹೊರಾಟದ ಬದುಕು ನಮ್ಮ ಸಾಹಿತ್ಯ ಕೃತಿಗಳಿಗೆ ಅನುಭವ ದ್ರವ್ಯವಾಗಿದೆ. ಹೀಗಾಗಿ ಬದುಕಿನ ಬದ್ಧತೆಯಲ್ಲಿ ರೂಪುಗೊಂಡ ಅವರ ವ್ಯಕ್ತಿತ್ವ ಯಾವ ಸಾಹಿತ್ಯ ಕೃತಿಗಾದರೂ ಸರಿಸಾಟಿಯಾಗಬಲ್ಲದು.

ಇಪ್ಪತ್ತೇಳು ವರ್ಷಗಳ ಕಾಲ ಸೆರೆವಾಸದಲ್ಲಿದ್ದ ಮಂಡೇಲರು "ಆಫ್ರಿಕದ ಜನತೆಯ ಹೋರಾಟಕ್ಕಾಗಿ ನನ್ನ ಜೀವನನ್ನು ಮೊದಲಿನಿಂದಲೂ ಮುಡುಪಾಗಿಟ್ಟಿದ್ದೇನೆ. ನಾನು ಬಿಳಿಯರ ಪ್ರಾಬಲ್ಯದ ವಿರುದ್ಧವೂ ಹೋರಾಡಿದ್ದೇನೆ. ಸರ್ವರೂ ಸಮಾನ ಅವಕಾಶಗಳೊಂದಿಗೆ ಬದುಕುವಂತಹ ಪ್ರಜಾಪ್ರಭುತ್ವ ಮತ್ತು ಸಮಾಜದ ಆದರ್ಶಗಳಿಗಾಗಿ ಶ್ರಮಿಸಿದ್ದೇನೆ. ಈ ಆದರ್ಶಗಳಿಗಾಗಿ ನಾನು ಬದುಕಲು ಬಯಸುತ್ತೇನೆ ಮತ್ತು ಈ ಆಚರಣೆಗಳಿಗಾಗಿ ಸಾಯಲೂ ಸಿದ್ಧನಿದ್ದೇನೆ." ಎನ್ನುವ ಮೂಲಕ ತಮ್ಮ ದೃಢನಿರ್ಧಾರ ಪ್ರಕಟಿಸಿದವರು. ಇಂತಹ ಆದರ್ಶಗಳಿಂದಲೇ ಮಂಡೇಲ ಒಂದು 'ಮಾನವ ಮಹಾಕಾವ್ಯ'ವಾಗಿದ್ದಾರೆ. ಈ ಮಾತುಗಳು ಗಮನೀಯವಾದವು. ಇವು ವ್ಯಸ್ಥೆಯೊಳಗಿನ ವಾಸ್ತವತೆಯ ಹುಡುಕಾಟದವು. ಈ ಹಿನ್ನೆಲೆಯಲ್ಲಿ 'ಸರ್ವಾಧಿಕಾರ ಮತ್ತು ಸಂವೇದನಾಶೀಲತೆ,' 'ಕನ್ನಡ ಸಾಹಿತ್ಯದಲ್ಲಿ ಮನುಷ್ಯನ ಹುಡುಕಾಟ,' 'ಸ್ತೋತ್ರ ಸಂಸ್ಕೃತಿ,' 'ಸಮೂಹ ಮಾಧ್ಯಮ; ಸಂಸ್ಕೃತಿ ಮತ್ತು ಮಹಿಳೆ,' 'ಕಾರಂತರ ಕಾದಂಬರಿಗಳಲ್ಲಿ ಸಾಮಾಜಿಕ ನ್ಯಾಯಕಲ್ಪನೆ,' 'ಕನ್ನಡ

ಮತ್ತು ಕೀಳರಿಮೆ,' 'ದೂರದರ್ಶನ ಸಂಸ್ಕೃತಿ'– ಈ ಎಲ್ಲಾ ಲೇಖನಗಳೂ ಉತ್ತಮ ಚಿಂತನೆಗಳೆ ಆಗಿವೆ.

'ಸರ್ವಾಧಿಕಾರ ಮತ್ತು ಸಂವೇದನಾ ಶೀಲತೆ' ಎನ್ನುವ ಲೇಖನ ಕನ್ನಡ ಸಾಹಿತ್ಯವನ್ನು ಹೊಸ ಆಯಾಮದಿಂದ ನೋಡುತ್ತದೆ. ಈ ಲೇಖನದ ಉದ್ದಕ್ಕೂ ಪಂಪ, ರನ್ನ, ಕುಮಾರವ್ಯಾಸ, ಲಕ್ಷ್ಮೀಶರ ಕಾವ್ಯಗಳು ವಿಶ್ಲೇಷಣೆಗೆ ಒಳಪಟ್ಟಿವೆ. ಅಲ್ಲದೆ, ಸರ್ವಾಧಿಕಾರ ಹಾಗೂ ಪ್ರಜಾಪ್ರಭುತ್ವದ ಮನೋಭಾವಗಳನ್ನು ಶೋಧಿಸುವ ಕಾರ್ಯ ಇಲ್ಲಿನದಾಗಿದೆ. "ಸರ್ವಾಧಿಕಾರಿ ವ್ಯವಸ್ಥೆಯಲ್ಲಿ ಪರಮ ಅಧಿಕಾರ ಮತ್ತು ಪರಮ ವಿಧೇಯತೆಗಳೆಂಬ ಎರಡು ನೆಲೆಗಳು ಅಸ್ತಿತ್ವದಲ್ಲಿರುವುದರಿಂದ, ಸಂವೇದನೆ ಮತ್ತು ಸೃಜನಶೀಲಕ್ರಿಯೆಗೆ ಸವಾಲಾಗಿ ಪರಿಣಮಿಸುತ್ತವೆ." ಇಂತಹ ಸರ್ವಾಧಿಕಾರದ ಭ್ರಮೆಯಿಂದ ಹೊರಬರುವ ಪ್ರಯತ್ನವನ್ನು ಮೇಲಿನ ಎಲ್ಲಾ ಕಾವ್ಯಗಳಲ್ಲಿ ಬರಗೂರರು ಗುರುತಿಸಿದ್ದಾರೆ.

'ಪಂಚತಂತ್ರ'ದ ಕರಟದ ದಮನಕ, 'ವಿಕ್ರಮಾರ್ಜುನ ವಿಜಯ'ದ ಕರ್ಣ 'ಕರ್ನಾಟಕ ಭಾರತ ಕಥಾ ಮಂಜರಿಯ' ದುರ್ಯೋಧನ ಮತ್ತು ಧರ್ಮರಾಯರ ಸಂದರ್ಭದಲ್ಲಿ ಸರ್ವಾಧಿಕಾರದ ಮನೋಭಾವನೆಯನ್ನು ಸ್ಪಷ್ಟವಾಗಿ ಗುರುತಿಸಬಹುದಾಗಿದೆ. ಅಲ್ಲದೆ, ಇಲ್ಲಿಯೇ ಕರ್ಣ ಮತ್ತು ಪಾಂಡವರ ಸೈನ್ಯದ ನಡುವೆ ನಡೆದ ಯುದ್ಧ ವ್ಯಾಪಾರ ನೀತಿಯನ್ನು ಗಮನಿಸಬಹುದು. 'ಲಕ್ಷ್ಮೀಶನ' ಜೈಮಿನಿ ಭಾರತ'ದಲ್ಲಿ ಇಂತಹ ಇನ್ನೊಂದು ಚಿತ್ರಣವಿದೆ. ಇಲ್ಲಿ ದುರ್ಯೋಧನನ ನಂತರ ಆಡಳಿತಕ್ಕೆ ಬರುವ ಸರ್ವಾಧಿಕಾರಿ ಧರ್ಮರಾಯನಲ್ಲಿ ಸಡಿಲಿಕೆಯುಂಟಾಗಿದೆ.

ಮೇಲಿನ ಸಂದರ್ಭ ಕುರಿತಂತೆ ಆರ್.ವಿ. ಭಂಡಾರಿಯವರ ಅಭಿಪ್ರಾಯಗಳು ಹೀಗಿವೆ: "ಯುದ್ಧದ ಉತ್ಕಟ ಸಂದರ್ಭದಲ್ಲಿ ವ್ಯಾಪಾರ ಭಾಷೆಯನ್ನು ಸೂಕ್ಷ್ಮವಾಗಿ ಬಳಸುವ ಮೂಲಕ ಕುಮಾರವ್ಯಾಸ ಕವಿ ಯುದ್ಧದ ಅಮಾನವೀಯತೆಯನ್ನು ಸೂಕ್ಷ್ಮವಾಗಿ ಹೇಳುತ್ತಿದ್ದಾನೆ ಯುದ್ಧದಲ್ಲಿ ಮನುಷ್ಯ ಮುಖ್ಯವಾಗುವುದಿಲ್ಲ. ಆತ 'ಸರಕು' ಮಾತ್ರವಾಗುತ್ತಾನೆಂಬ ಧ್ವನಿ ಹೊರಡಿಸುವ ಈ ರೂಪಕ ಅನನ್ಯವಾದುದು" ಎನ್ನುತ್ತಾರೆ. "ಈ ರೂಪಕ ಅನನ್ಯವಾದುದೇನೋ ಹೌದು. ಕುಮಾರವ್ಯಾಸ ಬಳಸುವ ಪತಂಗ, ಪೇಟೆ, ಸರಕು, ಮಾಲು ಈ ಎಲ್ಲ ಪದಗಳು ಕುಮಾರವ್ಯಾಸನಿಗೇ ಸಾಧ್ಯವಾದ

ವೈಖರಿಕೂಡ ಹೌದು. ಆದರೆ ಆತ ಯುದ್ಧದ ಅಮಾನವೀಯತೆಯನ್ನು ಧ್ವನಿಗೊಳಿಸಿದ್ದಾನೆಂಬುದನ್ನು ಸಿದ್ಧಪಡಿಸಲಾಗುವುದಿಲ್ಲ. ಏಕೆಂದರೆ ಕರ್ಣನ ಸಾವು ಮೊದಲೇ ನಿರ್ಧರಿತವಾಗಿದ್ದು; ಆತನ ಶೌರ್ಯ, ಔದಾರ್ಯ, ಮುಂತಾದವುಗಳನ್ನು ಪರಾಕಾಷ್ಠೆಗೊಳಿಸುವ ಸಂದರ್ಭ ಮಾತ್ರ ಇದು. ಒಂದು ವೇಳೆ ಯುದ್ಧದ ಅಮಾನವೀಯತೆಯನ್ನು ಧ್ವನಿಸುವುದಿದ್ದರೆ, ಬೇರೆ ಬೇರೆ ಮುಖ್ಯ ಸಂದರ್ಭವನ್ನು ಆರಿಸಿಕೊಳ್ಳಬಹುದಿತ್ತು ಮತ್ತು ಅದನ್ನು ಪ್ರಸ್ತುತ ಪಡಿಸುವ ಸಂವಿಧಾನವೇ ಬೇರೆಯಾಗುತ್ತಿತ್ತು. ಆದರೆ ಬರಹಗಾರರು ಇದು ಕುಮಾರವ್ಯಾಸನ ಯುದ್ಧದ ಅಮಾನವೀಯತೆಯನ್ನು ಸ್ಫುಟಗೊಳಿಸುವ ಉದಾಹರಣೆಯೆಂದು ನಂಬುವುದಾದರೆ ಕುಮಾರವ್ಯಾಸನ ಔಚಿತ್ಯ ಪ್ರೌಢಿಮೆಯನ್ನು ತಗ್ಗಿಸಿದಂತಾಗುತ್ತದೆ. ಆದರೆ, ಬರಗೂರರು ಇತರ ಸಂದರ್ಭಗಳಲ್ಲಿ ಉದಾ: ದ್ರೌಪದಿಯ ಪ್ರಶ್ನೆ ಇತ್ಯಾದಿಗಳನ್ನು ಸರಿಯಾಗಿಯೇ ಬಹಳ ಅರ್ಥವತ್ತಾಗಿ ವಿಶ್ಲೇಷಿಸುತ್ತಾರೆ" ಎನ್ನುತ್ತಾರೆ. "ಸರ್ವಾಧಿಕಾರಿ ಮನೋಧರ್ಮದ ಊಳಿಗಮಾನ್ಯ ವ್ಯವಸ್ಥೆಯಲ್ಲಾಗಲೀ, ಪ್ರಜಾಪ್ರಭುತ್ವ ಪದ್ಧತಿಯಲ್ಲಿನ ವ್ಯಕ್ತಿಗಳಲ್ಲಾಗಲಿ ಪಂಚೇಂದ್ರಿಯಗಳಿಗೆ ಪೊರೆಕಟ್ಟಿ ಸಂವೇದನೆಯ ಸಾಚಾತನ ವಂಚಿಸುತ್ತದೆ. ಇಂಥಲ್ಲಿ ಪ್ರಜಾಪ್ರಭುತ್ವದ ನಿಜ ನೆಲೆಯನ್ನು ಹುಡುಕುವ ಹೋರಾಟಗಳು ಸಂವೇದನೆಯನ್ನು ಮಾನವೀಯವಾಗಿಸುತ್ತವೆ. ಅರ್ಥಪೂರ್ಣ ಸೃಜನಶೀಲತೆಗೆ ಕಾರಣವಾಗುತ್ತವೆ" ಎನ್ನುವುದನ್ನು ಇಡೀ ಲೇಖನದ ಉದ್ದಕ್ಕೂ ಉದಾಹರಣೆಗಳ ಮೂಲಕ ಆಧಾರವಾಗಿಸುತ್ತಾರೆ.

'ಕನ್ನಡ ಸಾಹಿತ್ಯ ಮತ್ತು ಮನುಷ್ಯನ ಹುಡುಕಾಟ' ಎನ್ನುವ ಲೇಖನವೂ ಇಂತಹದೇ ಧೋರಣೆಯುಳ್ಳದ್ದು. ಇಲ್ಲಿ ವಿವಿಧ ಕಾಲಘಟ್ಟದಲ್ಲಿ ಕವಿಗಳು ಕಂಡ ಮನುಷ್ಯ ಕಲ್ಪನೆಯಿದೆ. ಇಂತಹ ಮನುಷ್ಯನ ಹುಡುಕಾಟ ಬಾದಾಮಿ ಶಾಸನದಿಂದ ಆರಂಭವಾಗಿ ಬಂಡಾಯದ ಸಾಹಿತ್ಯದವರೆವಿಗೂ ವಿಸ್ತರಿಸಿಕೊಂಡಿದೆ. ಈ ಲೇಖನ ಬರೀ ಮನುಷ್ಯನ ಹುಡುಕಾಟಕ್ಕೆ ಸೀಮಿತವಾಗಿದೆ. ಸಮಕಾಲೀನ ಸಂದರ್ಭದ ಮನುಷ್ಯನನ್ನು ಕಟ್ಟಿಕೊಳ್ಳುವ ಕ್ರಿಯೆಗೂ ಚಾಚಿಕೊಳ್ಳುತ್ತದೆ.

'ಕಾರಂತರ ಕಾದಂಬರಿಗಳಲ್ಲಿ ಸಾಮಾಜಿಕ ನ್ಯಾಯ ಕಲ್ಪನೆ' ಎಂಬಲ್ಲಿ ಕಾರಂತರ ಧೋರಣೆಗಳನ್ನು ಗ್ರಹಿಸುವ ಕ್ರಮವಿದೆ. ಕಾರಂತರ ಕಾದಂಬರಿಗಳನ್ನು

ಇಲ್ಲಿ ಹೊಸ ಆಲೋಚನೆಗಳಿಂದ ಚಿಂತಿಸಲಾಗಿದೆ. ಪ್ರಧಾನವಾಗಿ, ನ್ಯಾಯ ಮತ್ತು ಸಾಮಾಜಿಕ ನ್ಯಾಯಗಳ ಪರಿಕಲ್ಪನೆಗಳನ್ನು ಗ್ರಹಿಸಿದ್ದಾರೆ. "ಸಾಮಾಜಿಕ ನ್ಯಾಯವೆಂಬ ಪರಿಕಲ್ಪನೆ ಮೌಲ್ಯ ಸಂಘರ್ಷದ ಫಲವಾಗಿ ರೂಪುಗೊಂಡದ್ದು. ಇದು ವೈಚಾರಿಕ, ಸಾಮಾಜಿಕ ಸಂಘರ್ಷದ ಪ್ರಾರಂಭ. ಹೀಗಾಗಿ ಕಾರಂತರ 'ಸಮೀಕ್ಷೆ', 'ಸನ್ಯಾಸಿಯ ಬದುಕು', 'ಕನ್ಯಾಬಲಿ', 'ಚೋಮನದುಡಿ', 'ನಾವು ಕಟ್ಟಿದ ಸ್ವರ್ಗ', 'ಗೆದ್ದ ದೊಡ್ಡಸ್ತಿಕೆ' ಕಾದಂಬರಿಗಳಲ್ಲಿ ಬರಗೂರರು ಈ ರೀತಿಯ ನ್ಯಾಯದ ಪರಿಕಲ್ಪನೆಯನ್ನು ಶೋಧಿಸುತ್ತಾರೆ." ಈ ಹಿನ್ನೆಲೆಯಲ್ಲಿ, "ಕಾರಂತರು ಸಾಂಪ್ರದಾಯಿಕ ಮತ್ತು ಸಾಮಾಜಿಕ ಸಂಹಿತೆಯ ಉಲ್ಲಂಘನೆಯಲ್ಲಿ ಸಾಮಾಜಿಕ ನ್ಯಾಯವನ್ನು ಕಾಣುತ್ತಾರೆ. ಅರ್ಥಪೂರ್ಣ ಹಾಗೂ ಆರೋಗ್ಯಕರ ಕಾಮ ಸಂಬಂಧಗಳ ಮೂಲಕವೂ ಇದನ್ನು ಮನಗಾಣಲು ಯತ್ನಿಸುತ್ತಾರೆ' ಎಂಬುದು, 'ಮಾನವೀಯತೆಯೆನ್ನುವುದು ಕೇಳವ ಕರುಣೆಯಲ್ಲ; ಸಮಾಜವನ್ನು ವೈಜ್ಞಾನಿಕವಾಗಿ ಅರ್ಥಮಾಡಿಕೊಳ್ಳುವುದರಲ್ಲಿದೆ' ಎನ್ನುತ್ತಾರೆ. ಇಂತಹ ಮಾನವೀಯತೆ ಸಮಾಜದ ಶ್ರೇಣೀಕೃತ ಸ್ಥಿತಿಯನ್ನು ಅರ್ಥಮಾಡಿಕೊಂಡು ನೊಂದವರ ಪರವಾಗಿರುತ್ತದೆ. ಆದರೆ, ಕಾರಂತರು ಆರ್ಥಿಕ ವಿಚಾರಗಳಿಗೆ ಬಂದಾಗ ಯಥಾ ಸ್ಥಿತಿವಾದಿಯಾಗುತ್ತಾರೆ. ಇಲ್ಲಿ ಅವರ 'ಸಾಮಾಜಿಕ ನ್ಯಾಯಕಲ್ಪನೆ' ಕೇವಲ ಸಾಂಪ್ರದಾಯಿಕ ನ್ಯಾಯ ಕಲ್ಪನೆಯಾಗುತ್ತದೆ." ಒಟ್ಟಿನಲ್ಲಿ ಹೇಳುವುದಾದರೆ ಕಾರಂತರು ಅರ್ಥಪೂರ್ಣ ಕಾಮ ಸಂಬಂಧಗಳ ಬಗ್ಗೆ ಕ್ರಾಂತಿಕಾರಿ ನಿಲುವು ತಾಳುತ್ತಾರೆ. ಆದರೆ, ಆರ್ಥಿಕ ವಿಚಾರಗಳಲ್ಲಿ ಯಥಾ ಸ್ಥಿತಿವಾದಿಯಾಗುತ್ತಾರೆ ಎನ್ನುವುದು ಗಮನಾರ್ಹ.

ಇಂದು ಕೆಲ ಸರ್ಕಾರಗಳು ಲೇಖಕರ ಅನೇಕ ಕೃತಿಗಳನ್ನು ವಿನಾ:ಕಾರಣ ಮುಟ್ಟುಗೋಲು ಹಾಕಿಕೊಳ್ಳುತ್ತದೆ. ಇಂತಹ ಸರ್ಕಾರದ ನೀತಿಯ ಸಂದರ್ಭದಲ್ಲಿ ಬರಹಗಾರನ ಅಭಿವ್ಯಕ್ತಿ ಸ್ವಾತಂತ್ರ್ಯದ ಅರ್ಥ ತಿಳಿದುಕೊಳ್ಳುವ ಅನಿವಾರ್ಯತೆ ಇದೆ. ಈ ನೆಲೆಯಲ್ಲಿ 'ನಿರಂಕುಶ ಅಭಿವ್ಯಕ್ತಿ ಸ್ವಾತಂತ್ರ್ಯ' ಒಂದು ದಾಖಲಾತ್ಮಕ ಲೇಖನವಾಗಿದೆ. ಬದುಕು ಎನ್ನುವುದು ಆಯಾ ಸಾಮಾಜಿಕ ಸಂರಚನೆಗೆ ಅನುಗುಣವಾಗಿ ರೂಪಿತವಾದ ಕ್ರಮ. ಯಾವುದೇ ಲೇಖಕ, ಕಲಾವಿದ ಇದನ್ನು ಅರಿತುಕೊಳ್ಳದೆ ತನಗೆ ತಾನೆ ನಿರಂಕುಶ ಸ್ವಾತಂತ್ರ್ಯವನ್ನು ಪಡೆದಿದ್ದೇನೆಂದು ಭಾವಿಸುವುದು ಕೇವಲ ಕಾಲ್ಪನಿಕವಾಗುತ್ತದೆ. ಹೀಗಾಗಲೇ ತಿಳಿಸಿದಂತೆ ಒಂದು

ಸಂರಚನೆಯಲ್ಲಿನ "ಮೌಲ್ಯ ವ್ಯವಸ್ಥೆಗೆ ಅನುಗುಣವಾಗಿ ಮತ್ತು ಸೃಜನಶೀಲತೆಗಳ ನಡುವೆ ಹೊಂದಾಣಿಕೆ ಒಂದು ಮುಖ್ಯ ಸತ್ಯ "ಇಲ್ಲಿಂದಲೇ ಅವನು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹುಡುಕಿಕೊಳ್ಳುವುದು. ಹೀಗೆ ಹುಡುಕುವಾಗಲೇ ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಸಾಮಾಜಿಕ ಹೊಣೆಗಾರಿಕೆ ಅಭೇದವಾದ ಅಂಶಗಳಾಗುತ್ತವೆ." ಎನ್ನುವ ಅಡೆರತ್‌ನ ಮಾತುಗಳನ್ನು ಆಧಾರವಾಗಿಸಿಕೊಳ್ಳುತ್ತಾರೆ.

ಇಲ್ಲಿನ 'ಸ್ತೋತ್ರ ಸಂಸ್ಕೃತಿ', 'ಕನ್ನಡ ಮತ್ತು ಕೀಳರಿಮೆ', 'ಸಂಪ್ರದಾಯಗಳು ಒಂದು ವಿಶ್ಲೇಷಣೆ', 'ಬೆಂಗಳೂರು ನಗರ ಎಂಬ ಹಳ್ಳಿ', 'ಸಮೂಹ ಮಾಧ್ಯಮ:ಸಂಸ್ಕೃತಿ ಮತ್ತು ಮಹಿಳೆ' ಮುಂತಾದ ಲೇಖನಗಳೂ ಕೂಡ ಗಮನಾರ್ಹವಾದವುಗಳಾಗಿವೆ. ಒಟ್ಟಾರೆ 'ಸಂಸ್ಕೃತಿ ಮತ್ತು ಸೃಜನಶೀಲತೆ' ಎನ್ನುವ ಕೃತಿ ಸಮಕಾಲೀನ ಸಂದರ್ಭದ ಚರ್ಚೆಯ ಚಿಂತನೆಯಾಗಿದೆ. ಇಲ್ಲಿನ ಹಳ್ಳಿ, ಮನುಷ್ಯ, ಮಹಿಳೆ, ಭಾಷೆ, ದೂರದರ್ಶನ, ಸಂಪ್ರದಾಯ, ಅಭಿವ್ಯಕ್ತಿ, ಸ್ವಾತಂತ್ರ್ಯ, ಸರ್ವಾಧಿಕಾರ, ನಿರಂಕುಶತೆ ಎಲ್ಲವೂ ಸಂಸ್ಕೃತಿ ಸಂರಚನೆಯೊಳಗಿನವು.

**ಸಂಸ್ಕೃತಿ ಉಪಸಂಸ್ಕೃತಿ (1994)**

'ಉಪ ಸಂಸ್ಕೃತಿ' ಈ ಸಂದರ್ಭದ ಹೊಸ ಚಿಂತನೆಯನ್ನು ಒಳಗೊಂಡ ಕೃತಿ. ಅಂತರ್ ಶಿಸ್ತುಗಳ ರೂಪರೇಶೆ ಸಾಹಿತ್ಯದ ಪುನರ್ ಮೌಲ್ಯೀಕರಣ, ಬಹುಸಂಸ್ಕೃತಿ ಬಗೆಗಿನ ಚಿಂತನೆ, ಹಾಗೂ ರಾಜಕೀಯ ವಿಚಾರವನ್ನೊಳಗೊಂಡ ಬರಹಗಳು ಇಲ್ಲಿವೆ. ಇಲ್ಲಿ ಪ್ರಸ್ತಾವನೆಯಾಗಿರುವ 'ಸಂಸ್ಕೃತಿ ಉಪಸಂಸ್ಕೃತಿ' ಎನ್ನುವ ಧೀರ್ಘವಾದ ಲೇಖನ ಅತ್ಯಂತ ಮಹತ್ವ ಪೂರ್ಣ ದಾಖಲೆಯಾಗಿದೆ. ಮತ್ತು ಕನ್ನಡ ಚಿಂತನೆಯಲ್ಲಿ ಹೊಸ ಆರಂಭವಾಗಿದೆ.

'ಮೂಕ ಮಹಾಕಾವ್ಯದ ನೆಲೆಯಿಂದ' ಎಂಬಲ್ಲಿ "ಹುಳುಬಿದ್ದ ಭಾಷೆಯನ್ನು ಹಾಗೇ ಮಾತಾಗಿಸುವವನು ಮನುಷ್ಯನಾಗಿರುವುದಿಲ್ಲವಾದ್ದರಿಂದ ನಾವು ಮತ್ತೆ ಮಗುವಾಗಬೇಕು; ಮಾತು ಬಿದ್ದು ಹೋದ ಅವಧಿಯ ಅನುಭವದಲ್ಲಿ ಹುಟ್ಟಿದ 'ಮೂಖ ಮಹಾಕಾವ್ಯದಿಂದ ಹೊಸ ಮಾತು ಹುಟ್ಟಿಸಬೇಕು; ಹೊಸ ಗೆರೆಗಳು ಮೂಡಬೇಕು. ಇದು ಕವಿ ಕಲಾವಿದರ ಕರ್ತವ್ಯ" ಎನ್ನುವಲ್ಲಿಗೆ ಇವರ ವಿಚಾರ ಹರಿಯುತ್ತದೆ. ಅದರಂತೆ, 'ಯುದ್ಧ

ಪರವಲ್ಲದ ರನ್ನನ ಗದಾಯುದ್ಧ' ಎಂಬ ಇಲ್ಲಿಯ ಲೇಖನ ಹೊಸ ನೋಟದಿಂದ ಕೂಡಿದೆ. ಇದುವರೆಗಿನ ನಮ್ಮ ಸಾಹಿತ್ಯ ವಿಮರ್ಶೆ ಈ ಕೃತಿಯಲ್ಲಿ ಚಿತ್ರಕ ಶಬ್ದಗಳನ್ನು ಮಾತ್ರ ಗುರುತಿಸುತ್ತಿತ್ತು. ಆದರೆ, ಇಲ್ಲಿ ಬರಗೂರರು ಅದೇ ಚಿತ್ರಕ ಶಬ್ದಗಳನ್ನು ಯುದ್ಧಪರವಲ್ಲದವುಗಳಾಗಿವೆ ಎಂದು ವಿವರಿಸುತ್ತಾರೆ. ಈ ಚಿಂತನೆ 'ಸರ್ವಾಧಿಕಾರ ಮತ್ತು ಸಂವೇದನಾ ಶೀಲೆ' ಎನ್ನುವ ಶೀರ್ಷಿಕೆಯಾಗಿ ಹೊರ ಹೊಮ್ಮಿದೆ. "ರನ್ನನ ಗದಾ ಯುದ್ಧದ 'ಸಮರವ್ಯಾಪಾರಂ ಮಾಣ್ದು' ಎನ್ನುವ ಹಾಗೂ 'ಶರವೊಂದಂ ತೆಗೆದು ನಿಜೋದರದಿಂ' ಎನ್ನುವ ಪದ್ಯಭಾಗಗದಿಂದ ಯುದ್ಧದ ವಸ್ತುಗಳು ಸಂಧಿಯ ವಸ್ತುವಾಗುವುದನ್ನು ವಿವರಿಸುತ್ತಾರೆ. ದರ್ಯೋಧನನಿಗೆ ಇಲ್ಲಿ ಯುದ್ಧವೆನ್ನುವುದು ಒಂದು ಆತ್ಮೀಯ ಅನುಸಂಧಾನವಲ್ಲ. ಅನಿವಾರ್ಯ ನೈತಿಕ ನೆಲೆ.  ಅವನು ಸಿಂಹಾಸನದ ಪ್ರಭು ಮಾತ್ರವಾಗಿ ಯುದ್ಧದ ಆಲೋಚನೆ ಮಾಡುತ್ತಿಲ್ಲ. ನೈತಿಕ ಪ್ರಜೆಯಾಗಿ ಯುದ್ಧದ ಅನಿವಾರ್ಯತೆಯನ್ನು ಒಪ್ಪಿಸುತ್ತಿದ್ದಾನೆ" ಎನ್ನುತ್ತಾರೆ.

ಇದಲ್ಲದೆ "ಇಲ್ಲಿನ ಭೀಮ ಮತ್ತು ದ್ರೌಪದಿಯನ್ನು ಹೊರತುಪಡಿಸಿದರೆ ಬಹುಪಾಲು ಪಾತ್ರಗಳು ಸಂಧಿಪರವಾಗಿವೆ. ಒಟ್ಟಾರೆ ಗದಾಯುದ್ಧದ ವಸ್ತು ಯುದ್ಧದ ಪರಿಣಾಮವೇ ಹೊರತು ನೇರ ಯುದ್ಧವಲ್ಲ. ಯುದ್ಧವು ಇಲ್ಲಿ ಕರುಳಿನ ಭಾಗವಲ್ಲ; ಕಣ್ಣು ಮತ್ತು ಕಿವಿಗಳ ಭಾಗ. ಒಟ್ಟಾರೆ ರನ್ನನ ಗದಾಯುದ್ಧ ಯುದ್ಧಪರವಲ್ಲದ ಕೃತಿಯಾಗುತ್ತದೆ" ಎನ್ನುವ ಬರಗೂರರ ಹೊಸ ಆಲೋಚನೆ ಹೊಸ ಚಿಂತನೆಗೂ ದಾರಿ ಮಾಡಿಕೊಡುತ್ತದೆ.

'ಸಾಹಿತ್ಯದಲ್ಲಿ ತಾತ್ವಿಕತೆ' ಎನ್ನುವ ಲೇಖನದಲ್ಲಿ, ಒಂದು ಸಾಹಿತ್ಯ ಕೃತಿ ತಾತ್ವಿಕತೆ ಒಳಗೊಳ್ಳುವ ಬಗೆ ಹೇಗೆ? ಲೇಖಕನಾದವನು ತಾತ್ವಿಕತೆಗೆ ಹೇಗೆ ತಲುಪಬೇಕು? ಎಂಬುದನ್ನು ವಿಶ್ಲೇಷಿಸಿದ್ದಾರೆ, ಹಾಗೂ ಚಿಂತನ ಮತ್ತು ಸೃಜನ ಪ್ರಧಾನ ಕೃತಿಗಳಿಗಿರುವ ವ್ಯತ್ಯಾಸವನ್ನು ಗುರುತಿಸಿದ್ದಾರೆ. ಒಟ್ಟಾರೆ, ಇಂದಿನ ಸಂದರ್ಭದ ಸಾಂಸ್ಕೃತಿಕ ಶೋಧ ಇಲ್ಲಿಯ ಮುಖ್ಯ ಉದ್ದೇಶವಾಗಿದೆ. "ಲೇಖಕನೊಬ್ಬನು ತಾತ್ವಿಕ ನೆಲೆಗೆ ತಲುಪುವುದೆಂದರೆ ವೈರುಧ್ಯಗಳನ್ನು ಮೀರುವ, ಒಳಹೋರಾಟದಲ್ಲಿ ಕಂಡುಕೊಳ್ಳುವ ಉತ್ತರವಾಗಿದೆ" "ಹೀಗಿರುವಾಗ ಸಮೂಹ ಪ್ರಜ್ಞೆಯನ್ನು ನಿರಾಕರಿಸುವ ವ್ಯಕ್ತಿ ಪ್ರಜ್ಞೆ, ಬಹಿರ್ಮುಖತೆಯನ್ನು ನಿರಾಕರಿಸುವ ಅಂತರ್ಮುಖತೆ ಅರ್ಥ ಕಳೆದುಕೊಳ್ಳುತ್ತದೆ. ವ್ಯಕ್ತಿ ಪ್ರಜ್ಞೆ ಸಮೂಹ

ಪ್ರಜ್ಞೆ ಮತ್ತು ಅಂತರ್‌ಮುಖತೆ –ಬಹಿರ್ಮುಖತೆಗಳ ಅಂತರ್ ಕ್ರಿಯೆ ಇಂದಿನ ಪ್ರಧಾನ ಸಾಂಸ್ಕೃತಿಕ ಶೋಧವಾಗಿದೆ." ಎನ್ನುವುದು ಉಲ್ಲೇಖಾರ್ಹ.

ಇನ್ನು ಅಂತರ್ ಶಿಸ್ತೀಯ ನೆಲೆಗಳು ಸಾಹಿತ್ಯ ಸೃಷ್ಟಿಯಲ್ಲಿ ಸಂವೇದನೆಯಾಗಿ, ಸಾಹಿತ್ಯ ವಿಮರ್ಶೆಯಲ್ಲಿ ಶಾಸ್ತ್ರ ಶಿಸ್ತುಗಳಾಗಿ ಉಪಯುಕ್ತವಾಗಬಲ್ಲವು. ಅನ್ಯ ಶಿಸ್ತುಗಳು ಅಂತರ್ ಸಂಬಂಧದಲ್ಲಿ ಹುಟ್ಟುವ ಅಂತರ್ ಕ್ರಿಯಾತ್ಮಕ ಶಿಸ್ತು ಆಗಬಹುದು. ಚಿತ್ತಕೇಂದ್ರವೊಂದಕ್ಕೆ ಒಗ್ಗಿಕೊಳ್ಳುವ ವಿವಿಧ ಜ್ಞಾನ ಶಿಸ್ತುಗಳು ಸಾಹಿತ್ಯ ಪ್ರಕ್ರಿಯೆಯಲ್ಲಿ ಸಹಜವೂ, ಪ್ರಮುಖವೂ ಆದ ನೆಲೆಯನ್ನು ನಿರ್ಮಿಸುತ್ತದೆ. ಈ ನಿಟ್ಟಿನಲ್ಲಿ ಅಧ್ಯಯನಕ್ಕೆ ಅನುವಾಗಲು ಅಂತರ್ ಶಿಸ್ತಿಯ ಅಧ್ಯಯನಗಳ ಹತ್ತು ಕೃತಿಗಳನ್ನು ಅಕಾಡೆಮಿಯ ಅಧ್ಯಕ್ಷರಾದ ಸಂದರ್ಭದಲ್ಲಿ ಹೊರತಂದಿದ್ದಾರೆ. 'ಕನ್ನಡ ಸಂಸ್ಕೃತಿಯ ಸ್ವಾಯತ್ತತೆ', 'ಕರ್ನಾಟಕ ಸಂಸ್ಕೃತಿಯ ಸ್ವರೂಪ', ಎನ್ನುವ ಇಲ್ಲಿನ ವಿಚಾರಗಳು ಕನ್ನಡ ಭಾಷೆ ಹಾಗೂ ಸಾಹಿತ್ಯಕ್ಕೆ ಸಂಬಂಧಿಸಿದವು. "ಒಂದ ದೇಶದ ಭಾಷೆ, ಪ್ರಜಾಪ್ರಭುತ್ವವನ್ನು ಬಲಗೊಳಿಸುತ್ತದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಆಯಾ ಭಾಷೆ ಮತ್ತು ಸಂಸ್ಕೃತಿಗಳ ಸ್ವಾಯತ್ತತೆಯನ್ನು ಒಪ್ಪಿಕೊಂಡಾಗ, ಫೆಡರಲ್ ಪದ್ಧತಿ ಮತ್ತಷ್ಟು ಅರ್ಥಪೂರ್ಣಗೊಳಿಸಲು ರಾಜ್ಯಗಳ ಆರ್ಥಿಕ ಸಾಮಾಜಿಕ ಸ್ವಾತಂತ್ರ್ಯವನ್ನು ಒಪ್ಪಿಕೊಳ್ಳಬೇಕಾಗುತ್ತದೆ." ಹೀಗೆ ಸ್ವಾಯತ್ತತೆಯನ್ನು ಗುರುತಿಸಿಕೊಂಡ ಕರ್ನಾಟಕ ಸಂಸ್ಕೃತಿಯ ಸ್ವರೂಪವಾದರೂ ಏನು? ಎಂದುಕೊಂಡಾಗ ಕರ್ನಾಟಕ ಸಂಸ್ಕೃತಿಯೆಂದರೆ ಕನ್ನಡವೇ ಸಂಸ್ಕೃತಿ ಎಂಬುದು ಮನವರಿಕೆಯಾಗುತ್ತದೆ. ಕರ್ನಾಟಕ ಸಂಸ್ಕೃತಿಯಲ್ಲಿ ಅಸಂಖ್ಯಾತ 'ಉಪಸಂಸ್ಕೃತಿ'ಗಳಿವೆ ಎಂಬುದನ್ನು ಗಮನಿಸಲೇಬೇಕಾಗುತ್ತದೆ. ಇಂತಹ ವೈವಿಧ್ಯತೆಯುಳ್ಳ ಉಪಸಂಸ್ಕೃತಿ ನೆಲೆಗಳನ್ನು ನಿರಾಕರಿಸಿಯೋ, ನಿರ್ಲಕ್ಷಿಸಿಯೋ ಮಾತನಾಡುವುದು ಪ್ರಜಾಪ್ರಭುತ್ವದೊಳಗಿನ ಚಿಂತನೆಯಾಗದೆ ಫ್ಯೂಡಲ್ ವ್ಯವಸ್ಥೆಯ ಪ್ರತೀಕವಾಗುತ್ತದೆ. ಇಂತಹ ಸಂದರ್ಭದಲ್ಲಿ ಜಾನಪದ ಹಾಗೂ ಶಿಷ್ಟ ಸಂಸ್ಕೃತಿಗಳ ಸಂಬಂಧ, ಕರ್ನಾಟಕ ಸಂಸ್ಕೃತಿಯ ಇತಿಹಾಸ ಹಾಗೂ ಪ್ರಸ್ತುತ ಸಂದರ್ಭಗಳ ವಿವೇಚನೆ ಗಮನಾರ್ಹ. ಒಟ್ಟಾರೆಯಾಗಿ, ಕರ್ನಾಟಕ ಸಂಸ್ಕೃತಿಯ ಅಧ್ಯಯನವು ಏಕ ಸಂಸ್ಕೃತಿಯ ತತ್ವ ಕೈಬಿಟ್ಟು ಬಹುಮುಖತೆಗೆ ಮನ್ನಣೆಗೊಡುವ ನೆಲೆಯ ಕಡೆಗೆ ಒತ್ತುಕೊಡುತ್ತದೆ.

'ಕಾವೇರಿ ರಾಜಕೀಯ' ಎನ್ನುವ ಲೇಖನ ಖಂಡಿತವಾಗಿ ಪ್ರಸ್ತುತ ಸಂದರ್ಭದಲ್ಲಿನ ಉತ್ತಮ ಚಿಂತನೆ. ಮುಖ್ಯವಾಗಿ ಇಲ್ಲಿ "ನೀರಿರುವ ಮತ್ತು ನೀರಿಲ್ಲದ ಜಿಲ್ಲೆಗಳ ನಡುವಿನ ಅಭಿವೃದ್ಧಿಯ ಅಂತರದಲ್ಲಿ ನಿಜವಾದ ನೀರಾವರಿ ಸಮಸ್ಯೆ ಮತ್ತು ಸವಾಲುಗಳಿವೆ. ಹಾಗೆಯೇ ಕಾವೇರಿ, ರಾಜಕೀಯ ಪಾಠಕಲಿಸಿದೆ. ಈ ಪಾಠ ಕಲಿಯುತ್ತಲೇ ನಮ್ಮೂರ ಖಾಲಿಕೆರೆಯತ್ತ ನೋಡುತ್ತೇನೆ. ಅದಕ್ಕೆ ಅಧಿಕಾರ ಕೊಡುವ ಅಥವಾ ಕಳೆಯುವ ಶಕ್ತಿಯಿಲ್ಲದೆ ಸಾಯಲಾರದೆ ಸಂಕಟಪಡುತ್ತಿದೆ" ಎನ್ನುವ ಕಳಕಳಿಯ ಹಿಂದೆ ನೀರಿನ ಸಮಸ್ಯೆ ಇರಬೇಕಾದುದು ಎಲ್ಲಿ ಎಂಬುದನ್ನು ಮನವರಿಕೆ ಮಾಡಿಕೊಡುತ್ತಾರೆ.

ಭಾರತದಲ್ಲಿ ಇಂದು ರಾಜಕೀಯ ಎನ್ನುವುದು "ಒಂದು ಬೌದ್ಧಿಕ ಗ್ರಹಿಕೆಯಾಗಿ ಬೆಳೆಯದೆ, ಬಹುಪಾಲು ಭಾವನಾತ್ಮಕವಾದ ಪ್ರಕ್ರಿಯೆಯಾಗಿದೆ. ರಾಜಕೀಯದಂತೆ ಧರ್ಮವೂ, ಭಕ್ತಿಯ ನೆಲೆಗಳೂ ಬತ್ತಿವೆ; ಭಾವೋದ್ರೇಕದ ಸಾಧನಗಳಾಗುತ್ತಿವೆ. ಚರಿತ್ರೆಯಲ್ಲಿ ಧರ್ಮವು ಒಂದು ಜಡನೆಲೆಯಾಗಿದೆ; ಅಲ್ಲದೆ ಜಡನೆಲೆಯನ್ನು ಕಾಡಿಸುವ ಹೊಸ ನೆಲೆಯೇ ಆಗಿದೆ. ಈಗಂತೂ ಅದು ಕೋಮುನೆಲೆಯನ್ನು ಪಡೆಯುತ್ತಿದೆ. ನಿಜವಾದ ಹೋರಾಟ ಆಬೇಕಾಗಿರುವುದು ಈ ದಿಕ್ಕಿನಲ್ಲಲ್ಲ. ಪ್ರಸ್ತುತ ಸಂದರ್ಭದಲ್ಲಿ ಚಾರಿತ್ರಿಕ ಅನಿವಾರ್ಯವಾದ ಹಳ್ಳಿಗಾಡಿನ ಹಕ್ಕಿನ ಹೋರಾಟಗಳು ನಿರ್ಧಿಷ್ಟ ವ್ಯವಸ್ಥೆಯ ಇತಿ–ಮಿತಿಗಳನ್ನು ಮನಗಾಣುತ್ತಲೇ ಹೊಸ ವಿಧಾನಗಳನ್ನು ಹುಡುಕುವ ಹೊಣೆಗಾರಿಕೆಯನ್ನು ತೋರಬೇಕಾಗಿದೆ." ಎಂಬಿತ್ಯಾದಿ ವಿಚಾರಗಳು 'ಕರ್ನಾಟಕದಲ್ಲಿ ಜಾತಿ ಮತ್ತು ಕೋಮು ಕಲಹದ ಸ್ವರೂಪ' ಎನ್ನುವ ಲೇಖನದಲ್ಲಿ ಪ್ರತಿಪಾದಿಸಿದ್ದಾರೆ. ಹಾಗೆಯೇ, ಕನ್ನಡ ಕರ್ನಾಟಕ ಸಂದರ್ಭದಲ್ಲಿಯ ಚಿಂತನೆಗಳು 'ಕನ್ನಡ ಸಾಹಿತ್ಯ, ಸಿನಿಮಾ ಮತ್ತು ಉಪಧಾರೆ' ಎನ್ನುವ ಲೇಖನದಲ್ಲಿವೆ. ಇದನ್ನು 'ಕನ್ನಡ ಸಾಹಿತ್ಯ ಮತ್ತು ಸಿನಿಮಾ', 'ಸಂಸ್ಕೃತಿ ಮತ್ತು ಸೃಜನಶೀಲತೆ' ಎನ್ನುವ ವಿಚಾರ ಕೃತಿಗಳಲ್ಲೂ ಹೇಳಿದ್ದಾರೆ.

ಇನ್ನು ಇಲ್ಲಿ ಪ್ರಸ್ತಾಪಿಸಲೇ ಬೇಕಾದ ಲೇಖನವೆಂದರೆ 'ಸಂಸ್ಕೃತಿ ಉಪ ಸಂಸ್ಕೃತಿ' ಕುರಿತದ್ದು. ಪ್ರಧಾನ ಸಂಸ್ಕೃತಿಯೊಂದು ಕಟ್ಟಿಕೊಂಡ ಮಿಥ್‌ಗಳನ್ನು ಅಥವಾ ಆಶಯಗಳನ್ನು ಒಡೆದು ಅದರ ಸ್ಥಾನದಲ್ಲಿ ಉಪಸಂಸ್ಕೃತಿಯನ್ನು ನಿರ್ಮಿಸುವುದೇ ಇದರ ಉದ್ದೇಶ. ಈ ಚಿಂತನೆಗೆ ಪೂರಕವಾಗಿ

ಹರ್ಸ್‌ಕೋವಿಟ್ಸ್‌ನ 'ಜನರ ಜೀವನ ವಿಧಾನವೇ ಸಂಸ್ಕೃತಿ' ಎನ್ನುವುದನ್ನು ಆಧರಿಸಿ ಚರ್ಚಿಸಿದ್ದಾರೆ. "ಈ 'ಜನ' ಯಾರಾದರೂ ಆಗಿರಬಹುದು, ಎಲ್ಲಾದರೂ ವಾಸಿಸಬಹುದು. ಜನರಿದ್ದ ಕಡೆ ಸಂಸ್ಕೃತಿ ಇದ್ದೇ ಇರುತ್ತದೆ. ಆದರೆ, ಹೀಗೆ ಇರುವ ಸಂಸ್ಕೃತಿ ಒಂದೇ ತೆರನಾದುದಲ್ಲ; ಒಂದೇ ವಿನ್ಯಾಸದಲ್ಲ. ಒಂದೊಂದು ಪ್ರದೇಶದಲ್ಲಿ ಒಂದೊಂದು ಜನಾಂಗಕ್ಕೆ ಒಂದೊಂದು ರೀತಿಯ ಸಂಸ್ಕೃತಿ ಇರಲು ಸಾಧ್ಯ 'ಒಂದು ಸಂಸ್ಕೃತಿ' ಎಂಬ ಪರಿಕಲ್ಪನೆ ಹುಟ್ಟುವುದು ಈ ನೆಲೆಯಲ್ಲೇ. ಒಟ್ಟು ಮನುಷ್ಯ ಸಂಸ್ಕೃತಿಯಲ್ಲಿ ಒಂದು ಸಂಸ್ಕೃತಿ ಉಸಿರಾಡುತ್ತಲೇ ಇರುವ ವೈರುಧ್ಯ ಒಂದು ಒಪ್ಪಿತ ಸಂಸ್ಕೃತಿಯಾಗಿದೆ."

"ಉಪಸಂಸ್ಕೃತಿಯ ಪರಿಕಲ್ಪನೆ ಪ್ರಸ್ತುತವಾಗುವುದು ಈ ನೆಲೆಯಲ್ಲೇ ಎಂಬ ತಿಳುವಳಿಕೆ ನನ್ನದು. ಮನುಷ್ಯ ಸಂಸ್ಕೃತಿಯು ರೂಪುಗೊಳ್ಳುತ್ತಿರುವಾಗ, ವಿವಿಧ ಕಾರಣಗಳಿಂದ ವಿಂಗಡಣೆಗೊಳಗಾದ ಮನುಷ್ಯ ಸಮಾಜ ತನ್ನ ವಿಭಜಿತ ನೆಲೆಗನುಗುಣವಾಗಿ ವಿಭಿನ್ನ ಸಂಸ್ಕೃತಿಗಳನ್ನು ರೂಪಿಸಿಕೊಳ್ಳುತ್ತಾ ಬಂದದ್ದು ಒಂದು ಚಾರಿತ್ರಿಕ ಸಂಗತಿಯೇ ಆಗಿದೆ; ಮನುಷ್ಯ ಸಮಾಜದ ಬೆಳವಣಿಗೆಯ ಹಿಂದೆ ಒಂದು ನಿರ್ದಿಷ್ಟ ಚರಿತ್ರೆ ಇರುವುದರಿಂದ, ಸಂಸ್ಕೃತಿಯ ಉಪ ವಿಭಾಗೀಕರಣಕ್ಕೆ ಒಂದು ಚರಿತ್ರೆಯಿದೆ" ಎನ್ನುತ್ತಾರೆ. ಹೀಗೆ ಚರಿತ್ರೆಯನ್ನು ನಿರ್ಮಿಸಿಕೊಳ್ಳುತ್ತಲೇ ಇದುವರೆಗಿನ ವ್ಯಾಖ್ಯಾನಗಳನ್ನು ಮೀರಿ ಹೊಸ ವ್ಯಾಖ್ಯಾನವನ್ನು ಕೊಡುತ್ತಾರೆ. "ಸಂಸ್ಕೃತಿ ಎನ್ನುವುದು ಅಂತರಂಗ ಬಹಿರಂಗಗಳ ಸಂಬಂಧದಲ್ಲಿ ಒಡಮೂಡುವ ಸಾಮಾಜಿಕ ವಿನ್ಯಾಸ. ವಿವಿಧ ನೆಲೆಗಳ ಅಂತರ ಸಂಬಂಧದಲ್ಲಿ ಸಂಭವಿಸುವ ಸಾಮಾಜಿಕ ಆಕೃತಿ: ಭೂತ ಬಯಲಾಗುತ್ತಾ ಹೋಗುವ ವರ್ತಮಾನದ ಉಸಿರು." ಎಂಬ ಮಾತು ಮಹತ್ವದ ದಾಖಲೆಯಾಗಿದೆ.

'ಉಪಸಂಸ್ಕೃತಿ' ಎಂದು ಕರೆದುಕೊಳ್ಳುವ ತುರ್ತಾದರೂ ಏನು ಎಂದುಕೊಂಡಾಗ ಸಿಗುವ ಉತ್ತರ ಸಮರ್ಪಕವಾಗಿಯೇ ಇದೆ. ಇದುವರೆಗೆ "ಒಂದು ನಿರ್ದಿಷ್ಟ ಜಾತಿ, ವರ್ಗ, ಧರ್ಮ ಇತ್ಯಾದಿಗಳ ಸಂಸ್ಕೃತಿಯೇ ಶ್ರೇಷ್ಠವೆಂಬ ಕಲ್ಪನೆ ಬೆಳೆದು. ಉಳಿದ ವಲಯಗಳನ್ನು ನಿರ್ಲಕ್ಷ್ಯಕ್ಕೀಡು ಮಾಡಲಾಗಿತ್ತು. ಈ ನಿರ್ಲಕ್ಷಿತ ವಯಗಳಲ್ಲೂ ಒಂದು

ಸಂಸ್ಕೃತಿಯಿರುತ್ತದೆಯೆಂಬ ವಿಚಾರವೇ ಉಪಸಂಸ್ಕೃತಿಗಳ ಅಸ್ತಿತ್ವದ ಅರ್ಥೈಕೆಯಾಗಿದೆ."

ಈ ನೆಲೆಯಲ್ಲಿ "ಉಪಸಂಸ್ಕೃತಿಯೇ ಕಟ್ಟಕಡೆಯ ಜೀವನ ವಿಧಾನವಾಗಬಾರದು. ಬದಲಾಗದ ಭೂತಕ್ಕೆ ತಳ್ಳಲ್ಪಟ್ಟ ಉಪಸಂಸ್ಕೃತಿಯು ಪ್ರಧಾನ ನೆಲೆಗೆ ಬರುವ ಮೂಲಕ ಸಮಾನ ಸಮಾಜದ ಆಶಯಕ್ಕೆ ಪೂರಕವಾಗುವ ಪ್ರಕ್ರಿಯೆ ಮುಖ್ಯವಾದುದು. ಈ ಪ್ರಕ್ರಿಯೆಯಲ್ಲಿ ಉಪ ಸಂಸ್ಕೃತಿಗಳ ಜೀವನ ವಿಧಾನ ವರ್ತಮಾನದ ಹೊಸ ಬಣ್ಣ ಪಡೆದು ಪ್ರಧಾನವಾಗಬೇಕು; ಇದ್ದ ಹಾಗೆಯೇ ಭೂತದ ಬದುಕನ್ನು ಪ್ರತಿಷ್ಠಾಪಿಸಬಾರದು. ಪ್ರಧಾನ ಸಂಸ್ಕೃತಿಗಳ ನೆಲೆಗಳನ್ನು ತಾನು ತುಂಬುತ್ತ ಮತ್ತೆ ನಿರ್ಲಕ್ಷಿತ ನೆಲೆಗಳನ್ನು ಹುಟ್ಟುಹಾಕಬಾರದು. ಬಹು ಸಂಸ್ಕೃತಿಗಳ ಸಮಾನ ಅಸ್ತಿತ್ವದಲ್ಲಿ ಅಧಿಕಾರ ಹಂಚಿಕೊಳ್ಳಬೇಕು. ಸಂಸ್ಕೃತಿ ಎನ್ನುವುದು ಒಂದೇ ಅಲ್ಲ. ಧರ್ಮವೆನ್ನುವುದು ಒಂದೇ ಅಲ್ಲ ಎನ್ನುವುದರ ಮುಂದಿನ ಆಶಯ ಸಮಾನತೆ ಮತ್ತು ಪ್ರಜಾಸತ್ತಾತ್ಮಕತೆಯಾಗಬೇಕು" ಎನ್ನುವ ನಿಲುವಿನಲ್ಲಿ ಬರಗೂರರು ಬಂದು ನಿಲ್ಲುತ್ತಾರೆ. ಇಂತಹ ಮಹತ್ವವಾದ ಗುರಿಯನ್ನು ಇರಿಸಿಕೊಂಡ 'ಉಪ ಸಂಸ್ಕೃತಿ' ಚಿಂತನೆಯ ವಿಶ್ಲೇಷಣೆ ಊರು ಮತ್ತು ಕಾಡುಗಳನ್ನು ಉದಾಹರಿಸುತ್ತದೆ. ಆ ಮೂಲಕ ನಮ್ಮದು ಬಹು ಸಂಸ್ಕೃತಿಗಳ ದೇಶ. ಉಪಸಂಸ್ಕೃತಿಗಳ ದೇಶ; ಸಂಸ್ಕೃತಿ ಎನ್ನುವುದೇ ಉಪಸಂಸ್ಕೃತಿಗಳ ಒಂದ ಒಕ್ಕೂಟ ಎನ್ನುವ ನೆಲೆಗೆ ತಲುಪುತ್ತದೆ.

ಈ ಉಪಸಂಸ್ಕೃತಿಗಳು ಇತಿಹಾಸದ ಉದ್ದಕ್ಕೂ ಒಂದು ರೀತಿಯ ಶಿಕ್ಷೆಯನ್ನೇ ಅನುಭವಿಸಿದೆ. ಇಂತಹ ಶಿಕ್ಷೆಯಿಂದ ಈ ಸಂಸ್ಕೃತಿಗಳು ಇಂದು ಪಾರಾಗಬೇಕಾಗಿದೆ ಎಂಬ ಚಿಂತನೆಯನ್ನು ಬರಗೂರರು ಕೊಟ್ಟಿದ್ದಾರೆ.

**ವರ್ತಮಾನ (1996)**

ಇವರ ವರ್ತಮಾನ ಎನ್ನುವ ಕೃತಿ 43 ವೈಚಾರಿಕ ಲೇಖನಗಳುಳ್ಳ ಕೃತಿ. ಈ ಎಲ್ಲಾ ಲೇಖನಗಳು ಆಯಾ ಸಂದರ್ಭಗಳಿಗೆ ಬರೀ ಪ್ರತಿಕ್ರಿಯಿಸಿದ ಬರಹಗಳಲ್ಲ. ಈ ಸಮಾಜದೊಳಗೆ ಆಗಬೇಕಾದ ಸಾಧ್ಯತೆಗಳೇನು ಎಂಬುದರ ಬಗೆಗೆ ಚಿಂತಿಸುತ್ತವೆ. ಇವುಗಳ ಮುಖ್ಯ ಉದ್ದೇಶ "ಬದುಕು ಮತ್ತು ಬರಹಗಳ

ನಡುವಿನ ದೂರ ಮಾಡುವ ಒಂದು ಪ್ರಭುದ್ಧ ಪ್ರಕ್ರಿಯೆಯಾಗಿ ಸೃಜನಶೀಲತೆಯನ್ನು ಸ್ವೀಕರಿಸಬೇಕು. ಆಗ ನಮಗೆ ನಾವು ಪ್ರಾಮಾಣಿಕವಾಗಿರಲು ಸಾಧ್ಯ. ಆತ್ಮವಂಚನೆಗಳಿಂದ ಹೊರಬರಲು ಸಾಧ್ಯ. ಇಲ್ಲದಿದ್ದರೆ ನಮ್ಮ ಬರವಣಿಗೆಗೆ ಯಾವ ಬೆಲೆ" ಎನ್ನುವ ತಾತ್ವಿಕ ಬದ್ಧತೆಯನ್ನು ಪರಿಭಾವಿಸುತ್ತಾರೆ.

ಇಲ್ಲಿ ಬರುವ 'ಮಗುವನ್ನು ಹುಡುಕಿಕೊಡಿ', 'ಸ್ವಾತಂತ್ರ್ಯದ ಸಂಕಟ', 'ಹೀಗೊಂದು ಮಗುವಿನ ಘಟನೆ', 'ಕಾಶ್ಮೀರದ ಒಂಟಿ ಬದುಕು', 'ಮಾವೋ ನೂರು ವರ್ಷದ ನೆನಪು', 'ತಸ್ಲೀಮ್ ಪ್ರಕರಣ', 'ವಿಶ್ವಸುಂದರಿ ಸುತ್ತ', 'ಕಪ್ಪು ಜನರ ವಿಜಯ', ಇನ್ನು ಮುಂತಾಗಿ ಬರುವ ಬರಹದ ಹಿಂದೆ ಈ ಮನೋಭಾವ ಸ್ಥಾಯಿಗೊಂಡಿದೆ.

ಇಂತಹ ಮಾನವೀಯ ನೆಲೆ ಮೂಡುವುದಕ್ಕೆ ಕಾರಣವಾದರೂ ಏನು? ಎಂದುಕೊಂಡರೆ; ಉತ್ತರ ಸ್ಪಷ್ಟ. ಹೋರಾಟವನ್ನು ಜೀವನದ ಒಂದು ಭಾಗವಾಗಿಸಿಕೊಂಡಿರುವ ಬರಗೂರರು ಮನುಷ್ಯ ಬದುಕಿನ ಒಳಿತಿಗಾಗಿ ಹಂಬಲಿಸುವವರು. ಹಾಗಾಗಿ ಪ್ರಜಾಪ್ರಭುತ್ವ ಭಾರತದೊಳಗೆ ಕಳೆದು ಹೋಗುತ್ತಿರುವ ಮನಷ್ಯ ಬದುಕಿನ ಶೋಧ ಇಲ್ಲಿ ಪ್ರಧಾನವಾಗುತ್ತದೆ. ಅದು ವಿಶ್ವ ಸಮಸ್ಯೆಗಳನ್ನು ಮುಖಾಮುಖಿಯಾಗಿಸಿಕೊಂಡು ಪ್ರತಿಕ್ರಿಯಿಸುತ್ತದೆ. ವಿಶ್ವ ಬದುಕಿನೊಳಗೆ ಇರಬಹುದಾದ ಅಪ್ಪಟ ಮನುಷ್ಯನನ್ನು ಗುರುತಿಸುವ ಕ್ರಿಯೆ, ಒಬ್ಬ ಅಪ್ಪಟ ಮನುಷ್ಯನಿಂದಲೇ ನಡೆಯಬಹುದಾದ ವಿಶೇಷತೆ ಇಲ್ಲಿಯದು. ಉದಾಃರಣೆಗೆ ಇಲ್ಲಿ ಚರ್ಚಿಸಲ್ಪಡುವ ಬಹುತೇಕ ಮನುಷ್ಯರು ತಮ್ಮ ನ್ಯೂನತೆಗಳ ನಡುವೆಯೇ ಹಸನಾದ ಮನುಷ್ಯ ಬದುಕಿಗಾಗಿ ಹಂಬಲಿಸಿದವರು. ಅವರು ಗಾಂಧಿ, ಲೋಹಿಯಾ, ಅಂಬೇಡ್ಕರ್, ಮಾವೋ, ನೆಲ್ಸನ್‌ಮಂಡೇಲ, ದೇವರಾಜ್ ಅರಸ್, ತಸ್ಲೀಂನಸ್ರೀನ್, ಮಾರ್ಕ್ಸ್, ಕುವೆಂಪು ಉದಾಮಸಿಂಗ್ ಮುಂತಾದವರು. ಅಲ್ಲದೆ ಕಾಶ್ಮೀರ ಹೋಟೆಲ್ ಒಂದರ ಮಾಣಿಯಾದ ಬಹದ್ದೂರ್, ಪೆಹಲ್‌ಗಾವ್‌ನ ಅಬ್ದುಲ್‌ನವರಿಗೆ ಎಲ್ಲರೂ ತಮ್ಮ ಪ್ರಾಮಾಣಿಕತೆಯ ಆಚರಣೆಯಲ್ಲಿ ಬದುಕಿದವರು.

ಇಂತಹ ಚಿತ್ರಣಗಳಿಗೆ ಒಂದೆರಡು ಉದಾಹರಣೆಯನ್ನು ಈ ರೀತಿ ಕೊಡಬಹುದೆನಿಸುತ್ತದೆ. ಜನರಲ್ ಡಯಾನರನ್ನು ಕೊಂದ ಉದಾಮ್‌ಸಿಂಗ್

“ಈ ಡಯಾರನನ್ನು ಬಲಿತೆಗೆದುಕೊಳ್ಳಲು ಇಪ್ಪತ್ತೊಂದು ವರ್ಷ ಕಾದಿದ್ದೇನೆ. ನಾನು ಸಾಯುವುದಕ್ಕೆ ಹಿಂಜರಿಯುವುದಿಲ್ಲ. ಬ್ರಿಟೀಷ್ ಆಳ್ವಿಕೆಯಲ್ಲಿ ನನ್ನ ಜನ ಸಾಯುವುದನ್ನು ಕಂಡು ಕಂಗಾಲಾಗಿದ್ದೇವೆ. ನನ್ನ ಮಾತೃಭೂಮಿಗಾಗಿ ನಾನು ಸಾಯುವುದಕ್ಕಿಂತ ಬೇರೆ ಗೌರವ ಯಾವುದಿದೆ” ಎನ್ನುವ ಉದಾಮ್‌ಸಿಂಗನದು ಜನರ ಒಳಿತಿಗಾಗಿ ಸಾಯಲು ಸಿದ್ಧವಿರುವ ಅಪ್ಪಟ ಮನುಷ್ಯನ ಮಾತುಗಳು. ಹೀಗೆ ನೋಡುವುದಾದರೆ, “ನಾನು ಬಿಳಿಯರ ಪ್ರಾಬಲ್ಯವನ್ನು ವಿರೋಧಿಸಿ ಹೋರಾಡಿದ್ದೇನೆ. ಸಮಾನ ಅವಕಾಶ ಮತ್ತು ಸಾಮರಸ್ಯದಿಂದ ಎಲ್ಲ ಜನರೂ ಬದುಕುವಂಥ ಪ್ರಜಾಸತ್ತಾತ್ಮಕ ಸ್ವತಂತ್ರ ಸಮಾಜವನ್ನು ನಾನು ಬಯಸುತ್ತೇನೆ. ಇದು ನಾನು ಸಾಧಿಸಬಯಸುವ ಆದರ್ಶ. ಅಗತ್ಯವಾದರೆ ನಾನು ಈ ಆದರ್ಶಕ್ಕಾಗಿ ಸಾಯಲೂ ಸಿದ್ಧ” ಎನ್ನುವ ಮಂಡೇಲರ ಮಾತುಗಳು ಸಹ ಇಲ್ಲಿ ಸಾಚಾ ಮುಷ್ಯನವು. ಇವು ಈ ವ್ಯವಸ್ಥೆಯೊಳಗೆ ತಿರಸ್ಕರಿಸಲ್ಪಟ್ಟ ಮನುಷ್ಯನ ಸ್ವಾಭಿಮಾನದ ಮಾತುಗಳು. ಏಕಕಾಲಕ್ಕೆ ತಮ್ಮ ನೆಲೆಯೊಳಗೇ ಇರಬಹುದಾದ ಹಾಗೂ ಅನ್ಯ ಮೂಲದಿಂದ ಶೋಷಿಸಲ್ಪಡುವ ಎರಡರ ದಬ್ಬಾಳಿಕೆಗಳನ್ನು ವಿರೋಧಿಸುವುದು ಇಲ್ಲಿನ ಪ್ರಮುಖ ಕಾಳಜಿಯಾಗಿದೆ.

ಹಾಗಾದರೆ, ಇಲ್ಲಿಯವು ಬರೀ ಸಾಮರಸ್ಯದ ಬದುಕಿನ ವಿಚಾರಗಳೇ? ಖಂಡಿತ ಅಲ್ಲ. ಸಂಘರ್ಷದ ಬದುಕೂ ಇಲ್ಲಿದೆ. ಕ್ಷುಲ್ಲಕ ರಾಜಕಾರಣಿಗಳ ಭ್ರಷ್ಟಾಚಾರದಿಂದ ಹಿಡಿದು ಸ್ವಾತಂತ್ರ್ಯ, ರಾಷ್ಟ್ರಧ್ವಜ, ಜಾತಿ, ಹಿಂದುಳಿದ ಆಯೋಗ, ಬಂಡವಾಳಶಾಹಿ ವ್ಯವಸ್ಥೆ, ಧರ್ಮ, ಯುದ್ಧ ತಾತ್ವಿಕತೆ, ಹೋರಾಟ, ರಾಷ್ಟ್ರನಾಯಕ, ವಿಧಾನಸೌಧ, ಸಾಮರಸ್ಯ, ಸಂಘರ್ಷ, ಮೂಲಭೂತವಾದಿತನ, ಸಾಹಿತ್ಯ ನಿಷೇಧತೆ – ಹೀಗೆ ಸಮಕಾಲೀನ ಬದುಕಿನೊಳಗೆ ಇರಬಹುದಾದ ಎಲ್ಲವೂ ಚರ್ಚೆಗೊಳಗಾಗುತ್ತವೆ. ಇದುವೆ ಬರಗೂರರ ಬದ್ಧತೆ.

‘ವರ್ತಮಾನ’ ಕೃತಿ ಕುರಿತು ರಾಜಪ್ಪ ದಳವಾಯಿ ಅವರು ಹೇಳಿರುವ ಮಾತುಗಳು ಇಲ್ಲಿ ಉಲ್ಲೇಖಾರ್ಹ. “ವರ್ತಮಾನ ಒಂದು ಸಾರ್ಥಕ ಹೆಸರು. ಬರಗೂರರು ‘ ಈ ವಾರ ಕರ್ನಾಟಕ’ ಪತ್ರಿಕೆಗೆ ಬರೆದ ಲೇಖನಗಳ ಈ ಗುಚ್ಚ ಕನ್ನಡ ಅಂಕಣ ಸಾಹಿತ್ಯಕ್ಕೆ ಒಂದು ಹೊಸ ಆಯಾಮ ನೀಡುವಂತ ಕೃತಿಯಾಗಿದೆ. ಕನ್ನಡದ ಅಂಕಣ ಸಾಹಿತ್ಯದ ದಿಗ್ಗಜಗಳಾದ ನಿರಂಜನ, ಹಾಮಾನಾ, ಎಚ್ಚೆಸ್ಕೆ, ಕು.ಶಿ. ಹರಿದಾಸಭಟ್ಟ, ಲಂಕೇಶ, ಪಾಟೀಲ ಪುಟ್ಟಪ್ಪ,

ಸಿ.ಎನ್. ರಾಮಚಂದ್ರನ್, ರಾಮಚಂದ್ರದೇವ, ಕೀರ್ತಿನಾಥ ಕುರ್ತುಕೋಟಿ, ಲಿಂಗದೇವರು ಹಳೇಮನೆ ಮುಂತಾದವರ ಬರಹಗಳಿಗಿಂತಲೂ ವಿಭಿನ್ನ ನೆಲೆಯ ಚಿಂತನೆಯ ಸಾರಸಾಂದ್ರತೆಯನ್ನು ಈ ಕೃತಿಯಲ್ಲಿ ಗುರುತಿಸಬಹುದಾಗಿದೆ. ಈ ಕ್ಷೇತ್ರದ ಬರಹಕ್ಕೆ ವರ್ತಮಾನ ಒಂದು ಹೊಸ ಸೇರ್ಪಡೆ" ಎಂದಿದ್ದಾರೆ.

ಅಲ್ಲದೆ ಮಾವೋ, "ಜನರಿಗಾಗಿ ಬರೆಯುವುದಿಲ್ಲ ಆತ್ಮ ತೃಪ್ತಿಗಾಗಿ ಬರೆಯುತ್ತೇನೆ ಎನ್ನುವುದು ಆತ್ಮವಂಚನೆ, ಲೇಖಕನಾದವನು ಆಯುಧ ಹಿಡಿದು ಹೋರಾಡಬೇಕಿಲ್ಲ. ಹೋರಾಟಗಾರರ ತರಹ ಬರೆದರೂ ಸಾಕು, ತನ್ನ ಕರ್ತವ್ಯ ನಿರ್ವಹಿಸಿದಂತಾಗುತ್ತದೆ" ಎನ್ನುತ್ತಾರೆ. ಬರಗೂರರದು ಸಹ ಇಲ್ಲಿ ಆತ್ಮತೃಪ್ತಿಯ ಬರವಣಿಗೆಯಾಗಿ ಕಾಣುವುದಿಲ್ಲ. ಇಲ್ಲಿಯ ಲೇಖನಗಳು ಬದುಕು ಮತ್ತು ಬರವಣಿಗೆಯನ್ನು ಹತ್ತಿರ ತಂದವುಗಳು. ಅವುಗಳ ಮಧ್ಯೆದ ಅಂತರವನ್ನು ಕಡಿಮೆ ಮಾಡಿದವುಗಳು; ಬರಹಗಾರರ ಪ್ರಾಮಾಣಿಕ ಪ್ರಕ್ರಿಯೆಗಳಾಗಿ ಮೂಡಿದವು. ಇಂತಹ ತಾತ್ವಿಕತೆಯನ್ನು ಒಳಗೊಂಡ ಇಲ್ಲಿನ ಎಲ್ಲಾ ಲೇಖನಗಳು ನಮ್ಮ ನಡುವೆ ಶುಷ್ಕತೆಯನ್ನು ನಿರ್ಮಿಸುವುದಿಲ್ಲ. ಬದಲಿಗೆ ಏಕಕಾಲಕ್ಕೆ ಸೃಜನ ಶೀಲತೆಯೊಂದಿಗೆ ವಿಚಾರಮಾಡುವ ಅನುಭವ ನೀಡುತ್ತವೆ. ಆದ್ದರಿಂದ, ವರ್ತಮಾನ ಕೃತಿ ಏಕಕಾಲಕ್ಕೆ ಒಂದು ವಿಚಾರ ಕೃತಿಯು ಆಗಿದೆ; ಹಾಗೆಯೇ ಸೃಜನಶೀಲ ಕೃತಿಯೂ ಆಗಿದೆ.

### ಕನ್ನಡ ಸಾಹಿತ್ಯ ಮತ್ತು ಸಿನಿಮಾ (1998)

ಹೆಸರೇ ಸೂಚಿಸುಂತೆ ಇದು ಕನ್ನಡ ಸಾಹಿತ್ಯ ಮತ್ತು ಸಿನಿಮಾಗಳ ಅಂತರ್ ಸಂಬಂಧ ಹೇಳುವ ವಿಶಿಷ್ಟಕೃತಿ. ಇಲ್ಲಿ ಮುಖ್ಯವಾಗಿ ಸಾಹಿತ್ಯದ ಜೊತೆಗೆ ಸಿನಿಮಾದ ಇತರ ಅಂಶಗಳೂ ಚರ್ಚಿತವಾಗಿವೆ ಸಿನಿಮಾ ಕ್ಷೇತ್ರ ಇಂದು ಕಲೋದ್ಯಮವಾಗುತ್ತಿರುವುದನ್ನು ಬರಗೂರರು ಸೂಕ್ಷ್ಮವಾಗಿ ಗ್ರಹಿಸಿದ್ದಾರೆ. ಆರಂಭಕ್ಕೆ ಸಿನಿಮಾ ಒಂದು ಉದ್ದಿಮೆಯೇ? ಕಲೆಯೇ? ಎಂಬ ಪ್ರಶ್ನೆಗೆ ಕೊಡುವ ಉತ್ತರ ಗಮನಾರ್ಹವಾಗಿವೆ. ಈ ಹಿನ್ನೆಲೆಯಲ್ಲಿ "ಸಿನಿಮಾ ಒಂದು ಒಕ್ಕೂಟ ಕಲೆ ಎಂದಿದ್ದಾರೆ. ವಿವಿಧ ಕಲಾ ಮಾಧ್ಯಮಗಳ ಪರಿಣತರು ಒಗ್ಗೂಡಿ ದುಡಿಯುವುದರಿಂದ ಪ್ರಜಾಸತ್ತಾತ್ಮಕ ಸ್ವರೂಪವೊಂದು ನಿರ್ಮಾಣವಾಗುತ್ತದೆ. ಹೀಗೆ ನಿರ್ಮಾಣವಾದ ಪ್ರಜಾಪ್ರಭುತ್ವ,

ಅರಾಜಕತೆಯಾಗದೆ ಅದು ಪ್ರಜಾಸತ್ತಾತ್ಮಕವಾದ ಒಕ್ಕೂಟ ಕಲೆಯಾಗುತ್ತದೆ" ಎನ್ನುತ್ತಾರೆ.

"ಇಂತಹ ಒಕ್ಕೂಟ ಕಲೆಗೆ ಉಳಿದೆಲ್ಲಾ ಕಲೆಗಳು ಕೂಡುತ್ತವೆಯಾದರೂ ಅವೆಲ್ಲ ಏಕಕಾಲಕ್ಕೆ ಸ್ವತಂತ್ರ ಅಸ್ತಿತ್ವ ಹಾಗೂ ನಿರ್ದೇಶಕನ ಕೇಂದ್ರಮುಖಿ ಕ್ರಿಯೆಯಲ್ಲಿ ತೊಡಗಬೇಕಾಗುತ್ತದೆ. ಸೃಜನಶೀಲವಲ್ಲದ ಯಂತ್ರ ಮತ್ತು ಸೃಜನಶೀಲ ಮನುಷ್ಯ ಶಕ್ತಿಗಳು ಒಂದುಗೂಡಿದ ಸಿನಿಮಾ ಸೃಷ್ಟಿ ಅದ್ಭುತವಾದುದು. ಏಕೆಂದರೆ, ಇಲ್ಲಿ ಪ್ರಕಟಗೊಳ್ಳುವ ಯಾವುದೇ ಅನುಭವವು ಅಭಿವ್ಯಕ್ತಿಯಾಗಬೇಕಾದರೆ ಅದು ಯಂತ್ರಶಕ್ತಿಯ ಮೂಲಕವೇ ಪ್ರಕಟವಾಗಬೇಕಾಗುತ್ತದೆ. ಆದ್ದರಿಂದಲೇ ಯಂತ್ರಬಳಕೆ ಉದ್ದಿಮೆಗೆ ಸಂಬಂಧಪಟ್ಟದ್ದು. ಇದರ ಸೃಷ್ಟಿಯ ವಿಧಾನದೊಳಗಡೆಯೇ ಸೃಜನಶೀಲತೆ ಮತ್ತು ಉದ್ಯಮಶೀಲತೆಗಳು ಒಳಗೊಳ್ಳುತ್ತವೆ. ಇದು ಸಿನಿಮಾ ಎಂಬುದು ನೂರಕ್ಕೆ ನೂರು ಕಲಾ ಸೃಷ್ಟಿಯೂ ಆಗಿಲ್ಲ. ಉದ್ಯಮದ ಸರಕೂ ಆಗಿಲ್ಲ. ಈ ಎರಡೂ ನೆಲೆಗಳ ಸೂಕ್ಷ್ಮಗಳು ಸೇರುತ್ತಲೇ ಸೃಷ್ಟಿಯಾಗುವ ಕಲೋದ್ಯಮ ಈ ನಮ್ಮ ಸಿನಿಮಾ" ಎನ್ನುತ್ತಾರೆ ಬರಗೂರು.

"ಇದೆಲ್ಲವೂ ಸಿನಿಮಾ ಸೃಷ್ಟಿ ಕ್ರಿಯೆಗೆಸಂಬಂಧಿಸಿದುದಾದರೆ, ಸಾಹಿತ್ಯ ಸೃಷ್ಟಿಹೀಗಾಗುವುದಿಲ್ಲ. ಅದರಲ್ಲೂ ಶಿಷ್ಟ ಸಾಹಿತ್ಯ ಏಕ ವ್ಯಕ್ತಿಯಿಂದ ಸೃಷ್ಟಿಯಾಗಿರುತ್ತದೆ. ಇನ್ನು ವಿಚಾರ ಮಾಡುವುದಾದರೆ, ಯಾವುದೇ ಸಾಹಿತ್ಯ ಸೃಷ್ಟಿ ಒಕ್ಕೂಟ ಮಾದರಿಯಾಗಿರುವುದಿಲ್ಲ. ಹಾಗಾಗಿ, ಸಾಹಿತ್ಯ ಸೃಷ್ಟಿಗೆ ಲಭ್ಯವಾಗುವ ನಿರಂಕುಶ ನೆಲೆ ಸಿನಿಮಾಕ್ಕೆ ಲಭ್ಯವಾಗುವುದಿಲ್ಲ." ಹೀಗೆ ಸ್ವತಂತ್ರವಾಗಿ ನಿರ್ಮಾಣವಾಗುವ ಸಾಹಿತ್ಯವನ್ನು ಸಿನಿಮಾ ಒಳಗೊಳ್ಳುವ ಬಗೆ ಹೇಗೆ? ಎಂಬುದು ಈ ಕೃತಿಯ ಮುಖ್ಯ ಚರ್ಚೆಯಾಗಿದೆ.

ಸಾಹಿತ್ಯ ಮತ್ತು ಸಿನಿಮಾ ಕುರಿತಂತೆ ಬರಗೂರರು ಇಲ್ಲಿ ಎರಡು ತಾತ್ವಿಕ ನೆಲೆಗಳನ್ನು ನೀಡುತ್ತಾರೆ.

1. "ಬಹಳಷ್ಟು ಪ್ರಾರಂಭಿಕ ಹಂತಗಳು ನಮ್ಮ ಸಾಹಿತ್ಯದ ಉಪಧಾರೆಯನ್ನು ಆಧರಿಸಿವೆ. ಹೀಗೆ ಪ್ರಧಾನಧಾರೆಗೆ ಬದಲು ಉಪಧಾರೆಯನ್ನು ಸಮೀಕರಿಸಿದ

ಕನ್ನಡದ ಚಿತ್ರಗಳು ಸಾಂಸ್ಕೃತಿಕವಾಗಿ ಮಹತ್ವದ ಕೆಲಸವನ್ನು ಮಾಡಿವೆ. ಇದು ಸಾಂಸ್ಕೃತಿಕವಾಗಿ ಸಾಮಾನ್ಯ ಸಂಗತಿಯಲ್ಲ" ಎನ್ನುವುದಾಗಿದೆ.

2. ಹೆಚ್ಚು ಚಿತ್ರಗಳು ಜನಸಾಮಾನ್ಯರ ಸಮ್ಮತ ನೆಲೆಯಿಂದ ಮೂಡಿದವುಗಳು. ಇವು ಸಾಮಾಜಿಕ, ಸಾಂಸ್ಕೃತಿಕ ಅಧ್ಯಯನಕ್ಕೆ ಅರ್ಹವಾಗಿವೆ. ಅಲ್ಲದೆ, ಕನ್ನಡ ಚಿತ್ರರಂಗದ ಮೊದಲ ಕಾಲು ಶತಮಾನವು ನೇರವಾಗಿ ಬಿಡಿಬಿಡಿಯಾದ ಸಾಹಿತ್ಯ ಕೃತಿಗಳನ್ನು ಆಧರಿಸಿದ್ದರೂ ಒಟ್ಟಾರೆ ಸಾಹಿತ್ಯ ಪ್ರಧಾನತೆಯನ್ನು ಪಡೆದಿವೆ. ನಿರೂಪಣೆಯಲ್ಲೂ ಸಾಹಿತ್ಯ ಮಾಧ್ಯಮವೇ ಪ್ರಧಾನತೆ ಪಡೆದಿದೆ. ಇಲ್ಲಿ "ತಾಂತ್ರಿಕ ಕೌಶಲವೂ ಕಥಾ ನಿರೂಪಣೆಗೆ ಪೂರಕವಾಗಿ ಬಂದಿದೆಯೇ ಹೊರತು; ಅದು ಕತೆಯಾಗುವ ಅತಿರೇಕವಿಲ್ಲ. ಜೊತೆಗೆ ಸಂಭಾಷಣೆಯ ಪ್ರಧಾನತೆಯನ್ನು ಉಲ್ಲೇಖಿಸಬಹುದೆಂಬ" ನಿಲುವು ಅವರದಾಗಿದೆ. ಉದಾಹರಣೆಗೆ, ಭಕ್ತಿ ಪಂಥಹೊಂದಿದ ಸಾಮಾನ್ಯ ನೆಲೆ ಉಲ್ಲೇಖನೀಯ. ಈ ಅಂಶವೂ ಚಿತ್ರ ನಿರ್ಮಿತಿಯ ಹಿಂದಿನ ಒಂದು ಒತ್ತಾಸೆಯಾಗಿರಬಹುದು ಎನ್ನುತ್ತಾರೆ. ಹಾಗೆ ನೋಡಿದರೆ ರಾಜಪ್ರಭುತ್ವದ ವೈಭವೀಕರಣವುಳ್ಳ ಸಿನಿಮಾಗಳು ಇಲ್ಲವೆನ್ನುವಷ್ಟು ಕಡಿಮೆ. ಒಂದು ವೇಳೆ ಇದ್ದರೂ ಪ್ರಭುತ್ವದ ಪರವಲ್ಲದ ನೆಲೆಗಳಿಗೆ ವ್ಯಾಪಿಸುವ ಒತ್ತಾಸೆಯಿದೆ. ಹೀಗೆ ಗುರುತಿಸುತ್ತ 'ಸತ್ಯ ಹರಿಶ್ಚಂದ್ರ' ಮತ್ತು 'ನಳದಮಯಂತಿ' ಸಿನಿಮಾಗಳನ್ನು ಹೆಸರಿಸುತ್ತಾರೆ.

ಈ ಕೃತಿಯ ಇನ್ನೊಂದು ನೋಟ ಕನ್ನಡ ಕವಿಗಳ ಕವಿತೆಗಳನ್ನು ಹೇಗೆ ಸಿನಿಮಾ ಒಳಗೊಂಡಿದೆ ಎನ್ನುವುದು. ಕನ್ನಡ ಕವಿತೆಗಳನ್ನು ಸಿನಿಮಾಕ್ಕೆ ಆಯ್ಕೆ ಮಾಡಿಕೊಳ್ಳುವ ಸದಭಿರುಚಿಯ ಕೆಲಸವನ್ನು ಅನೇಕ ನಿರ್ಮಾಪಕ ನಿರ್ದೇಶಕರು ಮಾಡಿದ್ದಾರೆ. ಕವಿಯ ಸ್ವತಂತ್ರ ಕವಿತೆಯನ್ನಾಗಲಿ, ಸಿನಿಮಾಕ್ಕೆ ಬರೆದ ಗೀತೆಯನ್ನಾಗಲೀಚಿತ್ರವೊಂದಕ್ಕೆ ಅಳವಡಿಸುವಾಗ ಅವುಗಳು ತಂತಮ್ಮ ಸ್ವತಂತ್ರ ಅಸ್ತಿತ್ವವನ್ನು ಕಳೆದುಕೊಳ್ಳುತ್ತವೆ. ಅಪರೂಪಕ್ಕೊಮ್ಮೆ ಕತೆಯ ಸಂದರ್ಭ ಮತ್ತು ಸಿನಿಮಾದ ಸನ್ನಿವೇಶವೊಂದರ ಅಗತ್ಯಕ್ಕಾಗಿ ಕವಿತೆಗಳು ಬಳಕೆಯಾಗುತ್ತವೆ; ಆಯಾ ಸನ್ನಿವೇಶಕ್ಕಾಗಿ ದುಡಿಯುತ್ತವೆ. ಹೀಗಾಗಿ ಮೂಲ ಅರ್ಥ ಉಳಿಯದೇ ಇರಬಹುದು; ವ್ಯತ್ಯಾಸವಾಗಬಹುದು. ಮೇಲ್ಪದರಲ್ಲಿ ಅರ್ಥ ಹೊಂದಾಣಿಕೆ ಆಗಬಹುದು. ಇದೆಲ್ಲಾ ಆಯಾ ಸನ್ನಿವೇಶಕ್ಕೆ ಸಾಪೇಕ್ಷ ನೆಲೆಯಾಗಿರುತ್ತದೆ. ಸಿನಿಮಾಕ್ಕಾಗಿಯೇ ಗೀತರಚನೆ ಮಾಡಿದಾಗ 'ಸ್ವತಂತ್ರ ಅಸ್ತಿತ್ವದ' ಪ್ರಶ್ನೆಯೇ

ಅಪ್ರಸ್ತುತವಾಗಬಹುದು. ಯಾಕೆಂದರೆ, ಅದು ಆಯಾ ಸನ್ನಿವೇಶಕ್ಕಾಗಿಯೇ ರಚಿತವಾಗಿ, ಅದರೊಂದಿಗೆ ಸೇರುತ್ತಾ ಹೋಗಬೇಕಾಗುತ್ತದೆ.

**ಸಾಹಿತ್ಯ ಮತ್ತು ರಾಜಕಾರಣ (1998)**

ಕೃತಿಯ ಆರಂಭದಲ್ಲಿ "ಇವು ನನ್ನ ಬೆನ್ನನ್ನು ನಾನೇ ತಟ್ಟಿಕೊಳ್ಳುವ ಮಾತುಗಳಲ್ಲ. ವಿಚಾರವೊಂದನ್ನು ಸೌಜನ್ಯದಿಂದಲೇ ಮಂಡಿಸುವ ಮಾತುಗಳು. ಒಟ್ಟಿನಲ್ಲಿ ನಾನು ನಿರಂತರವಾಗಿ ಪ್ರತಿಪಾದಿಸುತ್ತಾ ಬಂದ ವಿಚಾರ ವಿಮರ್ಶಾ ವಿಧಾನಗಳ ಕೃತಿ ಇದೆಂದು ಹೇಳಬಹುದು." ಎನ್ನುತ್ತಾರೆ ಬರಗೂರು. 'ನಮ್ಮೊಂದಿಗೆ ನಾಲ್ಕು ನಿಮಿಷ' ಎನ್ನುವ ಶೀರ್ಷಿಕೆ ಅಡಿಯಲ್ಲಿ ಹೇಳಲಾದ ಈ ಮಾತುಗಳು ಇವರ ಒಟ್ಟು ಸಾಹಿತ್ಯ ಕೃತಿಗಳ ಲಕ್ಷಣವೂ ಆಗಿವೆ.

ಪ್ರಸ್ತುತ ಕೃತಿಯನ್ನು ಒಟ್ಟು ಮೂರು ಭಾಗಗಳಾಗಿ ವಿಂಗಡಿಸಿಕೊಳ್ಳಬಹುದೆನಿಸುತ್ತದೆ. ಮೊದಲಭಾಗದಲ್ಲಿ ಬಂಡಾಯ ಸಾಹಿತ್ಯ ಚಳವಳಿಗಿರಬೇಕಾದ ರೂಪುರೇಶೆ ಮತ್ತು ಒಂದು ಸಾಹಿತ್ಯ ಹೊಂದಿರಬೇಕಾದ ಸೈದ್ಧಾಂತಿಕ ನಿಲುವುಗಳ ಬಗೆಗೆ ಚರ್ಚಿಸಿದ್ದಾರೆ. ಎರಡನೆಯ ಭಾಗದಲ್ಲಿ, 'ವಂಶವೃಕ್ಷ'; ಒಂದು ಅಧ್ಯಯನದಿಂದ ಹಿಡಿದು, 'ಸಮತಾವಾದಿ ರಾಷ್ಟ್ರಗಳ ಸಾಂಸ್ಕೃತಿಕ ದಾಖಲೆ' ಎನ್ನುವವರೆಗೂ ಅನ್ವಯಿಕ ವಿಮರ್ಶೆಯಿದೆ.

ಮೂರನೆಯ ಘಟ್ಟದಲ್ಲಿ 'ಗುಪ್ತಗುಲಾಮಗಿರಿ' ಲೇಖನದಿಂದ 'ಸಮಾಜವಾದ ಏಕೆ?' ಎನ್ನುವವರೆಗೆ ಸಾಮಾಜಿಕ ರಾಜಕೀಯ ಚರ್ಚೆಯ ಬರಹಗಳಿವೆ. "ಸಾಹಿತಿ ಈ ಸಮಾಜದಲ್ಲಿ ಹೆಚ್ಚು ತಾತ್ವಿಕವಾಗಿ ಗುರುತಿಸಿಕೊಳ್ಳಬೇಕಿದೆ. ಹೀಗೆ ಗುರುತಿಸಿಕೊಳ್ಳುವಿಕೆಯಿಂದ ಸಾಹಿತಿಯಾದವನಿಗೆ ಗಟ್ಟಿಯಾದ ನಿಲುವು ತಳೆಯಲು ಸಾಧ್ಯವಾಗುತ್ತದೆ. ಇಷ್ಟೇ ಅಲ್ಲ ಯಾವುದೇ ಕೃತಿಕಾರ ಬದುಕನ್ನು ಕಾಣುವಾಗ; ಸಾಂಸ್ಕೃತಿಕ, ಆರ್ಥಿಕ, ರಾಜಕೀಯ ಸಂಗತಿಗಳ ಪರಿವೀಕ್ಷಣೆಯಿಂದ ಪರಿಗಣಿಸಬೇಕಾಗುತ್ತದೆ." ಎನ್ನುತ್ತಾರೆ.

ಈ ಕಾರಣದಿಂದಲೇ, ಕೃತಿ ಹೊರಡಿಸುವ ಧೋರಣೆಯನ್ನು ಸಾಮಾಜಿಕ ಸಂದರ್ಭದಲ್ಲಿ ಇಟ್ಟು ನೋಡಬೇಕಾಗಿದೆ. ಆಗ ಆ ಧೋರಣೆಯ ಪರೀಕ್ಷೆ ನಡೆದು ಕೃತಿಯ ಮೌಲ್ಯ ನಿರ್ಣಯಕ್ಕೂ ಹಾದಿಯಾಗುತ್ತದೆ. ಇಂತಹ ಎಲ್ಲ ಚಿಂತನೆಗೆ ಇಲ್ಲಿನ ಎಲ್ಲ ಲೇಖನಗಳು ಒಳಪಡುತ್ತವೆ.

"ಅನೇಕ ಕನ್ನಡ ಕವಿಗಳು ಶೋಷಣೆ ಮತ್ತು ಸಂಪ್ರದಾಯದ ವಿರುದ್ಧ ನಿಂತಿದ್ದೇವೆ ಅಂದುಕೊಳ್ಳುವಾಗಲೂ" ಬರಗೂರರು ಅಲ್ಲಿ ಕೆಲ ಸಂದೇಹಗಳನ್ನು ಕಾಣುತ್ತಾರೆ. ಇಂತಹ ಸಂದೇಹಕ್ಕೆ ಆಧಾರವಾದ ಲೇಖನಗಳೆಂದರೆ 'ಬೇಂದ್ರೆ ಕಾವ್ಯದಲ್ಲಿ ಸಾಮಾಜಿಕ ಪ್ರಜ್ಞೆ', 'ವಂಶವೃಕ್ಷ ಒಂದು ಅಧ್ಯಯನ', 'ಇತ್ತೀಚಿನ ಸಣ್ಣಕತೆ ಕೆಲವು ಸಂಗತಿಗಳು, 'ಹೊಸಗನ್ನಡ ಸಾಹಿತ್ಯದಲ್ಲಿ ವರ್ಗಸ್ವಭಾವ,' 'ಅಡಿಗರ ಕಾವ್ಯದಲ್ಲಿ ರಾಜಕೀಯ ಧೋರಣೆ,' 'ಕುವೆಂಪು ಕೆಲವು ಮಾತು' ಎಂಬಿತ್ಯಾದಿ.

'ಹೊಸಗನ್ನಡ ಸಾಹಿತ್ಯದ ವರ್ಗಸ್ವಭಾವ' "ಈ ಲೇಖನ ಇಂದಿಗೂ ಒಂದು ರೆಫರೆನ್ಸ್ ಆಗಿದೆ. ಹಾಗೆಯೇ ವಂಶವೃಕ್ಷದ ಅಧ್ಯಯನ ಕೂಡ ಸೂಕ್ಷ್ಮವಿಶ್ಲೇಷಣೆ ಅಲ್ಲದಿದ್ದರೂ ಅದರ ಸೈದ್ಧಾಂತಿಕ ವಿಶ್ಲೇಷಣೆಯ ಚೌಕಟ್ಟು ಮುಂದಿನ ಬೆಳವಣಿಗೆಗೆ ಕಾರಣವಾದದು." ಎನ್ನುವ ಆರ್.ವಿ. ಭಂಡಾರಿಯವರ ಮಾತುಗಳು ಉಲ್ಲೇಖಾರ್ಹ. ಕಲಾತ್ಮಕತೆ ಮತ್ತು ಬೌದ್ಧಿಕ ಸಂದರ್ಭ ಸಮ್ಮಿಲನವಾಗದಿದ್ದರೆ ಒಂದು ಕೃತಿ ತನ್ನ ಆಶಯ ಮತ್ತು ಅಭಿವ್ಯಕ್ತಿ ಸ್ವರೂಪಗಳಲ್ಲಿ ಅಂತರವನ್ನು ಪಡೆಯುತ್ತದೆ. ವಂಶವೃಕ್ಷ ಕಾದಂಬರಿಯ ಪಾತ್ರಗಳಾದ ಶ್ರೀನಿವಾಸಸ್ತೋತ್ರ, ಕಾತ್ಯಾಯನಿ, ರಾಜಾರಾವ್, ಲಕ್ಷ್ಮಿ ಸದಾಶಿವರಾವ್ ಮತ್ತ ಕರುಣಾರತ್ನ, ನಾಗಲಕ್ಷ್ಮಿ ಈ ಎಲ್ಲಾ ಪಾತ್ರಗಳನ್ನು ವಸ್ತು ನಿಷ್ಟವಾಗಿ ವಿಮರ್ಶಿಸಿದಾಗ ಈ ಮಾತು ಸ್ಪಷ್ಟವಾಗುತ್ತದೆ.

"ಬಂಡಾಯ ಸಾಹಿತ್ಯ ಚಳುವಳಿ – ಒಂದು ಚಿಂತನೆ ಎನ್ನುವ ಲೇಖನ ಕನ್ನಡ ಸಾಹಿತ್ಯದ ಹೊಸ ಘಟ್ಟವೊಂದರ ತಾತ್ವಿಕ ಚಿಂತನೆಯಾಗಿದೆ ಮತ್ತು ಅದು ಒಳಗೊಳ್ಳಬೇಕಾದ ರೂಪರೇಷೆಗಳ ಆಕೃತಿಯದಾಗಿದೆ. ಅಲ್ಲದೆ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಸಂದರ್ಭಗಳಲ್ಲಿ ಇದರ ಪ್ರಸ್ತುತತೆ ತುಂಬಾ ಮಹತ್ವಪೂರ್ಣವಾಗಿದೆ." ಕುವೆಂಪು ಹಾಗೂ ಬೇಂದ್ರೆ ಕುರಿತ ಲೇಖನಗಳ ಬಗ್ಗೆ ವಿಶೇಷವಾಗಿ ಹೇಳಬೇಕಾದುದೇನು ಇಲ್ಲ. ಹೀಗೆ ಹಲವು ವಿಶಿಷ್ಟ ಚಿಂತನೆಗಳಿಂದ ಕೂಡಿದ ಈ ಕೃತಿ ಪ್ರಸ್ತುತ ಸಂದರ್ಭದಲ್ಲಿ ಗಮನಾರ್ಹವಾದುದಾಗಿದೆ.

**ಚಲನಚಿತ್ರ ಸಾಹಿತ್ಯ**

ಇಲ್ಲಿ ಸಿನಿಮಾ ಇತಿಹಾಸ, ಅದು ಕಂಡ ಏಳುಬೀಳು ಮತ್ತು ತೊಟ್ಟ ಬದಲಾವಣೆಗಳ ಬಗ್ಗೆ ಮಾತಾಡುವುದಿಲ್ಲ ಜೊತೆಗೆ ಸಿನಿಮಾ ತೆಗೆದುಕೊಂಡ ತಿರುವು ಮತ್ತು ತಂತ್ರಗಳ ಬಗೆಗೂ ವಿಚಾರ ಮಾಡುವುದಿಲ್ಲ.

ಏಕೆಂದರೆ, ಇವೆಲ್ಲವೂ ಪ್ರತ್ಯೇಕ ಮಹಾಪ್ರಬಂಧದ ಚೌಕಟ್ಟಿಗೆ ಒಳಪಡುವ ವಿಷಯಗಳು, ಹಾಗಾಗಿ, ಇಲ್ಲಿ ಸಾಮಾಜಿಕ ಜವಾಬ್ದಾರಿ ಮತ್ತು ಎಚ್ಚರದ ಅಗತ್ಯಗಳನ್ನು ಬರಗೂರರ ಸಿನಿಮಾಗಳ ಹಿನ್ನೆಲೆಯಲ್ಲಿ ಗ್ರಹಿಸಲಾಗುತ್ತದೆ.

"'ಕಲೆಗಾಗಿ ಕಲೆ' ಎನ್ನುವವನು ಭೂರ್ಶ್ವಾ ವ್ಯವಸ್ಥೆಯನ್ನು ಸೃಷ್ಟಿಮಾಡುತ್ತಾನೆ. ಯಾವುದೇ ಸಂದರ್ಭದಲ್ಲಿ ಯಾವ ಭೂರ್ಶ್ವಾ ಕಲಾಕಾರ ಸದಾ ತನ್ನ ಕಾಲದ ಸಂಪ್ರದಾಯಗಳನ್ನು ಅವಲಂಬಿಸುತ್ತಾನೋ ಅಂಥವನು ತುಂಬಾ ಅಕಡೆಮಿಕ್ ಆಗುತ್ತಾನೆ ಮತ್ತು ಆತನ ಕಲೆ ಜೀವರಹಿತವಾಗಿರುತ್ತದೆ" ಎಂದು ಕ್ರಿಸ್ಟಾಫರ್ ಕಾಲ್ಡ್‌ವೆಲ್ ಹೇಳುತ್ತಾನೆ. ಅಷ್ಟೇ ಏಕೆ, ಈತ ಒಂದರ್ಥದಲ್ಲಿ ಸಮಾಜವನ್ನು ವಿರುದ್ಧ ಚಲನೆಯಲ್ಲಿ ಕೊಂಡೊಯ್ಯುತ್ತಾನೆ. ಇಂತಹುದನ್ನು ಗುರುತಿಸಿ ಆ ಚಲನೆಯನ್ನು ಬದಲಾಯಿಸುವ, ಸಮೂಹವನ್ನು ಸರಿಯಾದ ದಿಕ್ಕಿಗೆ ನಡೆಸುವವರ ನಿಜವಾದ ಕ್ರಾಂತಿಕಾರಿ ಅಥವಾ ಜವಾಬ್ದಾರಿಯುತ ವ್ಯಕ್ತಿಯಾಗುತ್ತಾನೆ. ಈ ಮಹತ್ವದ ಕಾರ್ಯ ಬಂಡಾಯ ಸಾಹಿತ್ಯ ಚಳುವಳಿಯ ಸಂದರ್ಭದಲ್ಲಿ ನಡೆಯಿತು. ಇಂಥಹ ಚಳುವಳಿ ಸಿನಿಮಾರಂಗದ ಮೇಲೂ ಪ್ರಭಾವ ಬೀರಿತು. ಬರಗೂರರಂತವರು ಸಿನಿಮಾದಂತಹ ಪ್ರಭಾವಿಕಾರಿ ಮಾಧ್ಯಮವನ್ನು ಸಮಾಜದ ಪ್ರಗತಿಗೆ ಮತ್ತು ಬದಲಾವಣೆಗೆ ಬಳಸಿಕೊಂಡಿದ್ದೇ ಹೆಚ್ಚು. ಆದ್ದರಿಂದ, ಇಂತಹ ಉತ್ತಮ ಪ್ರಯತ್ನಗಳನ್ನು ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ. ಏಕೆಂದರೆ, ಗಂಭೀರ ಚಿಂತನೆಯುಳ್ಳ ಈ ಸಿನಿಮಾಗಳು ಹೊಸ ಅಭಿರುಚಿಯನ್ನು ಬೆಳಸಿದವು. ಈ ನಿಟ್ಟಿನ ಪ್ರಯೋಗಶೀಲತೆಯಲ್ಲಿ ಬರಗೂರರು ಮುಖ್ಯರು.

**ಒಂದು ಊರಿನ ಕಥೆ (1978)**

ಬರಗೂರರ ಮೊದಲ ಚಿತ್ರ 'ಒಂದು ಊರಿನ ಕಥೆ', ಇಲ್ಲಿಂದಲೇ ಅವರು ಕಥೆ, ಚಿತ್ರಕಥೆ, ಸಂಭಾಷಣೆ, ಹಾಡುಗಳನ್ನು ತಾವೇ ರಚಿಸುತ್ತಾ ಬಂದರು. ಅತ್ಯುತ್ತಮ ಕಥಾ ಲೇಖಕ ಪ್ರಶಸ್ತಿ, ಅತ್ಯುತ್ತಮ ಸಂಭಾಷಣಾ ಪ್ರಶಸ್ತಿ ಗಳಿಸಿಕೊಂಡ ಹೆಗ್ಗಳಿಕೆ ಈ ಚಿತ್ರಕ್ಕಿದೆ. ಇದು ಕೂಡ 'ಒಂದು ಊರಿನ ಕಥೆ' ಎನ್ನುವ ಕಾದಂಬರಿ ಆಧಾರಿತ ಚಿತ್ರ. ಚಿತ್ರದ ಮುಖ್ಯ ಪಾತ್ರಗಳಲ್ಲಿ ಪ್ರಮೀಳಾ, ವಿಮಲಾಕ್ಷಿ, ಉಮಾ, ಎಂ.ವಿ. ವಾಸುದೇವರಾವ್, ಎಂ.ಎಸ್. ಉಮೇಶ್, ಲೋಹಿತಾಶ್ವ, ಪ್ರಸನ್ನ, ಮೈಲಾರಿರಾವ್ ಮೊದಲಾದವರಿದ್ದಾರೆ.

ಕಾದಂಬರಿಯ ಕೇಂದ್ರ ಆಶಯಗಳು ಇಲ್ಲಿವೆ. ಕಾದಂಬರಿಯಲ್ಲಿನ ಯಾವ ಪಾತ್ರವೂ ಕೂಡ ಸಿನಿಮಾದಿಂದ ನುಣಚಿಕೊಂಡಿಲ್ಲ. ಹಾಗಾಗಿ, ಕಾದಂಬರಿ ಕೊಡಬಹುದಾದ ಎಲ್ಲಾ ಪರಿಣಾಮಗಳನ್ನು ಚಿತ್ರಕೊಡುತ್ತದೆ. ಕಾದಂಬರಿ ಮತ್ತು ಕತೆಗಳೆರಡನ್ನೂ ಕುರಿತು ಇದುವರೆಗೆ ಮಾತನಾಡಿರುವ ಎಲ್ಲ ವಿಮರ್ಶಕರು ಸಂವೇದಕ ಮತ್ತು ಚಿಂತಕರ ನಡುವಿನ ಬಿಕ್ಕಟ್ಟುಗಳನ್ನು ಉಲ್ಲೇಖಿಸುತ್ತಾರೆ. ಆದರೆ, ಇಲ್ಲಿ ಅದರ ಚರ್ಚೆ ಅನಗತ್ಯ. ಸಿನಿಮಾ ಧ್ವನಿಸಬಹುದಾದ ಅರ್ಥ, ಸಾಧ್ಯತೆಗಳ ಬಗ್ಗೆ ಇಲ್ಲಿ ಮಾತನಾಡುವುದು ಔಚಿತ್ಯವೆನಿಸುತ್ತದೆ.

ಬರಗೂರರು ನಿರ್ದೇಶಿಸಿದ ಎಲ್ಲಾ ಚಿತ್ರಗಳೂ ಗ್ರಾಮೀಣ ಪ್ರದೇಶದವು. ಹಾಗಾಗಿ, ಅದರ ಬಗೆಗಿನ ಸಂವೇದನೆಯ ಮನಸ್ಸೊಂದು ಇದ್ದೇ ಇರುತ್ತದೆ. ಇಲ್ಲಿ ಇಡೀ ಚಿತ್ರದ ಕಥಾ ಹಂದರ ಗ್ರಾಮೀಣ ಪ್ರದೇಶದೊಳಗೇ ನಡೆಯುತ್ತದೆ. ಸ್ವಾತಂತ್ರ್ಯ ಭಾರತದ ರಾಜಕೀಯ ಸಂದರ್ಭದಲ್ಲಿ ಘಟಿಸಿದ ಸ್ಥಿತ್ಯಂತರಗಳು ಗ್ರಾಮೀಣ ಪ್ರದೇಶದಲ್ಲಿಯೂ ಉಂಟುಮಾಡಿವೆ; ವರ್ಗಪ್ರಜ್ಞೆಯನ್ನು ಜಾಗೃತಗೊಳಿಸಿವೆ. ಜಾತಿಯ ಸಂಕೋಲೆಯ ಅರಿವನ್ನು ಮತ್ತು ಜಮೀನ್ದಾರಿ ದರ್ಪದ ಪರಿಣಾಮವನ್ನು ತಿಳಿಸಿವೆ. ಇಂತಹ ಹತ್ತು ಹಲವು ಸೂಕ್ಷ್ಮಗಳ ಜೊತೆಗೆ ಪ್ರಸ್ತುತ ಚಿತ್ರಕತೆ ಪ್ರಧಾನ ನೆಲೆಗೆ ಬರುತ್ತದೆ. ತಿರಸ್ಕೃತ ಜಾತಿಗಳೆಲ್ಲ ಇಲ್ಲಿ ಪ್ರಥಮಬಾರಿಗೆ ರಾಜಕೀಯ ಹಕ್ಕನ್ನು ಪಡೆಯುತ್ತವೆ. ಇಲ್ಲಿನ ಪ್ರತಿನಿಧಿಗಳಾದ ರಾಮು, ಭೈರಪ್ಪ, ಗೌರಿ, ಪುಟ್ಟಿ, ಕೆಂಚಿ, ಮಾರಜ್ಜ, ತಿಮ್ಮೇಗೌಡ ಮತ್ತು ಜೋಯಿಸರಂತವರ ಸುತ್ತ ನಡೆಯುವ ಇಲ್ಲಿನ ಘಟನೆಗಳು ಸ್ಪೃಶ್ಯ ಮತ್ತು ಅಸ್ಪೃಶ್ಯರ ನಡುವಿನ ಸಂಘರ್ಷಗಳಾಗಿವೆ. ಒಟ್ಟಾರೆ ಈ ಸಿನಿಮಾ ಭಾರತೀಯ ಸಾಮಾಜಿಕ ಸಮಸ್ಯೆಯೊಂದನ್ನು ಯಥಾರ್ಥವಾಗಿ ಚಿತ್ರಿಸಿದ ಮೊದಲ ಭಾರತೀಯ ಚಿತ್ರವೆಂದರೆ ಅತಿಶಯೋಕ್ತಿಯಂತೂ ಅಲ್ಲ.

### ಬೆಂಕಿ (1983)

ಬೆಂಕಿ ಚಿತ್ರವು 'ಸೂರ್ಯ'ದಂತೆ ಕಾದಂಬರಿ ಆಧಾರಿತ ಸಿನಿಮಾ, ಇಲ್ಲಿಯೂ ಸಹ ಸಂಗೀತ ವಿಜಯಭಾಸ್ಕರ ಅವರದೇ. ಮುಖ್ಯ ಪಾತ್ರಗಳಲ್ಲಿ ಪ್ರಮೀಳಾ ಜೋಷಾಯ್, ಮಾನು, ಮುಖ್ಯಮಂತ್ರಿಚಂದ್ರು, ಲೋಹಿತಾಶ್ವ, ಎಂ.ಎಸ್. ಉಮೇಶ್‌ರವರಿದ್ದಾರೆ. ಈ ಚಿತ್ರವೂ ಸಹ 1982ರಲ್ಲಿ ಅತ್ಯುತ್ತಮ

ನಿರ್ದೇಶನ ಪ್ರಶಸ್ತಿ, ಅತ್ಯುತ್ತಮ ಕಥಾಲೇಖಕ ಪ್ರಶಸ್ತಿ, ಅತ್ಯುತ್ತಮ ಚಿತ್ರ ಪ್ರಶಸ್ತಿ– ಹೀಗೆ ಮೂರು ಅತ್ಯುತ್ತಮ ಪ್ರಶಸ್ತಿಗಳನ್ನು ಗಳಿಸಿಕೊಂಡಿತು.

ಸೂರ್ಯ ಕಾದಂಬರಿ ಒಳಗೊಂಡ ಚಿತ್ರ 'ಸೂರ್ಯ'ವಾದಂತೆ, 'ಬೆಂಕಿ' ಕಾದಂಬರಿ ಆಧರಿಸಿದ ಚಿತ್ರ 'ಬೆಂಕಿ', 'ಸೂರ್ಯ' ಹೊಸ ಹುಟ್ಟಿನ ಸಂಕೇತವಾದರೆ; ಬೆಂಕಿ ಹೆಣ್ಣಿನ ಆಸೆ, ಆಕಾಂಕ್ಷೆಗಳ ಭಗ್ನತೆಯ ಸಂಕೇತವಾಗಿದೆ. ಇಲ್ಲಿ ಲಕ್ಷ್ಮಿಯ ಮೂಲಕ ಅಸಹಾಯಕ ಹೆಣ್ಣಿನ ದುರಂತಮಯ ಜೀವನವನ್ನು ಅನಾವರಣಗೊಳಿಸುವುದೇ ಬರಗೂರರ ಪ್ರಮುಖ ಉದ್ದೇಶ. ಈ ಲಕ್ಷ್ಮಿ ಅಕ್ಷರ ಕಲಿತವಳು, ವಿದ್ಯಾವಂತೆ, ಮೊದಮೊದಲು ವಿದ್ಯಾವಂತನೇ ಆದ ಹಾಗೂ ತನ್ನನ್ನು ಪ್ರೀತಿಸಬಹುದಾದ ರಂಗಸ್ವಾಮಿಯನ್ನು ಮದುವೆಯಾಗಬೇಕೆಂದು ಇಷ್ಟ ಪಡುತ್ತಾಳೆ. ಆದರೆ, ತಂದೆಯಾದ ಗಂಗಣ್ಣನ ವಿವೇಕ ಶೂನ್ಯತೆ ಅದನ್ನು ತಪ್ಪಿಸುತ್ತದೆ. ಈ ಮೂಲಕ ಷಂಡ ನರಸಿಂಹನೊಂದಿಗೆ ವಿವಾಹವು ನಡೆಯುತ್ತದೆ. ಇದರ ಹಿಂದೆ ಊರಿನ ಶ್ರೀಮಂತ ಸೀನಪ್ಪ ಇದ್ದೇ ಇದ್ದಾನೆ. ಅವರ ಅಂತರಾಳದಲ್ಲಿ ನರಸಿಂಹನನ್ನು ಲಕ್ಷ್ಮಿ ಮದುವೆಯಾದರೆ, ಲಕ್ಷ್ಮಿ ತನಗೆ ದೊರೆಯಬಹುದೆಂಬ ದುರಾಲೋಚನೆಇದೆ. ಇದು ಲಕ್ಷ್ಮಿಗೂ ಗೊತ್ತಿದೆ.

ಆದರೆ, ರಂಗಸ್ವಾಮಿ ಇಲ್ಲಿ ಸಮಾಜದ ಸಂಪ್ರದಾಯಗಳನ್ನು ಮುರಿಯಲೆತ್ನಿಸಿ, ಗಂಡನನ್ನು ಬಿಟ್ಟು ಬರಲು ಲಕ್ಷ್ಮಿಗೆ ತಿಳಿಸುತ್ತಾನೆ. ಪುರುಷನಿಗೆ ಸಾಧ್ಯವಾಗಬಹುದಾದ ಇಂತಹ ಸಾಹಸ ಸ್ತ್ರೀಯಾದ ಲಕ್ಷ್ಮಿಗೆ ಸಾಧ್ಯವಾಗಲಾರದು. ಅನೇಕ ಬಗೆಯ ಸಾಮಾಜಿಕ ಹಿಡಿತಗಳು ಅವಳನ್ನು ಬಂಧಿಸಿವೆ. ಈ ಬಂಧನದಲ್ಲಿ ಅವಳ ಎಲ್ಲಾ ಆಸೆ ಆಕಾಂಕ್ಷೆಗಳು ಬೇಗುದಿಗೆ ಬಿದ್ದಿವೆ. ಈ ಸಂದರ್ಭದಲ್ಲಿ ನಿರ್ದೇಶಕರ/ಲೇಖಕರ ಜಾಗೃತ ಪ್ರಜ್ಞೆಯು ಕೆಲಸಮಾಡುತ್ತದೆ. ಅಂದರೆ ಒಂದು ಸಂದರ್ಭದ ಬಿಕ್ಕಟ್ಟುಗಳನ್ನು ಕಂಡುಕೊಳ್ಳುವುದೇ ಸಂಘಟನೆಯ ಪರಿಣಾಮಕಾರಿ ತಿಳುವಳಿಕೆಯಾಗುತ್ತದೆ. ಇಲ್ಲಿನ ಬಿಕ್ಕಟ್ಟು ಲಕ್ಷ್ಮಿಯೊಬ್ಬಳದೇ ಆಗುವುದಿಲ್ಲ. ಈ ಸಮಾಜದ ಅನೇಕರದ್ದು.

ಆದರೆ, 'ಸೂರ್ಯ' ಕಾದಂಬರಿಯಲ್ಲಿ ಲೈಂಗಿಕ ಹಾಗೂ ಸಾಮಾಜಿಕವಾಗಿ ವಂಚನೆಗೊಳಗಾದ ಹೆಣ್ಣಿಗೆ ಕರಿಯನಂತವನ ಬೆಂಬಲವಾದರೂ ಇದೆ. ಆದರೆ, ಇಲ್ಲಿ ಲಕ್ಷ್ಮಿಯ ಹಿಂದೆ ರಂಗಸ್ವಾಮಿಯಂತವನಿದ್ದರೂ ಅದು ಕರಿಯನಷ್ಟು ಪ್ರಭಾವಕಾರಿಯಾಗಿಲ್ಲ.

ಆದರೂ, ಅವಳು ಅಸಹಾಯಕತೆಯಿಂದಲೇ ಪ್ರತಿಭಟಿಸುತ್ತಾಳೆ. ಜೊತೆಗೆ ಒಂದು ಸಮೂಹ ನಿರ್ಮಿಸಬೇಕಾದ ಸಾಮಾಜಿಕ ಎಚ್ಚರ ಹಾಗೂ ಜವಾಬ್ದಾರಿಯನ್ನು ಸೂಚಿಸುತ್ತಾಳೆ. ಈ ನಿಟ್ಟಿನಲ್ಲಿ 'ಬೆಂಕಿ' ಚಿತ್ರ ನಮ್ಮ ನಡುವೆ ಪ್ರಧಾನವಾಗುತ್ತದೆ.

**ಸೂರ್ಯ (1986)**

'ಸೂರ್ಯ' ಚಲನ ಚಿತ್ರಕ್ಕೆ ಅನೇಕ ಆಯಾಮಗಳಿವೆ. ಇದು ಬಿಡುಗಡೆಗೊಂಡದ್ದು 1986ರಲ್ಲಿ; ಆದರೆ, ಮಾಸ್ಕೊ ಪ್ರಶಸ್ತಿಗೆ ಆಯ್ಕೆಯಾದದ್ದು 1998ರಲ್ಲಿ, ಅಲ್ಲದೆ, ಇದು ಪಡೆದ ಪ್ರಶಸ್ತಿಗಳಲ್ಲಿ ಎರಡನೇ ಅತ್ಯುತ್ತಮ ಪ್ರಶಸ್ತಿ, ಎರಡನೇ ಅತ್ಯುತ್ತಮ ನಿರ್ದೇಶನ ಪ್ರಶಸ್ತಿ. ಅತ್ಯುತ್ತಮ ಛಾಯಾಗ್ರಹಣ ಪ್ರಶಸ್ತಿ ಮುಂತಾದವು. ಪ್ರಸ್ತುತ ಸೂರ್ಯ ಚಿತ್ರ ಬರಗೂರರ 'ಸೂರ್ಯ' ಕಾದಂಬರಿ ಆದರಿಸಿದ್ದು. ಹಾಗಾಗಿ ಇದು ಆಶಯದಲ್ಲಾಗಲೀ, ಪಾತ್ರಚಿತ್ರಣಗಳಲ್ಲಾಗಲೀ ಎಲ್ಲೂ ಕೂಡ ಕಾದಂಬರಿಗಿಂತ ಬದಲಾಗಿಲ್ಲ. ಅದಕ್ಕಾಗಿಯೇ ಬರಗೂರರರು "ಸಾಹಿತ್ಯ ಕೃತಿಯೊಂದು ಸಿನಿಮಾಕ್ಕೆ ಅಳವಡಿಸಲ್ಪಡುವ ಸಂದರ್ಭದಲ್ಲಿ ಅದು ಇನ್ನೊಂದು ಕಲೆಯಲ್ಲಿ ಮರುವಿನ್ಯಾಸ ಪಡೆಯಬೇಕಾಗುತ್ತದೆ. ಮೂಲ ವಿನ್ಯಾಸವನ್ನೇ ಬಿಟ್ಟು ಕೊಡುತ್ತಾ ಸಿನಿಮಾದ ಕೇಂದ್ರ ಪ್ರಜ್ಞೆಯಲ್ಲಿ ಮರುಹುಟ್ಟು ಪಡೆಯುವ ಪ್ರಕ್ರಿಯೆಗೆ ಒಳಗಾಗುತ್ತದೆ. ಆದ್ದರಿಂದ ಸಾಹಿತ್ಯ ಕೃತಿಯೊಂದು ಸಿನಿಮಾ ಆಗುವುದನ್ನು ಕೇವಲ ದೃಶ್ಯಾಂತರ ಎನ್ನಲಾಗದು; ಅದು ಮಾಧ್ಯಮಾಂತರ; ಇದು ಒಂದು ಮಾಧ್ಯಮ ಇನ್ನೊಂದು ಮಾಧ್ಯಮದ ಸಾವಯವ ಭಾಗವಾಗುವ ಪ್ರಕ್ರಿಯೆ. ಈ ಪ್ರಕ್ರಿಯೆಯಲ್ಲಿ ಸಾಹಿತ್ಯದ ಮೂಲ ಆಶಯ ಮುಕ್ಕಾಗಬೇಕಿಲ್ಲ. ಆದರೆ ಮೂಲವಿನ್ಯಾಸ ಕರಗುತ್ತಾ ಹೊಸ ಒಕ್ಕೂಟ ವಿನಾಸದ ಅವಿಭಾಜ್ಯ ಅಂಗವಾಗುವುದು ಸಾಹಿತ್ಯಕ್ಕೆ ಅನಿವಾರ್ಯ" ಎಂದು ಹೇಳಲೇಬೇಕು.

ಈ ಹಿನ್ನೆಲೆಯಲ್ಲಿ ಕಾದಂಬರಿಗಳನ್ನು ಸಿನಿಮಾಕ್ಕೆ ಅಳವಡಿಸಿದ ಸಂದರ್ಭಗಳು ಕನ್ನಡದಲ್ಲಿ ಬೇಕಾದಷ್ಟು ಇವೆ. ಉದಾಹರಣೆಗೆ 'ಸಂಸ್ಕಾರ. 'ಕಾಡು,' 'ಬುಜಂಗಯ್ಯನ ದಶಾವತಾರಗಳು,' 'ಬಂಗಾರದ ಮನುಷ್ಯ', ಇತ್ತೀಚೆಗೆ ಬಂದ 'ದೇವೀರಿ,' ಕಾನೂರು ಹೆಗ್ಗಡಿತಿ, 'ಮತದಾನ' ಮುಂತಾದವು. ಬದಲಾಗದ ಇಂದಿನ ಸಂದರ್ಭದಲ್ಲಿ ಓರ್ವ ನಿರ್ದೇಶಕ ಸಾಹಿತ್ಯ ಕೃತಿಯೊಂದಕ್ಕೆ ಬದ್ಧನಾಗಬೇಕೆ ? ಎಂಬ ಪ್ರಶ್ನೆಗಳಿವೆ. ಏಕೆಂದರೆ, ಉದಾ:

"ಶುಭಮಂಗಳ ಚಿತ್ರದ ನಿರ್ದೇಶಕರಾದ ಪುಟ್ಟಣ್ಣ ಕಣಗಾಲ್ ಅವರು, ನಾನು ಕಾದಂಬರಿಯ ಒಂದು ಹಾಳೆಯನ್ನು ಮಾತ್ರ ತೆಗೆದುಕೊಂಡಿದ್ದೇನೆ ಎಂದಿದ್ದಾರೆ. ತ.ರಾ.ಸು ಅವರಿಗೆ ನಾಗರಹಾವು, ಕೇರೆಹಾವು ಆಗಿ ಕಂಡಿದೆ. ಅದರಂತೆ ಎಂ.ಕೆ. ಇಂದಿರಾ ಅವರು ತಮ್ಮ ಸಾಹಿತ್ಯದಿಂದ ಚಿತ್ರಕತೆಯನ್ನು ರೂಪಿಸಲಾಗಿದ್ದ ಪ್ರಶಸ್ತಿ ಮತ್ತು ಗೌರವ ತಮಗೇ ಬರಬೇಕಿತ್ತೆಂಬ ಭಾವನೆ." ಹೀಗೆ ಲೇಖಕ ಮತ್ತು ನಿರ್ದೇಶಕನ ನಡುವೆ ಜನಗಳಗಳು ಇದ್ದೇ ಇವೆ. ಇದು ಇತ್ತೀಚಿನವರೆಗೂ ಮುಂದುವರಿದಿದೆ. "ಕಾನೂರು ಹೆಗ್ಗಡಿತಿ' ಚಿತ್ರದಲ್ಲಿ ಕಾಡೇ ನಶಿಸಿಹೋಗಿದೆ ಎನ್ನುವುದು ಬುದ್ದಿ ಜೀವಿಗಳ ಕೂಗು. ಅದಕ್ಕೆ ಕಾರ್ನಾಡರು 'ನನ್ನ ಉದ್ದೇಶ ಅದಲ್ಲ ನಾನಿಲ್ಲಿ ಬದಲಾಯಿಸಿಕೊಂಡಿದ್ದೇನೆ' ಎಂದಿದ್ದಾರೆ. ಇಡೀ ಕಾದಂಬರಿಯಲ್ಲಿ ಸ್ತ್ರೀವಾದಿ ದೃಷ್ಟಿಕೋನವೊಂದನ್ನು ಮಾತ್ರ ಆಯ್ಕೆಮಾಡಿಕೊಂಡಿದ್ದೇನೆ ಎನ್ನುವ ಅಭಿಪ್ರಾಯ ನೀಡಿದ್ದಾರೆ. ಆದರೆ, ಕೆಲವರು ಲಂಕೇಶ್ವರ ಕಾದಂಬರಿಯ ಎಲ್ಲಾ ಸೂಕ್ಷ್ಮಗಳು 'ದೇವೀರಿ' ಚಿತ್ರದಲ್ಲಿ ಚಿತ್ರತವಾಗಿವೆ ಎಂದಿದ್ದಾರೆ. "ಮತದಾನ' ಕಾದಂಬರಿ ಸಿನಿಮಾವಾಗಿ ವಿನ್ಯಾಸ ಪಡೆದುಕೊಂಡಾಗ ಭೈರಪ್ಪನವರು ಮೆಚ್ಚಿಕೊಂಡಿದ್ದಾರೆ.

ಅಂದರೆ, ಈ ಎಲ್ಲಾ ಸಂದರ್ಭದಲ್ಲಿ ನಿರ್ದೇಶಕನೆ ಬೇರೆ, ಲೇಖಕರೇ ಬೇರೆ ಆಗಿದ್ದಾರೆ. ಆದರೆ, 'ಸೂರ್ಯ', 'ಒಂದು ಊರಿನ ಕತೆ', ಗಳ ಚಿತ್ರಗಳಲ್ಲಿ ಲೇಖಕರೂ, ನಿರ್ದೇಶಕರು ಬರಗೂರರೇ ಆಗಿದ್ದಾರೆ. ಇಲ್ಲಿ ಯಾವುದೇ ತರಹದ ಗೊಣಗುಗಳು ಕಾಣಸಿಗುವುದಿಲ್ಲ. ಬರಗೂರರು ತುಮಕೂರಿನ ಅಭಿನಂದನಾ ಸಮಾರಂಭವೊಂದರಲ್ಲಿ ಮಾತನಾಡುತ್ತ "ಅತಿ ಶ್ರೇಷ್ಠ ಚಿತ್ರಗಳನ್ನು ಮಾಡಿದೆನೆಂಬ ಭ್ರಮೆ ನನಗಿಲ್ಲ ಆದರೆ ಕೆಟ್ಟ ಚಿತ್ರಗಳನ್ನಂತೂ ಮಾಡಿಲ್ಲ" ಎಂಬ ಆತ್ಮತೃಪ್ತಿಯನ್ನು ವ್ಯಕ್ತಪಡಿಸಿದ್ದಾರೆ.

ಇದೇನೆ ಇರಲಿ 'ಸೂರ್ಯ' ಒಂದು ಉತ್ತಮ ಚಿತ್ರ ಹಾಗೂ ಈಗಾಗಲೇ ಹಿಂದಿನ ಚಿತ್ರಗಳಲ್ಲಿ ಗುರುತಿಸಿರುವಂತೆ ಸಾಮಾಜಿಕ ಜವಾಬ್ದಾರಿ ಮತ್ತು ಕಳಕಳಿಯುಳ್ಳ ಚಿತ್ರ. ಕಾದಂಬರಿ ಹೊರಡಿಸುವ ಧ್ವನಿಯನ್ನು ಚಿತ್ರವೂ ಒಳಗೊಂಡಿದೆ. ಸ್ವಾತಂತ್ರ್ಯ ನಂತರದ ಗ್ರಾಮೀಣ ಪ್ರದೇಶದಲ್ಲಿ ಜಮೀನ್ದಾರಿ ವ್ಯವಸ್ಥೆ ನಶಿಸಿ, ಪ್ರಜಾಪ್ರಭುತ್ವ ವ್ಯವಸ್ಥೆ ಕಾಲಿಡುವ ಸಂಕ್ರಮಣ ಅಥವಾ ಸ್ಥಿತ್ಯಂತರ ಸ್ಥಿತಿಯನ್ನು ಇಲ್ಲಿ ಕೇಂದ್ರವಾಗಿ ಇರಿಸಿಕೊಳ್ಳಲಾಗಿದೆ. ಇದೇ ಸಮಯಕ್ಕೆ

ಜಮೀನ್ದಾರಿ ವ್ಯವಸ್ಥೆಯೊಳಗೇ ನಲುಗಿತ್ತಿದ್ದ ಸ್ತ್ರೀಯೂ ಕೂಡ ಬಿಡುಗಡೆಯನ್ನು ಪಡೆಯಲು ಪ್ರತಿಭಟಿಸುತ್ತಾಳೆ. "ನಿಂಗೆ ಬೇಕಾದ್ದಲ್ಲ ತಂದ್ ಸುರ್ದಿದ್ದೀನಿ. ಈ ಮನ್ಯಾಗೆ ಇನ್ನೇನ್ ಬೇಕು ಅದುನ್ನಾರ ಬೊಗುಳು ಎಂದು ಜಮೀನ್ದಾರನಾದ ಗಂಡ ಗದರಿದಾಗ 'ನಂಗಿನ್ನೇನು ಬ್ಯಾಡ, ಗಂಡಬೇಕು, ಗಂಡ!" ಎಂದು ಸೀತಕ್ಕ ಕೇಳುತ್ತಾಳೆ. ಹೀಗೆ ಜಮೀನ್ದಾರಿಕೆಯ ರೋಗಗ್ರಸ್ಥತೆಯನ್ನು ಅರಿವು ಮಾಡಿಕೊಡುವ ಮೂಲಕ ಜೀತದಾಳು ಕರಿಯನೊಂದಿಗೆ ಬದುಕಲು ನಿರ್ಧರಿಸುತ್ತಾಳೆ. ಈ ಸಂದರ್ಭದಲ್ಲಿ ರೋಗಗ್ರಸ್ಥ ಜಮೀನ್ದಾರಿ ಗಂಡನನ್ನು ಸೀತಕ್ಕ, ಕರಿಯರಿಬ್ಬರೂ ಬರೀ ಕಣ್ಣನೋಟದಿಂದಲೇ ಪ್ರತಿಭಟಿಸಿ ನಿಶ್ಚಲಗೊಳಿಸುತ್ತಾರೆ.

ಹೀಗೆ, ಶೋಷಿತ ನೆಲೆಗಳು ಒಂದಾಗುವ ಮೂಲಕ ಹೊಸ ಹುಟ್ಟನ್ನು ಈ ವ್ಯವಸ್ಥೆ ಪಡೆಯುತ್ತದೆ. ಅದರ ಸಂಕೇತವಾಗಿ 'ಸೂರ್ಯ', ಹುಟ್ಟುತ್ತಾನೆಂಬ ಆಶಯ ಚಿತ್ರದ್ದು. ಜೊತೆಗೆ ಎಲ್ಲ ಚಿತ್ರಗಳಂತೆ ಇಲ್ಲಿಯೂ ದಟ್ಟ ಗ್ರಾಮೀಣ ಬದುಕನ್ನು ಸಮರ್ಥವಾಗಿ ಹಿಡಿದಿಡಲಾಗಿದೆ. ಅಲ್ಲದೇ ಇಡೀ ಚಿತ್ರದ ಉದ್ದಕ್ಕೂ ವರ್ಣಸಂಕರ ಹಾಗೂ ಸ್ತ್ರೀ ಸಮಾನತೆಯ ಸಾಮಾಜಿಕ ಕಾಳಜಿಗಳನ್ನು ಪ್ರತಿಪಾದಿಸಲ್ಪಟ್ಟಿದೆ. ಇದು ಬಂಡಾಯ ಸಾಹಿತ್ಯ ಸಂದರ್ಭದ ತಾತ್ವಿಕ ನೆಲೆಯೂ ಆಗಿದೆ. ಇದನ್ನು ಚಿತ್ರ ತುಂಬಾ ಯಶಸ್ವಿಯಾಗಿ ಚಿತ್ರಿಸಲ್ಪಟ್ಟಿದೆ ಎನ್ನುವಲ್ಲಿ ಎರಡುಮಾತಿಲ್ಲ.

**ಕೋಟೆ (1989)**

'ಕೋಟೆ' ಚಿತ್ರದ ಯಶಸ್ಸನ್ನ ಅದರ ಗೀತ ರಚನೆಯಲ್ಲಿ ಗುರುತಿಸುತ್ತೇವೆ. ಕಾರಣ, ಇದಕ್ಕೆ ಸಂಗೀತಾ ನಿರ್ದೇಶನ ನೀಡಿದ ಚಂದ್ರಶೇಖರ ಕಂಬಾರರ ಪಾತ್ರವೂ ಇದೆ. ಕಂಬಾರರು ತಮ್ಮ 'ಚಕೋರಿ'ಯಲ್ಲಿನ ಭಾವಗೀತಾತ್ಮಕ ಲಯಗಳನ್ನು ಇಲ್ಲಿ ಅಳವಡಿಸಿದ್ದಾರೆ. ನಾಯಕ ನಟನಾಗಿ ಸುಂದರ್‌ರಾಜ್ ಅರಸ್, ನಾಯಕ ನಟಿಯಾಗಿ ತಾರ ಅಭಿನಯ ನೀಡಿದ್ದಾರೆ. ಮಾನು, ಗುರುಪ್ರಸಾದ್, ಮೈಲಾರಿರಾಜ್, ಪ್ರಮೀಳಾ ಜೋಷಾಯ್, ಲಿಂಗರಾಜ್ ಕಗ್ಗಲ್, ದೇವ್‌ನಾಗೇಶ್, ಉಳಿದ ಪಾತ್ರಗಳಲ್ಲಿ ಭಾಗವಹಿಸಿದ್ದಾರೆ.

'ಕೋಟೆ' ಕಾದಂಬರಿ ಆಧಾರಿತ ಚಿತ್ರವಲ್ಲ. ಇದೊಂದು ಕಾವ್ಯಾತ್ಮಕ ಚಿತ್ರ. ಅಂದರೆ 'ಸಂಭಾಷಣೆಯೇ ಇಲ್ಲದ್ದು, ಸಿನಿಮಾದ ಎಲ್ಲಾ ಘಟನೆಗಳು ಇಲ್ಲಿ ಗೀತೆಯಿಂದಲೇ ಬೆಳೆಯುತ್ತವೆ. ಇಲ್ಲಿ ಪ್ರೇಕ್ಷಕನಿಗೆ ಮಾತಿಗೂ ಮೀರಿ ಅರ್ಥಕೊಡುವ, ಮನಸ್ಸನ್ನು ತಟ್ಟುವ ಪ್ರಯತ್ನವಿದೆ. ಆದ್ದರಿಂದಲೇ ಇದು ಕನ್ನಡ ಸಿನಿಮಾಕ್ಷೇತ್ರಕ್ಕೊಂದು ವಿಶಿಷ್ಟ ಆಯಾಮವನ್ನು ಒದಗಿಸಿತು.' 'ಕೋಟೆ' ಸಿನಿಮಾವು ಬದ್ಧತೆಯುಳ್ಳ ನಿರ್ದೇಶಕನಿಗೆ ಸವಾಲೇ ಸರಿ. ಏಕೆಂದರೆ, ನಮ್ಮ ಸಂದರ್ಭವನ್ನು ಸೂಕ್ಷ್ಮವಾಗಿ ಗ್ರಹಿಸಿ, ವಾಸ್ತವತೆಯನ್ನು ತಿದ್ದುವ ಮೂಲಕ ಉತ್ತಮ ಅಭಿರುಚಿ ಬೆಳೆಸುವ ಕೆಲಸ ಇಲ್ಲಿದೆ.

ನಮ್ಮ ನಡುವೆ ಸದ್ಯ ಇರಬಹುದಾದ Sterieo ಮಾದರಿಗಳಿಗೆ, ಮೊರೆಹೋಗದೆ ಪ್ರತಿಯೊಂದು ಹಂತದಲ್ಲೂ ಬರಗೂರರು ಭಿನ್ನರಾಗುತ್ತಿದ್ದಾರೆ. ಇಂಥಹ ಭಿನ್ನತೆಯೇ ಈ 'ಕೋಟೆ' ಚಿತ್ರ. ಇಲ್ಲಿ ಬರಗೂರರು ನಮ್ಮ ಪರಂಪರೆಯೊಳಗೇ ಇರುವ ಸಾಮೂಹಿಕ ಸದಭಿರುಚಿಯ ಅಂಶಗಳನ್ನು ಹೆಕ್ಕಿ; ಆ ಮೂಲಕ ಒಂದು ಸಮಾಜಕ್ಕೆ ಮಾಡುತ್ತಾರೆ. ಚಿತ್ರ ವೀಕ್ಷಿಸಿದ ಪ್ರತಿಯೊಬ್ಬ ಪ್ರೇಕ್ಷಕನಿಗೂ ಅಲ್ಲಿಯ ವಸ್ತುಸ್ಥಿತಿ ಅರಿವಾಗುತ್ತದೆ. ಏಕೆಂದರೆ, ಇಡೀ ಚಿತ್ರ ಇಂಪಾದ ಸಂಗೀತದೊಂದಿಗೆ ಬೆಳೆಯುತ್ತಾ ಹೋಗುವುದು ಇಲ್ಲಿಯ ಯಶಸ್ಸು ಇಲ್ಲಿಯ ಗೀತೆಗಳು ಆಯಾ ದೃಶ್ಯದ ವಿವರಣೆಯೂ ಆಗುತ್ತವೆ.

ಇಡೀ ಸಿನಿಮಾ, ರಾಮಾಯಣದ ಸೀತಾ–ರಾಮರ ಹೋಲಿಕೆಯೊಂದಿಗೆ ಸಾಗುತ್ತದೆ. ಈ ಎರಡು ಪರಿಚಯಾತ್ಮಕ ಪಾತ್ರದ ಮೂಲಕವೇ ಒಂದು ಸಂಕೀರ್ಣ ಸಂದರ್ಭ ಹೇಳುವ ರೀತಿಯೂ ಕೂಡ ವಿಶಿಷ್ಟವಾಗಿದೆ. ಭಾರತೀಯ ಪರಂಪರೆಯಲ್ಲಿ ಈ ಕಾವ್ಯ ಕ್ರಿಯೆಗೆ ಒಂದು ಮಹತ್ವದ ಸ್ಥಾನ ಹಾಗೂ ಪರಂಪರೆ ಇದೆ. ಈ ಹಂತದಲ್ಲಿ ಸಿನಿಮಾಲೋಕದ ಸಂಬಂಧವನ್ನು ಕಡಿದುಕೊಳ್ಳುವುದು ಹೇಗೆ? ಎನ್ನುವ ಪ್ರಶ್ನೆ ಪ್ರೇಕ್ಷಕನಾದವನಿಗೆ ಕಾಡುತ್ತದೆ. ಅಂದರೆ; ಇದು ಈಗ ನಮ್ಮ ನಡುವೆ ಇರಬಹುದಾದ ಭಿನ್ನಮಾದರಿ ಎಂದರೆ ಆಶ್ಚರ್ಯಪಡಬೇಕಿಲ್ಲ.

ಬರಗೂರರು ಈ ತಂತ್ರವನ್ನು ಉಳಿದ ಸಿನಿಮಾಗಳಿಗೂ ಮುಂದುವರಿಸಿದರೆ? ಎಂದುಕೊಂಡರೆ ಖಂಡಿತಾ ಇಲ್ಲ. ಆದರೆ ಕಾವ್ಯ ಭಾಷೆ ಅವರ ಸಂಭಾಷಣೆಗಳಲ್ಲಿ ನಿರಂತರವಾಗಿರುವುನ್ನು ಅಲ್ಲಗಳೆಯುವಂತಿಲ್ಲ.

'ಹಗಲು ವೇಷ,' 'ಸೂರ್ಯ', 'ಕೋಟೆ', 'ಕರಡೀಪುರ,' 'ಒಂದು ಊರಿನ ಕಥೆ, 'ಬೆಂಕಿ' ಈ ಎಲ್ಲಾ ಚಿತ್ರಗಳು ಈ ಮಾತಿಗೆ ಉದಾಹರಣೆಯಾಗುತ್ತವೆ.

'ಕೋಟೆ' ಚಿತ್ರದ ಆರಂಭದಲ್ಲಿ ಸೀತೆಯ ಬಾಯಾರಿಕೆ ನೀಗಲಿಕ್ಕೆ ರಾಮ ಒಂದ ಕೊಳವನ್ನು ನಿರ್ಮಿಸುತ್ತಾನೆ. ರಾಮ ಸೀತೆಗಾಗಿ ನಿರ್ಮಿಸಿದ ಕೊಳವಾದ್ದರಿಂದ ಅದು ಪವಿತ್ರ. ಆದ್ದರಿಂದ ಅದು ಸೀತೆ ಬಳಸಿದ ನಂತರ ಯಾರೂ ಮುಟ್ಟುವ ಹಾಗಿಲ್ಲ. ಇದು ರಾಮನ ಕಟ್ಟಳೆಯಲ್ಲ; ಊರ ಪ್ರಧಾನ ಸಂಸ್ಕೃತಿ ನಿರ್ಮಿಸಿದ್ದು.

ಇಲ್ಲಿ ಪುಟ್ಟಿ ಸೀತೆಯ ಕೊಳದ ನೀರನ್ನು ಮುಟ್ಟಿದ್ದೇ ದೊಡ್ಡ ಅಪವಾದವಾಗುತ್ತದೆ. ಚಾವಡೀಕಟ್ಟೆಗೆ ವಸ್ತುವಾಗುತ್ತದೆ. ವಾಸ್ತವವೆಂದರೆ, ಈ ಅಪವಾದದ ಬೆದರಿಕೆಯಿಂದಲೇ ಮೇಲ್ಜಾತಿಯ ಜೋಯಿಸ ಹಾಗೂ ಸಾವುಕಾರರು ಶೋಷಣೆಗೆ ಶುರುಮಾಡುತ್ತಾರೆ. ಇಷ್ಟು ಕಥಾ ಹಂದರದಲ್ಲಿ ಯಾವೊಂದು ಸಂಭಾಷಣೆಯೂ ಸುಳಿದಿಲ್ಲ. ಬರಗೂರರು ಇಲ್ಲೆಲ್ಲ ದೃಶ್ಯವನ್ನು ಶ್ರವ್ಯದ ಮೂಲಕ ಪರಿಣಾಮಕಾರಿಯಾಗಿಸುತ್ತಾರೆ. ಇಲ್ಲಿ ನಡೆಯುವ ಅನ್ಯಾಯಗಳನ್ನು ದೃಶ್ಯ ಚಿತ್ರೀಕರಿಸಿದರೆ; ಪ್ರತಿಭಟನೆಯನ್ನು ಶ್ರವ್ಯ ವ್ಯಕ್ತಪಡಿಸುತ್ತದೆ.

ಮನುಜರಲ್ಲವೆ ನಾವು

ನರಮನುಸರಲ್ಲವೆ ಬಡವರು ರಾಮಾ।

ಕೆಂಪಲ್ಲವೇ ರಕುತ

ಕೆಂಪಲ್ಲವೆ ನಮ್ಮ ರಕುತ ಸಿರಿರಾಮ॥

ಯಾವುದೇ ಪ್ರೇಕ್ಷಕ ಕೂಡ ಇಲ್ಲಿನ ಶ್ರವ್ಯ ಮತ್ತು ದೃಶ್ಯವೊಂದರ ಅರ್ಥವನ್ನು ಸರಿಯಾಗಿಯೇ ಗ್ರಹಿಸುತ್ತಾನೆ. ಅಂದರೆ, ತಕ್ಷಣವೇ ಒಂದು ತೀರ್ಪನ್ನು ತೆಗೆದುಕೊಳ್ಳುತ್ತಾನೆ. ಈ ತೀರ್ಪಿಗಾಗಿ ಅವನು ಕಥೆಯ ಅಂತ್ಯದವರೆಗೂ ಕಾಯಬೇಕಾಗಿಲ್ಲ.

ಈ ಗೀತೆಯ ಅರ್ಥ ಪ್ರತಿಭಟನೆಗಷ್ಟೆ ಮುಗಿಯುವುದಿಲ್ಲ; ಮುಂದುವರೆಯುತ್ತದೆ. ಪುಟ್ಟಿಯ ಶೋಷಣೆ ನಡೆಯುವುದು ಇಲ್ಲಿ ರಾಮನ

ಹೆಸರಿನಿಂದಲೇ. ಆದ್ದರಿಂದ ಪುಟ್ಟಿಯ ಅನ್ಯಾಯಕ್ಕೆ ಇಲ್ಲಿ ನ್ಯಾಯಸಿಗುವುದಿಲ್ಲ. ಆದ ಕಾರಣ ಅವಳು ರಾಮನನ್ನೇ ಪ್ರಶ್ನಿಸುತ್ತಾಳೆ. ನಾವು ಬಡವರೆನ್ನುವ ಕಾರಣಕ್ಕೆ ಈ ನೋವೆ? ಎನ್ನುವ ವಾಸ್ತವದ ತರ್ಕ ಹೂಡುತ್ತಾಳೆ.

ಮುಗುದೆಯ ಮನದೊಳಗೆ

ತಳಮಳ ಏಳುತಿದೆ

ಹೊಳೆ ಹೊಳೆದು ಒಳಗಿನ ತಿಳಿಯ ಕದಡುತಿವೆ।

ತಿಳಿಯ ಕದಡುತಿವೆ. – ಹೀಗೆ ಪುಟ್ಟಿಯ ಮನಸ್ಸಿನ ತಲ್ಲಣಗಳನ್ನು ಈ ಗೀತೆಯೂ ಮುಂದುವರಿಸುತ್ತದೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಇಲ್ಲಿ ಶೋಷಣೆ ಮತ್ತು ಪ್ರತಿಭಟನೆಗಳು ಏಕಕಾಲಕ್ಕೆ ಆರಂಭವಾಗಿವೆ. ಈ ಪ್ರತಿಭಟನೆ ವ್ಯಕ್ತಿ ನಿಷ್ಠತೆಯಿಂದ ಸಮುದಾಯದ ಕಡೆಗೆ ಚಲಿಸುತ್ತಾ ಹೋಗುತ್ತದೆ. ಕಾರಣ, ಶೋಷಿತರು ಬರೀ ಪುಟ್ಟಿ ಅಥವಾ ರಾಮರಿಬ್ಬರೇ ಅಲ್ಲ; ಇಂತಹ ಜನಸಮುದಾಯಗಳು. ನಿಜವಾದ ಪ್ರತಿಭಟನೆ ತಳದಿಂದ ಆರಂಭವಾಗಬೇಕಾಗುತ್ತದೆ. ಹಾಗಾಗಿ ಪುಟ್ಟಿ ಪ್ರತಿನಿಧಿಯಲ್ಲಿ; ಅದನ್ನು ಮುಂದಿನ ಪದ್ಯ ವಿಸ್ತರಿಸುತ್ತದೆ. ಬೀಳುವ ಗಂಡನ ನೋಡಿ.

ಮಡಿಯನು ಕಾಪಾಡುತ ಓಡಿ

ಮಡಿಮರೆತು ಬಂದವನೆ

ಲಚುಮಣನ ಗೆರೆ ಮೀರಿ

ನನ ಮೈಯ ಮುಟ್ಟೋಕೆ

ನನ ಮೈಯ ಮುಟ್ಟೋಕೆ.

ಹೀಗೆ ಜಮೀನ್ದಾರಿ ಮತ್ತು ಪುರೋಹಿತ ಶಾಹಿ ವ್ಯವಸ್ಥೆಯು 'ಮಡಿಗೆರೆಯನ್ನು ದಾಟಿ' ಪುಟ್ಟಿಯಂತವಳನ್ನು ಬಯಸುತ್ತದೆ. ಕಾರಣ, ಪುಟ್ಟಿಯ ಗಂಡನಾದ ರಾಮ ಕಡಿದಾದ ಬೆಟ್ಟದಿಂದ ಬೀಳುವಾಗ ಯಾವ ಸಣ್ಣ ಆಶ್ರಯವೂ ಅಲ್ಲಿರುವುದಿಲ್ಲ. ಹಾಗೆ ಉರುಳಿ ಬೀಳುವಾಗ ಅವನ ಮೈ ಮುಟ್ಟಿ, ಕಾಪಾಡದೇ ಪಾವಿತ್ರ್ಯ ಪ್ರದರ್ಶನ ನೀಡಿದ ಜೋಯಿಸ ಇಲ್ಲಿ ರೇಶಿಮೆ ರವಿಕೆಯೊಂದಿಗೆ ಬಂದು ಪುಟ್ಟಿಯ ಕೈಹಿಡಿದುಕೊಳ್ಳುತ್ತಾನೆ. ಅದೇ ಕಾಲಕ್ಕೆ

ಪ್ರೇಕ್ಷಕ ಸೀತೆಕೊಳದ ನೀರು ಮುಟ್ಟಿದ್ದು ಪುಟ್ಟಿಯ ಅಪರಾಧವಲ್ಲವೆಂದು ಗ್ರಹಿಸುತ್ತಾನೆ. ಆ ಮೂಲಕ ಬಂಡಾಯದ ಪ್ರಜ್ಞೆಯನ್ನು ಜಾಗೃತಗೊಳಿಸಿಕೊಳ್ಳುತ್ತಾನೆ.

ನಂತರ, ಗೆರೆಯನ್ನು ದಾಟುವ ಕ್ರಿಯೆಯಿಂದ ಆಗಬಹುದಾದ ದುರಂತ ಮುಂದಿನದು. ಇಲ್ಲಿ ರಾಮಾಯಣದ ರಾಮ ಹಾಗೂ ಪುಟ್ಟಿಯ ಬದುಕಿನ ಸಂಗಾತಿಯಾದ ರಾಮರ ಕಥನ ಶುರುವಾಗುತ್ತದೆ.

ವನವಾಸದಾಗೂ ನವಿಲಾದನೋ। ಸಿರಿರಾಮ ಸಿರಿ ರಾಮ

ಮನೆವಾಸದಾಗೂ ನೆಲ ಹಿಡಿದನೋ। ನನರಾಮ ನನರಾಮ

ಮನಸ್ಸಿಲ್ಲದ ಮನುಸರಿಗೆ ಗುಡಿಸಲಿನ ಗೊಡವೇಕೆ

ರೇಶಿಮೆ ರವಿಕೆಯಲ್ಲಿ ಕರುಳ ಕೊಯ್ಯೋಕೆ

ಕರುಳ ಕೊಯ್ಯೋಕೆ.

ಆ ರಾಮ ಇಲ್ಲಿ ನೆಲಹಿಡಿಯದೆ ನವಿಲಾಗಿದ್ದಾನೆ; ಈ ರಾಮ ನವಿಲಾಗದೇ ಇಲ್ಲಿ ನೆಲಹಿಡಿದಿದ್ದಾನೆ. ಕಾಣ ಈ ರಾಮನ ಬದುಕಲ್ಲಿ ಜೋಯಿಸರಂತಹ, ಸಾವುಕಾರರಂತಹ ನರ ರಾಕ್ಷಸರು ಸುಳಿದಿದ್ದಾರೆ. ಇದರಂತೆ ಇದಕ್ಕೆ ಪೂರಕವಾಗಿಯೇ ಬರುವ

"ಹಸಿಯದಾ ದಿನವಿರಲಿಲ್ಲ ರಾಮ ಸಿರಿರಾಮ

ಸರಿಯಾಗಿ ಒಂದು ದಿನವೂ ಉಣಲಿಲ್ಲ ನನ ರಾಮ

ಹಸಿಯದಾ ದಿನವಿರಲಿಲ್ಲ ರಾಮ ನನ ರಾಮ" ಎಂದು ಹಸಿವಿನ ಸಂದರ್ಭವನ್ನು ಕಾಣುವ ರೀತಿ ಮಹತ್ವದ್ದಾಗಿದೆ. ಪುಟ್ಟಿಯ ಗಂಡ ರಾಮ ಹಸಿವಿನಿಂದ ನೆಲಹಿಡಿಯುತ್ತಾನೆ. ಈ ಹಸಿವನ್ನು ಜೋಯಿಸ ಶೋಷಣೆಯ ವರವನ್ನಾಗಿಸಿಕೊಳ್ಳುತ್ತಾನೆ. ರೇಶಿಮೆ ರವಿಕೆಯ ಬೆನ್ನುಹತ್ತಿದ ಪುಟ್ಟಿಯನ್ನು ಉಪಯೋಗಿಸಿಕೊಳ್ಳುತ್ತಾನೆ. ಜೊತೆಗೆ ಸಾಹುಕಾರನೂ ಕೂಡ. ಇದರಿಂದ ಪುಟ್ಟಿಯ ಬದುಕು ಹಸನುಗೆಡುತ್ತದೆ.

"ಹೊತ್ತಿಕೊಂಡಿತು ಹಸಿವು ಮೈಯಲಿ

ಹೊಟ್ಟೆಸುಟ್ಟಿತಲ್ಲ

ಬಾಯಲಿ ನೀರು ಬರದಲ್ಲ

ಬೆವರು ಕುಡಿಯಲು ಬಾರದಲ್ಲ

ಬಂತು ಬರಗಾಲ ಓ ರಾಮಾ।

ಮನಸಿಗು ಬಂತು ಬರಗಾಲ.

ನೆರವು ಸಿಕ್ಕದು ಕುಡಿವ ನೀರಿಗೂ

ಬರವು ಬಂದಾಯ್ತು।

ನೀರಿಗೂ ಬರವು ಬಂದಾಯ್ತು

ರಾಮ ಕೂತನು ಬಾಣವೆತ್ತಲು

ಶಕ್ತಿಸಾಲದೆಯೆ

ರಾವಣನ ಬಳಿ ಈಕೆ ಹೊರಟಳು

ಬೇಡಿಕೊಳ್ಳಲಿಕೆ ..ಓ ರಾಮ

ಬೇಡಿಕೊಳ್ಳಲಿಕೆ"

ಇಲ್ಲಿ ಪುರಾಣದ ರಾಮನಹಾಗೆ ಪುಟ್ಟಿಯ ಗಂಡನಾದ ರಾಮ ಧನಸ್ಸನ್ನು ಮುರಿಯಲಾರ; ಕಾರಣ, ಅವನಲ್ಲಿ ಶಕ್ತಿಯಿಲ್ಲ. ಅವರ ಎಲ್ಲಾ ಶಕ್ತಿಯು ಊರಿನ ಜೋಯಿಸ, ಭೂ ಮಾಲೀಕರಲ್ಲಿ ಅಡಗಿದೆ. ಇಡೀ ಸಮುದಾಯದ ಬದುಕೆ ಭೂಮಾಲೀಕನಲ್ಲಿ ಬಂಧಿಸಲ್ಪಟ್ಟಿದೆ.

ಆ ರಾವಣನೇ ಮೇಲೆ ಮಾನ ಕಳೆಯಲಿಲ್ಲ

ಹುಸಿಯಾದವೇ ಕನಸು–ರಾಮಾ

ರಾವಣನ ಮನಸೀಗೆ ಕಾಮದ ಕಣ್ಣಿಲ್ಲ

ಕದ್ದು ಕರೆಯೊಯ್ದವನು ಮೈಯ ಮುಟ್ಟಲೇ ಇಲ್ಲ

ಈ ಊರ ಒಡೆಯರಿಗೆ ಇಲ್ಲ ಮನಸೆಂಬೋದು

ಆ ರಾಣನೇ ಮೇಲು ಮಾನ ಕಳೆಯಲಿಲ್ಲ

ಹುಸಿಯಾದವೇ ಕನಸು ರಾಮ

ಪಟ್ಟ ಏರಿದನಲ್ಲಿ ರಾಮಾ

ಆ ರಾವಣನೇ ಮೇಲು ಮಾನ ಕಳೆಯಾಲಿಲ್ಲ

ಹುಸಿಯಾದವೇ ಕನಸು ರಾಮಾ.

ಹೀಗೆ ಪುಟ್ಟಿ ಭೂಮಾಲೀಕನಿಂದ ಮಾನಭಂಗಕ್ಕೆ ಒಳಗಾಗುತ್ತಾಳೆ. ಇದರಿಂದ ಪುಟ್ಟಿಯ ಗಂಡ ಅವಮಾನಿತನಾಗಿ, ಅತಿಯಾಗಿ ಕುಡಿದು ಸಾಯುತ್ತಾನೆ. ಇಂತಹ ಸಂದರ್ಭದಲ್ಲಿ ಪುಟ್ಟಿಯಲ್ಲಿ ಎದ್ದ ಅಂತರಾಳದ ಭಾವನೆಗಳು ಅನಂತ. ಪದ್ಯದುದ್ದಕ್ಕೂ ಪುರಾಣದ ರಾವಣನೇ ಮೇಲೆನಿಸಿ, ಆತನೇ ಉದಾತ್ತವಾಗಿದ್ದಾನೆ. ಇದರರ್ಥ ಮನಷ್ಯನಾಗಿದ್ದಾನೆ. ಕಾರಣ ಮಾನ ಕಳೆಯಲಿಲ್ಲ ಕದ್ದೋಯ್ದರೂ ಮೈಯ ಮುಟ್ಟಲಿಲ್ಲ. ಆದರೆ, ಮನುಷ್ಯನೆಸಿಕೊಂಡವರು ಇಲ್ಲಿ ರಾಕ್ಷಸರಾಗಿದ್ದಾರೆ– ಎನ್ನುವ ತಿರಸ್ಕೃತ ಧ್ವನಿ ಇಲ್ಲಿ ಪುಟ್ಟಿಯದಾಗಿದೆ. ಹೀಗೆ ಅವಮಾನಕ್ಕೀಡಾಗುತ್ತಲೇ ಇರುವ ತಿರಸ್ಕೃತ ಸಂಸ್ಕೃತಿಗಳ ಬದುಕನ್ನು ಶೋಧಿಸುವ ನಿರಂತರತೆ ಸಿನಿಮಾದುದ್ದಕ್ಕೂ ಇದೆ. ಹಾಗೆಯೇ ಜೋಯಿಸರು, ಸಾಹುಕಾರರು, ಒಟ್ಟಾರೆ ಸಂಸ್ಕೃತಿಯವರು ಕಟ್ಟಿಕೊಂಡಿರುವ ಏಕೀಕೃತ ಮಾದರಿಗಳನ್ನು ಮತ್ತು ಅವುಗಳ ಮಿಥ್‌ಗಳನ್ನು ಒಡೆಯುವುದು ಇಲ್ಲಿನ ಉದ್ದೇಶವಾಗಿದೆ.

ಇಂತಹ ಸಂದರ್ಭದಲ್ಲಿ ಪುಟ್ಟಿಯ ಬದುಕು ರಾಮಾಯಣದ ಸೀತೆಗಿಂತಲೂ ಭಿನ್ನವೇನಿಲ್ಲ. ರಾಮಾಯಣದಲ್ಲಿ ರಾವಣ ಸೀತೆಗೆ ಕೇಡು ಬಗೆಯದಿದ್ದರೂ ಜನ ಕೇಡು ಬಗೆಯುತ್ತಾರೆ. ಅನುಮಾನಿಸಿ ನೋಡುತ್ತಾರೆ. ಈ ಅನುಮಾನದಿಂದ ಬಿಡುಗಡೆಗೊಳ್ಳಲು ಸೀತೆ ಭೂಮಿ ಬಿರಿಬಾರದೆ ಎಂದು ಅಸಹಾಯಕತೆ ವ್ಯಕ್ತಪಡಿಸುತ್ತಾಳೆ. ಅಲ್ಲಿ ಭೂಮಿಯು ಬಿರಿದು ಪರಿಹಾರವೂ ಸಿಗುತ್ತದೆ. ಅಲ್ಲಿ ಭೂಮಿಯಾದರೂ ಬಿರಿಯಿತು; ಇಲ್ಲಿ ಪುಟ್ಟಿಗೆ ಅದೂ ಸಹಾಯಕ್ಕೆ ಬಾರದು.

'ರಾಮ – ಸಿರಿರಾಮ

ನಮ್ಮ – ನೋವಿಗೆ ಇಲ್ಲಿ ನೆರವು ಯಾರು ಇಲ್ಲ

ಭೂತದ ನೆರಳು 'ಎನ್ನುವಲ್ಲಿ ಈ ಸಮಾಜವು ಪರಂಪರಾಗತವಾಗಿ ಹೆಣ್ಣಿಗೆ ಕೊಟ್ಟ ಇಕ್ಕಟ್ಟಿನ ಸ್ಥಿತಿಯನ್ನು ಧ್ವನಿಸುತ್ತದೆ. ಈ ಎಲ್ಲಾ ಕಷ್ಟ ನಷ್ಟಗಳಿಂದ ವಿಮುಕ್ತಿಗೊಳ್ಳಲು ಜನ ಸಿದ್ಧಗೊಳ್ಳುತ್ತಾರೆ. ಆ ಮೂಲಕ ಸಿನಿಮಾದ ಅಂತ್ಯಕ್ಕೆ ಇಡೀ ಸಮುದಾಯ ಒಂದಾಗುತ್ತದೆ.

"ಒಂದು ಗೂಡಿದರು ಜಾತಿ ಮತ ಮರೆತು

ಬಡವರೆಲ್ಲ ಸೇರಿ। ಒಂದೆಡೆ ಬಡವರೆಲ್ಲ ಸೇರಿ

ಮೇಲು ವರ್ಗದ ದಣಿಗಳೆಲ್ಲರೂ ನಿಂತರು। ಒಂದಾಗಿ

ಅವರು ನಿಂತರು ಒಂದಾಗಿ

ಇಬ್ಬರ ನಡುವೆ ನೋವಿನ ನೆರಳು

ಸುಳಿಯುತ್ತಿತ್ತು ನಡುಗಿ।ನೆರಳು

ಸುಳಿಯುತ್ತಿತ್ತು ನಡುಗಿ

ಮುಳ್ಳು ಮುರಿದಂತಹ ಕರುಳು ಮಿಡಿಯಿತು

ವಿಲ ವಿಲ ಒದ್ದಾಡಿ। ಮಿಡುಕಿ

ವಿಲ ವಿಲ ಒದ್ದಾಡಿ

ಸಾವಿರ ಕೊಳ್ಳಿ ಕನಸಿನಲಿ ಬಂದು

ಎಲ್ಲ ಹೋಯಿತೋ ಬುದ್ದಿ ಹೇಳುವ

ಸಮಚಿತ್ತದ ಮನಸು – ನಮ್ಮ ಸಮತೆಯ ಕನಸು." ಹೀಗೆ ಜಮೀನ್ದಾರ ಮತ್ತು ಜೋಯಿಸರ ವಿರುದ್ಧ ಎಲ್ಲ ಶೋಷಿತರು ಜಾತಿಮತ ಮರೆತು ಒಂದಾಗುತ್ತಾರೆ. ಹೀಗೆ ಒಂದಾದ ಜನ ತಮ್ಮನ್ನು ಬಲಿತೆಗೆದುಕೊಳ್ಳುವ ಬಲಿಗಂಭವನ್ನು ಕೀಳಲು ಪ್ರಯತ್ನಿಸುತ್ತಾರೆ.

ಈ ರೀತಿ ಶೋಷಣೆಗೆ ಪ್ರತಿಕ್ರಿಯೆಯಾಗಿ ಬೆಳೆಸಿದ ಪ್ರತಿಭಟನೆ ಸಿನಿಮಾದ ಉದ್ದಕ್ಕೂ ಮೈತಾಳಿದೆ. ಇದನ್ನು ಇಲ್ಲಿನ ಗೀತೆಗಳು ಸಹ ಸಮರ್ಥವಾಗಿ ಧ್ವನಿಸುತ್ತವೆ. ಬರಗೂರರು ಇಲ್ಲಿ ಪುರಾಣದ ಕತೆಯೊಂದರ ಜೊತೆಯಲ್ಲಿಯೇ ಸಮಕಾಲೀನ ಸಂದರ್ಭವನ್ನಿಟ್ಟು ನೋಡುತ್ತಾರೆ. ಹಾಗೆ ಇಡುವಾಗಲೇ ಅಲ್ಲಿಯ

ಒಳ್ಳೆಯತನವನ್ನು ಸ್ವೀಕರಿಸುವ ಹಾಗೂ ಕೆಟ್ಟದನ್ನು ತಿರಸ್ಕರಿಸುವ ಮಾದರಿಯನ್ನು ಮೆರೆಯುತ್ತಾರೆ. ಇಲ್ಲಿ ಮಿಥ್‌ಗಳನ್ನು ಮುರಿಯುವದಷ್ಟೆ ಉದ್ದೇಶವಲ್ಲ. ಜೊತೆಗೆ ಜನಸಮುದಾಯಗಳು ತಮ್ಮ ಮುಂದಿನ ಬದುಕನ್ನು ನಿರ್ಧರಿಸಿಕೊಳ್ಳಬೇಕಾಗಿದೆ. ವಧಾಸ್ತಂಭವನ್ನು ಮುರಿಯುವ ಮೂಲಕ ಸಮಾನಬದುಕನ್ನು ಕಟ್ಟಬೇಕಾಗಿದೆ. ಅಂದರೆ, ನಾವು ಯಾವುದನ್ನು ಒಳ್ಳೆಯದೆಂದು ಆಯ್ದುಕೊಳ್ಳುತ್ತೇವೆಯೋ ಅದನ್ನು ಸರಿಯಾದ ಕ್ರಮದಲ್ಲಿ ಅಳವಡಿಸಿಕೊಳ್ಳುವ ಮನೋಭಾವವೂ ಬೇಕಾಗುತ್ತದೆ.

ಇಂತಹ ಮನೋಭೂಮಿಕೆ ಸಿದ್ಧಗೊಳಿಸುವ ಪ್ರಯತ್ನ ಈ ಸಿನಿಮಾದ್ದಾಗಿದೆ. ಕಾರಣ ಅನೇಕವರ್ಷಗಳಿಂದ ದೂರವಿದ್ದ ಜನಸಮುದಾಯವನ್ನು ಎಚ್ಚರಿಸುವ ಕ್ರಮ ಇಲ್ಲಿದೆ ಮತ್ತು ಪರಿಣಾಮಕಾರಿಯಾಗಿ ಬದಲಾಯಿಸುವ ಆಲೋಚನೆಯು ಒಳಗೊಂಡಿದೆ. ಇಂಥ ಪ್ರಯತ್ನವನ್ನು ಚಲನಚಿತ್ರ ಮಾಧ್ಯಮದ ಮೂಲಕ ಸಾಧಿಸುವುದು ಸಂಗತವೇ ಸರಿ.

**ಕರಡಿಪುರ (1997)**

ಬರಗೂರರ ನಿರ್ದೇಶನದಲ್ಲಿ ತೆರೆಕಂಡ 'ಕರಡಿಪುರ' ಹತ್ತಾರು ಆಶಯವುಳ್ಳ ಚಿತ್ರ. ಇದಕ್ಕೆ ಹಂಸಲೇಖರ ಸಂಗೀತವೂ ಕೆಲಸಮಾಡಿದೆ. ಚಿತ್ರದ ಮುಖ್ಯ ಪಾತ್ರಗಳಲ್ಲಿ ಕುಮಾರ್‌ಗೋವಿಂದ್, ತಾರಾ, ಸುಂದರ್‌ರಾಜ್, ಮಾನು, ಮುಖ್ಯಮಂತ್ರಿ ಚಂದ್ರು, ಎಂ.ಎಸ್. ಉಮೇಶ್, ಮೈಲಾರಿರಾವ್, ಸುಂದರರಾಜ್ ಅರಸ್, ಪ್ರಮೀಳಾ ಜೋಷಾಯ್, ಪ್ರಹ್ಲಾದ್ ಬೆಟಗೇರಿ ಇದ್ದಾರೆ.

'ಕರಡಿಪುರ'ದ ವಿಶೇಷವೆಂದರೆ, 'ಅತ್ಯುತ್ತಮ ಸಾಮಾಜಿಕ ಕಳಕಳಿಯ ಚಿತ್ರ' ಪ್ರಶಸ್ತಿಯನ್ನು ಗಳಿಸಿಕೊಂಡಿದ್ದು ಮತ್ತು ಭಾರತದ ಪ್ರಾತಿನಿಧಿಕ ಚಿತ್ರವಾಗಿ ಇಂಗ್ಲೇಂಡ್‌ನ ಲೀಡ್ಸ್‌ನಗರದಲ್ಲಿ ಪ್ರದರ್ಶನ ಕಂಡಿದ್ದು. ಲೀಡ್ಸ್‌ಗೆ ಆಯ್ಕೆಗೊಂಡಾಗ ತುಮಕೂರಿನಲ್ಲಿ ಆಡಿದ ಬರಗೂರರ ಕೆಲವು ಮಾತುಗಳು ಇಲ್ಲಿ ಉಲ್ಲೇಖನೀಯ. "ಇವತ್ತು ಲೀಡ್ಸ್‌ಗೆ ಹೋಗ್ತಾ ಇದೀನಲ್ಲ. ಅದೇನೆ ದೊಡ್ಡ ವಿಷ್ಯಾ ಆಗ್ತಾ ಇದೆ ಅಂದ್ಕೊಂತೀನಿ. ನನಗೆ ಇದು ದೊಡ್ಡ ವಿಷಯವೆ. ನನ್ನ ಸಿನಿಮಾದ ಭವಿಷ್ಯ ಅದರಲ್ಲಿ ಅಡಗಿದೆ. ಯಾಕೆಂದರೆ ಅಂತರ್ ರಾಷ್ಟ್ರೀಯ ಮಟ್ಟಕ್ಕೆ ನನ್ನ ಚಲನಚಿತ್ರ ಹೋಗುವುದರಿಂದ ಭಾರತ ಸರ್ಕಾರದ

ದೂರದರ್ಶನದವರು ಸುಮಾರು ಹತ್ತು ಹದಿನಾಲ್ಕು ಲಕ್ಷ ರೂಪಾಯಿ ಕೊಟ್ಟು ದೂರದರ್ಶನದಲ್ಲಿ ಹಾಕಬೇಕಿದೆ. ಹಾಗೆಯೇ ಒಂದು ಕಾನೂನು ಇದೆ. ಹಾಗಾಗಿ ನನಗೆ ಸಂತೋಷವಾಗುತ್ತಿದೆ. ನನ್ನಂಥವರಿಗೆ ನಿಮ್ಮ ಸಂತೋಷದೊಳಗೆ ಸಂಕಟವೂ ಆಗುತ್ತದೆ. ಕಾರಣ ಭಾರತ ಮೋಕ್ಷಾನಂದವನ್ನು ಕೊಟ್ಟ ದೇಶ. ನನ್ನಂತವನು ಲೀಡ್ಸ್‌ಗೆ ಹೋಗಿ ಮೋಕ್ಷಾನಂದ ಕಾಣಬೇಕಾಗಿದೆ ಎಂದು . ಇಂಡಿಯಾದೊಳಗೆ ಭಾರತೀಯ ಚಲನಚಿತ್ರ ಗುರುತಿಸುವ ಭಾರತೀಯ ಪನೋರಮವೊಂದಿದೆ. ಅದರಲ್ಲಿ ನನ್ನ 'ಸೂರ್ಯ' ಚಿತ್ರ ಆಯ್ಕೆಯಾಗಲಿಲ್ಲ. ಆದರೆ, ಕನ್ನಡ ಶ್ರೇಷ್ಠ ಕಲಾತ್ಮಕ ಚಿತ್ರದ ನಿರ್ದೇಶಕರೊಬ್ಬರು ಆಯ್ಕೆ ಸಮಿತಿಯಲ್ಲಿದ್ದರು. ಆಗ ಕನ್ನಡದಲ್ಲಿ ಯಾವುದೇ ಶ್ರೇಷ್ಟ ಚಿತ್ರವಿಲ್ಲ ಎನ್ನುವುದು ಅವರ ದೃಷ್ಟಿಕೋನವಾದ್ದರಿಂದ ಭಾರತೀಯ ಪನೋರಮಕ್ಕೆ ಆಯ್ಕೆಯಾಗಲಿಲ್ಲ. ಆದರೆ, ರಷ್ಯಾದ ಮಾಸ್ಕೋದ ಅಂತರ್‌ರಾಷ್ಟ್ರೀಯ ಚಿತ್ರಕ್ಕೆ ಆಯ್ಕೆ ಸಮಿತಿ ಆಯ್ಕೆ ಮಾಡಿತು. ಇಂತದ್ದೇ ಸಂದರ್ಭ ಮರುಕಳಿಸಿದ್ದು ನನ್ನ 'ಕರಡೀಪುರ' ಸಂದರ್ಭದಲ್ಲಿ ನನಗೆ ಪರಿಚಯವೇ ಇಲ್ಲದ, ಭಾಷೆ ಗೊತ್ತಿರದ, ಇಂಗ್ಲೀಷ್ ಶಿರ್ಷಿಕೆಯಿಲ್ಲದ, ಕೇವಲ ಕನ್ನಡವೇ ಇರುವ ಕ್ಯಾಸೆಟನ್ನು ನೋಡಿ ಇದು ಬಹಳ ಒಳ್ಳೆಯ ಚಿತ್ರ. ಇದನ್ನು ಆಯ್ಕೆ ಮಾಡಿದ್ದೇವೆ ಎಂದು ಲೀಡ್ಸ್ ಪತ್ರ ಬರೆಯಿತು. ಆದ್ದರಿಂದ ಭಾರತೀಯ ಪನೋರಮದವರು ಏನನ್ನು ಅರ್ಥಮಾಡಿಕೊಳ್ಳಬೇಕೆಂಬುದನ್ನು ನಿಮ್ಮ ನಿರ್ಧಾರಕ್ಕೆ ಬಿಡುತ್ತೇನೆ .. ಯಾವ ಬ್ರಿಟೀಷ್ ವಸಾಹತುಶಾಹಿಯನ್ನು ತಿರಸ್ಕರಿಸಿ ಮಾತನಾಡುತ್ತೇವೆಯೋ ಅದೇ ಬ್ರಿಟೀಷ್ ನವ ವಸಾಹತುಶಾಹಿ ನನ್ನ ಚಿತ್ರವನ್ನು ಆಯ್ಕೆ ಮಾಡಿರುವುದು ನಮ್ಮ ಕಾಲದ ವೈರುಧ್ಯವೆಂದು ಭಾವಿಸುತ್ತೇನೆ. ಇದರಿಂದ ನಾನು ಅಂದುಕೊಳ್ಳುತ್ತೇನೆ. ನಾನು ಬಹಳ ಶ್ರೇಷ್ಠ ಚಿತ್ರ ಮಾಡಿದ್ದೇನೆಂಬ ಭ್ರಮೆ ನನಗಿಲ್ಲ. ಸದಾ ನಾನು ಅತೃಪ್ತಿಯ ಜತೆಯಲ್ಲಿಯೇ ಹೋರಾಡುವವನು. ಆದ್ದರಿಂದ ಬಹಳ ಶ್ರೇಷ್ಠ ಚಿತ್ರ ಮಾಡಿದ್ದೇನೆಂದು ಹೇಳುವುದಿಲ್ಲ. ಆದರೆ, ಕೆಟ್ಟ ಚಿತ್ರ ಮಾಡಿಲ್ಲ ಎಂದು, ಆತ್ಮ ವಿಶ್ವಾಸದಿಂದ ಹೇಳಲು ಇಷ್ಟಪಡುತ್ತೇನೆ. ಇಂತಹ ಸಂದರ್ಭದಲ್ಲಿ ನಮ್ಮ ಕನ್ನಡ ಚಲನಚಿತ್ರ ಆಯ್ಕೆ ಸಮಿತಿ ಮತ್ತು ಮರು ಪರಿಶೀಲನೆಗೆ ಒಳಗಾಗಬೇಕಾಗಿದೆ ಅನ್ನದೆ ವಿಧಿಯಿಲ್ಲ." ಬರಗೂರರ ಈ ಎಲ್ಲಾ ಮಾತುಗಳನ್ನು ಉಲ್ಲೇಖಿಸುವುದಕ್ಕೆ ಎರಡು ಕಾರಣಗಳಿವೆ. ಒಂದು, ಕಲಾತ್ಮಕ ಚಿತ್ರಗಳ ಕಾಣುವ ಏಳುಬೀಳು, ಆಯ್ಕೆ ಸಮಿತಿಯ ದೋಷಗಳು, ನಿರ್ದೇಶಕನಾಗಿರುವ ಜವಾಬ್ದಾರಿ ಹಾಗೂ

ಅತೃಪ್ತಿಗಳು. ಅದರಂತೆ ತೆರೆ ಕಾಣುವಲ್ಲಿ ಇರುವ ಸಮಸ್ಯೆ, ಒಳ್ಳೆಯ ಸಿನಿಮಾವನ್ನು ಪ್ರಶಂಸಿಸಬೇಕಾದಲ್ಲಿ ಇರಬೇಕಾದ ನಿಷ್ಪಕ್ಷಪಾತತೆ ಮುಂತಾದವು. ಅಂತರ್‌ರಾಷ್ಟ್ರೀಯ ಚಲನಚಿತ್ರಕ್ಕೆ ಆಯ್ಕೆಯಾದಾಗಲೂ ಅದು ಯಾವ ಜನಕ್ಕೆ ತಲುಪಬೇಕೆಂದು ನಿರ್ದೇಶಕ ನಿರೀಕ್ಷಿಸಿದ್ದನೋ ಅದು ಆ ಜನಕ್ಕೆ ತಲುಪದೇ ಹೋಗಿರುವ ವಿಷಾದ, ಹೀಗಾಗಿ, ಇವೆಲ್ಲವುಗಳ ಹಿಂದೆ ಪ್ರಭಾವಿ ಒಳನೋಟಗಳಿಗಿವೆ.

ಹೀಗೆ, ಲೀಡ್ಸ್‌ಗೆ ಆಯ್ಕೆಯಾದ 'ಕರಡಿಪುರ' ಚಿತ್ರ ಪ್ರತಿಪಾದಿಸುತ್ತಿರುವುದೂ ಸಹ ಇಂತಹ ವಿಷಾದ, ದುಃಖ, ಭ್ರಷ್ಟತೆ, ಎರಡು ಸಂಸ್ಕೃತಿಗಳ ಸಂಘರ್ಷ, ಧರ್ಮ ಮತ್ತು ರಾಜಕೀಯದ ನಡುವೆ ಸಂಭವಿಸುವ ಮನುಷ್ಯ ದುರಂತ, ಜೊತೆಗೆ ಬುಡಕಟ್ಟು ಮತ್ತು ಹಳ್ಳಿಗಳಿಗಿರುವ ಸಂಬಂಧ, ವೈಷಮ್ಯ.

ಹಾಗೆಯೇ, ಇಲ್ಲಿ ಬರುವ ರಾಜು 'ಸೂರ್ಯ'ದ ಸೂರ್ಯ,'ಒಂದು ಊರಿನ ಕಥೆ' ಯ ರಾಮು, 'ಹಗಲು ವೇಷ'ದ ಕಾವೇರಿ, 'ಬೆಂಕಿ'ಯ ರಂಗಸ್ವಾಮಿ ಮುಂತಾದವರದು ಎಚ್ಚೆತ್ತ ಮನಸ್ಥಿತಿ. ಹೀಗೆ ಎಚ್ಚೆತ್ತ ಮನಸ್ಸುಗಳಿಂದಲೇ ಆರೋಗ್ಯಕರ ಸಮಾಜ ನಿರ್ಮಾಣ ಸಾಧ್ಯವೆಂಬುದು ಪ್ರಸ್ತುತ ಸಿನಿಮಾದ ಒಳಧ್ವನಿ.

ಕ್ರೂರ ಸಮಾಜದ ನಡುವೆ ಮಾತನಾಡಲು ಸಾಧ್ಯವಾಗದೇ ಇರುವ ಸ್ಥಿತಿ ಈ ಸಿನಿಮಾದ ಗೌರಿಯದು. ಆಗ ಮರಗಳೊಂದಿಗೆ ಮಾತನಾಡುತ್ತಾಳೆ. "ಹೌದು ನಾನು ಹುಚ್ಚೀನೆ. ಇಲ್ಲಿ ನಿಜಾ ಹೇಳೋರೆಲ್ಲಾ ಹುಚ್ರು. ಸುಳ್ಳು ಹೇಳೋರೆಲ್ಲಾ ಬುದ್ದಿವಂತ್ರು. ಇಲ್ಲಿ ಯಾರ ತಾವ ಹೇಳಾನ. ಮನಸ್ರು ತಾವ ಹೇಳಾನ ಅಂದ್ರೆ ಮನಸ್ಸೇ ಇರೋದಿಲ್ಲ. ಮರಗಳ ತಾವ ಹೇಳಾನಂದ್ರೆ ಮರವೂ ಇರೋದಿಲ್ಲ. ಮನುಸ್ರು ಮರವು ಎರಡು ಒಂದೇ ಆಗಿವೆ. ಇವೆಲ್ಲಾ ಮನುಸ್ರು ನಾನು ಹುಚ್ಚಿ" ಎಂದೆನ್ನುವಲ್ಲಿಯ ವೇದನೆ ಈ ಸಮಾಜದ ವ್ಯಾಖ್ಯಾನವೂ ಆಗುತ್ತದೆ.

ತನ್ನ ಇಡೀ ಬುಕಟ್ಟು ಸಮುದಾಯ ಕ್ಷುಲ್ಲಕ ರಾಜಕೀಯದಿಂದ ಹೊತ್ತಿ ಉರಿಯುತ್ತದೆ. ಆ ಸಂದರ್ಭದಲ್ಲಿ ಗೌರಿ ಖಾಲಿ ಇರುವ ಕುರ್ಚಿಯನ್ನು

ಕಾಲಿನಿಂದ ಒದೆಯುತ್ತಾಳೆ. ಇದು ಕುರ್ಚಿಗಾಗಿ ಬಡಿದಾಡುತ್ತಿರುವ ಸಂದರ್ಭ. ಇಂದು ಕುರ್ಚಿಯಲ್ಲಿರುವ ಮನುಷ್ಯನಿಗೆ ಬೆಲೆ ಬರಬೇಕಿತ್ತು; ಆದರೆ ಕುರ್ಚಿಗೆ ಬೆಲೆ ಬಂದಿದೆ. ಹಾಗಾಗಿ ಇಲ್ಲಿ ಅದನ್ನು ತಿರಸ್ಕರಿಸುವ ಮೂಲಕ ಅರ್ಥಪೂರ್ಣ ರಾಜಕೀಯದ ಹುಡುಕಾಟ ನಡೆಯುತ್ತದೆ.

'ಕರಡೀಪುರ' ಕಥೆಯಲ್ಲಿ ತುಂಬಾ ದುರಂತವೇ ಮಡುಗಟ್ಟಿದೆ. ಇಲ್ಲಿ "ಬುಡಕಟ್ಟು ಹೆಣ್ಣುಗಳ ಅಪಹರಣ ನಡೆಯುತ್ತದೆ. ಹೀಗೆ ಹೆಣ್ಣುಗಳ ಅಪಹರಣವಾಗುತ್ತಿರುವುದು ಕರಡಿಯಿಂದಲೋ, ಮನುಷ್ಯನಿಂದಲೋ ಎಂಬುದರ ಶೋಧವೂ ನಡೆಯುತ್ತದೆ. ಅದರಾಚೆಗೂ ವಿಸ್ತರಿಸುತ್ತದೆ. ಅಂದರೆ ರಾಜಕೀಯ, ಸಾಮಾಜಿಕ, ಆರ್ಥಿಕ, ಈ ಎಲ್ಲಾ ವ್ಯವಸ್ಥೆಗಳಲ್ಲೂ ಅಪಹರಣಗಳು ಆಗುತ್ತಿವೆ. ಅದುವೆ ಚಿತ್ರದ ಅಂತಿಮ ಫಲಿತ.

**ಹಗಲುವೇಷ (1999)**

'ಕೋಟೆ' ಚಿತ್ರ ಕಾವ್ಯದಿಂದ ಯಶಸ್ಸು ಸಾಧಿಸಿದರೆ; ಹಗಲುವೇಷ ಸಂಭಾಷಣೆಯಿಂದ ಯಶಸ್ಸುಗಳಿಸಿದೆ. ಪ್ರಸ್ತುತ ಚಿತ್ರಕ್ಕೆ ಸ್ವತ: ಬರಗೂರರೆ ಸಂಭಾಷಣೆ, ಕತೆ, ಚಿತ್ರಕತೆ, ಮತ್ತು ನಿರ್ದೇಶನ ನೀಡಿದ್ದು ಉಲ್ಲೇಖಾರ್ಹ. ಆದರೆ, ಸಂಗೀತ ಜೋಡಣೆ ಮಾತ್ರ ಹಂಸಲೇಖರದು. ಸದರಿ ಚಿತ್ರವೂ ಸಹ ಸಾಂಸ್ಕೃತಿಕ ಜವಾಬ್ದಾರಿ ಹೊಂದಿರುವಂತಹದ್ದು. ಆದ್ದರಿಂದಲೇ, ಬರಗೂರರ ಅನನ್ಯತೆ ಇರುವುದು ಇಲ್ಲಿಯೇ ಎನಿಸುತ್ತದೆ. 'ಹಗಲುವೇಷ' ಹೆಸರೇ ಸೂಚಿಸುವಂತೆ ತಿರಸ್ಕೃತ ಸಂಸ್ಕೃತಿಯದು. ಅಂದರೆ ಅಂಚಿಗೆ ತಳ್ಳಲ್ಪಟ್ಟ ಸಂಸ್ಕೃತಿಗೆ ಸಂಬಂಧಿಸಿದ್ದು. ಹಿಂದಿಯಲ್ಲಿ ಲಗಾನ್ ಆಸ್ಕರ್‌ಗಾಗಿ ಗದ್ದಲ ಮಾಡುವುದಕ್ಕಿಂತ ಮೊದಲೇ ಕನ್ನಡದಲ್ಲಿ ಅಂತಹದ್ದೊಂದು ಕಲಾತ್ಮಕ ಚಿತ್ರ ಬಂದಿತ್ತೆಂದರೆ ಅದೇ ಈ ಹಗಲು ವೇಷ.

ವಿಶೇಷವೆಂದರೆ, ಉಪಸಂಸ್ಕೃತಿಗಳನ್ನು ಪ್ರತಿಬಿಂಬಿಸುವ ಕಾರ್ಯ ಸಿನಿಮಾದ ಉದ್ದಕ್ಕೂ ನಡೆಯುತ್ತದೆ. ಮೊದಲು ಸ್ಥಳೀಯ ನೆಲೆಗಳಿಂದಲೇ ಸಿನಿಮಾ ತನ್ನನ್ನು ಗುರುತಿಸಿಕೊಳ್ಳುತ್ತದೆ. ಆರಂಭಕ್ಕೆ, ವಿಶಾಲವಾದ ಬಯಲು ಪ್ರದೇಶ, ಕೆಂಪು ಮಣ್ಣಿನ ಭೂಮಿ, ಕಲ್ಲು ಬಂಡೆಗಳನ್ನೇ ಮೈಯನ್ನಾಗಿಸಿಕೊಂಡ ಪರಿಸರ, ಆ ಪರಿಸರದ ತುಂಬಾ ಹಸಿರು, ಕತ್ತಾಳೆ; ನೀರಿರುವ ಕೆರೆ, ಕೆರೆಯಲ್ಲಿ

ಗೂಳಿಗಳೆರಡು ಗುಟುರು ಹಾಕುವ ಸನ್ನಿವೇಷ, ತುಂಡುತೊಟ್ಟ ಹುಡುಗರ ಸಮೂಹ, ಇಂಥಹ ತವರಿಗೆ ಅಂಟಿಕೊಂಡ ಬೆವರಜನ, ಅವರ ಬವಣೆ – ಹೀಗೆ ಹತ್ತಾರು ಅಂಶಗಳು. ಇವು ಮಲೆನಾಡಿನ ಚಿತ್ರಗಳಲ್ಲ ಬಯಲು ಸೀಮೆಯವು. ಅದರಲ್ಲೂ ತುಮಕೂರಿನ ನೆಲೆಗಳು. ಇಂತಹ ಪರಿಸರದಲ್ಲಿ ಓರ್ವ 'ಹಗಲುವೇಷ'ದವ ತನ್ನಷ್ಟಕ್ಕೇ ತಾನೇ ಎಂಥ ಎಂಥ ವೇಷಾನೋ। ಎಂದು ಹಾಡಿಕೊಳ್ಳುತ್ತಾನೆ. ಇವನೇ ರಾಮು, ಆಶ್ಚರ್ಯವೆಂದರೆ ಅವನಿಗೆ ಶೋಷಣೆಯ ಬಿಸಿ, ಇನ್ನೂ ತಾಗಿಯೇ ಇಲ್ಲ. ತಾಗಿದರೂ ಅದರ ಅರಿವಿಲ್ಲ; ಎಲ್ಲವನ್ನು ಒಪ್ಪಿಕೊಂಡ ಸಂಸ್ಕೃತಿಯವನು. ಹಾಗಾಗಿ, ಬ್ರಿಟೀಷ್ ಕಲೆಕ್ಟರ್ ವೇಷ ಹಾಕೆಂದರೆ ಹಾಕುತ್ತಾನೆ. ಊರನ್ನು ಬಿಡು ಎಂದರೆ ಬಿಡುತ್ತಾನೆ. ಇದು ಅವನ ನಿತ್ಯ ಬದುಕು. ಆದರೆ, ಆಗುತ್ತಿರುವ ಶೋಷಣೆಯ ಅರಿವನ್ನು ಶಿಕ್ಷಿತ ಸಮುದಾಯ ಉಂಟುಮಾಡುತ್ತದೆ. ಇದರ ಪರಿಣಾಮದಿಂದ 'ಕಲೆ ಬರಿ ಜೀವನಕ್ಕಾಗಿ ಅಲ್ಲ; ಅದಕ್ಕೂ ಜವಾಬ್ದಾರಿಯಿದೆ ಎಂಬುದನ್ನು ಹಗಲುವೇಷದವನು ಅರ್ಥೈಸಿಕೊಳ್ಳುತ್ತಾನೆ'. ಹುಲಿಯವೇಷಹಾಕಿದ್ದನ್ನು ಕಲೆಕ್ಟರ್ ಮೆಚ್ಚುತ್ತಾನೆ. ಆದರೆ, ಅದಕ್ಕೆ ಪ್ರತಿಯಾಗಿ ಕಂದಾಯ ಬಿಡಲು ನಿರಾಕರಿಸುತ್ತಾನೆ. ಕಲೆಯನ್ನು ಕೋಟಿನಿಂದ ಅಳೆಯುತ್ತಾನೆ. ಆಗ ಇಂಥ ಅವಮಾನವನ್ನು 'ಹಗಲು ವೇಷ'ದ ರಾಮು ತಿರಸ್ಕರಿಸುತ್ತಾನೆ; ಪ್ರತಿಭಟಿಸುತ್ತಾನೆ.

**ಕಲೆಕ್ಟರ್:** "ಇಂಪಾಸಿಬಲ್ ನಾನು ಕಂದಾಯ ಬಿಡುವುದು ಸಾಧ್ಯವಿಲ್ಲ."

**ರಾಮು:** "ಇಲ್ಲೀ ಗಂಟ ನನಗೆ ವಿಶ್ವಾಸ ತೋರಿದ್ದು ಎಲ್ಲ ಸುಳ್ಳಂತೀರಾ"

**ಕಲೆಕ್ಟರ್:** "ಕಲೆಬೇಕು, ಕಲೆಗಾರಬೇಕು, ಕಂದಾಯಬೇಕು

ನಿನ್ನ ಕಲೆಗೆ ಒಂದು ಕೋಟು ಕೊಡ್ತಿನಿ ಆನಂದ ಪಡು."

**ರಾಮು:** "ಬ್ಯಾಡ ಬುದ್ದೇರ ನನ್ನ ಕಲೇನ ಕೋಟಿನಿಂದ ಅಳಿಬ್ಯಾಡಿ"

**ಪಟೇಲಾ:** "ಹೇ ಹೋಗು ಹೋಗಯ್ಯ ನಿನ್ನ ಕಲೆಗಾರರು ಕಾಸುಬಿಸಾಕಿದರೆ ಸಾವ್ರಿ ಜನ ಕಾಲಿಗೆ ಬೀಳ್ತಾರೆ."

**ರಾಮು:** "ಕಾಸು ಕೇಳ ಕಲೆ ನನ್ನದಲ್ಲ ಕಾಸಿಗೆ ಆಸೆಪಟ್ಟು ಬಣ್ಣಕ್ಕೆ ಮೋಸಮಾಡಾಕಿಲ್ಲ;"

**ಕಲೆಕ್ಟರ್:** "ದಿಸ್ ಈಸ್ ಟು ಮಚ್ ಕೊಟ್ಟದ್ದನ್ನು ತೆಗೆದುಕೊಂಡು ಹೋಗಬೇಕು.

ನಿನ್ನ ಕಲೆಗೆ ನನ್ನ ಕೋಟು ತೆಗೆದು ಕೋ. ತೆಗೆದುಕೊಂಡು ಹೋಗು ಗೆಟ್ ಲಾಸ್ಟ್" ಎಂದು ಪರಂಗಿಯವನು ಕಲೆಯನ್ನು ಕೀಳಾಗಿ ಕಾಣುತ್ತಾನೆ. ಅಷ್ಟೇ ಕೀಳಾಗಿ ಅಲ್ಲಿನ ಊಳಿಗವೂ ಕಾಣುತ್ತದೆ. ಹೀಗಾಗಲಿಕ್ಕೆ ಕಾರಣ ಶೋಷಣೆಯ ವರ್ಗಗಳು ಎಂಬುದು ಈಗ ಕೆಳ ಸಮುದಾಯಗಳಿಗೆ ಅರ್ಥವಾಗುತ್ತದೆ. ಈ ಅರಿವು ಮುಡಿಸುವುದರ ಹಿಂದೆ ಕಾವೇರಿ ಶಿಕ್ಷಣವೂ ಇದೆ.

ಸಿನಿಮಾದ ವಿಶೇಷ ಕಾಳಜಿ ಇರುವುದು ಇಲ್ಲಿಯೇ, ಏಕ ಕಾಲಕ್ಕೆ ಅದು ತನ್ನ ಸ್ಥಳೀಯತೆಯಿಂದ ರಾಷ್ಟ್ರವನ್ನು, ರಾಷ್ಟ್ರದ ಮೂಲಕ ತನ್ನ ಸ್ಥಳೀಯತೆಯನ್ನು ಒಂದಾಗಿ ನೋಡುತ್ತ ಸಾಗುತ್ತದೆ. ಸಿನಿಮಾ ಲೋಕದೊಳಗೆ ಇಂಥ ಕಥಾ ವಸ್ತುವಿನ ಚಿತ್ರಗಳು ವಿರಳ. ಅಪರೂಪಕ್ಕೊಮ್ಮೆ 'ಬಳೆಗಾರ'ನಂತವನು ಈ ದೇಶದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಪ್ರೋತ್ಸಾಹ ಕೊಟ್ಟ ಘಟನೆಗಳಿವೆ. ಇದು ಬಿಟ್ಟರೆ 'ಹಗಲುವೇಷ'ವೇ ಬಹುಮುಖ್ಯ ದಾಖಲೆ. ತಿರಸ್ಕೃತ ಸಮುದಾಯಗಳನ್ನು ಸಾಂಸಕೃತಿಕವಾಗಿ ಒಂದಾಗಿಸುವ ಮೂಲಕ ಕನ್ನಡ ಚಲನಚಿತ್ರ ರಂಗದಲ್ಲಿ ಹೊಸ ಆಯಾಮ ಒದಗಿಸಿದೆ.

## ಬರಗೂರು ಲೀಡ್ಸ್‌ನಿಂದ ಗಿನ್ನಿಸ್ ನವರೆಗೆ

ಬರಗೂರನ್ನು ಕುರಿತು ಜಿ.ವಿ. ಅಯ್ಯರ್ ನುಡಿದಂತೆ "ಈ ಹುಡುಗ ಏನೋ ಮಾಡ್ತಾನೆ ಎಂದತೆ ಇವರು ಲೀಡ್ಸ್‌ನಿಂದ ಗಿನ್ನಿಸ್ ವರೆಗೆ ನಡೆದರು. ಹಾಗೆಯೇ ಶುದ್ಧ ಗ್ರಾಮೀಣ ಭಾಷೆಯನ್ನು ಕಾವ್ಯವಾಗಿಸಿದರು.

'ಜನುಮದ ಜೋಡಿ', 'ನಮ್ಮೂರ ಹುಡ್ಗ', 'ಕುರುಬನ ರಾಣಿ', 'ಜೋಡಿಹಕ್ಕಿ'ಯಂತಹ ಸಿನಿಮಾಗಳಿಗೆ ಬರೆದ ಬರಗೂರರ ಸಂಭಾಷಣೆ ಸಮೀಕ್ಷಾರ್ಹ. ಇಲ್ಲಿ ಬಳಸಲಾದ ತುಮಕೂರು ಪ್ರಾಂತ್ಯದ ಗ್ರಾಮೀಣ ಭಾಷೆ. ಕಾವ್ಯವಾಗಿದೆ, ಅದು ಪ್ರತಿಮೆಗಳನ್ನು ಕಟ್ಟಿಕೊಡುತ್ತದೆ. ಅಷ್ಟೇ ಅಲ್ಲ ಇಡೀ ಚಿತ್ರಕಥೆಯನ್ನೇ ಒಂದು ಪ್ರತಿಮೆಯಾಗಿಸಲು ಪ್ರಯತ್ನಿಸುತ್ತದೆ. ಈ ಮಾತಿಗೆ

'ಜನುಮದ ಜೋಡಿ' ಮತ್ತು 'ಜೋಡಿಹಕ್ಕಿ' ಚಿತ್ರದ ಸಂಭಾಷಣೆ ಸಮರ್ಪಕ ಸಾಕ್ಷಿ. "ನನ್ಗಿರಾದು ಒಂದೇ ನಾಲ್ಗೆಮಾತಾಡೋದು ಒಂದೇ.

ನಾಲ್ಗೆಮೇಲೆ ನಿಗಾ ಇಲ್ದೆ ಇರೋ ನರ್ಸತ್ತೋನು ಅಂತಾ ತಿಳ್ಕಾಬೇಡಾ

ಆಡಿದ್ದನ್ನು ಮಾಡಿ ತೋರುಸ್ತೀನಿ, ಮಾಡೋದನ್ನೆ ಆಡ್ತೀನಿ" ಎನ್ನುವ ಮಾತುಗಳು ಬರಗೂರರ ಬದ್ದತೆಯನ್ನು ಬಿಂಬಿಸುತ್ತವೆ. ಅದರಂತೆ, ಇದೇ ಜನುಮದ ಜೋಡಿ ಚಿತ್ರದ ಆರಂಭದಲ್ಲಿ

"ಹೇ ನಿನ್ನ ಮೈಯಾಗೆ ದೆವ್ವ ಗಿವ್ವ ಹೊಕ್ಕೈತಾ ಹೆಂಗೆ

ದೆವ್ವ ಹೊಕ್ಕಿಲ್ಲಾ ಹುಡ್ಗಿ, ಹೇಳೋಕಾಗ್ದಿರೋ ಅನಭವ ಹೊಕ್ಕೈತಿ

ಒಳಗೆಲ್ಲಾ ಹೂವಿನಬಳ್ಳಿ, ಮ್ಯಾಲ್ಲಾ ಮೊಗ್ಗು ಅದೇನ್ನೆಂತ ಹೇಳಾಕಾಗಿಲ್ಲ."ಎನ್ನುವ ಭಾಷೆ ನಿಜಕ್ಕೂ ಕಾವ್ಯವಾಗಿದೆ.

ಇದುವರೆಗೆ ನಮ್ಮ ನಡುವೆ ದ್ವಂದ್ವಾತ್ಮಕ ಸಂಭಾಷಣಾ ಅರ್ಥಗಳೇ ಸಿನಿಮಾದ ಬಂಡವಾಳವಾಗಿದ್ದವು. ಆದರೆ, ಸಿನಿಮಾವನ್ನು 'ಕಾವ್ಯದ ಓದು'ವಾಗಿ ಅನುಭವಿಸುವ ಸಂದರ್ಭ ಬರಗೂರು ಅಂತವರಿಂದ ಸಾಧ್ಯವಾಗುತ್ತಿದೆ. ಇಲ್ಲಿ, ಬರಗೂರರ ಸಂಭಾಷಣೆಗೆ ಪ್ರೇಕ್ಷಕ ಮೂಗ ಮುರಿಯಲಾರ. ಕಾರಣ, ಸಂಭಾಷಣೆಯ ಮೋಡಿ ಅವರನ್ನು ಹಿಡಿದು ಕೂರಿಸುತ್ತದೆ. ಇಲ್ಲಿಯ ಯಶಸ್ಸು ಬರಗೂರರ ಬದ್ಧತೆಗೆ ಸಲ್ಲಬೇಕು. ಯಾಕೆಂದರೆ, ಅವರು ಹಣಕ್ಕಾಗಿ ಭಾಷೆಯನ್ನು ಭ್ರಷ್ಟಗೊಳಿಸಲಾರರು. ಹೀಗೆ, ಕಾವ್ಯಭಾಷೆಯನ್ನು ಬದ್ಧತೆಗೆ ಒಳಪಡಿಸುವ ಬರಗೂರರ ನಿಷ್ಠೆ ನಿಜಕ್ಕೂ ಮೆಚ್ಚುವಂತದ್ದು. ಬದುಕಿನ ಸಮಸ್ಯೆಗಳಿಗೆ ಆಕಾಶದ ಉತ್ತರಗಳನ್ನು ನಿರೀಕ್ಷಿಸದೆ; ವರ್ತಮಾನದಲ್ಲಿ ಕಂಡುಕೊಳ್ಳುವ ಬಂಡಾಯದ ಮನೋಭಾವ ಇಲ್ಲಿ ಅಭಿವ್ಯಕ್ತಿಗೊಂಡಿದೆ.

'ಜೋಡಿ ಹಕ್ಕಿ'ಯ ಅಂತಿಮ ಭಾಗದಲ್ಲಿ ಚಿತ್ರದ ನಾಯಕ ನಗರವನ್ನು ತೊರೆದು ಹಳ್ಳಿಗೆ ಮರಳುತ್ತಾನೆ. ಇದು ಬರಗೂರರ ಬಹುತೇಕ ಕಥೆಗಳಲ್ಲಿ ಗುರುತಿಸಲಾಗಿದೆ. ಇದು ಗ್ರಾಮೀಣ ಪ್ರಜ್ಞೆಯ ಭಾಗವೂ ಹೌದು. 'ಕರಡಿಪುರ' ಚಿತ್ರದಲ್ಲಿ ಮನುಷ್ಯನ ಜೊತೆ ಮಾತನಾಡಲು ಸಾಧ್ಯವಾಗದೇ ಇರುವ ಸಂದರ್ಭವಿದೆ. ಆಗ ಮರಗಳ ಜೊತೆ ಮಾತನಾಡುವ ಸನ್ನಿವೇಶ

ಸೃಷ್ಟಿಯಾಗುತ್ತದೆ. "ಭಾಷೆ ಭ್ರಷ್ಟವಾಗುತ್ತಾ, ಮತೀಯವಾಗುತ್ತಾ ಇರುವಾಗ ಮತ್ತೆ ಮಗುವಾಗಿ ಹುಟ್ಟಬೇಕು. ಆ ಮಗುವಿನ ಭಾಷೆಗೆ ಹೊಸ ವ್ಯವಸ್ಥೆಯನ್ನು ಸೃಷ್ಟಿಮಾಡುವ ಚೈತನ್ಯವಿರಬೇಕು" ಎಂದು ನಂಬಿದವರು ಬರಗೂರರು. ಇವರು ಮಾತು ಮತ್ತು ಮೌನದನಡುವಿನ ಅಂತರವನ್ನು ತೊಡೆದು ಹಾಕುತ್ತಾರೆ. ಯಾಕೆಂದರೆ," ನನ್ನ ಮಾತಿನ ಅರ್ಥವೆ ಮೌನ, ಮೌನದ ಅರ್ಥವೇ ಮಾತು" ಎಂದು ಅರ್ಥೈಸುತ್ತಾರೆ. ಮೂಕ ಮಹಾಕಾವ್ಯವನ್ನು ಹುಟ್ಟಿಸುತ್ತಾರೆ. ಮಾತಿನ ಮಹತ್ವವಿರುವುದು ಮೌನದಲ್ಲೇ." ಮಾತಿನ ಮೂಲಕ ಬರದೇ ಇರುವಂತ ಅನುಭವವೊಂದು ಮೌನದ ಮೂಲಕ ಬರಲು ಸಾಧ್ಯ. ಹೀಗಂತ ನಾವೆಲ್ಲ ಮೂಕರೇ ಆಗಿಬಿಡಬಾರದು. ಮಾತಿನ ಒಳಗೆ ಮೌನದ ನೆಲೆಗಳನ್ನು ಕಾಯ್ದುಕೊಳ್ಳುವ ಕನ್ನಡಿಗರಾಗಬೇಕು. ಆಗ ಕನ್ನಡಿಗ ಒಬ್ಬ ಮನುಷ್ಯ ಆಗುತ್ತಾನೆ. ಅವನ ಮಾತು ಮನುಷ್ಯತ್ವವನ್ನು ಪಡೆಯುತ್ತದೆ" ಎನ್ನುವ ತಾತ್ವಿಕ ನಿಲುವು ಈ ಚಿತ್ರದ ಇಡೀ ಸಂಭಾಷಣೆಯ ಉದ್ದಕ್ಕೂ ಹರಡಿದೆ.

ಒಟ್ಟಾರೆ, ಬದುಕೆಂದರೆ ಅದು ಪಲಾಯನವಾದುದಲ್ಲ. "ಚಕ್ರ ಉರುಳಿದ ಮೇಲೆ ಒಂದು ಸುತ್ತು ಸುತ್ತಿದ ಮೇಲೆ ಹೊಸ ಸುತ್ತಿಗೆ ನಾವು ಸಿದ್ಧವಾಗಲೇಬೇಕು" ಎನ್ನುವುದನ್ನು ಈ ಸಂದರ್ಭಗಳ ಅರ್ಥ. ಕಾಲ, ಹಳ್ಳಿ, ಮಾತು–ಮೌನ, ಪ್ರತಿಭಟನೆ, ಇವೆಲ್ಲವೂ ಸಂಭಾಷಣೆಯ ಉದ್ದಕ್ಕೂ ಕರುಳಿಗೆ ಅಂಟಿಕೊಂಡಿವೆ ಹೊರತು; ಕಂಠಕ್ಕೆ ಅಲ್ಲ. ಇಷ್ಟಲ್ಲದೆ ವಿಶ್ವ ಸಂಸ್ಥೆಯ ವಾರ್ಷಿಕ ಕಲಾ ಪ್ರದರ್ಶನದಲ್ಲಿ ಭಾಗವಹಿಸಲು ಚಿತ್ರರಚಿಸುವುದಕ್ಕಾಗಿ ಗಿರಿದಾಮಕ್ಕೆ ತೆರಳಿ ಶಾಂತಿಯನ್ನು ಹುಡುಕುವ ನಾಯಕಿ ಶಾಂತಿ ಇದು ಏಕಪಾತ್ರಭಿನಯದ ಚಿತ್ರವೆಂಬ ಹೆಗ್ಗಳಿಕೆ ಪಾತ್ರವಾಗಿ ಗಿನ್ನಿಸ್ ಪಡೆದುಕೊಂಡಿತು. ಅಲ್ಲದೆ ಇಂಥಹ ಪ್ರಯೋಗ ಮಾಡಿದ ವಿಶ್ವದ ಮೂರನೆಯ ನಿರ್ದೇಶಕರಾದದ್ದು ಕನ್ನಡದ ಗರಿಮೆಯೆ.

ಮ್ಯಾಕ್ಸಿಂಗಾರ್ಕಿ ಕಾದಂಬರಿ ಆಧಾರಿತ ತಾಯಿ ಹೆಣ್ಣಿನ ಹೋರಾಟದ ಚಿತ್ರವಾಗಿ ಮೂಡಿ ಬಂದಿದೆ ಹಾಗೂ ರಾಷ್ಟ್ರಮಟ್ಟದ ಶ್ರೇಷ್ಠ ಪ್ರಾದೇಶಿಕ ಚಿತ್ರ, ಗೀತರಚನೆ, ನಿರ್ದೇಶಕ ಮೂರು ಪ್ರಶಸ್ತಿಗಳನ್ನು ಗಳಿಸಿಕೊಂಡಿದೆ. ಹಾಗೆಯೇ ಬುಡಕಟ್ಟು ಜನಾಂಗದ ಬಾಲಕನೊಬ್ಬ ಕ್ರೀಡಾ ಪಟುವಾಗಲು ಪಡುವ ಪಾಡು ಏಕಲವ್ಯ ಚಿತ್ರದಲ್ಲಿದ್ದಾರೆ. ಶಬರಿ ಬುಡಕಟ್ಟು ಜನಾಂಗದ ಹೆಣ್ಣೊಬ್ಬಳು ಅಕ್ಷರ

ಕಲಿಯುವ ಮುಖೇನ ಕ್ರಾಂತಿಯ ಪಥದತ್ತ ನಡೆಯುವ ವಸ್ತುವನ್ನೊಳಗೊಂಡದ್ದು. ಉಗ್ರಗಾಮಿ, ಭೂಮಿತಾಯಿ ಭಾಗೀರಥಿ, ಜನಪದ, ಈ ಚಿತ್ರಗಳು ಕೂಡ ಶ್ರೇಷ್ಠ ಕಲಾತ್ಮಕ ಚಿತ್ರಗಳಾಗಿ ನಮ್ಮ ಮುಂದಿವೆ. ಇತ್ತೀಚಿನ ಮರಣ ದಂಡನೆ ಚಿತ್ರ ಪ್ರಶಸ್ತಿಗಳಿಸಿಕೊಂಡಿದೆ.

## ಸಾಹಿತ್ಯ ಅಕಾಡೆಮಿ ಮತ್ತು ಬರಗೂರು

ಬರಗೂರು ಬಂಡಾಯ ಸಂಘಟನೆ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಸಾಹಿತ್ಯ ಅಕಾಡೆಮಿ ಪಠ್ಯ ಪುಸ್ತಕ ಆಯ್ಕೆ ಸಮಿತಿ ಹೀಗೆ ಎಲ್ಲಿಯೇ ಇರಲಿ ಬರಗೂರರತನ ಎನ್ನುವುದು ಇದ್ದೇ ಇರುತ್ತದೆ. ಈ ಮಾತಿಗೆ ಉತ್ತಮ ನಿದರ್ಶನ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಸಂದರ್ಭದಲ್ಲಿ ತಂದ ನಿಯಮಗಳು.

1. 10 ನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದವರಿಗೆ ಇಂಜನಿಯರಿಂಗ್, ವೈದ್ಯಕೀಯ ಮತ್ತು ದಂತ ವೈದ್ಯಕೀಯ ಪದವಿ ಶಿಕ್ಷಣದಲ್ಲಿ ಶೇ. 5 ರಷ್ಟು ಮೀಸಲಾತಿ ಶೇ 5ರಷ್ಟು ಕನ್ನಡದಲ್ಲಿ ವ್ಯಾಸಂಗ ಮಾಡಿದವರಿಗೆ ಉದ್ಯೋಗದಲ್ಲಿ ಮೀಸಲಾತಿ.
2. ಇಂಜಿನಿಯರಿಂಗ್ ಮತ್ತು ವೈದ್ಯಕೀಯ ಪದವಿ ಶಿಕ್ಷಣದ ಮೊದಲ ಎರಡು ಸೆಮಿಸ್ಟರ್‌ಗಳಿಗೆ ಸ್ಥಳೀಯ ಭಾಷೆ ಕನ್ನಡ ಪಠ್ಯ ಅಳವಡಿಕೆ.
3. ಆಡಳಿತ ಭಾಷೆಯಾಗಿ ಕನ್ನಡ ಅಲ್ಪ ಸಂಖ್ಯಾತರಿಗೆ ಕನ್ನಡ ಕಲಿಸುವ ವಿಶಿಷ್ಟ ಯೋಜನೆ.
4. ಕರ್ನಾಟಕದ ಸಮಗ್ರ ಚಿತ್ರವನ್ನು ಕಟ್ಟಿಕೊಡುವ ಕರ್ನಾಟಕ ಸಂಗಾತಿ ಎನ್ನುವ ಗ್ರಂಥ ಪ್ರಕಟಣೆ.
5. ಶಿಕ್ಷಣ ಮತ್ತು ಮಾಧ್ಯಮ ಕುರಿತ ವರದಿ.
6. ಗಡಿನಾಡ ಸ್ಥಿತಿಗತಿಗಳ ವರದಿ.
7. ಆಡಳಿತದಲ್ಲಿ ಕನ್ನಡ ಬಳಸದೇ ಇರುವ ಅಧಿಕಾರಿ ನೌಕರನ ಮೇಲೆ ಶಿಸ್ತು ಕ್ರಮ.

ಈ ಎಲ್ಲಾ ನಿಯಮಗಳು ನಾಡ ಕಟ್ಟುವ ಕ್ರಿಯಾಶೀಲ ರೂಪಗಳು. ಹಾಗೆಯೇ ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾಗಿ ರೂಪಿಸಿದ ಅನೇಕ ಯೋಜನೆಗಳನ್ನೇ ಇಲ್ಲಿ ವಿಶ್ಲೇಷಣೆಗೆ ಒಳಗು ಮಾಡಬಹುದಾಗಿದೆ. ಮೊದಲಿಗೆ ಕನ್ನಡ ಸಾಹಿತ್ಯದಲ್ಲಿ ಪುನರ್ ಮೌಲ್ಯೀಕರಣ ಎನ್ನುವ 1992 ರಲ್ಲಿನ ಈ ಯೋಜನೆಯಲ್ಲಿನ ಸುಮಾರು 12 ಪರಿಕಲ್ಪನಾತ್ಮಕ ವಿಷಯಗಳು ಹೊಸ

ಚರ್ಚೆಗೆ ಗ್ರಾಸ ಒದಗಿಸಿವೆ. ವಿಶೇಷವೆಂದರೆ ಪ್ರತೀ ಕೃತಿಯಲ್ಲಿಯೂ ಒಂದು ಆಶಯ ಲೇಖನವಿದ್ದು ಉಳಿದ ಲೇಖನಗಳು ಶಾಸನ, ಪ್ರಾಚೀನ, ಮಧ್ಯಕಾಲೀನ, ನವೋದಯ, ನವ್ಯ, ಪ್ರಗತಿಶೀಲ, ದಲಿತ ಬಂಡಾಯ ಮತ್ತು ಜಾನಪದ ಸಾಹಿತ್ಯವನ್ನು ಪುನರ್ ಮೌಲ್ಯೀಕರಣಕ್ಕೆ ಒಳಪಡಿಸುವ ಪ್ರಾಮಾಣಿಕ ಪ್ರಯತ್ನಗಳಾಗಿವೆ. ಇಲ್ಲಿ ನೀಡಿರುವ ಲೇಖನಗಳ ಶೀರ್ಷಿಕೆಗಳನ್ನು ಗಮನಿಸುವುದಾದರೆ :

ಕನ್ನಡ ಸಾಹಿತ್ಯದಲ್ಲಿ ಪ್ರಧಾನ ಮತ್ತು ಅಧೀನ ಸಂಸ್ಕೃತಿ, ಕನ್ನಡ ಸಾಹಿತ್ಯದಲ್ಲಿ ಹಿಂಸೆಯ ಸ್ವರೂಪ, ಕನ್ನಡ ಸಾಹಿತ್ಯದಲ್ಲಿ ಅಸ್ಪೃಶ್ಯತೆಯ ಪರಿಕಲ್ಪನೆ, ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ, ಕನ್ನಡ ಸಾಹಿತ್ಯದಲ್ಲಿ ನೋವಿನ ನೆಲೆಗಳು, ಕನ್ನಡ ಸಾಹಿತ್ಯ ಮತ್ತು ಪ್ರಭುತ್ವ, ಕನ್ನಡ ಸಾಹಿತ್ಯದಲ್ಲಿ ಚರಿತ್ರೆ ಮತ್ತು ಪುರಾಣ, ಕನ್ನಡ ಸಾಹಿತ್ಯದಲ್ಲಿ ನಿಸರ್ಗ ಮತ್ತು ಸಾಮಾಜಿಕ ಸ್ಥಿತ್ಯಂತರ, ಕನ್ನಡ ಸಾಹಿತ್ಯದಲ್ಲಿ ಗ್ರಾಮೀಣ ಬದುಕಿನ ಅಭಿವ್ಯಕ್ತಿ ಕನ್ನಡ ಸಾಹಿತ್ಯದಲ್ಲಿ ಮನುಷ್ಯನ ಪರಿಕಲ್ಪನೆ, ಕನ್ನಡ ಶಿಷ್ಟ ಸಾಹಿತ್ಯದಲ್ಲಿ ಜಾನಪದ ಈ ಎಲ್ಲಾ ಪರಿಕಲ್ಪನೆಗಳ ಹಿಂದೆ ಬರಗೂರರ ಪ್ರಜಾಪ್ರಭುತ್ವವಾದಿ ಅಥವಾ ಸುಧಾರಣಾಮಾರ್ಕ್ಸ್‌ವಾದದ ಆಲೋಚನಾ ಕ್ರಮವನ್ನು ಗುರುತಿಸಬಹುದಾಗಿದೆ.

**ಚರಿತ್ರೆ ಸರಳ ರೇಖೆಯಲ್ಲ**

ಈ ಪುನರ್ ಮಾಲ್ಯೀಕರಣ ಯಾವ ಕಾರಣಗಳಿಗಾಗಿ? ಇದರ ಒತ್ತಾಸೆಗಳೇನು? ಇಂತಹ ಪ್ರಕ್ರಿಯೆಗಳನ್ನು ಅಕಾಡೆಮಿಗಳು ಮಾಡುತ್ತವೆಯೇ ? ಅಥವಾ ಮಾಡಬೇಕೆ? ಎನ್ನುವ ಪ್ರಶ್ನೆಗೆ ಬರಗೂರರ ಉತ್ತರ ಸ್ಪಷ್ಟ "ಪುನರ್‌ಮಾಲ್ಯೀಕರಣವು ಬರೀ ಸಾಹಿತ್ಯಕ್ಕೆ. ಸಂಬಂಧಿಸಿದ್ದಲ್ಲ ; ಬದುಕಿಗೂ ಸಂಬಂಧಿಸಿದ್ದು. ಮೊದಲು ಬದುಕಿನಲ್ಲಿ ಸಂಭವಿಸಿ ಆ ಮೂಲಕ ಸಾಹಿತ್ಯವನ್ನು ಸಾಹಿತ್ಯ ವಿಮರ್ಶೆಯನ್ನು ಆವರಿಸಿಕೊಳ್ಳುವ ಪ್ರಕ್ರಿಯೆಯಾಗಿದೆ.

ಆದರೆ, ಪುನರ್ ಮೌಲ್ಯೀಕರಣದ ಪ್ರಕ್ರಿಯೆಯೆಂದರೆ ಅದು ನಿರಾಕರಣ ಮತ್ತು ಕಟ್ಟ ಕಡೆಯ ತೀರ್ಮಾನವಲ್ಲ. ಬದಲಿಗೆ ಕಾಲಘಟ್ಟಗಳು ಜಡಗಟ್ಟುವುದನ್ನು ತಪ್ಪಿಸುವ ಒಂದು ತೀವ್ರತೆ. ಈ ಹಿನ್ನಲೆಯಲ್ಲಿ ಕಾಲಘಟ್ಟವೊಂದರಲ್ಲಿ ದೊರಕಿಸಿಕೊಂಡ ಅನುಭವ ಮತ್ತು ಅರಿವಿನ ಬೆಳಕಿನಲ್ಲಿ

ನಡೆಸುವ ಶೋಧವೇ ಈ ಪುನರ್ ಮೌಲ್ಯೀಕರಣ ಎನ್ನುವ ಬರಗೂರರ ಚಿಂತನೆಯ ಹಿಂದೆ ಇರುವ ಆಲೋಚನೆ ಜಡವ್ಯವಸ್ಥೆಯನ್ನು ತಪ್ಪಿಸುವುದೇ ಆಗಿದೆ.

ಇದು ಬರೀ ಅಕಾಡೆಮಿಗಳು ಮಾಡಬೇಕಾದ ಕೆಲಸವೆಂದರ್ಥವಲ್ಲ. ಮನುಷ್ಯ ಮತ್ತು ಕಾಲ ಇದರ ನಡುವಿರುವ ಸಂಬಂಧಗಳಲ್ಲಿ ಪುನರ್ ಮೌಲ್ಯೀಕರಣದ ಬೀಜಗಳು ಇರುತ್ತವೆ. ಬದುಕಿನಲ್ಲಿ ಮೊದಲು ಸಂಭವಿಸಿ ಈ ಪ್ರಕ್ರಿಯೆ ಬರಹಕ್ಕೂ ವ್ಯಾಪಿಸುತ್ತದೆ. ಬರಗೂರರು ಹೇಳುವಂತೆ "ಪ್ರಧಾನ ಮನುಷ್ಯನ ರೂಪ ಮತ್ತು ಕಲಾ ರೂಪಗಳೇ ಆಯಾ ಕಾಲದ ಆದರ್ಶ ಕಲ್ಪನೆಯಗಾಗಿ ವೈಭವೀಕರಣಕ್ಕೆ ಒಳಗಾಗುವುದು ಉಂಟು, ಆದರೆ ಸಂವೇದನೆಯ ಚರಿತ್ರೆ ಸರಳ ರೇಖೆಯಲ್ಲ. ಸಂಭ್ರಮದೊಳಗೆ ಸಂಕಟವನ್ನು ಸಂಕಟದೊಳಗೆ ಸುಖದ ಸುಳಿಯನ್ನು ಒಟ್ಟಿಗೆ ಒಳಗೊಳ್ಳುವ ಚರಿತ್ರೆಯಲ್ಲಿ ಒಂದೊಂದು ಕಾಲದಲ್ಲಿ ಒಂದೊಂದು ಪ್ರಧಾನ ರೂಪವಾಗಿ ಪ್ರಕಟಗೊಳ್ಳುವ ಪ್ರಕ್ರಿಯೆಯೇ ಸ್ವಾಭಾವಿಕ. ಇದನ್ನು ಮಾರ್ಕ್ಸ್ ಬೇರೆ ಮಾತುಗಳಲ್ಲಿ ಬಳಸಿದನೆನೋ! "ಅನೇಕ ದಾರ್ಶನಿಕರು ಈಗಾಗಲೇ ಜಗತ್ತನ್ನು ಅರ್ಥೈಸಿದ್ದಾರೆ. ನಮಗೆ ಬೇಕಿರುವುದು ಅರ್ಥೈಸುವಿಕೆಯಲ್ಲ ಬದಲಾಯಿಸುವುದಾಗಿದೆ. ಈ ಬದಲಾವಣೆಯೇ ಒಂದು ಪ್ರೊಸೆಸ್. ಇಂತಹ ಬದಲಾವಣೆಯೇ ಜಡವ್ಯವಸ್ಥೆಯನ್ನು ಪ್ರಶ್ನಿಸುವುದು ಮತ್ತು ಬದಲಾಯಿಸುವುದಾಗುತ್ತದೆ.

ಆದರೆ, ಯಾವುದನ್ನು ಪ್ರಧಾನ ರೂಪವೆಂದು ಕರೆಯುತ್ತೇವೆಯೋ ಅದರೊಳಗಡೆ ಭಿನ್ನ ನೆಲೆಗಳು ಬಿಡಿಬಿಡಿಯಾಗಿದ್ದು, ಬರುಬರುತ್ತಾ ಬೆಳವಣಿಗೆ ಹೊಂದಿ ಒಂದಾಗಿ ಹೊರಬರುವ ಚಾರಿತ್ರಿಕ ಸಂದರ್ಭ ಬಂದಾಗ ಕಾಲ ಬದಲಾಗುವ ಆಶಯ ಅಭಿವ್ಯಕ್ತವಾಗುತ್ತದೆ. ಅಂದರೆ, ಬದುಕು ಬದಲಾಗುವ ಒತ್ತಡ ಪ್ರಧಾನವಾಗುತ್ತದೆ. ಇದು ಬದುಕು ಮತ್ತು ಬರಹದಲ್ಲೂ ಕಾಣಲು ಸಾಧ್ಯವಾಗುತ್ತದೆ. ಇದರ ಫಲವಾಗಿಯೇ ಪುನರ್ ಮಾಲ್ಯೀಕರಣಕ್ಕೆ ಒಳಗಾಗುವುದು ಅನಿವಾರ್ಯವಾಗುತ್ತದೆ. ಅಂಬೇಡ್ಕರ್‌ರು ಹೇಳುವಂತೆ ಚರಿತ್ರೆಯನ್ನು ಅರಿಯದವನು ಚರಿತ್ರೆಯನ್ನು ಸೃಷ್ಟಿಸಲಾರ ಹಾಗಾಗಿಯೇ, ವ್ಯವಸ್ಥೆಯ ಪ್ರಜ್ಞೆ ನಮಗೆ ಅಗತ್ಯ.

ಪುನರ್ ಮೌಲ್ಯೀಕರಣಕ್ಕೆಂದು ಈ ಪ್ರಕ್ರಿಯೆ ಪ್ರಜ್ಞಾ ಪೂರ್ವಕವಾಗಿ ನಡೆಯದೇ ಇದ್ದರೂ ಕೂಡ ಹೊಸ ಬದುಕು ಮತ್ತು ಬರಹಗಳು ಹೊಸ ಕಾಲವನ್ನು ಕಂಡುಕೊಳ್ಳುವ ಮತ್ತು ಕಟ್ಟಿಕೊಡುವ ಕ್ರಿಯೆಯೇ ಮೌಲ್ಯೀಕರಣದ ಮೊದಲ ಹೆಜ್ಜೆ ಹಾಗೂ ಸಹಜವಾದುದು. ಆದ್ದರಿಂದ ಹಿಂದಿನ ಕಲಾ ರೂಪಗಳು ಅಪ್ರಸ್ತುತವಾಗುತ್ತ ಹೊಸ ವಸ್ತು ಮತ್ತು ವಿನ್ಯಾಸಗಳು ಪ್ರಧಾನವಾಗುತ್ತಾ ಹೋದಂತೆ ಹೊಸ ಕಾಲ ಮತ್ತು ಹೊಸ ಮನುಷ್ಯನ ಕಲ್ಪನೆಗಳು ಮುಖಾಮುಖಿಗೆ ಇಳಿದು ಪುನರ್ ಮೌಲ್ಯೀಕರಣದ ಪ್ರಕ್ರಿಯು ತನಗೆ ತಾನೆ ಪ್ರಾರಂಭವಾಗುತ್ತದೆ. ಆದರೆ ನಿರ್ದಿ಼ಷ್ಟ ಕಾಲಘಟ್ಟವನ್ನು ಮುಟ್ಟಿ ಹೊಸ ಆಶಯಗಳ ಹೊಸ ಮನುಷ್ಯನ ಕಲ್ಪನೆಗಳು ಗಟ್ಟಿಯಾಗುತ್ತಾ ಬಂದಂತೆ ಪ್ರಜ್ಞಾಪೂರ್ವಕ ಪುನರ್ ಮೌಲ್ಯೀಕರಣದ ಅಗತ್ಯತೆ ಉಂಟಾಗುತ್ತದೆ ಎನ್ನುತ್ತಾರೆ.

ವಿಚಿತ್ರವೆಂದರೆ ಸಾಹಿತ್ಯ ಸಂದರ್ಭದಲ್ಲಿ ಕೆಲವೊಮ್ಮೆ ಬಹುಬೇಗ ಇಂತಹ ಬದಲಾವಣೆಯ ಪ್ರಕ್ರಿಯೆಯು ಸಂಭವಿಸಿ ಬಿಡುತ್ತದೆ. ಉದಾಹರಣೆ ಪ್ರಧಾನ ನೆಲೆಯದ್ದು ಎಂದು ಕರೆಯಿಸಿ ಕೊಳ್ಳುವ ಕುಮಾರವ್ಯಾಸನ ಕಾವ್ಯ ಲಿಖಿತ ಪರಂಪರೆಯಿಂದ ಅಲಿಖಿತ ವಾಕ್ ಪಂಪರೆಗೆ ಬರುವ ಸಾಧ್ಯತೆಗಳನ್ನೇನೂ ತಳ್ಳಿ ಹಾಕುವಂತಿಲ್ಲ. ಅಥವಾ ಜನಪದ ಮಹಾ ಕಾವ್ಯಗಳು ಅಲಿಖಿತ ಪರಂಪರೆಯನ್ನು ದಾಟಿ ಲಿಖಿತ ವಿಮರ್ಶಾ ಪರಂಪರೆಗೆ ದಕ್ಕಿದಾಗ ಏನಾಗುವೆ? ಇವುಗಳ ನಡುವಿನ ಪ್ರಧಾನ ಅಧೀನ ನೆಲೆಗಳ ಕಲ್ಪನೆ ಬದಲಾಗುತ್ತಲೇ ಇರುತ್ತವೆ. ಹಾಗಾಗಿಯೇ ಪುನರ್ ಮೌಲ್ಯೀಕರಣ ಒಂದು ನಿರಂತರ ಪ್ರಕ್ರಿಯೆಯಾದದ್ದು.

ಒಟ್ಟಾರೆ, ಈ ಪ್ರಕ್ರಿಯೆಗೆ ಬರಗೂರರು ಅಕಾಡೆಮಿಯ ಅಧ್ಯಕ್ಷರಾದ ಸಂದರ್ಭದಲ್ಲಿ ಚಾಲನೆ ದೊರೆತದ್ದು ವಿಶೇಷ. ಇಂತಹ ಸರಕಾರಿ ಸಂಸ್ಥೆಗಳು ಬರೀ ಪ್ರಶಸ್ತಿ ಪ್ರಕಟಣೆಗಷ್ಟೇ ಸೀಮಿತವಾಗದೆ. ನಾಡಿನುದ್ದಕ್ಕೂ ಹೊಸ ಚಿಂತನೆಗಳನ್ನು ಪಸರಿಸುವ ಕೇಂದ್ರಗಳಾದದ್ದನ್ನೂ ಗಮನಿಸಬೇಕಾಗುತ್ತದೆ. ಅಲ್ಲದೇ ಸಾಂಸ್ಕೃತಿಕ ಜೀವಂತಿಕೆಯನ್ನು ಮತ್ತು ಪ್ರಜಾಪ್ರಭುತ್ವೀಯ ಚಿಂತೆನಗಳಿಗೆ ಬರಗೂರರು ಅಧ್ಯಕ್ಷರಾದ ಸಂದರ್ಭದಲ್ಲಿ ಅವಕಾಶ ಒದಗಿಸಿದ್ದು ನಿಜಕ್ಕೂ ಅಭಿನಂದನೀಯ.

## ಸಾಹಿತ್ಯ ಮತ್ತು ಅಂತರ್‌ಶಿಸ್ತೀಯತೆ

ಬರಗೂರರು ತಂದ ಇನ್ನೊಂದು ಮಹತ್ವ ಪೂರ್ಣ ಯೋಜನೆ ಅಂತರ್‌ಶಿಸ್ತೀಯ ಅಧ್ಯಯನ. ಸಾಹಿತ್ಯ ಎನ್ನುವುದೇ ಒಂದು ಅಂತರ್‌ಶಿಸ್ತಿಯ ಸಂವೇದನೆ. ಭಾಷಿಕವಾಗಿ ಅಭಿವ್ಯಕ್ತಗೊಳ್ಳುವ ಯಾವುದೇ ಭಾಷೆಯೊಳಗಿನ ಸಂವೇದನೆಗಳು ವಿವಿಧ ಶಿಸ್ತುಗಳೊಂದಿಗೆ ಸಂಬಂಧ ಕಲ್ಪಿಸಬಹುದಾದ ಸಾಧ್ಯತೆಗಳನ್ನು ಹೊಂದಿಯೇ ಇರುತ್ತವೆ.

ಹಾಗಾಗಿ, ಸಾಹಿತ್ಯದ ಸೃಷ್ಟಿಗೆ ಅಂತರ್‌ಶಿಸ್ತ್ರೀಯ ಅಧ್ಯಯನ ಶಾಸ್ತ್ರಗಳು ಶಿಸ್ತುಗಳಾಗಬೇಕಾಗುತ್ತದೆಯೇ ? ಎಂಬ ಪ್ರಶ್ನೆಯನ್ನಿರಿಸಿಕೊಂಡರೆ, ಉತ್ತರ : ವಿವಿಧ ಶಿಸ್ತುಗಳು ಶಾಸ್ತ್ರಗಳಾಗುವ ಸಾಧ್ಯತೆಗಳಿಗಿಂತಲೂ ಸಂವೇದನೆಯ ಸೃಷ್ಟಿಗಳಾಗುತ್ತವೆ ಎನ್ನುವುದು ತಿಳಿದಿರುವ ವಿಚಾರವೆ. ಆದರೆ, ಸಾಹಿತಿಯಾದವನು ತನಗಿರುವ ಶಾಸ್ತ್ರೀಯ ಅಧ್ಯಯನಗಳನ್ನು ಸೃಷ್ಟಿಶೀಲತೆಗೆ ಮಾರಕವಾಗದೆ ಹೇಗೆ ರೂಪಿಸಿಕೊಳ್ಳುತ್ತಾನೆ ಎನ್ನುವುದು ಮುಖ್ಯವಾಗುತ್ತದೆ.

ಹೀಗೆ ಶಾಸ್ತ್ರಗಳ ಶಾಸ್ತ್ರೀಯ ಅಧ್ಯಯನವಿರದಿದ್ದರೂ ಕೂಡ ಸಾಹಿತಿ ಅವುಗಳ ಸಂವೇದನೆಯನ್ನು ಪಡೆದು ಸಾಹಿತ್ಯ ನಿರ್ಮಿತಿಯಲ್ಲಿ ತೊಡಗಿರುತ್ತಾನೆ ಎನ್ನುವುದು ಸ್ಪಷ್ಟ.

ಅಂತರ್‌ಶಿಸ್ತ್ರೀಯ ಅಧ್ಯಯನ ಮಾಲಿಕೆಯ ಉದ್ದೇಶ ಇಂತಹ ಸಾಹಿತ್ಯ ಇರುವಿಕೆಯನ್ನಷ್ಟೇ ಹೇಳದೆ ಅದನ್ನು ಮೀರುವ ಕ್ರಿಯೆಯಲ್ಲಿ ತೊಡಗಿ ಹೊಸಸಾಧ್ಯತೆಗಳ ಶೋಧವಾಗಬೇಕಾಗುತ್ತದೆ. ಜೊತೆಗೆ ಸತ್ಯಗಳ ಚಾರಿತ್ರಿಕ ಆಯಾಮಗಳನ್ನು ಅನಾವರಣಗೊಳಿಸುತ್ತಲೇ ಸ್ವಂತ ಸತ್ಯವನ್ನು ಕಂಡುಕೊಳ್ಳಬೇಕಾದ ಅಗತ್ಯತೆ ಇದೆ. ಹಾಗಾಗಿ, ಸಾಹಿತ್ಯ ಮತ್ತು ಸಾಹಿತ್ಯ ವಿಮರ್ಶೆಗೆ ಅನ್ಯಜ್ಞಾನ ಶಿಸ್ತುಗಳ ಅಧ್ಯಯನ ಅವಶ್ಯಕವಾದುದು ಎಂದೆನ್ನುವ ತಿಳುವಳಿಕೆಯಿಂದ ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾಗಿ ಬರಗೂರರು ಅಂತರ್‌ಶಿಸ್ತೀಯ ಅಧ್ಯಯನದ ಯೋಜನೆಯನ್ನು ರೂಪಿಸಿ ಸಾಹಿತ್ಯ ಮತ್ತು ಚರಿತ್ರೆ, ಸಾಹಿತ್ಯ ಮತ್ತು ನೃತ್ಯ, ಸಾಹಿತ್ಯ ಮತ್ತು ಚಿತ್ರ ಕಲೆ, ಸಾಹಿತ್ಯ ಮತ್ತು ಪತ್ರಿಕೋದ್ಯಮ, ಸಾಹಿತ್ಯ ಮತ್ತು ಸಿನಿಮಾ, ಸಾಹಿತ್ಯ ಮತ್ತು ಮನೋವಿಜ್ಞಾನ, ಸಾಹಿತ್ಯ ಮತ್ತು ಸಮಾಜಶಾಸ್ತ್ರ, ಸಾಹಿತ್ಯ ಮತ್ತು ರಂಗಭೂಮಿ, ಸಾಹಿತ್ಯ ಮತ್ತು

ವಿಜ್ಞಾನ, ಸಾಹಿತ್ಯ ಮತ್ತು ಪುರಾಣ, ಎನ್ನುವ ಸಂಕಲನಗಳನ್ನು ಹೊರತಂದಿದ್ದಾರೆ. ಇದರಿಂದ ಸಾಹಿತ್ಯಾಧ್ಯನಕ್ಕೆ ಹೊಸ ಆಯಾಮವೊಂದನ್ನು ದೊರಕಿಸಿಕೊಟ್ಟ ಹೆಗ್ಗಳಿಕೆ ಬರಗೂರರದು.

**ಕನ್ನಡ ಚಿಂತನೆಯಲ್ಲಿ ಉಪಸಂಸ್ಕೃತಿ**

ಇದುವರೆಗಿನ ಕನ್ನಡ ಚಿಂತನೆಯಲ್ಲಿ ಬರಗೂರರ ವಿಶಿಷ್ಟ ಕೊಡುಗೆ ಎಂದರೆ ಉಪಸಂಸ್ಕೃತಿ ಚಿಂತನೆಯಾಗಿದೆ. ಬರಗೂರರು ಉಪಸಂಸ್ಕೃತಿಯ ಚಿಂತಕರೆಂದೇ ಗುರುತಿಸಲ್ಪಟ್ಟಿದ್ದಾರೆ. ಇವರ ಸಂಸ್ಕೃತಿ ಉಪ ಸಂಸ್ಕೃತಿ ಎಂಬ ದೀರ್ಘ ಲೇಖನ ಅಕಾಡೆಮಿಯ ಉಪಸಂಸ್ಕೃತಿ ಮಾಲೆಗಾಗಿ ರೂಪಿಸಿದ ಪ್ರಸ್ತಾವನೆಯಾಗಿದೆ.

ವಿಶೇಷವೆಂದರೆ ಈ ಪ್ರಸ್ತಾವನೆಯಿಂದಲೇ ಕನ್ನಡದಲ್ಲಿ ಸಂಸ್ಕೃತಿಯನ್ನು ಕುರಿತ ಪರ್ಯಾಯ ಚಿಂತನೆ ಅಧಿಕೃತವಾಗಿ ಆರಂಭವಾಯಿತು. ವಸಾಹತು ಶಾಯಿಯ ಕೊಡುಗೆಯಾದ ಕಲ್ಚರ್ ಶಬ್ದಕ್ಕೆ ಕನ್ನಡದಲ್ಲಿ ಕಟ್ಟಿಕೊಂಡ ಸಂಸ್ಕೃತಿ ಎನ್ನುವ ಪರಿಕಲ್ಪನೆಯ ವ್ಯಾಖ್ಯಾನ ಎರಡು ನೆಲೆಗಳಲ್ಲಿ ದೊರಕುತ್ತಿತ್ತು. ಅವುಗಳೆಂದರೆ ಅಧ್ಯಾತ್ಮಿಕ ನೆಲೆ ಮತ್ತು ಕಲೆಯ ನೆಲೆಗಳು.

ಅಧ್ಯಾತ್ಮಿಕ ನೆಲೆಯ ಸಂಸ್ಕೃತಿಯ ವ್ಯಾಖ್ಯಾನಗಳು ಅಂತರಂಗ ಮತ್ತು ಬಹಿರಂಗಕ್ಕೆ ಸಂಬಂಧಪಟ್ಟವುಗಳಾದರೆ, ಕಲೆಯ ನೆಲೆಯಲ್ಲಿನ ಸಂಸ್ಕೃತಿ ವ್ಯಾಖ್ಯಾನಗಳು ಸಾಹಿತ್ಯ ಶಿಲ್ಪಕಲೆಗೆ ಸಂಬಂಧಿಸಿದವುಗಳು. ಉದಾಹರಣೆ ಭಾರತೀಯ ಸಂಸ್ಕೃತಿ ಎಂದಾಕ್ಷಣ ಸಂಗೀತ ನೃತ್ಯ, ಚಿತ್ರಕಲೆ, ಶಿಲ್ಪಕಲೆಗಳನ್ನು ಕುರಿತದ್ದೇ ಆಗಿದೆ. ಈ ಹಂತದಿಂದ ಸಂಸ್ಕೃತಿ ಸಮುದಾಯದ ಸಾಮಾಜಿಕ ನೆಲೆಯ ಅದೊಂದು ಜೀವನಕ್ರಮ ಎನ್ನುವ ಚಿಂತನೆಯೇ ಅದುವರೆಗಿನ ಸಂಸ್ಕೃತಿ ಚಿಂತನೆಗಿಂತ ವಿಶಿಷ್ಟವಾದ್ದು, ಬರಗೂರರು ಈ ಎರಡು ನೆಲೆಯ ಸಂಸ್ಕೃತಿಯ ಚಿಂತನೆಗಳನ್ನು ತಿರಸ್ಕರಿಸಿ ರೇಮಂಡ್ ವಿಲಿಯಮ್ಸ್ ಮತ್ತು ಹರಸ್ಕೋವಿಟ್ಸ್ ರಂತಹ ಎಡಪಂಥೀಯ ಚಿಂತನೆಗಳನ್ನು ಎತ್ತಿ ಹಿಡಿಯುತ್ತಾರೆ. ಆ ಮೂಲಕ ಸಂಸ್ಕೃತಿಗಳಲ್ಲಿ ಭಿನ್ನತೆ ಇದೆಯೇವರೆತು ಹೀನತೆಗಳಿಲ್ಲ ಎಂಬುದನ್ನು ಮಂಡಿಸುತ್ತಾರೆ.

ಹರಸ್ಕೋವಿಟ್ಸ್ ಹೇಳುವಂತೆ "ಪೂರ್ಣ ಪರಿಸರದಲ್ಲಿ ಮನುಷ್ಯ ನಿರ್ಮಿತಭಾಗವೇ ಸಂಸ್ಕೃತಿ, ಮನುಷ್ಯ ಹೊಸ ಪರಿಸರ ನಿರ್ಮಿತಿಗೆ ತೊಡಗಿದಂತೆಲ್ಲಾ ಸಂಸ್ಕೃತಿಯ ಹೊಸ ನಮೂನೆಗಳು ಹುಟ್ಟುತ್ತವೆ. ಅಂದರೆ, "ಮನುಷ್ಯ ಎಲ್ಲೆಲ್ಲಿ ಇದ್ದಾನೋ ಅಲ್ಲೆಲ್ಲಾ ಸಂಸ್ಕೃತಿ ಇದೆ. ಮತ್ತು ಮನುಷ್ಯನ ಶ್ರಮ ಸಂಸ್ಕೃತಿ ಕ್ರಿಯೆಗಳೇ ಸಂಸ್ಕೃತಿಯ ವಿಕಾಸದ ದಿಕ್ಕನ್ನು ನಿರ್ಧರಿಸುತ್ತವೆ. ಸಂಸ್ಕೃತಿ ಎನ್ನುವುದು ವಿಶ್ವ ವ್ಯಾಪಿಯಾದುದು". ಆದರೆ, ಅದೇ ಸಂದರ್ಭಲ್ಲಿ ಒಂದು ಸಂಸ್ಕೃತಿಯೆನ್ನುವುದು ಮುಖ್ಯವಾಗುತ್ತದೆ ಎನ್ನುವುದನ್ನು ಗಮನಿಸಬೇಕಾಗುತ್ತದೆ.

ಮನುಷ್ಯ ಸಮಾಜ ಇರುವೆಡೆಯಲ್ಲೆಲ್ಲಾ ಸಂಸ್ಕೃತಿ ಇದ್ದೇ ಇರುತ್ತದೆ ಎನ್ನುವುದಾದರೆ:–

ಇಲ್ಲಿ ಮನುಷ್ಯನೊಬ್ಬ ಶ್ರೀಮಂತನೋ, ಮೇಲ್ಜಾತಿಯೋ ಕೆಳಜಾತಿಯೋ ಈ ಯಾವುದು ಮುಖ್ಯವಲ್ಲ. ಅಂದರೆ, ಸಂಸ್ಕೃತಿ, ಎಂಬ ಪರಿಕಲ್ಪನೆಗೆ ಮೇಲು ಸಂಸ್ಕೃತಿ ಕೀಳು ಸಂಸ್ಕೃತಿ ಎಂಬ ತಾರತಮ್ಯವಿಲ್ಲ ಎನ್ನುವುದು ಖಚಿತ. ಹರಸ್ಕೋವಿಟ್ಸ್ ಹೇಳುವಂತೆ ಜನರ ಜೀವನ ವಿಧಾನವೇ ಸಂಸ್ಕೃತಿ. ಈ ಜನ ಯಾರಾದರೂ ಆಗಿರಬಹುದು. ಒಟ್ಟಾರೆ ಜನರಿರುವ ಕಡೆ ಸಂಸ್ಕೃತಿ ಇರುತ್ತದೆ. ಹೀಗೆ ಸಂಸ್ಕೃತಿ ಒಂದೇ ತೆರನಾದುದಲ್ಲ. ಒಂದೇ ವಿನ್ಯಾಸದಂತೂ ಅಲ್ಲವೇ ಅಲ್ಲ. ಒಂದೊಂದು ಪ್ರದೇಶ ಒಂದೊಂದು ಜನಾಂಗಗಕ್ಕೂ ಒಂದೊಂದು ರೀತಿಯ ಸಂಸ್ಕೃತಿ ಇರಲು ಸಾಧ್ಯ. "ಒಂದು ಸಂಸ್ಕೃತಿ ಎಂಬ ಪರಿಕಲ್ಪನೆ ಹುಟ್ಟುವುದು ಮತ್ತು ಪ್ರಚಲಿತವಾಗುವುದು ಈ ನೆಲೆಯಲ್ಲಿಯೇ ಒಟ್ಟು ಮನುಷ್ಯ ಸಂಸ್ಕೃತಿಯಲ್ಲಿ ಒಂದು ಸಂಸ್ಕೃತಿ ಉಸಿರಾಡುತ್ತಲೇ ಇರುವ ವೈರುದ್ಯವನ್ನು ನಾವು ಒಪ್ಪಲೇ ಬೇಕಾಗುತ್ತದೆ. ಈ ದಿಸೆಯಲ್ಲಿಯೇ ಅಕಾಡೆಮಿ ಅಧ್ಯಯನಕಾರರಿಗೆ ಕಾರ್ಯಗಾರಗಳನ್ನು ನಡೆಸಿ, ತರಬೇತುಗೊಳಿಸಿ ಮಾಸ್ತಿಕರ ಸಂಸ್ಕೃತಿಯಿಂದಿಡಿದು ಸಿಂದ್‌ಮಾದಿಗರ ಸಂಸ್ಕೃತಿ ಎನ್ನುವವರೆಗೆ ಸುಮಾರು ಮೂವತ್ತೇಳು ಉಪಸಂಸ್ಕೃತಿ ಕೃತಿಗಳನ್ನು ಹೊರತಂದಿದೆ.

ಎಷ್ಟೋ ವೇಳೆ ಉಪಸಂಸ್ಕೃತಿಯ ಕಲ್ಪನೆಯನ್ನೇ ಕನ್ನಡ ವಿಮರ್ಶಾವಲಯ ಒಪ್ಪುವುದಿಲ್ಲ. ಕಾರಣ, 'ಉಪ' ಎನ್ನುವುದೇ ಶ್ರೇಣೀಕರಣವನ್ನು ಪ್ರತಿನಿಧಿಸಿದಂತಾಗುತ್ತದೆ ಮತ್ತು ಈ ಉಪ ಎನ್ನುವುದನ್ನು

ನಿರ್ಧರಿಸುವ ಸರಿಯಾದ ಮಾನದಂಡಗಳಿಲ್ಲ. ಹಾಗೆಯೇ ಉಪ ಎನ್ನವುದೇ ಸಂಸ್ಕೃತಿಯ ಅನನ್ಯತೆಯನ್ನೇ ಪ್ರತಿನಿಧಿಸಿದರೆ ಪರಂಪರಾಗತವಾಗಿ ಸಂಸ್ಕೃತಿಯೊಂದು ನಂಬಿಕೊಂಡು ಬಂದಿರುವ ದುಷ್ಟ ಆಚರಣೆಗಳನ್ನು ಪುರಸ್ಕರಿಸಿದಂತಾಗುವುದಿಲ್ಲವೇ ? ಹಾಗೆಯೇ ಸಂಸ್ಕೃತಿಯ ಆಧ್ಯಾತ್ಮಿಕ ವ್ಯಾಖ್ಯಾನ ಮತ್ತು ಕಲಾತ್ಮಕ ವ್ಯಾಖ್ಯಾನಗಳು ಸಾಮಾಜಿಕ ವ್ಯವಸ್ಥೆಯಲ್ಲಿ ಕ್ರೌರ್ಯವನ್ನು ನಿರ್ಲಕ್ಷಿಸುತ್ತವೆ ನಿಜ. ಆದರೆ, ಅಂತಹುದೇ ಕ್ರೌರ್ಯಗಳನ್ನು ಉಪಸಂಸ್ಕೃತಿ ಅನನ್ಯತೆ ಎಂದು ಕೊಂಡರೆ ಮತ್ತು ಜಾತಿಯೇ ಮಾನದಂಡವಾದರೆ ಒಳಜಾತಿಗಳ ಈ ಉಪಸಂಸ್ಕೃತಿ ವ್ಯಾಖ್ಯಾನಕ್ಕೆ ದಕ್ಕುತ್ತವೆಯೇ? ಇಂತಹ ಹಲವು ಪ್ರಶ್ನೆಗಳಿದ್ದಾಗಲೂ ಸಾಂಸ್ಕೃತಿಕ ಭಿನ್ನತೆಯನ್ನೇ ಗುರುತಿಸಿ ಅದನ್ನು ಚಿಂತನಕ್ರಮವಾಗಿಸಿ ಅಕಾಡೆಮಿಯ ಮೂಲಕ, ಕ್ರಿಯಾತ್ಮಕವಾಗಿಸಿದ್ದು ಬರಗೂರರ ವಿಶಿಷ್ಟ, ಕೊಡುಗೆ ಎಂದೇ ಹೇಳಬೇಕಾಗುತ್ತದೆ.

**ವಿಚಾರ ಸಂಕಿರಣ ಮಾಲೆ**

ಸಾಹಿತ್ಯ ಅಕಾಡೆಮಿ 1992–94 ರ ವರೆಗೆ ಅನೇಕ ವಿಚಾರಣ ಸಂಕಿರಣಗಳನ್ನು ನಡೆಸುತ್ತಾ ಬಂದಿದೆ. ಅವುಗಳಲ್ಲಿ 22–03–1992 ರಂದು ಧಾರವಾಡದಲ್ಲಿ ನಡೆದ ಶಂಬಾ ಜೋಶಿಯವರ ಸಂಸ್ಕೃತಿ ಚಿಂತನೆ ವಿಶಿಷ್ಟವಾದುದು. ಕಾರಣ ಈಗಾಗಲೇ ಉಪಸಂಸ್ಕೃತಿ ಮಾಲಿಕೆಯ 22 ಕೃತಿಗಳು ಅಕಾಡೆಮಿಯಿಂದ ಪ್ರಕಟಗೊಳ್ಳುವ ಯೋಜನೆಯಿದ್ದಾಗಲೂ ನಾಡಿನ ಸಾಂಸ್ಕೃತಿಕ ಚಿಂತಕರನ್ನು ಅಧ್ಯಯನ ಮಾಡುವ ಅಥವಾ ಹೊಸ ತಲಮಾರಿಗೆ ಪರಿಚಯಿಸುವ ಕಾರ್ಯ ಈ ಸಂಕಿರಣದಿಂದಾದುದು ವಿಶೇಷ. ಅಕಾಡೆಮಿಯ ವಿಚಾರ ಸಂಕಿರಣ ಮತ್ತು ಪುಸ್ತಕ ಪ್ರಕಟಣೆಯ ನಂತರ ಹಂಪಿ ವಿ.ವಿ. ಯಿಂದ ಶಂಬಾಸಂಸ್ಕೃತಿಯ ಚಿಂತನೆಯ ಸಂಪುಟಗಳೇ ಪ್ರಕಟಗೊಂಡದ್ದನ್ನು ನಾವು ಗಮನಿಸಬೇಕಾಗುತ್ತದೆ.

ಶಂಬಾ ಜೋಶಿಯವರ ಸಂಸ್ಕೃತಿ ಚಿಂತನೆ ಎನ್ನುವ ವಿಚಾರ ಸಂಕಿರಣ ಮಾಲೆಯ ಕೃತಿಯಲ್ಲಿ ವಿವಿಧ ವಿದ್ವಾಂಸರಿಂದ ಮಂಡಿತವಾದ ಪ್ರಬಂಧಗಳಿವೆ. ಮುಖ್ಯವಾಗಿ ಶಂಬಾ ಅವರು ಭಾಷಿಕ ನೆಲೆಯನ್ನು ಅದರಲ್ಲೂ ಲಿಖಿತ ಆಕರಗಳನ್ನು ಆಧಾರವಾಗಿಸಿಕೊಂಡು ಸಂಸ್ಕೃತಿ ಪುನರಚನೆಯಲ್ಲಿ ತೊಡಗುತ್ತಾರೆ. ಆದ್ದರಿಂದ ಇವರಿಗೆ ಸಂಸ್ಕೃತಿಯ ಆಸ್ತಿತ್ವವೇ ಭಾಷೆಯಾಗಿ ಬಿಡುತ್ತದೆ. ಅಂದರೆ

ಭಾಷೆಯೇ ಸಂಸ್ಕೃತಿಯಾಗಿ ಭಾಷಿಕ ರೂಪಗಳೇ ಸಂಸ್ಕೃತಿಯ ರೂಪಗಳಾಗಿ ಭಾಷೆ ಬರೀ ಮಾಧ್ಯಮವಾಗಿರದೇ ತಾನೇ ಸಂಸ್ಕೃತಿಯ ಸಂರಚನೆ ಎನಿಸಿಕೊಳ್ಳುತ್ತದೆ. ಈ ನಿಟ್ಟಿನಲ್ಲಿ ಸಂಸ್ಕೃತಿ ಕುರಿತ ಶಂಬಾ ಅವರ ವ್ಯಾಖ್ಯಾನ ಪಾಶ್ಚಾತ್ಯ ಮಾದರಿಯ ಸಂಸ್ಕೃತಿಯ ವ್ಯಾಖ್ಯಾನಗಳಿಗಿಂತ ಭಿನ್ನ ಎಂಬುದನ್ನು ಕನ್ನಡ ಸಂಸ್ಕೃತಿ ಚಿಂತಕರು ಅರ್ಥೈಸಿಕೊಳ್ಳಲು ಈ ವಿಚಾರ ಸಂಕಿರಣ ಮಾಲೆಯ ಕೃತಿಯಿಂದ ಸಹಕಾರಿಯಾಗುತ್ತದೆ.

ಭಾರತೀಯ ಸಂಸ್ಕೃತಿಯ ಚಿಂತಕರದಲ್ಲಿ ಎರಡು ಚಿಂತನ ವಿಧಾನಗಳಿವೆ. ಮೊದಲನೆಯದು ಭಾಷೆ ಮಾಧ್ಯಮವಾಗಿದ್ದು ಆ ಮೂಲಕ ಸಂಸ್ಕೃತಿಯನ್ನು ಗುರುತಿಸುವ ವಿಧಾನ, ಎರಡನೆಯದು ಭಾಷೆಯೇ ಸಂಸ್ಕೃತಿಯ ಅಸ್ತಿತ್ವವಾಗುವ ವಿಧಾನ. ಮೊದಲನೆಯದರಲ್ಲಿ ಸಂಸ್ಕೃತಿ ಎನ್ನುವುದು ಭಾಷೆಯಿಂದ ಹೊರತಾಗಿ ಇದ್ದು ಅದನ್ನು ಸಾಕಾರಗೊಳಿಸಲು ಬಿಂಬ ರೂಪವಾಗಿ ಬರುತ್ತದೆ. ಎರಡನೆಯದರಲ್ಲಿ ಭಾಷಿಕ ರೂಪಗಳೇ ಸಂಸ್ಕೃತಿಯ ರೂಪಗಳಾಗುತ್ತವೆ. ಅಥವಾ ಪ್ರಧಾನವಾಗುತ್ತವೆ.

ಈ ಎರಡನೆಯ ಆಯ್ಕೆ ಶಂಬಾ ಅವರದು ವೇದ ಉಪನಿಷತ್ತು ಮುಂತಾದ ಭಾಷಿಕ ಆಕರಗಳನ್ನು ರಾಚನಿಕ ವಿಶ್ಲೇಷಣೆಗೆ ಒಳಪಡಿಸಿ ಸಂಕೇತವಾದಿಯಾಗುತ್ತಾರೆ. ಆದ್ದರಿಂದಲೇ ಇವರ ಸಂಸ್ಕೃತಿಯ ಅರ್ಥ ಅಥವಾ ವ್ಯಾಖ್ಯಾನ ಸಂಸ್ಕೃತಿಯ ಅವಿಷ್ಕಾರಗಳಾದ ಭೌತಿಕ ವಸ್ತು ವಿವರ, ಆಚರಣೆ ನಂಬಿಕೆ ಇತ್ಯಾದಿಗಳಲ್ಲಿರದೆ ಇವೆಲ್ಲವುಗಳ ಅತಃಸತ್ವವಾದ ಭಾಷೆಯಲ್ಲಿ ಪ್ರಕಟಗೊಳ್ಳುತ್ತದೆ.

ವಿಶೇಷವೆಂದರೆ ಮೇಲೆ ವಿವರಿಸಿದ ಎರಡು ಚಿಂತನೆಗಳು ಕೂಡಾ ಸಂಸ್ಕೃತಿ ಎಂದರೆ ಅದು ಒಂದು ಸಂಸ್ಕೃತಿ ಅಥವಾ ಜನರ ಜೀವನ ವಿಧಾನ ಎನ್ನುವ ನೆಲೆಯಿಂದ ಅಂತರವನ್ನು ಕಾಯ್ದುಕೊಂಡಿದೆ ಎನ್ನುವುದು ಸ್ಪಷ್ಟ. ಮತ್ತು ಭಾಷಿಕ ನೆಲೆಯೇ ಸಂಸ್ಕೃತಿಯ ಚಿಂತನೆಗಳಲ್ಲಿ ಆತ್ಯಂತಿಕವಾದುದು ಎನ್ನುವುದನ್ನು ಒಪ್ಪುವುದೇ ಹಲವು ಮಿತಿಗಳಿಗೆ ದಾರಿಯಾಗಿಸುತ್ತದೆ. ಇದೇನೆ ಆದರೂ ಶಂಬಾ ಅವರದ ಜಾಗತಿಕ ನೆಲೆಯ ವ್ಯಾಪಕತೆಯುಳ್ಳ ಸಂಸ್ಕೃತಿ ಚಿಂತನೆಯ ಹುಡುಕಾಟಗಳನ್ನು ಕನ್ನಡದ ಓದುಗರಿಗೆ ಲಭ್ಯವಾಗಿಸುವಲ್ಲಿ ಈ ವಿಚಾರ ಸಂಕಿರಣದ ಕೃತಿ ಸಫಲತೆಯನ್ನೇ ಸಾಧಿಸಿದೆ.

ಇಂತಹ ಚಿಂತನೆಗಳ ವಿಸ್ತರಗಳಾಗಿ ಕನ್ನಡ ಸಾಹಿತ್ಯದಲ್ಲಿ ದೇಸೀಯತೆ, ಕನ್ನಡದ ತತ್ವಪದಕರಾರು, ಕನ್ನಡ ಸಾಹಿತ್ಯದಲ್ಲಿ ಸ್ತ್ರೀವಾದಿ ಚಿಂತನೆ ಗೊರೂರ ಸಾಹಿತ್ಯ ಮತ್ತು ರಾಷ್ಟ್ರೀಯ ಚಳುವಳಿ, ನಿರಂಜನರ ಸಾಹಿತ್ಯ ಮತ್ತು ಸಮಕಾಲೀನತೆ, ವಸಾಹತುಶಾಯಿ ಅನುಭವ ಮತ್ತು ಕಂಬಾರರ ಸಾಹಿತ್ಯ, ಸಮಕಾಲೀನ ಸಾಹಿತ್ಯ, ಸಂಸ್ಕೃತಿ ಮತ್ತು ಅನುಪಮ ನಿರಂಜನರ ಸಾಹಿತ್ಯ, ಬಸವರಾಜಕಟ್ಟೀಮನಿಯವರ ಸಾಹಿತ್ಯ, ಸಂಸ್ಕೃತಿಯ ಸ್ಥಿತ್ಯಂತರ ಮತ್ತು ಶ್ರೀಕೃಷ್ಣ ಆಲನಳ್ಳಿಯವರ ಸಾಹಿತ್ಯ, ವಚನ ಸಾಹಿತ್ಯದಲ್ಲಿ ಕೆಳವರ್ಗದವರ ಆಶಯ ಮತ್ತು ಅಭಿವ್ಯಕ್ತಿ, ಮುಂತಾದ ಹಲವು ವಿಚಾರ ಸಂಕಿರಣದ ಮಾಲೆಯ ಕೃತಿಗಳನ್ನು ಬರಗೂರರ ಪ್ರಧಾನ ಸಂಪಾದಕತ್ವದಲ್ಲಿ ಕನ್ನಡದ ಓದುಗರಿಗೆ ಲಭ್ಯವಾದದ್ದು ಅಕಾಡೆಮಿಗಳನ್ನು ಜನಮುಖಿಯಾಗಿಸುವ ಚಿಂತನೆಗಳಲ್ಲೊಂದಾಗಿದೆ.

## ಹಳ್ಳಿಯ ಅಧ್ಯಯನ ಮಾಲೆ

ಹಳ್ಳಿಯ ಅಧ್ಯಯನ ಮಾಲೆ ಕೃತಿಗಳು ಸಾಹಿತಿಗಳು ಹಳ್ಳಿಯನ್ನು ಹೇಗೆ ನೋಡುತ್ತಾರೆ ಎನ್ನುವ ಕುತೂಹಲದ ಸಂಗತಿ ಎನಿಸಿದ್ದರ ಫಲವಾಗಿ ಮೂಡಿಬಂದಿದ್ದು ಎಂದಿದ್ದಾರೆ ಬರಗೂರು. ಮತ್ತು ಹಳ್ಳಿಯ ಅಧ್ಯಯನಕ್ಕೆ ತೊಡಗಿದ ಹೊರೆಯಾಲ ದೊರೆಸ್ವಾಮಿ ಅವರು ಒಂದು ಹಳ್ಳಿಯ ಅಂತರಂಗವನ್ನು ಹೋಗುವುದೆಂದರೆ ಅದರ ಆರ್ಥಿಕ ಸಾಮಾಜಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳನ್ನು ಹೋಗುವುದೇ ಆಗಿದೆ ಎನ್ನುತ್ತಾರೆ. ಇಲ್ಲಿನ ಅಧ್ಯಯನದ ದಿಕ್ಕು ಸ್ಪಷ್ಟವೇ ಆಗಿದೆ. ಜೊತೆಗೆ ಇಲ್ಲಿನ ನಿರೂಪಣಾ ಶೈಲಿ ಓದುಗನನ್ನು ಆಪ್ತವಾಗಿಸುತ್ತದೆ.

ಆದರೂ ಈ ಹಳ್ಳಿಯ ಅಧ್ಯಯನಗಳು ಆಧುನಿಕ ವಿಕೇಂದ್ರಿಕರಣದ ವ್ಯವಸ್ಥೆ ಗ್ರಾಮಗಳ ಮೇಲೆ ಬೀರಿರಬಹುದಾದ ಪರಿಣಾಮಗಳಾಗಲೀ, ಸಾಂಸ್ಕೃತಿಕ ಯಜಮಾನಿಕೆಯ ಗುತ್ತಿಗೆ ಹಿಡಿದ ಪ್ರಧಾನ ಸಂಸ್ಕೃತಿಯ ನೆರಳಲ್ಲಿಯೋ ಅನುಕರಣೆಯಲ್ಲಿಯೋ, ಕೀಳಾಗಿಯೇ ಬದುಕನ್ನು ಕಂಡುಕೊಳ್ಳುತ್ತಿರುವ ಗ್ರಾಮೀಣ ಚಿತ್ರಗಳ ಅಥವಾ ಗ್ರಾಮಗಳ ಅಂತರ್ ಶೋಧಗಳ ಅಧ್ಯಯನಗಳಾಗದೆ ಬರೀ ಗ್ರಾಮ ವಿವರಗಳ ದಾಖಲಂತಿವೆ ಎನಿಸುತ್ತವೆ.

ಮುಖ್ಯವಾಗಿ ಕಾಗಿನೆಲೆ ಮತ್ತು ಬಾಗಿಳಿಯ ಬಾಗಳಿಯೆ ಎನ್ನುವ ಕೃತಿಗಳನ್ನು ಹಳ್ಳಿಯ ಅಧ್ಯಯನಕ್ಕಾಗಿ ಆಯ್ಕೆಮಾಡಿಕೊಳ್ಳಲಾಗಿದೆ. ಇದರಲ್ಲಿ ಕಾಗಿನೆಲೆಯ ಅಧ್ಯಯನ ಲೇಖಕರನ್ನು ಬಹುವಾಗಿ ಕಾಡಿದ ಹಳ್ಳಿಯ ಆಯ್ಕೆಯದಾಗಿದೆ. ಆದ್ದರಿಂದ ಅಧ್ಯಯನಕ್ಕಾಗಿ ಕುತೂಹಲದಿಂದಲೇ ಹೊರಡುತ್ತಾರೆ. ಕನಕದಾಸರ ನೆಲೆ ಅದು ಎನ್ನುವ ಧೋರಣೆಯನ್ನರಿಸಿಕೊಂಡು, ಕಾಶಂಬಿ, ಕಮ್ಮಾರು, ದಾಸರಕೊಪ್ಪ, ಹೀಗೆ ಹಳ್ಳಿಯ ಹೆಸರಿಗಿರುವ ಹಿನ್ನಲೆ ಮತ್ತು ಆ ಹಳ್ಳಿಗಳಲ್ಲಿ ಯುವ ಸಮುದಾಯ ತಲುಪಿರುವ ನೆಲೆಗಳನ್ನು ವಿಷಾದದಿಂದ ವಿವರಿಸುತ್ತಲೇ ಕಾಗಿನೆಲೆಯನ್ನು ಆನೆಗೊಂದಿ ಅರಸರು ಸುಮಾರು 400 ಎಕರೆಯನ್ನು ಉಂಬಳಿಯಾಗಿ ನೀಡಿದಕ್ಕೆ ಕಾರಣ ಕನಕದಾಸರ ಮಹಿಮೆಯಿಂದಾಗಿ ಎನ್ನುವ ವಿವರ ನೀಡುತ್ತಾರೆ. ಅಲ್ಲದೆ, ಭೌಗೋಳಿಕ ಹಿನ್ನೆಲೆ, ಪ್ರಾಣಿ ಪಕ್ಷಿ ಸಂಕುಲ, ಶಾಸನಗಳಲ್ಲಿನ ಗ್ರಾಮದ ವಿವರ, ಸದ್ಯದ ಸ್ಥಿತಿಯಲ್ಲಿನ ಕಾಗಿನೆಲೆ, ಉಂಬಳಿ ಜಮೀನಿನ ವಿವರ, ಗ್ರಾಮಕ್ಕೆ ಸೇರಿದ ವಿವರ, ಬೆಳೆವಿವರಗಳು, ಬೇಸಾಯ ವಿಧಾನ, ದೇವಾಲಯಗಳು, ಜನ–ಜಾತಿಗಳು, ಹಬ್ಬ, ಆಚರಣೆಗಳು ವರ್ತಕರು ಶಾಲೆಗಳು ಕನಕಪೀಠ, ಉಟಗಿಸೇವೆ, ವಲಸೆ ಮುಂತಾದವುಗಳೆಲ್ಲವುಗಳ ವಿವರಗಳು ಇಲ್ಲಿವೆ. ಅಲ್ಲದೆ ಮುಸ್ಲಿಂ ಕುಟುಂಬಗಳ ವಿವರಗಳೊಂದಿಗೆ ಕನಕದಾಸರ ತಾಯಿ ಊರು ಅಥವಾ ಹೆಂಡತಿಯ ಊರೆಂದು ಹೇಳಲಾದ ಕಾಗಿನೆಲೆಯಲ್ಲಿ ಕುರುಬ ಪಂಗಡದ ಒಂದು ಕುಟುಂಬವಿರದಿರುವುದನ್ನು ಇಲ್ಲಿ ಉಲ್ಲೇಖಿಸಲಾಗಿದೆ.

### ಕಳಚಿಕೊಂಡಿರುವ ಕೊಂಡಿಗಳ ಪುನರ್ ಜೋಡಣೆ

ಈ ಯೋಜನೆಯ ಹಿಂದಿನ ಉದ್ದೇಶ ಕನ್ನಡ ಸಾಹಿತ್ಯ ಪರಂಪರೆಯ ನಿರ್ಮಾಣಕ್ಕೆ ಮಹತ್ವದ ಕೊಡುಗೆ ನೀಡಿ ಮರೆವಿನ ಅಂಚಿನಲ್ಲಿರುವ ಬರಹಗಾರರನ್ನು ನೆನೆಯಲು ಮತ್ತು ಹಾಗೆಯೇ ಓದುಗ ಮತ್ತು ವಿಮರ್ಶಕರಿಬ್ಬರ ಮನದಲ್ಲೂ ಹೆಸರು ಮಾಡಿದ ಬರಹಗಾರರನ್ನು ಕನ್ನಡ ಪರಂಪರೆಯ ಪ್ರಮುಖ ಭಾಗವಾಗಿದ್ದಾರೆಂದು ಜ್ಞಾಪಿಸಲು ರೂಪುಗೊಂಡ ಯೋಜನೆಯಾಗಿದೆ.

ವಿಶೇಷವಾಗಿ ಈ ಸಂಕಲನಗಳಲ್ಲಿ ಲೇಖಕರ ಮೂಲಕೃತಿಗಳನ್ನು ಸಂಗ್ರಹಿಸಿ ಓದುಗರಿಗೆ ತಲುಪಿಸುವ ಕಾರ್ಯವಾಗಿದೆ. ಇಂತಹ ಈ

ಯೋಜನೆಯಲ್ಲಿ ಗಿರಿಬಾಲೆ, ದೇವುಡು, ಯರ್ಮುಂಜೆ ರಾಮಚಂದ್ರ, ಭಾರತೀಪ್ರಿಯ, ವಸುದೇವಭೂಪಾಲಂ ಬೇಕಲರಾಮನಾಯಕ, ಕಾತ್ಯಾಯಿನಿ, ಬಾಗಲೋಡಿದೇವರಾಯ, ಕೃಷ್ಣಕುಮಾರ ಕಲ್ಲೂರ, ಹಟ್ಟಿಯಂಗಡಿ ನಾರಾಯಣರಾವ್, ಕಡಂಗೊಡ್ಲು ಶಂಕರಭಟ್ಟ, ಪಟೇಲ್‌ಧೂಲಾಸಾಹೇಬ, ಸಾಲಿರಾಮಚಂದ್ರರಾಯ, ಈಶ್ವರಸಣಕಲ್ಲ ಪೇಜಾವರ ಸದಾಶಿವರಾಯ, ಜಿ. ವೆಂಕಟಯ್ಯ, ಆನಂದಕಂದ, ಎಂ.ಎಸ್. ಕಾಮತ್ ಹೀಗೆ ಹದಿನೆಂಟು ಬರಹಗಾರರ ಕೃತಿಗಳನ್ನೇ ಅಕಾಡೆಮಿ ಕನ್ನಡದ ಸಹೃದಯ ವಲಯಕ್ಕೆ ಕಳೆದುಹೋಗುತ್ತಿರುವ ಕೊಂಡಿಗಳನ್ನು ಕೂಡಿಸಿಕೊಟ್ಟದ್ದು ವಿಶಿಷ್ಟವೇ ಸರಿ.

### ಸಾಮಾಜಿಕ ಚಿಂತನ ಮಾಲೆ

ಓದುವ ವರ್ಗ ಓದಿಗೆ ಆಸಕ್ತರಾಗುವಂತೆ ಮಾಡುವ ಪ್ರಯತ್ನ ಇದಾಗಿದೆ. ಅಲ್ಲದೆ, ಈ ಮಾಲೆಯಲ್ಲಿ ಬಂದ ಪುಸ್ತಕಗಳು ಏಕಕಾಲಕ್ಕೆ ಪರಿಚಯಾತ್ಮಕವೂ, ಚಿಂತನಾತ್ಮಕವೂ ಆಗಿರಬೇಕೆನ್ನುವ ಒತ್ತಾಸೆಯನ್ನಿಸಿರಿಕೊಂಡು ವಿವಿಧ ಬರಹಗಾರರಿಂದ ಬರೆಯಿಸಲ್ಪಟ್ಟವುಗಳು. ಇಲ್ಲಿ ಸಾಹಿತ್ಯ ಮತ್ತು ಸಾಹಿತ್ಯೇತರ ಕ್ಷೇತ್ರಗಳೆರಡನ್ನು ಒಳಗೊಂಡ ಸಾಧಕರನ್ನು ಕುರಿತ ವಿಚಾರಗಳಿವೆ. ಉದಾಹರಣೆ ನೆಲ್ಸನ್ ಮಂಡೇಲ, ಕಾರ್ಲ್‌ಮಾರ್ಕ್ಸ್, ಆಲ್ಬರ್ಟ್‌ಐನ್‌ಸ್ಟೈನ್, ಲೋಯಿಯಾ ಮಾವೋತ್ಸೆತುಂಗ್, ನಾರಾಯಣಗುರು, ಅಕ್ಕಮಹಾದೇವಿ, ಅಂಬೇಡ್ಕರ್, ಅಮೀರ್‌ಖುಸ್ರು, ಹೀಗೆ ಸುಮಾರು ಐವತ್ತೈದು ಕೃತಿಗಳು ಇದುವರೆಗೆ ಅಕಾಡೆಮಿಯಿಂದ ಪ್ರಕಟಗೊಂಡಿದೆ.

### ಕಮ್ಮಟದ ಕೃತಿಗಳು

ಯುವ ಲೇಖಕರಿಗೆ ಚಿಂತನೆಯ ಮತ್ತು ರಚನೆಯ ಹುಮ್ಮಸ್ಸು ಹೆಚ್ಚಾಗಲೆಂಬ ಸುದುದ್ದೇಶದಿಂದ ಈ ಯೋಜನೆಯನ್ನ ಬರಗೂರರು ಕೈಗೊಂಡಿದ್ದಾರೆ. ಈ ನಿಟ್ಟಿನಲ್ಲಿ ಯುವ ಬರಹಗಾರರಿಗೆ ಕಮ್ಮಟವನ್ನು ಏರ್ಪಡಿಸಿ ವಿಶೇಷೋಪಾನ್ಯಾಸಗಳನ್ನು ನೀಡಿ, ಈ ಉಪನ್ಯಾಸ ಮತ್ತು ಕಮ್ಮಟಾರ್ಥಿಗಳು ಸಿದ್ದಗೊಳಿಸಿದ ಬರಹಗಳನ್ನು ಕೃತಿ ರೂಪದಲ್ಲಿ ತಂದಿರುವ ಯೋಜನೆ ಫಲಶೃತಿಗಳೇ ಕಮ್ಮಟದ ಕೃತಿಗಳು.

ಈ ಯೋಜನೆಯಲ್ಲಿ ಸಮಕಾಲೀನ ಪಂಚಾಬಿ ಕತೆಗಳು, ಪಂಜಾಬಿ ಕವಿತೆಗಳು, ಕಾವ್ಯ ಸೃಷ್ಟಿಯ ಸ್ವರೂಪ, ಅನ್ಯಜ್ಞಾನ ಶಿಸ್ತುಗಳ ಮೂಲಕ ಕನ್ನಡ ಸಾಹಿತ್ಯ, ಸಮಕಾಲೀನ ಗುಜರಾತಿ ಕತೆಗಳು, ಸಮಕಾಲೀನ ಗುಜರಾತಿ ಕವಿತೆಗಳು, ಕಥನ ಕಲೆಯ ನೆಲೆಗಳು, ಬೆಳಗೊಳದ ಬೆಳಸು, ದೀಪದಡಿಯ ಗದ್ದುಗೆ, ಆಕಾಶಬಿಂಬ ಎನ್ನುವ ಕೃತಿಗಳು ಪ್ರಕಟಗೊಂಡಿವೆ.

**ಸಾಹಿತ್ಯ ವಿಮರ್ಶೆ**

ಪ್ರತಿ ವರ್ಷ ಪತ್ರಿಕೆ ಹಾಗೂ ನಿಯತ ಕಾಲಿಕೆಗಳಲ್ಲಿ ಪ್ರಕಟವಾಗುವ ವಿವಿಧ ಪ್ರಕಾರದ ಕನ್ನಡ ಬರಹಗಳನ್ನು ಪ್ರತ್ಯೇಕವಾಗಿ ಸಂಕಲಿಸಿ ಪುಸ್ತಕ ರೂಪದಲ್ಲಿ ಪ್ರಕಟಿಸುವ ಯೋಜನೆ ಇದಾಗಿದೆ. ಅಕಾಡೆಮಿ ಇದುವರೆಗೂ 23 ವಿಮರ್ಶಾ ಸಂಕಲನಗಳನ್ನು ಪ್ರಕಟಿಸಿದೆ. ಬರಗೂರರ ಸಂದರ್ಭದ 1991 ರಿಂದ 1995 ರವರೆಗೆ ಸುಮಾರು 5 ಸಂಕಲನಗಳು ಬಂದಿವೆ. 1992 ರ ವಿಮರ್ಶಾ ಸಂಕಲನವನ್ನು ರಹಮತ್ ತರೀಕೆಯವರು ಸಂಪಾದಿಸಿಕೊಟ್ಟಿದ್ದಾರೆ. ಈ ಕೃತಿ ಇತ್ತೀಚಿನ ವಿಮರ್ಶೆ ದಿಕ್ಕು ಬದಲಾಗಲು ಕಾರಣ ಹಾಗೂ ಕನ್ನಡ ವಿಮರ್ಶಾ ಕ್ಷೇತ್ರದಲ್ಲಿ ಗುರುತಿಸಿ ಕೊಂಡವರು ಗುರುತಿಸಿ ಕೊಳ್ಳದಿದ್ದವರೂ ಕೂಡಿ ಹೇಗೆ ಡೆಮಾಕ್ರಟಿಕ್ ಆದ ಸಂವಾದ ನಡೆಸುತ್ತಿದ್ದಾರೆ ಎನ್ನುವ ನೋಟವನ್ನು ಇರಿಸಿಕೊಂಡು ವಿವಿಧ ಪತ್ರಿಕೆಗಳಲ್ಲಿ ಬಂದಂತಹ ಲೇಖನಗಳನ್ನು ಸಂಗ್ರಹಿಸಿಕೊಟ್ಟಿದ್ದಾರೆ. ಅಲ್ಲದೆ 18 ವಿಮರ್ಶಾ ಲೇಖನಗಳನ್ನು ಆಯ್ದು ಕೊಟ್ಟಿದ್ದಾರೆ.

ಒಟ್ಟಾರೆ ಸದಾ ಕ್ರಿಯಾಶೀಲ ವ್ಯಕ್ತಿತ್ವದ ಬರಗೂರರು ಸಾರ್ವಜನಿಕ ಸಂಸ್ಥೆಯೊಂದರ ಅಧ್ಯಕ್ಷರಾಗುವ ಸಂದರ್ಭವೊಂದು ಒದಗಿದಾಗ ಅದನ್ನು ಹೇಗೆ ಜನಮುಖಿಯಾಗಿಸಬಹುದು ಮತ್ತು ಜೀವಂತವಾಗಿಸಬಹುದೆಂಬುದಕ್ಕೆ ಉತ್ತಮ ಉದಾಹರಣೆಯಾಗಿದ್ದಾರೆ.

ಈ ಸಂದರ್ಭದ ಎಲ್ಲಾ ಮಾಲಿಕೆಯ ಕೃತಿಗಳಿಗೆ ಬರೆದ ಅಧ್ಯಕ್ಷರ ಮಾತುಗಳನ್ನು ಸಂಗ್ರಹಿಸಿಕೊಟ್ಟರೆ ಸಾಕು ಉತ್ತಮ ಕೃತಿಯಾಗಿ ನಾಡಿನ ಸಹೃದಯ ವಲಯಕ್ಕೆ ಲಭ್ಯವಾಗುತ್ತದೆ. ಅಲ್ಲದೆ, ಸಮಕಾಲೀನ ಸಂದರ್ಭದ ಸಾಂಸ್ಕೃತಿಕ ರಾಜಕಾರಣದ ದಿಕ್ಕು ಕರಾರುವಕ್ಕಾಗಿ ಬದಲಾಗುತ್ತಿರುವ,

ಬದಲಾಗಬೇಕಾದುದರ ಮುನ್ನುಡಿಯಾಗುತ್ತದೆ ಮತ್ತು ಡೆಮಾಕ್ರಟಿಕ್ ಆದ ಸಂವಾದಗಳೂ ಆಗುತ್ತವೆ.

ಪ್ರಜಾಪ್ರಭುತ್ವದ ಬೇರುಗಳು ಭದ್ರವಾಗುವುದೇ ಇಂತಹ ಆಲೋಚನೆಗಳಿಂದ ಸಾರ್ವಜನಿಕ ಸಂಸ್ಥೆಗಳು ಚಲನ ಶೀಲತೆಯನ್ನು ಪಡೆಯುವುದೇ ಇಂಥಹ ಕ್ರಿಯಾತ್ಮಕ ಆಲೋಚನೆಗಳಿಂದ ಎನ್ನುವುದಕ್ಕೆ ಬರಗೂರರು ಅಕಾಡೆಮಿಯ ಅಧ್ಯಕ್ಷರಾಗಿ ದಾರಿಯಾಗಿಸಿದ್ದಾರೆ. ಈ ಕಾರಣಗಳಿಗಾಗಿ ಬರಗೂರರ ಅಕಾಡೆಮಿಯ ಕೊಡುಗೆಗಳನ್ನೇ ಮತ್ತೆ ಮತ್ತೆ ಅಧ್ಯಯನಕ್ಕೆ ಚರ್ಚೆಗೆ ಒಳಗು ಮಾಡಬೇಕಾಗುತ್ತದೆ.

ಒಟ್ಟಾರೆ ನಾಡೋಜ, ಪಂಪಪ್ರಶಸ್ತಿ, ಗೌರವ ಡಾಕ್ಟರೇಟ್, ಗಿನ್ನೀಸ್ ಈ ಎಲ್ಲದಕ್ಕೂ ಬಾಜನರಾದ ಬರಗೂರರು ಬಹುಮುಖ್ಯವಾಗಿ ಸಂವೇದನಾ ಶೀಲರು ಎನ್ನುವುದನ್ನು ಪ್ರತ್ಯೇಕಿಸಿ ಹೇಳಬೇಕಾದುದಿಲ್ಲ. ಬಂಡಾಯ ಸಂಘಟನೆ, ಸಾಹಿತ್ಯ ನಿರ್ಮಾಣ, ಹೋರಾಟ, ಸಿನಿಮಾ ಹೀಗೆ ತಮ್ಮನ್ನು ಸದಾ ಕ್ರಿಯಾಶೀಲವಾಗಿಸಿಕೊಂಡ ಬರಗೂರರು ನಮ್ಮ ಮುಂದಿನ ಉತ್ತಮ ಮಾದರಿ.

* * * * *